ಗುರುವಾರ, ಡಿಸೆಂಬರ್ 14, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 344 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಸಂಸತ್ ಭವನ: ಭದ್ರತೆ ಬಿಗಿಯಾಗಿದ್ದರೂ ಲೋಪ
ಪಳೆಯುಳಿಕೆ ಇಂಧನ: ತಗ್ಗಿಸಲು ನಿರ್ಣಯ 11
ಎಸ್‌ಐಪಿ: ₹1.66 ಲಕ್ಷ ಕೋಟಿ ಹೂಡಿಕೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
69,584 ▲	20,926 ▲	₹ 62,970 (ಬೆಂಗಳೂರು) ▼	₹72,900 (ಬೆಂಗಳೂರು) ▼	83.40 ▼

ಸಂಸತ್ ಮೇಲಿನ ದಾಳಿಯ ಕಹಿ ನೆನಪಿನ ದಿನವೇ ಘಟನೆ • ಮೈಸೂರಿನ ಮನೋರಂಜನ್ ಸೇರಿ ಐವರ ಬಂಧನ

ಭದ್ರತೆ ಭೇದಿಸಿ ಸದನಕ್ಕೆ ಜಿಗಿದರು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ ಮೇಲಿನ ದಾಳಿಯ 22ನೇ ವರ್ಷದ ಕಹಿ ನೆನಪಿನ ದಿನವೇ ಭಾರಿ ಭದ್ರತಾ ಲೋಪದ ಘಟನೆಗೆ ಲೋಕಸಭೆ ಸಾಕ್ಷಿಯಾಯಿತು. ಬುಧವಾರ ಕಲಾಪ ನಡೆಯುತ್ತಿರುವಾಗಲೇ ಇಬ್ಬರು ಯುವಕರು ಸಂದರ್ಶಕರ ಗ್ಯಾಲರಿಯಿಂದ ಸದನದೊಳಗೆ ಜಿಗಿದು ಘೋಷಣೆಗಳನ್ನು ಕೂಗುತ್ತಾ 'ಸ್ಮೋಕ್ ಕ್ಯಾನ್' (ಹಳದಿ ಬಣ್ಣದ ಹೊಗೆ ಉಗುಳುವ ಕ್ಯಾನ್) ಹಾರಿಸಿ ದಾಂದಲೆ ಎಬ್ಬಿಸಿದರು. ಇದರಿಂದಾಗಿ, ಸದನದಲ್ಲಿ ಆತಂಕ ಸೃಷ್ಟಿಯಾಯಿತು.

ಡಿ.13ರಂದು ನಡೆದ ಭಯೋತ್ಪಾದಕರ ದಾಳಿಯಲ್ಲಿ ಹುತಾತ್ಮರಾದವರಿಗೆ ಸಂಸದರು ಶ್ರದ್ಧಾಂಜಲಿ ಸಲ್ಲಿಸಿದ ಕೆಲವೇ ಗಂಟೆಗಳಲ್ಲಿ ಈ ಘಟನೆ ನಡೆದಿದೆ. ಆರೋಪಿಗಳಾದ ಮೈಸೂರಿನ ವಿಜಯನಗರ ನಿವಾಸಿಯಾಗಿರುವ ಎಂಜಿನಿಯರಿಂಗ್ ಪದವೀಧರ ಮನೋರಂಜನ್ ಡಿ. ಹಾಗೂ ಲಖನೌದ ಸಾಗರ್ ಶರ್ಮಾ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ. ಜೊತೆಗೆ, ಇದೇ ಸಮಯದಲ್ಲಿ ಸಂಸತ್‌ನ ಹೊರಗೆ ಪ್ರತಿಭಟನೆ ನಡೆಸುತ್ತಿದ್ದ ಇಬ್ಬರನ್ನು ಕೂಡ ಪೊಲೀಸರು ಬಂಧಿಸಿದ್ದಾರೆ. ಇವರನ್ನು ಹರಿಯಾಣದ ಹಿಸಾರ್‌ನ ನೀಲಂ (42) ಮತ್ತು ಮಹಾರಾಷ್ಟ್ರದ ಲಾತೂರ್‌ನ ಅಮೋಲ್ ಶಿಂದೆ (25) ಎಂದು ಗುರುತಿಸಲಾಗಿದೆ.

ಮೈಸೂರಿನ ಸಂಸದ ಪ್ರತಾಪ ಸಿಂಹ ಅವರ ಶಿಫಾರಸ್ಸಿನ ಮೂಲಕ ಪಾಸ್ ಪಡೆದ ಇಬ್ಬರು ಯುವಕರು ಈ ಕೃತ್ಯ ನಡೆಸಿದ್ದಾರೆ. ಈ ಘಟನೆ ನಡೆಯುವ ವೇಳೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಸದನದಲ್ಲಿ ಇರಲಿಲ್ಲ. ಕೇಂದ್ರ ಸಚಿವರಾದ ರಾಜನಾಥ ಸಿಂಗ್, ಪ್ರಲ್ಹಾದ ಜೋಶಿ, ಹರದೀಪ್ ಸಿಂಗ್ ಪುರಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಸುಮಾರು 100 ಸಂಸದರು ಸದನದಲ್ಲಿ ಇದ್ದರು. ಈ ಘಟನೆಯಲ್ಲಿ ಒಟ್ಟು ಆರು ಮಂದಿ ಭಾಗಿಯಾಗಿದ್ದು, ಮತ್ತಿಬ್ಬರನ್ನು ವಿಶಾಲ್, ಲಲಿತ್ ಎಂದು ಗುರುತಿಸಲಾಗಿದೆ. ಲಲಿತ್‌ನನ್ನು ವಶಕ್ಕೆ ಪಡೆಯಲಾಗಿದ್ದು, ವಿಶಾಲ್ ಪತ್ತೆಗೆ ಶೋಧ ಮುಂದುವರಿದಿದೆ. ಈ ಎಲ್ಲರೂ ಗುರುಗ್ರಾಮದ ಮನೆಯೊಂದರಲ್ಲಿ ತಂಗಿದ್ದರು. ನಾಲ್ಕು ವರ್ಷಗಳಿಂದ ಇವರು ಜಾಲತಾಣದ ಮೂಲಕ ಪರಸ್ಪರ ಸಂಪರ್ಕದಲ್ಲಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

ಬುಧವಾರ ಲೋಕಸಭೆ ಕಲಾಪ ನಡೆಯುತ್ತಿದ್ದ ವೇಳೆ ಸಂದರ್ಶಕರ ಗ್ಯಾಲರಿಯಿಂದ ಜಿಗಿದ ಯುವಕನನ್ನು ಹಿಡಿಯಲು ಕೆಲ ಸಂಸದರು ಮುಂದಾದರು (ಎಡಚಿತ್ರ) 'ಸ್ಮೋಕ್ ಕ್ಯಾನ್' ಹಾರಿಸಿದ ವೇಳೆ ರಾಹುಲ್ ಗಾಂಧಿ ಸೇರಿದಂತೆ ಇತರ ಸಂಸದರು ಸದನದಲ್ಲಿ ಉಂಟಾದ ಪರಿಸ್ಥಿತಿಯನ್ನು ಆತಂಕದಿಂದ ನೋಡಿದರು —ಪಿಟಿಐ ಚಿತ್ರ

ಸಂಸತ್ ಭವನದ ಹೊರಗೆ ಪ್ರತಿಭಟಿಸಿದ ನೀಲಂ ಅವರನ್ನು ಪೊಲೀಸರು ವಶಕ್ಕೆ ಪಡೆದರು

ಘಟನಾವಳಿಗಳು

ಬೆಳಿಗ್ಗೆ 9: ಸಂಸತ್ ಮೇಲಿನ ಭಯೋತ್ಪಾದನಾ ದಾಳಿಯಲ್ಲಿ ಹುತಾತ್ಮರಾದವರಿಗೆ ಉಪ ರಾಷ್ಟ್ರಪತಿ, ಪ್ರಧಾನಿ, ಸ್ಪೀಕರ್ ಸೇರಿದಂತೆ ಹಿರಿಯ ನಾಯಕರಿಂದ ಶ್ರದ್ಧಾಂಜಲಿ

ಬೆಳಿಗ್ಗೆ 11: ಎರಡೂ ಸದನಗಳ ಕಲಾಪ ಆರಂಭ

ಮಧ್ಯಾಹ್ನ 12.04: ಮೀರತ್ ಸಂಸದ ರಾಜೇಂದ್ರ ಅಗರವಾಲ್ ಅವರು ಸಭಾಧ್ಯಕ್ಷರಾಗಿ ಕಾರ್ಯನಿರ್ವಹಣೆ

ಮಧ್ಯಾಹ್ನ 1.01: ಶೂನ್ಯವೇಳೆಯಲ್ಲಿ ಟಿಎಂಸಿ ಸಂಸದ ಖಗೇನ್ ಮುರ್ಮು ಅವರಿಂದ ಮಾತು

ಮಧ್ಯಾಹ್ನ 1.02: ಮೊದಲ ಆರೋಪಿ ಸಾಗರ್ ಶರ್ಮಾ ಪ್ರೇಕ್ಷಕರ ಗ್ಯಾಲರಿಯಿಂದ ಸದನಕ್ಕೆ ಜಿಗಿದ. ಸ್ಮೋಕ್ ಕ್ಯಾನ್ ತೆರೆದು ಸಭಾಧ್ಯಕ್ಷರ ಪೀಠದತ್ತ ಧಾವಿಸಲು ಯತ್ನ

ಮಧ್ಯಾಹ್ನ 1.03: ಮತ್ತೊಬ್ಬ ಆರೋಪಿ ಮನೋರಂಜನ್ ಸ್ಮೋಕ್ ಕ್ಯಾನ್ ತೆರೆದು ಹೊಗೆ ಹಾರಿಸಿದ. ಆರೋಪಿಗಳನ್ನು ಸುತ್ತುವರಿದ ಸಂಸದರು ಹಾಗೂ ಭದ್ರತಾ ಸಿಬ್ಬಂದಿ

ಮಧ್ಯಾಹ್ನ 1.07: ಸಂಸತ್ ಕಟ್ಟಡದ ಹೊರಗೆ ಇಬ್ಬರಿಂದ ಪ್ರತಿಭಟನೆ ಮತ್ತು ಬಂಧನ

ಅಮೋಲ್ ಶಿಂದೆಯನ್ನು ಪೊಲೀಸರು ವಶಕ್ಕೆ ಪಡೆದರು

ಮನೋರಂಜನ್

ಸಾಗರ್ ಶರ್ಮಾ

ಉನ್ನತ ಮಟ್ಟದ ತನಿಖೆಗೆ ಆದೇಶ

ಘಟನೆಯ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಆದೇಶಿಸಿದ್ದಾರೆ. 'ಇದೊಂದು ಕಳವಳಕಾರಿ ಘಟನೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲಾಗುವುದು. ತನಿಖೆ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದರು.

ಸಂಸತ್ತಿನಲ್ಲಿ ಈಗಿರುವ ಭದ್ರತಾ ವ್ಯವಸ್ಥೆಯ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲಾಗುವುದು. ಪ್ರಕರಣದ ಕುರಿತು ತನಿಖೆ ನಡೆಸಲು ದೆಹಲಿ ಪೊಲೀಸರಿಗೆ ಸೂಚಿಸಲಾಗಿದೆ ಎಂದೂ ಅವರು ಹೇಳಿದರು.

'ಸದನದೊಳಗೆ ಸಿಂಪಡಿಸಿದ ಹಳದಿ ಬಣ್ಣದ ಹೊಗೆ ಅಪಾಯಕಾರಿ ಅಲ್ಲ ಎಂದು ಪೊಲೀಸರು ತಿಳಿಸಿದ್ದಾರೆ' ಎಂದು ಅವರು ಸದನಕ್ಕೆ ತಿಳಿಸಿದರು.

ಪ್ರತಾಪ ಸಿಂಹ ಉಚ್ಚಾಟನೆಗೆ ವಿಪಕ್ಷ ಆಗ್ರಹ

ಕಲಾಪ ಮುಂದೂಡಿದ ಬಳಿಕ ಸ್ಪೀಕರ್ ಅವರು ಸರ್ವಪಕ್ಷ ಸಭೆ ನಡೆಸಿದರು. ಭದ್ರತಾ ಲೋಪದ ಕುರಿತು ಕೆಲವು ಸಂಸದರು ಸಭೆಯಲ್ಲಿ ಬೊಟ್ಟು ಮಾಡಿದರು. ಘಟನೆ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು.

'ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಮಹುವಾ ಮೊಯಿತ್ರಾ ಹಣ ಪಡೆದಿದ್ದಾರೆ ಎಂದು ಹೇಳಿ ಸಂಸತ್ತಿನ ನೀತಿ ಸಮಿತಿ ನೀಡಿದ್ದ ವರದಿಯನ್ನು ಅಂಗೀಕರಿಸಿದ್ದ ಲೋಕಸಭೆಯು, ಮಹುವಾ ಅವರನ್ನು ಲೋಕಸಭಾ ಸದಸ್ಯತ್ವದಿಂದ ಉಚ್ಚಾಟಿಸಿದೆ. ಅದೇ ರೀತಿ, ಪಾಸ್ ವ್ಯವಸ್ಥೆ ಮಾಡಿಸಿದ ಪ್ರತಾಪ ಸಿಂಹ ಅವರನ್ನೂ ಉಚ್ಚಾಟನೆ ಮಾಡಬೇಕು' ಎಂದು ಕೆಲವು ಸಂಸದರು ಆಗ್ರಹಿಸಿದರು.

'ಡಿಸೆಂಬರ್ 13ರಂದು ಸಂಸತ್ತಿನ ಮೇಲೆ ದಾಳಿ ನಡೆಸಲು ಭಯೋತ್ಪಾದಕ ಸಂಘಟನೆಯೊಂದು ಸಂಚು ರೂಪಿಸುತ್ತಿದೆ ಎಂಬ ಸುದ್ದಿ ಹರಡಿತ್ತು. ಈ ವಿಷಯ ಸರ್ಕಾರಕ್ಕೂ ಗೊತ್ತಿತ್ತು. ಆದರೂ, ಇಂತಹ ಲೋಪ ಏಕೆ ಸಂಭವಿಸಿತು' ಎಂದು ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಪ್ರಶ್ನಿಸಿದರು.

'ಕಲಾಪದೊಳಗೆ ನುಗ್ಗಿದವರಿಗೆ ಪಾಸ್‌ಗಳನ್ನು ಒದಗಿಸುವ ಮೂಲಕ ಪ್ರತಾಪ ಸಿಂಹ ಅವರು ಸಂಸತ್ ಅನ್ನು ಅಪಾಯಕ್ಕೆ ದೂಡಿದ್ದಾರೆ' ಎಂದು ಟಿಎಂಸಿ ಹೇಳಿದೆ.

ಬೆಳಗಾವಿಯಲ್ಲಿ ಬುಧವಾರ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಹೋರಾಟದ ಕರೆಗೆ ಜನ ಕೈ ಎತ್ತಿ ಸಮ್ಮತಿಸಿದ್ದು ಹೀಗೆ —ಪ್ರಜಾವಾಣಿ ಚಿತ್ರ

'ರೈತರ ಸಾಲ ಮನ್ನಾ ಮಾಡದಿದ್ದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮುಂದಿನ 15ರಿಂದ 20 ದಿನಗಳ ಒಳಗೆ ರಾಜ್ಯ ಸರ್ಕಾರ ರೈತರ ಸಾಲ ಮನ್ನಾ ಮಾಡುವ ನಿರ್ಧಾರ ಪ್ರಕಟಿಸಬೇಕು. ಇಲ್ಲದಿದ್ದರೆ, ರಾಜ್ಯದಾದ್ಯಂತ ಹೋರಾಟ ಮಾಡುವೆ. ಈ ಸರ್ಕಾರ ಓಡಿಸುವವರೆಗೂ ವಿಶ್ರಮಿಸುವುದಿಲ್ಲ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಗುಡುಗಿದರು.

ನಗರದಲ್ಲಿ ಬುಧವಾರ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಆಯೋಜಿಸಿದ್ದ ಬೃಹತ್ ಪ್ರತಿಭಟನಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 'ರಾಜ್ಯದಲ್ಲಿ ತೀವ್ರ ಬರ ಇದೆ. ಸರ್ಕಾರ ಕೈಕಟ್ಟಿ ಕೂರುವುದು ಎಷ್ಟು ಸರಿ? ಈ ಹಿಂದೆ ಅತಿವೃಷ್ಟಿಯಿಂದ ರೈತರು ಸಂಕಷ್ಟಕ್ಕೆ ಒಳಗಾದಾಗ ನಾನು ತಡ ಮಾಡದೇ ಸಾಲ ಮನ್ನಾ ಮಾಡಿದ್ದೆ. ಈಗಲೂ ನೀವು ಅಂಥ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

'ನನ್ನ ಅಧಿಕಾರದಲ್ಲಿ ಯಾವುದೇ ಷರತ್ತಿಲ್ಲದೇ ರೈತರಿಗೆ ವಿದ್ಯುತ್ ನೀಡಿದ್ದೆ. ಈಗ ಅನೇಕ ಷರತ್ತುಗಳನ್ನು ವಿಧಿಸಿ ರೈತರೊಂದಿಗೆ ಚೆಲ್ಲಾಟ ಮಾಡುತ್ತಿರುವುದು ಖಂಡನೀಯ. ಇದನ್ನು ಸರಿ ಮಾಡದಿದ್ದರೆ ರಾಜ್ಯದಾದ್ಯಂತ ಹೋರಾಟ ಮಾಡುವುದು ಅನಿವಾರ್ಯ' ಎಂದರು.

> **ಉತ್ತರ ಕರ್ನಾಟಕದ ರೈತರ ಸಮಸ್ಯೆಗಳಿಗೆ ಪರಿಹಾರ ಸಿಗಬೇಕೆಂದು ಯಡಿಯೂರಪ್ಪ ಸುವರ್ಣಸೌಧ ಕಟ್ಟಿದರು. ಆದರೆ, ಸಿದ್ದರಾಮಯ್ಯ ಸರ್ಕಾರ ಉತ್ತರ ಕರ್ನಾಟಕದ ವಿರೋಧಿ**
> **ಬಿ.ವೈ.ವಿಜಯೇಂದ್ರ,** ಅಧ್ಯಕ್ಷ, ಬಿಜೆಪಿ

'ಸಿದ್ದರಾಮಯ್ಯ ಒಂದು ಕೈಯಿಂದ ಕೊಟ್ಟು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವುದು ಎಷ್ಟು ಸರಿ? 'ರೈತ ಸಮ್ಮಾನ್ ನಿಧಿ'ಯಡಿ ಕೇಂದ್ರದ ₹6,000 ಜತೆಗೆ ನಾವು ನೀಡುತ್ತಿದ್ದ ₹4,000 ನೆರವನ್ನು ನಿಲ್ಲಿಸಲು ಕಾರಣವೇನು? ಯಾರಿಗೆ ಟೋಪಿ ಹಾಕಲು ಹೊರಟಿದ್ದೀರಿ? ಇಲ್ಲಸಲ್ಲದ ಭರವಸೆ ಕೊಟ್ಟು ನಮ್ಮನ್ನೇ ಭಿಕ್ಷುಕರನ್ನಾಗಿ ಮಾಡಲು ಹೊರಟಿದ್ದೀರಿ' ಎಂದೂ ಹರಿಹಾಯ್ದರು.

'ಹೆಣ್ಣುಮಗು ಜನಿಸಿದರೆ ಕಣ್ಣೀರು ಹಾಕುವಂಥ ಸ್ಥಿತಿ ಇದ್ದಾಗ ನಾನು 'ಭಾಗ್ಯಲಕ್ಷ್ಮಿ' ಯೋಜನೆ ತಂದೆ. ಈ ಸಂಗತಿಯನ್ನು ತಾಯಂದಿರು ಮನೆಮನೆಗೂ ಮುಟ್ಟಿಸಬೇಕು. ಕಳಸಾ ಬಂಡೂರಿ ಯೋಜನೆಗೆ ಈ ಸರ್ಕಾರ ಒಂದು ಪೈಸೆ ಕೊಡಲಿಲ್ಲ. ನೀರಾವರಿಯ ಎಲ್ಲ ಯೋಜನೆಗಳು ಸ್ಥಗಿತಗೊಂಡಿವೆ. ಇದನ್ನು ರೈತರು ಗಮನಿಸಬೇಕು' ಎಂದರು.

5ನೇ ಪುಟ ನೋಡಿ

ಡ್ರಗ್ಸ್ ಪೂರೈಕೆ ಬೆದರಿಕೆ: ₹9.14 ಕೋಟಿ ಸುಲಿಗೆ

ಬೆಂಗಳೂರು: ಮುಂಬೈ ಪೊಲೀಸರ ಸೋಗಿನಲ್ಲಿ ಸಾರ್ವಜನಿಕರಿಗೆ ವಾಟ್ಸ್ ಆ್ಯಪ್ ಕರೆ ಮಾಡಿ 'ಫೆಡೆಕ್ಸ್ ಕೊರಿಯರ್'ನಲ್ಲಿ ನಿಮ್ಮ ಹೆಸರಿನಲ್ಲಿ ಮಾದಕ ವಸ್ತುಗಳು ಪೂರೈಕೆ ಆಗುತ್ತಿದೆ ಎಂದು ಬೆದರಿಸಿ, 15 ದಿನಗಳಲ್ಲಿ ವ್ಯಕ್ತಿಯೊಬ್ಬರಿಂದ ₹9.14 ಕೋಟಿ ಸುಲಿಗೆ ಮಾಡಲಾಗಿದೆ.

ನ.14ರಿಂದ 28ರವರೆಗೆ ಈ ಸುಲಿಗೆ ನಡೆದಿದ್ದು ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನ.14ರಂದು ಮಧ್ಯಾಹ್ನ 2.30ರ ವೇಳೆಯಲ್ಲಿ 61 ವರ್ಷದ ಬೆಂಗಳೂರು ನಿವಾಸಿ, ಸಾಫ್ಟ್‌ವೇರ್ ಕಂಪನಿಯ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ದಯಾನಂದ ಜೋಶಿ (ಹೆಸರು ಬದಲಾವಣೆ ಮಾಡಲಾಗಿದೆ) ಅವರಿಗೆ ಅಪರಿಚಿತ ಸಂಖ್ಯೆಯಿಂದ ಕರೆ ಬಂದಿತ್ತು. ಕರೆ ಮಾಡಿದವರು ಮುಂಬೈನ ಫೆಡೆಕ್ಸ್ ಕೊರಿಯರ್ ಸಿಬ್ಬಂದಿ ಎಂದು ಪರಿಚಯಿಸಿಕೊಂಡಿದ್ದರು.

'ನಿಮ್ಮ ಹೆಸರಿನಲ್ಲಿ ಮಾದಕ ವಸ್ತುಗಳು ಥೈವಾನ್ ದೇಶಕ್ಕೆ ಪೂರೈಕೆ ಆಗುತ್ತಿದ್ದು, ವಸ್ತುಗಳನ್ನು ಮುಂಬೈನಲ್ಲೇ ತಡೆ ಹಿಡಿಯಲಾಗಿದೆ. ಮುಂಬೈ ಅಪರಾಧ ದಳದ ಪೊಲೀಸರಿಗೆ ತಿಳಿಸಲಾಗುವುದು ಎಂದು ಬೆದರಿಕೆ ಹಾಕಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಮರು ದಿವಸ ಜೋಶಿ ಅವರಿಗೆ ಕರೆ ಮಾಡಿದ್ದ ಮತ್ತೊಬ್ಬ ವ್ಯಕ್ತಿ, 'ಮುಂಬೈನ ಡಿಸಿಪಿ ಎಂದು ಪರಿಚಯಿಸಿಕೊಂಡಿದ್ದ. ಅಕ್ರಮ ಹಣ ವರ್ಗಾವಣೆ ಸಂಬಂಧ ಪರಿಶೀಲಿಸಲು ಬ್ಯಾಂಕ್ ಖಾತೆಗಳ ವಿವರ ನೀಡುವಂತೆ ತಿಳಿಸಿದ್ದ.

5 ಬಿ ಪುಟ ನೋಡಿ

ಗಣಪತಿ ಭಟ್‌ಗೆ ತಾನ್‌ಸೇನ್ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮಧ್ಯ ಪ್ರದೇಶ ಸರ್ಕಾರ ನೀಡುವ ಪ್ರತಿಷ್ಠಿತ 'ತಾನ್‌ಸೇನ್ ಸಮ್ಮಾನ್' ಪುರಸ್ಕಾರಕ್ಕೆ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ, ಉತ್ತರ ಕನ್ನಡ ಜಿಲ್ಲೆಯ ಪಂಡಿತ ಗಣಪತಿ ಭಟ್ ಹಾಸಣಗಿ ಆಯ್ಕೆಯಾಗಿದ್ದಾರೆ. ಇದೇ 24ರಂದು ಗ್ವಾಲಿಯರ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪುರಸ್ಕಾರ ಪ್ರದಾನ ಮಾಡಲಾಗುವುದು.

'ಇಷ್ಟು ವರ್ಷ ಸಂಗೀತ ಕ್ಷೇತ್ರದಲ್ಲಿ ಮಾಡಿದ ಸಾಧನೆ ಗುರುತಿಸಿ ಗೌರವಿಸುತ್ತಿರುವುದಕ್ಕೆ ಸಂತೋಷವಾಗಿದೆ' ಎಂದು ಗಣಪತಿ ಭಟ್ ಹಾಸಣಗಿ ತಿಳಿಸಿದರು. ಯಲ್ಲಾಪುರ ತಾಲ್ಲೂಕಿನ ಹಾಸಣಗಿ ಗ್ರಾಮದ ಅವರು, ದಿ.ಪಂ. ಬಸವರಾಜ ರಾಜಗುರು ಅವರ ಶಿಷ್ಯ. ಕಿರಾಣಾ– ಗ್ವಾಲಿಯರ್ ಘರಾನಾ ಪರಂಪರೆಗೆ ಸೇರಿದವರು. ಹುಬ್ಬಳ್ಳಿಯ ಡಾ.ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ್‌ನಲ್ಲಿ ಅಧ್ಯಾಪಕರಾಗಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

₹26 ಲಕ್ಷ ಮೌಲ್ಯದ ಇ–ಸಿಗರೇಟ್ ಉತ್ಪನ್ನ, ವಿದೇಶಿ ಸಿಗರೇಟ್ ಜಪ್ತಿ

ಗಿಫ್ಟ್ ಸೆಂಟರ್‌ನಲ್ಲಿ ಇ–ಸಿಗರೇಟ್ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ದಾಳಿ ನಡೆಸಿದ ಸಿಸಿಬಿ ಹಾಗೂ ಕೊತ್ತನೂರು ಠಾಣೆ ಪೊಲೀಸರು ಅಪಾರ ಪ್ರಮಾಣದ ಇ –ಸಿಗರೇಟ್ ಉತ್ಪನ್ನ ಹಾಗೂ ವಿದೇಶಿ ಸಿಗರೇಟ್ ಜಪ್ತಿ ಮಾಡಿಕೊಂಡಿದ್ದಾರೆ.

ನಿಷೇಧಿತ ಇ-ಸಿಗರೇಟ್ ಮಾರಾಟ ಮಾಡುತ್ತಿದ್ದ ಗಿಫ್ಟ್ ಸೆಂಟರ್‌ಗಳ ಮೇಲೆ ಕೊತ್ತನೂರು ಠಾಣೆ ಪೊಲೀಸರು ದಾಳಿ ನಡೆಸಿ, ಇ-ಸಿಗರೇಟ್ ಮಾರಾಟ ನಡೆಸುತ್ತಿದ್ದ ಮುಜಾಮಿಲ್, ಮೊಹಮ್ಮದ್ ಅಮ್ಜದ್, ಅಬ್ದುಲ್ ಸಮೀರ್, ಅಬ್ದುಲ್ ಅಜೀಜ್ ಸೇರಿದಂತೆ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳ ವಿರುದ್ಧ ಕೋಟ್ಪಾ ಹಾಗೂ ಇ-ಸಿಗರೇಟ್ ನಿಷೇಧ ಕಾಯ್ದೆ-ಯಡಿಯಲ್ಲಿ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಗಿಫ್ಟ್ ಸೆಂಟರ್‌ನಲ್ಲಿ ದಾಸ್ತಾನು ಮಾಡಿಕೊಂಡಿದ್ದ ₹2.30 ಲಕ್ಷ ಮೌಲ್ಯದ ಇ-ಸಿಗರೇಟ್ ಹಾಗೂ ಪೂರೈಕೆದಾರನಿಂದ ₹23.67 ಲಕ್ಷ ಮೌಲ್ಯದ ಇ-ಸಿಗರೇಟ್ ಉತ್ಪನ್ನ ಹಾಗೂ ವಿದೇಶಿ ಸಿಗರೇಟ್ ಜಪ್ತಿ ಮಾಡಿ-ಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಪೊಲೀಸರು ಜಪ್ತಿ ಮಾಡಿಕೊಂಡಿರುವ ಇ–ಸಿಗರೇಟ್

ಸಿಸಿಬಿ ದಾಳಿ: ಕೋಣನಕುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಜೆ.ಪಿ. ನಗರದ 7ನೇ ಹಂತದ ಭುವನೇಶ್ವರಿ ನಗರ ಶಾಪ್ ನಂ.:513 ಹಾಗೂ ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಇಂದ್ರಪ್ರಸ್ಥ ಕಟ್ಟಡದಲ್ಲಿ ಇ-ಸಿಗರೇಟ್ ಮಾರಾಟ ಮಾಡುತ್ತಿದ್ದ ಮಳಿಗೆಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ₹4.4 ಲಕ್ಷ ಮೌಲ್ಯದ ವಿದೇಶಿ ಸಿಗರೇಟ್ ಜಪ್ತಿ ಮಾಡಿಕೊಂಡಿದ್ದಾರೆ.

ಆರು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳ ವಿರುದ್ಧ ಮೂರು ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ.

ಗೃಹಬಳಕೆ ಸಿಲಿಂಡರ್ ರೀಫಿಲ್ಲಿಂಗ್ ದಂಧೆ

ಗೃಹ ಬಳಕೆ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿಕೊಂಡು ಸಣ್ಣ ಸಣ್ಣ ಸಿಲಿಂಡರ್‌ಗಳಿಗೆ ಅಕ್ರಮವಾಗಿ ರೀಫಿಲ್ಲಿಂಗ್ ಮಾಡಿ ಮಾರಾಟ ಮಾಡುತ್ತಿದ್ದ ಶರಬೀಶ್ ಎಂಟರ್ ಪ್ರೈಸಸ್ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, ದಂಧೆ ಪತ್ತೆಹಚ್ಚಿದ್ದಾರೆ. ಕೋರಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆ ಮುಂದುವರಿದಿದೆ.

ಅಂಗಡಿಯಿಂದ ₹14 ಲಕ್ಷ ಮೌಲ್ಯದ ವಿವಿಧ ಕಂಪನಿಯ 135 ಸಿಲಿಂಡರ್, ಎರಡು ರೀಫಿಲ್ಲಿಂಗ್ ಉಪಕರಣಗಳು, ಒಂದು ತೂಕದ ಯಂತ್ರ ಹಾಗೂ ಒಂದು ವಾಹನವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

'ಈ ಮಳಿಗೆ ಯಾವುದೇ ಪರವಾನಗಿ ಪಡೆದಿಕೊಂಡಿಲ್ಲ. ಲಿಯೊ, ಎಂವಿಆರ್, ಜ್ಯೋತಿ, ಅಗ್ನಿ, ಸೂರ್ಯ ಗ್ಯಾಸ್ ಕಂಪನಿ ಸೇರಿದ ಸಿಲಿಂಡರ್‌ಗಳನ್ನು ಅನಧಿಕೃತವಾಗಿ ದಾಸ್ತಾನು ಮಾಡಿಕೊಂಡು ರೀಫಿಲ್ಲಿಂಗ್ ಉಪಕರಣ ಬಳಸಿ ಸಣ್ಣ ಸಣ್ಣ ಸಿಲಿಂಡರ್‌ಗಳಿಗೆ ಅನಿಲ ತುಂಬಲಾಗುತ್ತಿತ್ತು' ಎಂದು ಪೊಲೀಸರು ಹೇಳಿದರು.

ಕ್ಲಬ್‌ಗಳ ಮೇಲೆ ದಾಳಿ

ಜೂಜಾಟ ನಡೆಯುತ್ತಿದ್ದ ನಗರದ ಕ್ಲಬ್‌ಗಳ ಮೇಲೆ ಸಿಸಿಬಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿ ನಗದು ಜಪ್ತಿ ಮಾಡಿಕೊಂಡಿದ್ದಾರೆ.

ಕೋಣನಕುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ 'ಕೋಣನಕುಂಟೆ ಕಲ್ಚರಲ್ ಅಸೋಸಿಯೇಷನ್ ಕ್ಲಬ್' ಮೇಲೆ ದಾಳಿ ನಡೆಸಿ, 26 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ₹1 ಲಕ್ಷ ನಗದು ಜಪ್ತಿ ಮಾಡಿಕೊಂಡಿದ್ದಾರೆ. ಪುಲಕೇಶಿನಗರ ಪೊಲೀಸ್ ಠಾಣೆ ವ್ಯಾಪ್ತಿಯ 'ಯಂಗ್ ಮ್ಯಾನ್ ಇಂಡಿಯನ್ ಅಸೋಸಿಯೇಷನ್' ಆವರಣದಲ್ಲಿ-ರುವ ಇಂಡಿಯನ್ ಪೋಕರ್ ಅಸೋಸಿಯೇಷನ್ ಮೇಲೆ ದಾಳಿ ನಡೆಸಿ, 46 ಆರೋಪಿಗಳನ್ನು ಬಂಧಿಸಿ ₹2.29 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಮೆಟ್ರೊ ಮೂಲ ಮಾದರಿ ರೈಲು ಚೀನಾದಿಂದ ಇಂದು ರವಾನೆ

ಬೆಂಗಳೂರು: ಮೆಟ್ರೊ ಹಳದಿ ಮಾರ್ಗದ ಪ್ರೊಟೊಟೈಪ್ (ಮೂಲ ಮಾದರಿ) ರೈಲು ಚೀನಾದಿಂದ ಗುರುವಾರ ರವಾನೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸಿಆರ್‌ಆರ್‌ಸಿ ರೋಲಿಂಗ್ ಕೋಚ್‌ಗಳು ಜನವರಿಯಲ್ಲಿ ನಗರಕ್ಕೆ ತಲುಪಲಿವೆ. ಬಳಿಕ ಪರೀಕ್ಷೆ, ಜೋಡಣೆ ಕಾರ್ಯಗಳು ನಡೆಯಲಿವೆ. 'ಮೂಲ ಮಾದರಿ' ರೈಲನ್ನು ಪಡೆದ ನಂತರ ಪ್ರಾಯೋಗಿಕ ಸಂಚಾರ ನಡೆಸಲು ಮತ್ತು ವಾಣಿಜ್ಯ ಕಾರ್ಯಾಚರಣೆಗಳಿಗೆ ಅನುಮೋದನೆ ಪಡೆಯಲು ಕನಿಷ್ಠ ಮೂರು ತಿಂಗಳು ಬೇಕಾಗುತ್ತದೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಬಿ.ಎಲ್. ಯಶವಂತ ಚವಾಣ್ ತಿಳಿಸಿದ್ದಾರೆ.

ಹಳದಿ ಮಾರ್ಗವು ಆರ್‌ವಿ ರಸ್ತೆ–ಸಿಲ್ಕ್ ಬೋರ್ಡ್ ಜಂಕ್ಷನ್– ಎಲೆಕ್ಟ್ರಾನಿಕ್ ಸಿಟಿ ಮೂಲಕ ಬೊಮ್ಮಸಂದ್ರ ಸಂಪರ್ಕಿಸಲಿದೆ. 19.15 ಕಿ.ಮೀ. ದೂರದ ಈ ಮೆಟ್ರೊ ಮಾರ್ಗವು ಮುಂದಿನ ಲೋಕಸಭಾ ಚುನಾವಣೆಯ ನಂತರವೇ ಆರಂಭಗೊಳ್ಳುವ ಸಾಧ್ಯತೆ ಇದೆ. 2024ರ ಜೂನ್ ವೇಳೆಗೆ ಉದ್ಘಾಟನೆಗೊಳ್ಳುವ ಸಾಧ್ಯತೆ ಇದೆ.

ಅತ್ತಿಬೆಲೆ ಪಟಾಕಿ ದುರಂತ: ಮತ್ತೊಬ್ಬ ಆರೋಪಿಯ ಬಂಧನ

ಬೆಂಗಳೂರು: ಅತ್ತಿಬೆಲೆ ಪಟಾಕಿ ದುರಂತ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಪೊಲೀಸರು, ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ.

ತಮಿಳುನಾಡಿನ ತೆಂಕಾಸಿ ಜಿಲ್ಲೆಯ ತಿರುವೆಂಗಡಮ್ ತಾಲ್ಲೂಕಿನ ನಿವಾಸಿ ಲಾರಿ ಚಾಲಕ ಮರದುಪಾಂಡಿ ಮಾರಿಮುತ್ತು (34) ಎಂಬಾತನನ್ನು ಬಂಧಿಸಿದ್ದಾರೆ.

'ತಮಿಳುನಾಡಿನ ಶಿವಕಾಶಿಯಿಂದ ಪಟಾಕಿಯನ್ನು ಗಡಿಪ್ರದೇಶ ಅತ್ತಿಬೆಲೆಗೆ ಸಾಗಣೆ ಮಾಡಲು ಯಾವುದೇ ಪರವಾನಗಿ ಪಡೆದಿರಲಿಲ್ಲ. ಅಕ್ಟೋಬರ್ 7ರಂದು ಶಿವಕಾಶಿಯಿಂದ ಪಟಾಕಿ ತಂದು ಅತ್ತಿಬೆಲೆಯ ಗೋದಾಮಿನಲ್ಲಿ ಇಳಿಸುತ್ತಿದ್ದಾಗ ದುರಂತ ಸಂಭವಿಸಿತ್ತು. ಬೆಂಕಿ ಕಾಣಿಸಿಕೊಂಡ ಮೇಲೆ ಲಾರಿ ಚಾಲಕ ಸ್ಥಳದಿಂದ ಪರಾರಿಯಾಗಿದ್ದ. ಪ್ರಕರಣದಲ್ಲಿ 7ನೇ ಆರೋಪಿಯಾಗಿದ್ದ ಮರದುಪಾಂಡಿ ಮಾರಿಮುತ್ತುನನ್ನು ಬಂಧಿಸಲಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿದೆ.

ವಿಮೆ ಹೆಸರಿನಲ್ಲಿ 200 ಜನರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕಂಪನಿಗಳ ವಿಮೆ ಹೆಸರಿನಲ್ಲಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪದ ಅಡಿಯಲ್ಲಿ ದಂಪತಿಯನ್ನು ನಗರದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಥಣಿಸಂದ್ರದ ಬಿ. ಉದಯ್ ಹಾಗೂ ಅವರ ಪತ್ನಿ ತೀರ್ಥಾ ರಾಜನ್ ಗೌಡ ಬಂಧಿತರು. ಇವರಿಬ್ಬರು ಸೇರಿ ಇದುವರೆಗೂ 200ರಿಂದ 250 ಮಂದಿಗೆ ವಂಚಿಸಿರುವುದು ತನಿಖೆ ವೇಳೆ ಗೊತ್ತಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಉದಯ್ ಹಾಗೂ ಹಾಸನದ ತೀರ್ಥಾ, ಕೋವಿಡ್‌ಗೂ ಮುನ್ನ ವಿಮೆ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದರು. ಕೋವಿಡ್ ನಂತರ ಇಬ್ಬರೂ ಸೇರಿಕೊಂಡು ಇಂದಿರಾನಗರದಲ್ಲಿ 'ಶ್ರೀನಿಧಿ ಇನ್ಫೊಸೋರ್ಸ್' ಹೆಸರಿನ ಕಚೇರಿ ತೆರೆದಿದ್ದರು.

ಟೆಲಿಕಾಲರ್‌ಗಳನ್ನು ನೇಮಕ ಮಾಡಿಕೊಂಡು, ಅವರಿಂದ ಜನರಿಗೆ ಕರೆ ಮಾಡಿಸಿ ವಂಚಿಸುತ್ತಿದ್ದರು' ಎಂದು ತಿಳಿಸಿದರು.

'₹ 1 ಕೋಟಿ ಮೊತ್ತಕ್ಕೆ ವಿಮೆ ಮಾಡಿಸಿದರೆ, ಒಂದು ವರ್ಷದಲ್ಲಿ ₹ 5 ಕೋಟಿ ವಾಪಸು ಬರುತ್ತದೆ ಎಂಬುದಾಗಿ ಆರೋಪಿಗಳು ನಂಬಿಸುತ್ತಿದ್ದರು. ಕಂತು ಪಾವತಿಸಲು ಸಾಧ್ಯವಾಗದೇ ನಿಷ್ಕ್ರಿಯವಾಗುತ್ತಿದ್ದ ವಿಮೆಗಳ ಗ್ರಾಹಕರನ್ನು ಆರೋಪಿಗಳು ಸಂಪರ್ಕಿ-ಸುತ್ತಿದ್ದರು. ಕಡಿಮೆ ಹಣ ಪಾವತಿಸಿದರೆ, ಈಗಾಗಲೇ ಕಟ್ಟಿರುವ ಹಣ ಹಾಗೂ ವಿಮೆಯ ಪೂರ್ಣ ಮೊತ್ತವನ್ನು ಬಡ್ಡಿ ಸಮೇತ ವಾಪಸು ಕೊಡಿಸುವುದಾಗಿ ಆಮಿಷವೊಡ್ಡುತ್ತಿದ್ದರು' ಎಂದು ಹೇಳಿದರು.

₹ 1.80 ಕೋಟಿ ಸಂಗ್ರಹ: 'ಆರೋಪಿಗಳ ಮಾತು ನಂಬಿದ್ದ ಜನರು, ವಿಮೆ ಮಾಡಿಸಲು ಒಪ್ಪುತ್ತಿದ್ದರು. ಇಂಥ ಜನರಿಂದ ಆರೋಪಿಗಳು ಒಟ್ಟು ₹ 1.80 ಕೋಟಿ ಸಂಗ್ರಹಿಸಿದ್ದರು. ಈ ಪೈಕಿ ₹ 40 ಲಕ್ಷ ಆರೋಪಿಗಳ ಸ್ವಂತ ಖಾತೆಗೆ ಜಮೆ ಆಗಿದೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳ ಆಮಿಷದಿಂದ ತಮ್ಮ ಹಾಗೂ ಇತರರ ವಿಮೆ ಮಾಡಿಸಿದ್ದ ವ್ಯಕ್ತಿಯೊಬ್ಬರು ಪೊಲೀಸರು ದೂರು ನೀಡಿದ್ದರು. ಅದರನ್ವಯ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಹೆಚ್ಚು ಹಣ ಸಂಪಾದಿಸುವ ಉದ್ದೇಶದಿಂದ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

ಮಕ್ಕಳ ಕಳವು: ಬಿಹಾರದ ದಂಪತಿ ಸೆರೆ

ಬೆಂಗಳೂರು: ಕೊಡಿಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಕ್ಕಳನ್ನು ಕಳವು ಮಾಡಿ, ರೈಲು ಮೂಲಕ ಬಿಹಾರಕ್ಕೆ ಕರೆದೊಯ್ಯಲು ಮುಂದಾಗಿದ್ದ ದಂಪತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಪ್ರಮೀಳಾ ದೇವಿ, ಬಲರಾಮ್ ಬಂಧಿತರು.

'ಠಾಣಾ ವ್ಯಾಪ್ತಿಯ ಮನೆಯ ಎದುರು ಆಟವಾಡುತ್ತಿದ್ದ ಆರು ವರ್ಷದ ಹೆಣ್ಣು ಮಗು ಹಾಗೂ ಮನೆಯಲ್ಲಿದ್ದ ಎಂಟು ತಿಂಗಳ ಮಗುವನ್ನು ಆರೋಪಿಗಳು, ಕದ್ದು ರೈಲು ಮೂಲಕ ಕರೆದೊಯ್ಯಲು ಮುಂದಾಗಿದ್ದರು. ಯಶವಂತಪುರ ರೈಲ್ವೆ ನಿಲ್ದಾಣಕ್ಕೆ ತೆರಳಿದಾಗ ಅನುಮಾನಗೊಂಡ ಪ್ರಯಾಣಿಕರೊಬ್ಬರು ರೈಲ್ವೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ರೈಲ್ವೆ ಪೊಲೀಸರು ಇಬ್ಬರು ಮಕ್ಕಳನ್ನು ರಕ್ಷಿಸಿ ಆರೋಪಿಗಳನ್ನು ವಶಕ್ಕೆ ಪಡೆದುಕೊಂಡಿದ್ದರು. ಇಬ್ಬರನ್ನು ವಿಚಾರಣೆ ನಡೆಸಿದಾಗ ಅವರು ಮಕ್ಕಳ ಕಳ್ಳರು ಎಂಬುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

'ಮಕ್ಕಳನ್ನು ಕಳೆದುಕೊಂಡ ಪೋಷಕರು ಕೊಡಿಗೆಹಳ್ಳಿ ಠಾಣೆಯಲ್ಲಿ ಅಪಹರಣ ದೂರು ದಾಖಲಿಸಿದ್ದರು. ಕೊಡಿಗೆಹಳ್ಳಿ ಪೊಲೀಸರಿಗೆ ಮಕ್ಕಳು ಹಾಗೂ ಆರೋಪಿಗಳನ್ನು ಒಪ್ಪಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಚಿಕ್ಕಮಗಳೂರು ಘಟನೆ: ಅರ್ಜಿ ವಿಲೇವಾರಿ

ಬೆಂಗಳೂರು: 'ಚಿಕ್ಕಮಗಳೂರಿನ ವಕೀಲ ಎನ್‌.ಟಿ.ಪ್ರೀತಮ್ ಮೇಲೆ ಪೊಲೀಸರು ನಡೆಸಿರುವ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣವನ್ನು ಸರ್ಕಾರ ಸಿಐಡಿ ತನಿಖೆಗೆ ವಹಿಸಿರುವ ಕ್ರಮ ತೃಪ್ತಿ-ಕರವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪ-ಡಿಸಿರುವ ಹೈಕೋರ್ಟ್, ಈ ಸಂಬಂಧದ ಅರ್ಜಿಯನ್ನು ವಿಲೇವಾರಿ ಮಾಡಿದೆ.

ಈ ಕುರಿತಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ವಕೀಲರ ಪರಿಷತ್, ಗೃಹ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ವಕೀಲರ ಸಂಘದ ಪ್ರತಿನಿಧಿಗಳ ಜೊತೆ ಇದೇ 9ರಂದು ನಡೆಸಿದ್ದ ಸಭೆಯ ವಿವರವನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು. 'ರಾಜ್ಯ ಸರ್ಕಾರವು ಪ್ರಕರಣದ ಕುರಿತಂತೆ ಸೂಕ್ತ ಕ್ರಮ ಕೈಗೊಂಡಿದೆ. ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ' ಎಂದರು.

ಇದಕ್ಕೆ ಸಹಮತ ವ್ಯಕ್ತಪಡಿಸಿದ ನ್ಯಾಯಪೀಠ, 'ತನಿಖೆಯ ಮೇಲ್ವಿಚಾರಣೆ ನ್ಯಾಯಾಲಯದ ಕರ್ತವ್ಯ ವಲ್ಲ, ಕಾಲಮಿತಿಯಲ್ಲಿ ತನಿಖೆ ನಡೆಸಲು ನಿರ್ದೇಶಿಸಲು ಸಾಧ್ಯವಿಲ್ಲ' ಎಂದು ಹೇಳಿ ಅರ್ಜಿಯನ್ನು ವಿಲೇವಾರಿ ಮಾಡಿತು.

ಬಾಗಲೂರು ಗ್ರಾ.ಪಂ: ಅಧ್ಯಕ್ಷರ ಚುನಾವಣೆಗೆ ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬಾಗಲೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಸ್ಥಾನಕ್ಕಾಗಿ ಮಂಗಳವಾರ ನಡೆ-ಯಬೇಕಾಗಿದ್ದ ಚುನಾವಣಾ ಪ್ರಕ್ರಿಯೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ-ಯಿಂದಾಗಿ ರದ್ದುಗೊಂಡಿದೆ.

ಬಾಗಲೂರು ಗ್ರಾಮ ಪಂಚಾಯಿತಿಯ ಒಟ್ಟು 26 ಸದಸ್ಯರಲ್ಲಿ 21 ಸದಸ್ಯರು ಅಧ್ಯಕ್ಷರಾಗಿದ್ದ ರೀತಿ ಜೆ. ಮುನೇಗೌಡ ಅವರ ವಿರುದ್ಧ ಡಿ.7ರಂದು ಅವಿಶ್ವಾಸ ನಿರ್ಣಯ ಮಂಡಿಸಿ, ಹೊಸ ಅಧ್ಯಕ್ಷರ ಆಯ್ಕೆಗೆ ಕಸರತ್ತು ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಡಿ.12ರಂದು ನೂತನ ಅಧ್ಯಕ್ಷರ ಆಯ್ಕೆಗೆ ಚುನಾವಣಾ ಪ್ರಕ್ರಿಯೆ ನಡೆಯಬೇಕಾಗಿತ್ತು. ರೀತಿ ಮುನೇಗೌಡ ಅವರು ಹೈಕೋರ್ಟ್ ಮೊರೆ ಹೋಗಿದ್ದರಿಂದ ಅಧ್ಯಕ್ಷರ ಚುನಾವಣಾ ಪ್ರಕ್ರಿಯೆಗೆ ಹೈಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿತು.

ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನವು ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಬನ್ನಂಜೆ ಗೋವಿಂದಾಚಾರ್ಯ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಬರಹಗಾರ ಬಿ.ಎನ್. ಶಶಿಕಿರಣ್ ಅವರಿಗೆ ಬನ್ನಂಜೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಾಗ್ಮಿ ಹಾರಿಕಾ ಮಂಜುನಾಥ್, ಗಾಯಕ ವಿದ್ಯಾಭೂಷಣ, ಶತಾವಧಾನಿ ಗಣೇಶ್, ಸುತ್ತೂರು ಮಠದ ಪೀಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

'ಪೊಲೀಸರ ಪರೀಕ್ಷಿಸಲು ಹುಸಿ ಕರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಭವನಕ್ಕೆ ಬಾಂಬ್ ಇರಿಸಿರುವುದಾಗಿ ಬೆದರಿಕೆ ಕರೆ ಮಾಡಿದ್ದ ಆರೋಪಿ ಭಾಸ್ಕರ್‌ನನ್ನು ಬಂಧಿಸಿರುವ ವಿಧಾನಸೌಧ ಠಾಣೆ ಪೊಲೀಸರು, ಆತನನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

'ಪೊಲೀಸರು ಎಷ್ಟರಮಟ್ಟಿಗೆ ಅಲರ್ಟ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಪರಿಶೀಲಿಸಲು ಕರೆ ಮಾಡಿದ್ದೆ' ಎಂಬುದಾಗಿ ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ ಎಂದು ಪೊಲೀಸರು ಹೇಳಿದರು.

ಭಾಸ್ಕರ್

'ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ವಡ್ಡಹಳ್ಳಿಯ ಭಾಸ್ಕರ್, ಬಿ.ಕಾಂ ಪದವೀಧರ. ವ್ಯವಸಾಯ ಮಾಡುತ್ತಿದ್ದ. ಇತ್ತೀಚೆಗೆ ಬೆಂಗಳೂರಿನ ಶಾಲೆಗಳಿಗೆ ಬಾಂಬ್ ಇಟ್ಟಿರುವುದಾಗಿ ಇ-ಮೇಲ್ ಬಂದಿದ್ದ ಮಾಹಿತಿ ತಿಳಿದುಕೊಂಡಿದ್ದ. ಪೊಲೀಸರು ತನಿಖೆ ನಡೆಸುತ್ತಿರುವ ಮಾಹಿತಿ ಪಡೆದುಕೊಂಡಿದ್ದ ಆರೋಪಿ, ಎರಡು ದಿನಗಳ ಹಿಂದೆ ಬೆಂಗಳೂರಿಗೆ ಬಂದಿದ್ದ. ಈ ವೇಳೆ ರಾಜಭವನದ ಸುತ್ತಮುತ್ತ ಓಡಾಟ ನಡೆಸಿದ್ದ. ಪೊಲೀಸರನ್ನು ಕಾರ್ಯ ವೈಖರಿ ಪರಿಶೀಲಿಸಲು ರಾಷ್ಟ್ರೀಯ ತನಿಖಾ ದಳ(ಎನ್‌ಐಎ) ಸಹಾಯ ವಾಣಿಗೆ ಕರೆ ಮಾಡಿ ಹುಸಿ ಬಾಂಬ್ ಬೆದರಿಕೆ ಹಾಕಿದ್ದ' ಎಂದು ಮೂಲಗಳು ಹೇಳಿವೆ.

'ಡಿ.11ರಂದು ರಾತ್ರಿ 11.35ಕ್ಕೆ ಎನ್‌ಐಎಗೆ ಕರೆ ಮಾಡಿ ರಾಜಭವನಕ್ಕೆ ಬಾಂಬ್ ಇಟ್ಟಿರುವುದಾಗಿ ಹೇಳಿದ್ದ. ಎನ್‌ಐಎ ಅಧಿಕಾರಿಗಳು ಸಹಾಯವಾಣಿಗೆ ಮಾಹಿತಿ ನೀಡಿದ್ದರು. ತಕ್ಷಣವೇ ವಿಧಾನಸೌಧ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಿರಲಿಲ್ಲ. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ ವಿರುದ್ಧ ಈ ಹಿಂದೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿಲ್ಲ. ಬಸ್‌ನಲ್ಲಿ ತೆರಳುವಾಗ ರಾಜಭವನ ಕಂಡು ಕರೆ ಮಾಡಿದ್ದೆ ಎಂಬುದಾಗಿ ವಿಚಾರಣೆ ವೇಳೆ ಹೇಳಿದ್ದಾನೆ' ಎಂದು ಪೊಲೀಸರು ಹೇಳಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.

ಸಂಖ್ಯೆ: ಬಿಐಎಪಿಎ/ಟಿಪಿ/ಭೂಉನಿ/09/2023–24/1854 ದಿನಾಂಕ: 11–12–2023

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ: 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29–01–2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1	ಶ್ರೀಮತಿ ಆರ್.ಶಕುಂತಲಾ ಬೊಹರಾ ಕೋಂ ಬಿ.ರಮೇಶ್ ಚಂದ್ ಬೊಹರ, ಶ್ರೀಮತಿ ತ್ರಿಶಲಾ ದೇವಿ ಕೋಂ ಮಂಗಲ್‌ಚಂದ್ ಬೊಹರ ಮತ್ತು ಶ್ರೀ ವಿಕಾಸ್ ಬೊಹರ ಬಿನ್ ಬಿ.ಇಂದರ್ ಚಂದ್ ಬೊಹರ	ದೇವನಹಳ್ಳಿ	ಕಸಬಾ	ದೇವನಹಳ್ಳಿ	159/5	0–22	ಉದ್ಯಾನವನ	ವಸತಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/ಸ್ಯಾನ್/2543/2023–24

ಬಿಎಂಟಿಸಿ: 3,208 ಜನರಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ನವೆಂಬರ್ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸುತ್ತಿದ್ದ 3,321 ಪ್ರಯಾಣಿಕರಿಂದ ₹ 6.68 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಬಿಎಂಟಿಸಿ ತನಿಖಾ ತಂಡದಲ್ಲಿನ ಅಧಿಕಾರಿಗಳು ನವೆಂಬರ್‌ನಲ್ಲಿ 16,421 ಬಸ್ ಟ್ರಿಪ್‌ಗಳಲ್ಲಿ ತನಿಖೆ ನಡೆಸಿದ್ದರು. ಸಂಸ್ಥೆಯ 1,062 ನಿರ್ವಾಹಕರ ವಿರುದ್ಧ ಪ್ರಕರಣ ದಾಖಲಾಗಿದೆ. ಮಹಿಳಾ ಪ್ರಯಾಣಿಕರಿಗೆ ಮೀಸಲಾದ ಆಸನಗಳಲ್ಲಿ ಪ್ರಯಾಣಿಸಿದ 438 ಪುರುಷ ಪ್ರಯಾಣಿಕರಿಗೆ ₹ 43,800 ದಂಡ ವಿಧಿಸಲಾಗಿದೆ.

ಪ್ರಯಾಣಿಕರು ಟಿಕೆಟ್ ಅಥವಾ ಬಸ್ ಪಾಸ್ ಪಡೆದು ಪ್ರಯಾಣಿಸಬೇಕು. ಮಹಿಳೆಯರಿಗೆ ಮೀಸಲಾದ ಆಸನಗಳಲ್ಲಿ ಪುರುಷರು ಕುಳಿತುಕೊಳ್ಳಬಾರದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸಂಕೀರ್ತನ ಯಾತ್ರೆ ಇದೇ 24ರಂದು

ಮಂಡ್ಯ: ಹಿಂದೂ ಜಾಗರಣ ವೇದಿಕೆ ಸಹಯೋಗದಲ್ಲಿ ಡಿ.24 ಬೆಳಿಗ್ಗೆ 10 ಗಂಟೆಗೆ ಶ್ರೀರಂಗಪಟ್ಟಣದಲ್ಲಿ ಮೂಡಲಬಾಗಿಲು ಆಂಜನೇಯಸ್ವಾಮಿ ಮಾಲಾಧಾರಿಗಳಿಂದ ಬೃಹತ್ ಸಂಕೀರ್ತನ ಯಾತ್ರೆಯು ನಡೆಯಲಿದೆ ಎಂದು ವೇದಿಕೆಯ ಜಿಲ್ಲಾ ಸಂಚಾಲಕ ಮಾರ್ಕಂಡೇಯ ಹೇಳಿದರು.

ಡಿ.17 ರಿಂದ ಪ್ರತಿ ಗ್ರಾಮದಲ್ಲಿಯೂ ಮಾಲಾಧಾರಣೆ ಪ್ರಾರಂಭವಾಗಲಿದೆ. ಎಂದು ತಿಳಿಸಿದರು.

ಖಾಸಗಿ ಕಂಪನಿಯವರಿಗೆ ಮಾತ್ರ ರಿಯಾಯಿತಿ ನೀಡುವ ಕೇಂದ್ರ ಸರ್ಕಾರ

ಬಿಎಂಟಿಸಿ: ಇವಿ ಬಸ್ಸಿಗಿಲ್ಲ ಸಬ್ಸಿಡಿ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಎಲೆಕ್ಟ್ರಿಕ್(ಇವಿ) ಬಸ್ ಖರೀದಿಗೆ ಕೇಂದ್ರ ಸರ್ಕಾರ ನೀಡುವ ಸಬ್ಸಿಡಿ ಖಾಸಗಿ ಕಂಪನಿಗಳಿಗಷ್ಟೇ ಸೀಮಿತವಾಗಿದ್ದು, ಬೆಂಗಳೂರು ಪ್ರಯಾಣಿಕರ ಜೀವನಾಡಿ ಬಿಎಂಟಿಸಿಗೆ ಸಬ್ಸಿಡಿ ಪಡೆಯುವ ಯೋಗ ದೊರೆತಿಲ್ಲ. ಹಾಗಾಗಿ ಖಾಸಗಿ ಕಂಪನಿಗಳ ಇವಿ ಬಸ್‌ಗಳನ್ನೇ ಬಿಎಂಟಿಸಿ ರಸ್ತೆಗಿಳಿಸಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ.

ಪರಿಸರ ಸ್ನೇಹಿ ಸಾರಿಗೆ ವ್ಯವಸ್ಥೆಗಾಗಿ ಬಿಎಂಟಿಸಿಯಲ್ಲಿ ಎಲೆಕ್ಟ್ರಿಕ್ ವಾಹನಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಆದರೆ, ಎಲೆಕ್ಟ್ರಿಕ್ ಬಸ್ ಖರೀದಿಗೆ ಕೇಂದ್ರ ಸರ್ಕಾರ ಸಬ್ಸಿಡಿ ನೀಡದ ಕಾರಣ, ಬಿಎಂಟಿಸಿ ಬಸ್ ಖರೀದಿಸುತ್ತಿಲ್ಲ. ಬಾಡಿಗೆ ಆಧಾರದಲ್ಲಿ ಖಾಸಗಿ ಕಂಪನಿಗಳ ಬಸ್‌ಗಳನ್ನೇ ರಸ್ತೆಗಿಳಿಸುತ್ತಿದೆ.

ಖಾಸಗಿ ಕಂಪನಿಗಳು ಎಲೆಕ್ಟ್ರಿಕ್ ಬಸ್ ಖರೀದಿಸಿದರೆ ಕೇಂದ್ರ ಸರ್ಕಾರದಿಂದ ₹ 39 ಲಕ್ಷ ಸಬ್ಸಿಡಿ ಸಿಗುತ್ತದೆ. ಆದರೆ, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಸಹಿತ ಯಾವುದೇ ನಿಗಮಗಳಿಗೆ ಈ ಸಬ್ಸಿಡಿ ಇಲ್ಲ. ಈ ಆರ್ಥಿಕ ವರ್ಷದ ಒಳಗೆ ಬಿಎಂಟಿಸಿಗೆ 921 ಎಲೆಕ್ಟ್ರಿಕ್ ಬಸ್‌ಗಳು ಬರಲಿವೆ. ಇವೆಲ್ಲ ಟಾಟಾ ಮೋಟರ್ಸ್ ಸ್ಮಾರ್ಟ್ ಮೊಬಿಲಿಟಿ ಸಿಟಿ ಲಿಮಿಟೆಡ್ ತಯಾರಿಸಿರುವ ಈ ಬಸ್‌ಗಳು. ಇವುಗಳ ಮಾಲೀಕತ್ವ ಕಂಪನಿಯದ್ದೇ. ಚಾಲಕರೂ ಟಾಟಾ ಮೋಟರ್ಸ್‌ನವರೇ ಆಗಿರುತ್ತಾರೆ. ನಿರ್ವಾಹಕ ಮಾತ್ರ ಬಿಎಂಟಿಸಿ ಸಿಬ್ಬಂದಿ ಇರುತ್ತಾರೆ. ಟಾಟಾ ಮೋಟರ್ಸ್ ಕಂಪನಿಗೆ ಬಿಎಂಟಿಸಿ ಪ್ರತಿ ಕಿಲೋಮೀಟರ್‌ಗೆ ₹ 41 ಪಾವತಿಸಬೇಕು.

ಖಾಸಗೀಕರಣ: ಎಲ್ಲ ಮಿತಿಗಳ ನಡುವೆಯೂ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಸೇರಿದಂತೆ ಕರ್ನಾಟಕದ ಸಾರಿಗೆ ನಿಗಮಗಳು ದೇಶದಲ್ಲಿಯೇ ಅತ್ಯುತ್ತಮವಾಗಿವೆ. ಕೇಂದ್ರ ಸರ್ಕಾರ ಈ ನಿಗಮಗಳನ್ನು ನಾಶ ಮಾಡಲು ಹೊರಟಿದೆ ಎಂದು ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಶನ್ (ಎಐಆರ್‌ಟಿಡಬ್ಲ್ಯುಎಫ್) ರಾಜ್ಯ ಸಂಚಾಲಕ ಕೆ.ಪ್ರಕಾಶ್ ಆಕ್ರೋಶ ವ್ಯಕ್ತಪಡಿಸಿದರು.

ಬಸ್‌ಗಳ ಪ್ರಮಾಣ ಏರಿದಂತೆ ಬಿಎಂಟಿಸಿ ಸಿಬ್ಬಂದಿಯ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಮುಂದೊಂದು ದಿನ ಪೂರ್ಣ ಖಾಸಗೀಕರಣ ಆಗಿಬಿಡುತ್ತದೆ. ವಾಯುಮಾಲಿನ್ಯ, ಶಬ್ದ ಮಾಲಿನ್ಯ ತಪ್ಪಿಸಲು ಎಲೆಕ್ಟ್ರಿಕ್ ಬಸ್ ಹೆಚ್ಚಳವಾಗಬೇಕು. ಆದರೆ, ಒಪ್ಪಂದದ ಆಧಾರದಲ್ಲಿ ಖಾಸಗಿ ಕಂಪನಿಗಳ ಬಸ್‌ಗಳನ್ನು ಬಿಎಂಟಿಸಿ ಮೂಲಕ ರಸ್ತೆಗಿಳಿಸುವ ಬದಲು ಎಲೆಕ್ಟ್ರಿಕ್ ಬಸ್ ಖರೀದಿಸಲು ಕೇಂದ್ರ ಸರ್ಕಾರ ಬಿಎಂಟಿಸಿಗೆ ಸಬ್ಸಿಡಿ ನೀಡಬೇಕು. ರಾಜ್ಯ ಸರ್ಕಾರವು ಈ ಬಗ್ಗೆ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು ಎಂದು ಅವರು ಒತ್ತಾಯಿಸಿದರು.

ಟಾಟಾ ಮೋಟಾರ್ಸ್ ಮಾಲೀಕತ್ವದ ಬಿಎಂಟಿಸಿ ಬಸ್

ಎಲೆಕ್ಟ್ರಿಕ್ ಬಸ್‌ಗಳಿಗೆ ವಿರೋಧವಿಲ್ಲ. ಆದರೆ, ಪರಿಸರ ಕಾಳಜಿಯ ಹೆಸರಲ್ಲಿ ನಿಗಮಗಳ ಬದಲು ಖಾಸಗಿಯವರಿಗೆ ಸಬ್ಸಿಡಿಯಲ್ಲಿ ಬಸ್ ಖರೀದಿ ಅವಕಾಶ ಮಾಡಿಕೊಡುವುದು ಸರಿಯಲ್ಲ.

ಕೆ. ಪ್ರಕಾಶ್, ರಾಜ್ಯ ಸಂಚಾಲಕ, ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಶನ್

ಕೇಂದ್ರ ಕಾಯ್ದೆ ತಿದ್ದುಪಡಿ ಮಾಡಬೇಕು

ಕೇಂದ್ರ ಸರ್ಕಾರ ಖಾಸಗಿಯವರಿಗೆ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಸಬ್ಸಿಡಿ ನೀಡುತ್ತದೆ. ಅದೇ ಸಬ್ಸಿಡಿಯನ್ನು ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೆ ನೀಡಿದರೆ ನಮ್ಮ ಇಲಾಖೆಯೇ ಬಸ್ ಖರೀದಿಸುತ್ತದೆ. ಕೇಂದ್ರ ಸರ್ಕಾರ ಸಾರಿಗೆ ಕಾಯ್ದೆಗೆ ತಿದ್ದುಪಡಿ ತರಬೇಕು. ಈ ವಿಷಯವಾಗಿ ಸಾರಿಗೆ ಸಂಘಟನೆಗಳು ಕೂಡ ಧ್ವನಿ ಎತ್ತಬೇಕು.

– **ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

ದೇವಸ್ಥಾನಗಳ ಅಧಿವೇಶನ 16ರಿಂದ

ಬೆಂಗಳೂರು: ಕರ್ನಾಟಕ ದೇವಸ್ಥಾನ, ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘದಿಂದ ಇದೇ 16 ಮತ್ತು 17ರಂದು ಬಸವೇಶ್ವರ ನಗರದ ಗಂಗಮ್ಮ ತಿಮ್ಮಯ್ಯ ಕನ್ವೆನ್ಷನ್ ಹಾಲ್‌ನಲ್ಲಿ ‘ದೇವಸ್ಥಾನಗಳ ರಾಜ್ಯಮಟ್ಟದ ಅಧಿವೇಶನ’ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಮೋಹನ್ ಗೌಡ, ‘ಪ್ರಾಚೀನ ದೇವಸ್ಥಾನಗಳ ರಕ್ಷಣೆ, ದೇವಸ್ಥಾನಗಳನ್ನು ಸರ್ಕಾರದ ವ್ಯಾಪ್ತಿಗೆ ಸೇರಿಸುವುದು ಹಾಗೂ ಭಕ್ತರಿಗೆ ಮೂಲಸೌಲಭ್ಯಗಳನ್ನು ಒದಗಿಸುವ ಕುರಿತು ಚರ್ಚಿಸಲು ಈ ಅಧಿವೇಶನ ಆಯೋಜಿಸಲಾಗುತ್ತಿದೆ. ರಾಜ್ಯದಲ್ಲಿರುವ ಒಂದು ಸಾವಿರಕ್ಕೂ ಹೆಚ್ಚು ದೇವಾಲಯಗಳ ಅರ್ಚಕರು, ಧಾರ್ಮಿಕ ಚಿಂತಕರು, ನ್ಯಾಯವಾದಿಗಳು ಹಾಗೂ ದೇವಾಲಯಗಳ ರಕ್ಷಣಾ ಹೋರಾಟಗಾರರು ಭಾಗವಹಿಸಲಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಯದುಗಿರಿ ಮಠದ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಆದಿಚುಂಚನಗಿರಿ ಮಠದ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ಆರ್.ಪಿ. ರವಿಶಂಕರ, ಆನಂದ ಗುರೂಜಿ ಭಾಗವಹಿಸಲಿದ್ದಾರೆ. ಅಧಿವೇಶನದಲ್ಲಿ ಪಾಲ್ಗೊಳ್ಳಲು 72040 82609ಗೆ ಸಂಪರ್ಕಿಸಬಹುದು’ ಎಂದರು.

22ರವರೆಗೆ ಮಂಗಳೂರು – ಬೆಂಗಳೂರು ಸಂಚಾರದಲ್ಲಿ ವ್ಯತ್ಯಯ

ಇಂದಿನಿಂದ ರೈಲು ಸೇವೆ ಸ್ಥಗಿತ

ಮಂಗಳೂರು: ನೈರುತ್ಯ ರೈಲ್ವೆ ವಲಯವು ಹಾಸನ ಜಂಕ್ಷನ್ ರೈಲು ನಿಲ್ದಾಣದಲ್ಲಿ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಮಂಗಳೂರು-ಬೆಂಗಳೂರು ಮಧ್ಯೆ ಇದೇ 14ರಿಂದ 22ರ ವರೆಗೆ ಕೆಲ ರೈಲುಗಳ ಸಂಚಾರ ಸ್ಥಗಿತಗೊಳಿಸಲಾಗಿದೆ.

ಸ್ಥಗಿತಗೊಳ್ಳಲಿರುವ ರೈಲುಗಳು: ಬೆಂಗಳೂರು-ಕಣ್ಣೂರು(16511), ಬೆಂಗಳೂರು-ಕಾರವಾರ ಪಂಚಗಂಗಾ ಎಕ್ಸ್‌ಪ್ರೆಸ್ (16595) ಇದೇ 16ರಿಂದ 20ರ ವರೆಗೆ ರದ್ದುಪಡಿಸಲಾಗಿದೆ.

ಕಣ್ಣೂರು-ಬೆಂಗಳೂರು(16512), ಕಾರವಾರ-ಬೆಂಗಳೂರು ಪಂಚಗಂಗಾ ಎಕ್ಸ್‌ಪ್ರೆಸ್ (16596) ರೈಲುಗಳು ಇದೇ 17ರಿಂದ 21 ರ ವರೆಗೆ ರದ್ದಾಗಲಿವೆ.

ಯಶವಂತಪುರ-ಮಂಗಳೂರು ಜಂಕ್ಷನ್ ಗೊಮ್ಮಟೇಶ್ವರ ಎಕ್ಸ್‌ಪ್ರೆಸ್ (16575) ವಾರದಲ್ಲಿ ಮೂರು ದಿನ ಸಂಚರಿಸುವ ರೈಲು ಇದೇ 14, 17, 19 ಮತ್ತು 21ರಂದು ಸಂಚಾರ ನಡೆಸುವುದಿಲ್ಲ. ಮಂಗಳೂರು ಜಂಕ್ಷನ್-ಯಶವಂತಪುರ ಗೊಮ್ಮಟೇಶ್ವರ ಎಕ್ಸ್‌ಪ್ರೆಸ್ (16576) ಡಿ.15, 18, 20, 22ರಂದು ಸಂಚರಿಸುವುದಿಲ್ಲ.

ಯಶವಂತಪುರ-ಕಾರವಾರ ಎಕ್ಸ್‌ಪ್ರೆಸ್ (16515) ವಾರಕ್ಕೆ ಮೂರು ದಿನ ಸಂಚರಿಸುವ ಈ ರೈಲು ಡಿ.13, 15, 18, 20, 22ರಂದು ಹಾಗೂ ಕಾರವಾರ-ಯಶವಂತಪುರ ಎಕ್ಸ್‌ಪ್ರೆಸ್ (16516) ಡಿ.14, 16, 19, 21, 23ರಂದು ಇರುವುದಿಲ್ಲ.

ಯಶವಂತಪುರ-ಮಂಗಳೂರು ಜಂಕ್ಷನ್ ಎಕ್ಸ್‌ಪ್ರೆಸ್ (16539/16540 ವಾರಕ್ಕೆ ಒಂದು ದಿನ ಸಂಚರಿಸುವ ರೈಲು) ಡಿ.16 ಮತ್ತು 17ರಂದು ಸಂಚಾರ ನಡೆಸುವುದಿಲ್ಲ.

ಬೆಂಗಳೂರು-ಮುರುಡೇಶ್ವರ-ಬೆಂಗಳೂರು (16585/16586) ರೈಲು ಮಾತ್ರ ಬದಲಿ ಮಾರ್ಗದಲ್ಲಿ ಅಂದರೆ ಯಶವಂತಪುರ ಬೈಪಾಸ್, ನೆಲಮಂಗಲ, ಶ್ರವಣಬೆಳಗೊಳ, ಹಾಸನ ಮೂಲಕ ಸಂಚರಿಸಲಿದೆ. ಬೆಂಗಳೂರು ಸಿಟಿ, ಮಂಡ್ಯ ಹಾಗೂ ಮೈಸೂರು ನಿಲ್ದಾಣಗಳಿಗೆ ಡಿ.14ರಿಂದ 16ರ ವರೆಗೆ ತೆರಳುವುದಿಲ್ಲ. ಡಿ. 17 ಮತ್ತು 22ರ ವರೆಗೆ ಈ ರೈಲು ಯಶವಂತಪುರ ಬೈಪಾಸ್, ಹಾಸನ ಮೂಲಕ ಸಂಚರಿಸಲಿದ್ದು, ಮೈಸೂರನ್ನು ಸಂಪರ್ಕಿಸುವುದಿಲ್ಲ.

ಹಾಸನ ಜಂಕ್ಷನ್ ರೈಲ್ವೆ ಯಾರ್ಡ್‌ನಲ್ಲಿ ಮರುವಿನ್ಯಾಸ, ಸಿಗ್ನಲ್ ಮತ್ತು ಇಂಟರ್ ಲಾಕಿಂಗ್ ವ್ಯವಸ್ಥೆ ಸುಧಾರಣೆ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಇದರಿಂದ ಏಕಕಾಲದಲ್ಲಿ ಅರಸೀಕೆರೆ, ನೆಲಮಂಗಲ, ಮೈಸೂರು, ಹಾಸನ ಈ ನಾಲ್ಕೂ ಕಡೆಯ ರೈಲುಗಳ ಆಗಮನ ಮತ್ತು ನಿರ್ಗಮನ ಸಾಧ್ಯವಾಗಲಿದೆ ಎಂದು ನೈರುತ್ಯ ರೈಲ್ವೆ ಹೇಳಿದೆ.

EXAM DH ಪ್ರಜಾವಾಣಿ MASTERMIND™

ಮತ್ತಷ್ಟು 'ಪ್ರಚಲಿತ'ಕ್ಕಾಗಿ..

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು ಸೇರಿ ನಾಗರಿಕ ಸೇವಾ ಪರೀಕ್ಷೆಗಳಿಗೆ ಪೂರಕವಾದ ಲೇಖನ, ವಿಡಿಯೊಗಳಿಗಾಗಿ ಪ್ರಜಾವಾಣಿ- ಡೆಕ್ಕನ್‌ಹೆರಾಲ್ಡ್ ಎಕ್ಸಾಮ್ 'ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಾದಾರರಾಗಲು ಈ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಸಿಎಪಿಎಫ್‌ನಲ್ಲಿ 26,146 ಕಾನ್‌ಸ್ಟೆಬಲ್ ಜಿ.ಡಿ ಹುದ್ದೆಗಳು

ಪುರುಷ ಮತ್ತು ಮಹಿಳಾ ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು, ಡಿಸೆಂಬರ್ 31 ಅರ್ಜಿ ಸಲ್ಲಿಸಲು ಕಡೆಯ ದಿನ. ನೇಮಕಾತಿ ಪ್ರಕ್ರಿಯೆಯ ವಿವರಗಳು ಇಲ್ಲಿದೆ.

ಮಂಜುನಾಥ್ ಭದ್ರಶೆಟ್ಟಿ

ಹುದ್ದೆಗಳ ವಿಂಗಡಣೆ	
ಸಿಐಎಸ್‌ಎಫ್	11,025
ಬಿಎಸ್‌ಎಫ್	6,174
ಸಿಆರ್‌ಪಿಎಫ್	3,337
ಐಟಿಬಿಪಿ	3,189
ಎಸ್‌ಎಸ್‌ಬಿ	635
ಎಆರ್	1,490
ಎಸ್‌ಎಸ್‌ಎಫ್	296

ದೇಶದ ಅರೆಸೇನಾ ಪಡೆಗಳಲ್ಲಿ ಸೇವೆ ಮಾಡಬೇಕೆಂಬ ಕನಸು ಹೊಂದಿರುವ ಯುವಕ-ಯುವತಿಯರಿಗೆ ಮತ್ತೊಂದು ಸುವರ್ಣಾವಕಾಶ ಬಂದಿದೆ. ಕೇಂದ್ರ ಗೃಹ ಸಚಿವಾಲಯದಡಿ ಕಾರ್ಯನಿರ್ವಹಿಸುವ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ (CAPF) ವಿವಿಧ ವಿಭಾಗಗಳಲ್ಲಿ 'ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ' ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಕೇಂದ್ರ 'ಸಿಬ್ಬಂದಿ ನೇಮಕಾತಿ ಆಯೋಗ' (SSC) ಆರಂಭಿಸಿದೆ.

ಪುರುಷ ಮತ್ತು ಮಹಿಳಾ ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು ಇದೇ ಡಿಸೆಂಬರ್ 31 ಅರ್ಜಿ ಸಲ್ಲಿಸಲು ಕಡೆಯ ದಿನ. ಪ್ರಕ್ರಿಯೆಯ ವಿವರಗಳು ಹೀಗಿವೆ.

ಸಿಎಪಿಎಫ್ ಅಡಿ ಕಾರ್ಯನಿರ್ವಹಿಸುವ ಗಡಿ ಭದ್ರತಾ ಪಡೆ (BSF), ಕೇಂದ್ರೀಯ ಸಶಸ್ತ್ರ ಮೀಸಲು ಪೊಲೀಸ್ ಪಡೆ (CRPF), ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (CISF), ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸ್ (ITBP), ಸಶಸ್ತ್ರ ಸೀಮಾ ಬಲ (SSB), ಹಾಗೂ ಸಿಎಪಿಎಫ್ ಹೊರತುಪಡಿಸಿ ಗೃಹ ಇಲಾಖೆಯ ಪ್ರತ್ಯೇಕ ಭದ್ರತಾ ಘಟಕಗಳಾದ ಅಸ್ಸಾಂ ರೈಫಲ್ಸ್ (AR) ಸೆಕ್ರೆಟರಿಯೆಟ್ ಸೆಕ್ಯೂರಿಟಿ ಫೋರ್ಸ್‌ನಲ್ಲಿ (SSF) ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

ಹುದ್ದೆಗಳ ವಿವರ: ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ಒಟ್ಟು ಕಾನ್‌ಸ್ಟೆಬಲ್ ಜಿ.ಡಿ ಹುದ್ದೆಗಳ ಸಂಖ್ಯೆ 26,146. ಇದರಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿರುವ ಹುದ್ದೆಗಳ ಸಂಖ್ಯೆ 2,799. ಆನ್‌ಲೈನ್ ಅರ್ಜಿ ಸಲ್ಲಿಸಲು ಸಾಮಾನ್ಯ, ಒಬಿಸಿ ಅಭ್ಯರ್ಥಿಗಳಿಗೆ ₹100 ಶುಲ್ಕವಿದ್ದು, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ, ನಿವೃತ್ತ ಯೋಧರಿಗೆ ಶುಲ್ಕ ವಿನಾಯಿತಿ ಇದೆ. ಯುಪಿಐ ಸೌಲಭ್ಯ ಬಳಸಿಯೂ ಶುಲ್ಕವನ್ನು ಆನ್‌ಲೈನ್ ಪಾವತಿ ಮಾಡಬಹುದು.

ವಿದ್ಯಾರ್ಹತೆ: ಅಭ್ಯರ್ಥಿಗಳಿಗೆ ಕನಿಷ್ಠ ವಿದ್ಯಾರ್ಹತೆ ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿ ಕನಿಷ್ಠ 18 ರಿಂದ ಗರಿಷ್ಠ 23. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ಗರಿಷ್ಠ 28, ಒಬಿಸಿ ಅಭ್ಯರ್ಥಿಗಳಿಗೆ ಗರಿಷ್ಠ 25 ವರ್ಷ ವಯೋಮಿತಿ ಸಡಿಲಿಕೆ ಇದೆ. ಸೇನೆಯ ನಿವೃತ್ತ ಯೋಧರು ನಿವೃತ್ತಿ ಆದಾಗಿನಿಂದ ಮೂರು ವರ್ಷದ ಒಳಗೆ ಅರ್ಜಿ ಸಲ್ಲಿಸಬಹುದು.

ಸಿಬಿಟಿ ಪರೀಕ್ಷೆ ವಿಷಯ	ಪ್ರಶ್ನೆಗಳು	ಅಂಕಗಳು
ಬೌದ್ಧಿಕ ಮಟ್ಟ ಮತ್ತು ಸಾಮಾನ್ಯ ಗ್ರಹಿಕೆ	20	40
ಸಾಮಾನ್ಯ ಜ್ಞಾನ	20	40
ಮೂಲ ಗಣಿತ	20	40
ಹಿಂದಿ/ಇಂಗ್ಲಿಷ್ ಭಾಷೆ	20	40

ವೇತನ ಶ್ರೇಣಿ: ₹ 21,700–₹ 69,100

ಪರೀಕ್ಷೆ ಹಾಗೂ ನೇಮಕಾತಿ ಪ್ರಕ್ರಿಯೆ: ಈ ನೇಮಕಾತಿಯು ನಾಲ್ಕು ಹಂತಗಳಲ್ಲಿ ನಡೆಯಲಿದೆ. ಕಂಪ್ಯೂಟರ್ ಆಧಾರಿತ ಪರೀಕ್ಷೆ (CBT), ದೈಹಿಕ ಸಾಮರ್ಥ್ಯ ಪರೀಕ್ಷೆ (PST/PET), ವೈದ್ಯಕೀಯ ಪರೀಕ್ಷೆ (DME/MRE) ಹಾಗೂ ದಾಖಲಾತಿಗಳ ತಪಾಸಣೆ ಪ್ರಕ್ರಿಯೆಗಳನ್ನು ಪೂರೈಸಬೇಕಾಗುತ್ತದೆ.

ಮೊದಲ ಹಂತವಾದ ಸಿಬಿಟಿ ಪರೀಕ್ಷೆಯಲ್ಲಿ 160 ಅಂಕಗಳಿಗೆ 80 ಪ್ರಶ್ನೆಗಳ 1 ಪತ್ರಿಕೆ ಮಾತ್ರ ಇರುತ್ತದೆ. ಪ್ರತಿ ಪ್ರಶ್ನೆಗೆ 2 ಅಂಕ. ಅವಧಿ 1 ಗಂಟೆ ಮಾತ್ರ. ಪ್ರತಿ 4 ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ. ಬಹುಆಯ್ಕೆ ಮಾದರಿಯ ಪ್ರಶ್ನೆಗಳಿರುತ್ತವೆ.

ಸಿಬಿಟಿ ಪರೀಕ್ಷೆ ಇಂಗ್ಲಿಷ್, ಹಿಂದಿ ಹಾಗೂ ಕನ್ನಡವೂ ಒಳಗೊಂಡಂತೆ ಇತರ 12 ಪ್ರಾದೇಶಿಕ ಭಾಷೆಗಳಲ್ಲಿ ನಡೆಯಲಿದೆ. ಮುಂದಿನ ಹಂತಕ್ಕೆ ಹೋಗಬೇಕಾದರೆ ಅಭ್ಯರ್ಥಿಗಳು ಕನಿಷ್ಠ ಶೇ 30ರಷ್ಟು ಅಂಕಗಳನ್ನು ಇದರಲ್ಲಿ ಪಡೆಯುವುದು ಕಡ್ಡಾಯ.

ಎಸ್ಸೆಸ್ಸೆಲ್ಸಿ ಮಟ್ಟದ ಪಠ್ಯಕ್ರಮವನ್ನು ಹೊಂದಿರುತ್ತದೆ. ಹಾಗಾಗಿ ಆಸಕ್ತರು 5ನೇ ತರಗತಿಯಿಂದ ಎಸ್ಸೆಸ್ಸೆಲ್ಸಿವರೆಗಿನ ಪಠ್ಯಗಳನ್ನು ಓದಿಕೊಳ್ಳಬಹುದು. ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಬಹುದು. ಇದರೊಂದಿಗೆ ಪ್ರಚಲಿತ ಮಾಹಿತಿಗಾಗಿ ದಿನಪತ್ರಿಕೆಗಳನ್ನು ಓದಬಹುದು.

ಎಲ್ಲೆಲ್ಲಿ ಪರೀಕ್ಷೆ?

ಸಿಬಿಟಿ ಪರೀಕ್ಷೆಗಳು ಎಸ್‌ಎಸ್‌ಸಿಯ 9 ವಲಯಗಳಿಂದ ನಡೆಯುತ್ತವೆ. ಅದರಲ್ಲಿ ಕರ್ನಾಟಕ, ಕೇರಳ ಅಭ್ಯರ್ಥಿಗಳಿಗೆ 'ಎಸ್‌ಎಸ್‌ಸಿ ಕರ್ನಾಟಕ-ಕೇರಳ ಸರ್ಕಲ್' 14 ಕಡೆ ಸಿಬಿಟಿ ಪರೀಕ್ಷೆ ನಡೆಸಲಿದೆ. ಬೆಂಗಳೂರು, ಬೆಳಗಾವಿ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ, ಉಡುಪಿ, ಎರ್ನಾಕುಲಂ, ಕೊಲ್ಲಂ, ಕೊಟ್ಟಾಯಂ, ಕೋಯಿಕ್ಕೋಡ್, ತಿರುವನಂತಪುರ, ತ್ರಿಶೂರ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಫೆಬ್ರುವರಿಯಲ್ಲಿ ಪರೀಕ್ಷೆ ನಡೆಯುವ ಸಂಭವವಿದೆ.

ಅಭ್ಯರ್ಥಿಗಳು ತಮಗೆ ಸಿಎಪಿಎಫ್‌ನ ಯಾವ ವಿಭಾಗ ಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿದೆ. ಅರ್ಜಿ ಸಲ್ಲಿಸುವಾಗಲೇ ಆದ್ಯತಾನುಸಾರ ಆಯ್ಕೆ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಆಸಕ್ತ ಅಭ್ಯರ್ಥಿಗಳು ಎಸ್‌ಎಸ್‌ಸಿಯ ಅಧಿಕೃತ ವೆಬ್‌ಸೈಟ್ ssc.nic.in ನೋಡಬಹುದು.

ಅಣಕು ಪರೀಕ್ಷೆ

ಅನೇಕ ವಿದ್ಯಾರ್ಥಿಗಳಿಗೆ ಸಿಬಿಟಿ ಟೆಸ್ಟ್ ಬಗ್ಗೆ ಗೊಂದಲ ಇರುತ್ತದೆ. ಇದಕ್ಕೆ ಚಿಂತೆ ಮಾಡಬೇಕಿಲ್ಲ. ಸಿಬಿಟಿ ಪರೀಕ್ಷೆ ಹೇಗೆ ನಡೆಯುತ್ತದೆ? ಏನು ತಯಾರಿ ಮಾಡಿಕೊಳ್ಳಬೇಕು? ಎಂಬುದರ ಬಗ್ಗೆ ತಿಳಿಯಲು ಅಣಕು ಪರೀಕ್ಷೆಯ ಅವಕಾಶವನ್ನು ಎಸ್‌ಎಸ್‌ಸಿ ಒದಗಿಸಿದೆ. ಆಸಕ್ತರು ಎಸ್‌ಎಸ್‌ಸಿ ವೆಬ್‌ಸೈಟ್‌ನ ಕ್ಯಾಂಡಿಡೇಟ್ ಕಾರ್ನರ್‌ಗೆ ಹೋಗಿ Mock Test ಪರಿಶೀಲಿಸಬಹುದು.

NCC ಅಭ್ಯರ್ಥಿಗಳಿಗೆ ಬೋನಸ್ ಅಂಕ

ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಎನ್‌ಸಿಸಿ ಅಭ್ಯರ್ಥಿಗಳಿಗೆ ಪರೀಕ್ಷೆಯಲ್ಲಿ (ಸಿಬಿಟಿ ಪರೀಕ್ಷೆ) ಬೋನಸ್ ಅಂಕಗಳನ್ನು ನೀಡಲಾಗುತ್ತದೆ. 'ಸಿ' ಪ್ರಮಾಣ ಪತ್ರ ಹೊಂದಿರುವವರಿಗೆ ಶೇ 5 ರಷ್ಟು ಅಂಕಗಳು, 'ಬಿ' ಪ್ರಮಾಣಪತ್ರ ಹೊಂದಿರುವವರಿಗೆ ಶೇ 3, ಹಾಗೂ 'ಎ' ಪ್ರಮಾಣ ಪತ್ರ ಹೊಂದಿರುವವರಿಗೆ ಶೇ 2ರಷ್ಟು ಅಂಕಗಳನ್ನು ಸಿಬಿಟಿ ಪರೀಕ್ಷೆಯ ಅಂಕಗಳಿಗೆ ಸೇರಿಸಲಾಗುತ್ತದೆ.

ಸಿಬ್ಬಂದಿ ನೇಮಕಾತಿ ಆಯೋಗ

ಕೇಂದ್ರ ಸಿಬ್ಬಂದಿ ನೇಮಕಾತಿ ಆಯೋಗ ಕೇಂದ್ರ ಸರ್ಕಾರದ ವಿವಿಧ ಸಚಿವಾಲಯ, ಇಲಾಖೆಗಳಿಗೆ ಬೇಕಿರುವ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳುವ ಹಾಗೂ ಸಿಬ್ಬಂದಿಗಳ ಪರೀಕ್ಷೆ ಬಗೆಗಿನ ಪ್ರಕ್ರಿಯೆ ನೋಡಿಕೊಳ್ಳುತ್ತದೆ. ಇದು 1975ರಲ್ಲಿ ಸ್ಥಾಪನೆ ಯಾಗಿದ್ದು, ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ. ❖

ಸಿರಿಧಾನ್ಯಗಳ ಉತ್ಸವ

ಯು.ಟಿ. ಆಯಿಶ ಫರ್ಝಾನ

ಸಿರಿಧಾನ್ಯಗಳ ಉತ್ಸವವನ್ನು (ಆಸಿಯಾನ್ ಇಂಡಿಯಾ ಮಿಲೆಟ್ ಫೆಸ್ಟಿವಲ್) ಈಚೆಗೆ ಇಂಡೋನೇಷ್ಯಾದಲ್ಲಿ ಹಮ್ಮಿಕೊಳ್ಳಲಾಗಿತ್ತು. ಆಸಿಯಾನ್ ಒಕ್ಕೂಟವು ಭಾರತೀಯ ಕೃಷಿ ಸಚಿವಾಲಯದ ಸಹಯೋಗ ದೊಂದಿಗೆ ಈ ಸಮಾವೇಶವನ್ನು ನಡೆಸಿತು.

ಸಿರಿಧಾನ್ಯ ಬೆಳೆಗಾರರು (FPOs), ರೈತ ಸಂಘಟನೆಗಳ ಸ್ಟಾರ್ಟ್-ಅಪ್‌ಗಳು, ಭಾರತೀಯ ಬಾಣಸಿಗರು ಭಾಗವಹಿಸಿದ್ದ ಈ ಉತ್ಸವದಲ್ಲಿ ಸಿರಿಧಾನ್ಯಗಳ ಮಹತ್ವವನ್ನು ಗುರುತಿಸಿ, ಜನರಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದರೊಂದಿಗೆ ದೇಶೀಯ ಮತ್ತು ಜಾಗತಿಕ ಬೇಡಿಕೆಯನ್ನು ಸೃಷ್ಟಿಸುವ ಬಗ್ಗೆ ಚರ್ಚೆ ನಡೆಯಿತು.

2023 ಸಿರಿಧಾನ್ಯಗಳ ವರ್ಷ

ಭಾರತ ಸರ್ಕಾರವು 2023ನೇ ವರ್ಷವನ್ನು 'ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ' ಎಂದು ಘೋಷಿಸುವಂತೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿತ್ತು. ಈ ಪ್ರಸ್ತಾವವನ್ನು 72 ದೇಶಗಳು ಬೆಂಬಲಿಸಿದ್ದವು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2021ರಲ್ಲಿಯೇ '2023 ಸಿರಿಧಾನ್ಯಗಳ ವರ್ಷ'ವೆಂದು ಘೋಷಿಸಿತ್ತು. ಈ ಉತ್ಸವವು ಬ್ರೂನಿ, ಕಾಂಬೋಡಿಯಾ, ಇಂಡೋನೇಷ್ಯಾ, ಲಾವೋಸ್, ಮಲೇಷ್ಯಾ, ಮ್ಯಾನ್ಮಾರ್, ಫಿಲಿಪೀನ್ಸ್, ಸಿಂಗಪುರ, ಥಾಯ್ಲೆಂಡ್ ಮತ್ತು ವಿಯೆಟ್ನಾಂ ಸೇರಿ ಆಸಿಯಾನ್ (ASEAN) ಸದಸ್ಯ ರಾಷ್ಟ್ರಗಳಲ್ಲಿ ಸಿರಿಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ನಡೆಯಿತು.

ಭಾರತದಲ್ಲಿ ಸಿರಿಧಾನ್ಯಗಳ ಉತ್ಪಾದನೆ

- ಒಂಬತ್ತು ಬಗೆಯ ಸಿರಿಧಾನ್ಯಗಳಾದ ರಾಗಿ, ಜೋಳ, ಸಜ್ಜೆ, ನವಣೆ, ಬರಗು, ಸಾಮೆ, ಊದಲು, ಅರ್ಕ ಮತ್ತು ಕೊರಲೆಯನ್ನು ಭಾರತವು ಉತ್ಪಾದಿಸುತ್ತದೆ. ವಿಶ್ವದ ಅತಿ ದೊಡ್ಡ ಸಿರಿಧಾನ್ಯಗಳ ಉತ್ಪಾದಕ ದೇಶ ಹಾಗೂ 5ನೇ ಅತಿ ದೊಡ್ಡ ಸಿರಿಧಾನ್ಯಗಳ ರಫ್ತುದಾರ ದೇಶವೆಂಬ ಹೆಗ್ಗಳಿಕೆ ಭಾರತಕ್ಕಿದೆ.
- ಭಾರತವು 2021-22ರಲ್ಲಿ ಸಿರಿಧಾನ್ಯಗಳ ಉತ್ಪಾದನೆಯ ಪ್ರಮಾಣದಲ್ಲಿ ಶೇ 27ರಷ್ಟು ಬೆಳವಣಿಗೆ ಕಂಡಿತ್ತು. 170 ಲಕ್ಷಟನ್‌ಗಿಂತಲೂ ಹೆಚ್ಚು ಸಿರಿಧಾನ್ಯಗಳನ್ನು ವಾರ್ಷಿಕವಾಗಿ ಉತ್ಪಾದಿಸುತ್ತಿದ್ದು, ಇದು ಏಷ್ಯಾದ ಶೇ 80ರಷ್ಟು ಮತ್ತು ಜಾಗತಿಕವಾಗಿ ಶೇ 20ರಷ್ಟು ಪ್ರಮಾಣದ ಉತ್ಪಾದನೆಯನ್ನು ಒಳಗೊಂಡಿದೆ.
- ಸಿರಿಧಾನ್ಯಗಳ ಜಾಗತಿಕ ಸರಾಸರಿ ಇಳುವರಿಯು ಹೆಕ್ಟೇರ್‌ಗೆ 1,229 ಕೆ.ಜಿಗಳಾಗಿದ್ದರೆ, ಭಾರತದ ಇಳುವರಿಯು ಹೆಕ್ಟೇರ್‌ಗೆ ಸರಾಸರಿ 1.239 ಕೆ.ಜಿಗಳಷ್ಟಾಗಿದೆ.
- ರಾಜಸ್ಥಾನ, ಉತ್ತರಪ್ರದೇಶ, ಹರಿಯಾಣ, ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮತ್ತು ತೆಲಂಗಾಣ ಇವು ಭಾರತದಲ್ಲಿ ಸಿರಿಧಾನ್ಯಗಳನ್ನು ಉತ್ಪಾದಿಸುವ ಪ್ರಮುಖ ರಾಜ್ಯಗಳು.
- ಭಾರತವು ಸಿರಿಧಾನ್ಯಗಳ ಮೌಲ್ಯವರ್ಧನಾ ಸರಪಳಿಯಲ್ಲಿ 500ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳನ್ನು ಹೊಂದಿದೆ. ಭಾರತೀಯ ಸಿರಿಧಾನ್ಯಗಳ ಸಂಶೋಧನಾ ಸಂಸ್ಥೆಯು, ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ ರಾಫ್ತಾರ್‌ನ ಅಡಿಯಲ್ಲಿ 250 ಸ್ಟಾರ್ಟ್ ಅಪ್‌ಗಳು ಕ್ರಿಯಾಶೀಲವಾಗಿವೆ.

ಹೆಚ್ಚಿದ ರಫ್ತಿನ ಪ್ರಮಾಣ

- ಭಾರತವು ಪ್ರಮುಖವಾಗಿ ಯುನೈಟೆಡ್ ಅರಬ್ ಎಮಿರೇಟ್ಸ್, ನೇಪಾಳ, ಸೌದಿ ಅರೇಬಿಯಾ, ಲಿಬಿಯಾ, ಓಮನ್, ಈಜಿಪ್ಟ್, ಟ್ಯುನಿಷಿಯಾ, ಯೆಮನ್, ಯುನೈಟೆಡ್ ಕಿಂಗ್‌ಡಮ್ ಮತ್ತು ಅಮೆರಿಕ ದೇಶಗಳಿಗೆ ಸಿರಿಧಾನ್ಯಗಳನ್ನು ರಫ್ತು ಮಾಡುತ್ತದೆ.
- ಭಾರತವು 2021-22ರಲ್ಲಿ 34.32 ಮಿಲಿಯನ್ ಡಾಲರ್ ಮೌಲ್ಯದ ಸಿರಿಧಾನ್ಯಗಳನ್ನು ರಫ್ತು ಮಾಡಿದೆ. 2020-21ರಲ್ಲಿ 26.97 ಮಿಲಿಯನ್ ಡಾಲರ್ ಮೌಲ್ಯದ ಸಿರಿಧಾನ್ಯಗಳನ್ನು ರಫ್ತು ಮಾಡಿತ್ತು.

ಜಾಗತಿಕ ಮಟ್ಟದಲ್ಲಿ ಉತ್ಪಾದನೆ

- ಏಷ್ಯಾ ಮತ್ತು ಆಫ್ರಿಕಾ ಖಂಡಗಳು ಸಿರಿಧಾನ್ಯಗಳ ಪ್ರಮುಖ ಉತ್ಪಾದಕ ಮತ್ತು ಬಳಕೆಯ ಕೇಂದ್ರಗಳಾಗಿವೆ. ಭಾರತ, ನೈಜರ್, ಸುಡಾನ್ ಮತ್ತು ನೈಜೀರಿಯಾ ದೇಶಗಳು ಪ್ರಧಾನ ಉತ್ಪಾದಕ ದೇಶಗಳು ಎನಿಸಿಕೊಂಡಿವೆ.
- ಜೋಳವನ್ನು ಜಗತ್ತಿನ 112 ದೇಶಗಳಲ್ಲಿ ಮತ್ತು ಬರಗುವನ್ನು 35 ದೇಶಗಳಲ್ಲಿ ಬೆಳೆಸಲಾಗುತ್ತಿದೆ.
- ಸಿರಿಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಪ್ರಮುಖ ದೇಶಗಳೆಂದರೆ ಇಂಡೋನೇಷ್ಯಾ, ಬೆಲ್ಜಿಯಂ, ಜಪಾನ್, ಜರ್ಮನಿ, ಮೆಕ್ಸಿಕೋ, ಇಟಲಿ, ಅಮೆರಿಕ, ಬ್ರೆಜಿಲ್ ಮತ್ತು ನೆದರ್‌ಲೆಂಡ್. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

Unit-1 Poem

Grandma Climbs a Tree

3. Look at the line 7 and 8 'She would be told…..' who do you think would tell her so?

Ans: It could be poet's father and family who might have told that climbing of trees should stop when one grew old and growing old should be gone gracefully.

4. Do you find anything odd in the reply given by the grandma? If so, why do you think it is odd? {Line 10-11}

Ans: Yes. reply given by grandma was odd. It is odd because the society demands and every one wish to comply with it by growing old gracefully. Here, grandma wishes to grow old disgracefully as she does tree climbing even better.

5. Others had feared that granny would fall from a tree one day or the other. Did this happen? Or did something else happen? {Line 15-18}

Ans: Granny did not fall as feared by family members but there was a different outcome. When family was in town, granny climbed a tree and could not climb down. She had to be rescued.

6. What had the doctor recommended? What was the reaction of the kids to this advice?

Answer: The doctor took granny's temperature and advised for bed rest of one week. Kids sighed with relief on hearing doctor's advice to granny and tucked her up in bed well.

7. Quote the lines which suggest how wholeheartedly granny enjoyed climbing a tree.

Answer: (a) "For being happier in a tree than in a lift" (b) "For her it was like a brief season in hell"

8. 'My dad knew his duties'. What did he think his duty was?

Ans: Poet's dad knew it is his duty to fulfill the wish of the mother. When his mother wished a tree house, he agreed and made a tree house with window and door.

9. Look at the picture given below the title. Quote the lines that might have guided the artist to draw.

Ans: "Made her a tree house with windows and a door".

Read and appreciate

A.1. Read the poem again. Does the behavior of grandma strike you as unusual? If so, support your view quoting her ways and responses to others. One is done for you.

***Grandma climbing a tree. (Way 1)**

Ans:

*When told to stop tree climbing and grow old gracefully, granny laughed to reject it, preferred to grow old disgracefully.

* One day when she climbed a tree but could not come down and had to be rescued. Following the incident she was forced a bed rest for a week. Even this could not change her; instead she wanted a tree house for her stay.

2. 'Growing old gracefully' is an expression used in the poem Discuss with your partner whether what the grandma was doing was graceful or otherwise.

Answer: Grandma was an adventurer. Society wishes to see old people slow down their activities for their safety. However the modern health care and safety engineering is enabling many old people to do many feats beyond their age like flying aircraft, sky diving etc. Such adventures are appreciated and seen with respect. More and more some societies are now coming to view granny acts to live life fully as growing with grace. Grace or disgraces are the product of progress of time, values of a society.

3. Both the narrator (speaker in the poem) and his father were very considerate towards Grandma. Substantiate the statement with textual support.

Ans: The poet and his father were very considerate towards grandma. They respected her nature of adventure to climb trees even at old age when society expected her to age with grace by stopping it. One day granny climbed a tree but was unable to come down and she had to be rescued, but was advised bed rest for a week. Immediately after recovery she wanted a tree house to live. They immediately fulfilled her by building one with a door and window.

4. If you were to divide the entire poem into two parts which line would you pick up to be the beginning of the second part?

Ans: I would start second part with "After the rescue…...". After incident granny's will for adventure became even stronger and she now decided to live in a tree house.

B. 1. Have a close look at the rhyme-scheme. Write at least 5 pairs of the rhyming words. E.g. said–bed.

Ans: Tree-Free, Branch-Blanch,
Trice-Price, Spread-Bread,
Grace-Chase.

2. "It was like a brief season". Name the figure of speech in the sentence. What are the two things compared? Explain.

Ans: The figure of speech is simile. The two things compared are grandma's feeling of 'misery' about compulsory bed rest and torture in the 'hell'.

ಎಸ್ಸೆಸ್ಸೆಲ್ಸಿ- ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

REPRODUCTION
REPRODUCTIVE HEALTH

Answer the following:-

1. Mention two differences between GIFT and ZIFT.

Ans:- Differences Between GIFT and ZIFT are -

S. No	*GIFT*	*ZIFT*
1.	Fertilization occurs *invivo* i.e., in fallopian tube.	Fertilization occurs in vitro, i.e., outside the body of the female.
2.	Both eggs and sperms are introduced in the fallopian tube.	One day old zygote is introduced in the fallopian tube.

2. Mention two differences between IUT and GIFT or ZIFT.

Ans:- Differences Between IUT and GIFT or ZIFT are -

S. No.	*IUT*	*GIFT / ZIFT*
1.	It is transfer of early embryo directly into uterus.	It is transfer of zygote (in ZIFT) or gametes (in GIFT) into fallopian tube.
2.	The embryo consists of more than 8 blastomeres.	The embryo is either upto 8 blastomeres stage or in unfertilized ovum stage.

3. What is amniocentesis? Why is there a statutory ban on this?

Ans:- Amniocentesis is prenatal diagnostic test to find out genetic and metabolic disorders of the foetus by taking out small quantity of amniotic fluid and testing –

(i) Foetal cells for sex determination and chromosomal abnormalities.

(ii) Foetal enzymes, proteins and other biochemicals for metabolic disorders.

***5.* What is Invitro fertilization (IVF) and embryo transfer (ET)?**

Ans:- Invitro fertilization (IVF) and embryo transfer (ET) – is a technique in which multiple ovulation is induced in a woman, the ova are collected and made to undergo fertilization, either the zygote of the embryo is transferred into the uterus of the mother for implantation and further development. Babies born out of such techniques are called test tube babies.

The first baby of the world, was Louise Joy Brown, born in the England and the first test tube baby of India, was Kanupriya Agarwal born on October 03, 1978.

4. Mention some Sexually transmitted diseases and the common techniques used to detect them.

Ans:- Some Important Sexually transmitted diseases and Common Techniques for their Detection are -

Sexually transmitted diseases	***Causal Agent***	***Detection Techniques***
Chlamydia	*Chlamydia trachomatis*	Clinical, Gram-staining of discharge, antigen detection, nucleic acid hybridation.
Gonorrhoea	*Nisseria gonorrhoea*	Gram-staining of discharge, culture.
Trichomon-iasis	*Trichomo-nas vaginalis*	Microscopic examination, culture
Genital Herpes	*Herpes simplex virus*	Clinical, antigen test, PCR
Syphilis	*Trepanema pallidum*	Antibody detection, e.g., VDRL (Veneral Disease Research Laboratory)
Chancroid	*Haemoph-ilus ducreyi*	Clinical, culture
Genital warts	*Human palillorna virus* (HPV)	Clinical, antibody detection, culture, DNA hybri-dization.

6. What is vasectomy?

Ans:- Vasectomy is a method of sterilization in male. It involves surgical removal of a small portion of each vas deferens. An incision is made in the scrotum on each side, the vas deferens is located and each one is tied in two places. Then the portion between the two ties is cut out. In this method, production of sperms continues in the testes but they cannot reach the urethra.

7. What is Tubectomy?

Ans:- Tubectomy is a method of female sterilization. It involves surgical removal of a small portion of each uterine tube A small incision is made into the abdominal cavity, and the uterine tubes are squeezed to form a small loop called a knuckle. A suture is tied tightly at the base of the knuckle and the knuckle is cut. In about 4 to 5 days the suture is digested by the body fluids and ***(Contd…)***

ಚಿಂತನಾ ಸಭೆಯಲ್ಲಿ ವಿವಿಧ ಕ್ಷೇತ್ರಗಳ ಪ್ರಮುಖರು ಕಳವಳ

‘ಕನ್ನಡ ಶಾಲೆ: ಇಚ್ಛಾಶಕ್ತಿ ಕೊರತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಿ, ಬೆಳೆಸಲು ಸರ್ಕಾರಗಳು ಹಾಗೂ ಜನಪ್ರತಿನಿಧಿಗಳಿಗೆ ಇಚ್ಛಾಶಕ್ತಿಯಿಲ್ಲ’ ಎಂದು ಕಳವಳ ವ್ಯಕ್ತಪಡಿಸಿದ ವಿವಿಧ ಕ್ಷೇತ್ರಗಳ ಪ್ರಮುಖರು, ಮಾದರಿ ಶಾಲೆ ನಿರ್ಮಾಣ, ಮೂಲಸೌಕರ್ಯ ಒದಗಿಸುವಿಕೆ, ಉಚಿತ ಬಸ್ ವ್ಯವಸ್ಥೆ, ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಘೋಷಣೆ, ಕನ್ನಡ ಭಾಷೆಯ ಮಹತ್ವದ ಬಗ್ಗೆ ಜನಾಂದೋಲನ ಸೇರಿ ಹಲವು ಸಲಹೆಗಳನ್ನು ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಬುಧವಾರ ಹಮ್ಮಿಕೊಂಡ ‘ಕನ್ನಡ ಶಾಲೆ ಉಳಿಸಿ-ಕನ್ನಡ ಬೆಳೆಸಿ’ ಚಿಂತನ ಸಭೆಯಲ್ಲಿ ಸಾಹಿತ್ಯ, ಶಿಕ್ಷಣ, ನ್ಯಾಯಾಂಗ, ಆಡಳಿತ ಸೇರಿ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು ಸಲಹೆ ಸೂಚನೆಗಳನ್ನು ನೀಡಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್, ಬೇಲಿಮಠದ ಪೀಠಾಧ್ಯಕ್ಷ ಶಿವರುದ್ರ ಸ್ವಾಮೀಜಿ, ಸಾಹಿತಿಗಳಾದ ಹಂ.ಪ. ನಾಗರಾಜಯ್ಯ, ಜಿ.ಎಸ್. ಸಿದ್ದಲಿಂಗಯ್ಯ, ದೊಡ್ಡರಂಗೇಗೌಡ, ಪ್ರಧಾನ್ ಗುರುದತ್ತ, ಶಿಕ್ಷಣ ತಜ್ಞ ಗುರುರಾಜ ಕರಜಗಿ, ಮಾಜಿ ಸಚಿವೆ ರಾಣಿ ಸತೀಶ್, ಲೇಖಕಿ ಕೆ. ಷರೀಫಾ ಸೇರಿ ವಿವಿಧ ಕ್ಷೇತ್ರಗಳ 80ಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, ‘ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ಹಲವು ಶಾಲೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಸಾಧ್ಯವಾಗಿಲ್ಲ. ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೆ, ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಸುಸಜ್ಜಿತವಾಗಿದ್ದ ಕನ್ನಡ ಮಾಧ್ಯಮ ಶಾಲೆಗಳನ್ನೂ ಸರ್ಕಾರವು ‘ಕರ್ನಾಟಕ ಪಬ್ಲಿಕ್ ಸ್ಕೂಲ್’ ಎಂದು ಪರಿವರ್ತಿಸಿತು. ಇದರಿಂದ ಮಕ್ಕಳಿಗೆ ಯಾವುದೇ ಭಾಷೆ ಸರಿಯಾಗಿ ಬರುತ್ತಿಲ್ಲ. ಕಾನೂನು ತೊಡಕುಗಳಿಂದ ಕನ್ನಡ ಅನ್ನದ ಭಾಷೆಯಾಗುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ನ್ಯಾ. ಅರಳಿ ನಾಗರಾಜ್, ‘ಕನ್ನಡ ಮಾಧ್ಯಮ ಶಾಲೆಗಳ ಪುನಶ್ಚೇತನಕ್ಕೆ ಕಾನೂನಿನ ಅಡೆ ತಡೆಯಿಲ್ಲ. ಸರ್ಕಾರವು ಶಾಲೆಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸಿ, ಆಕರ್ಷಕ ರೀತಿಯಲ್ಲಿ ರೂಪಿಸಬೇಕು. ಜನಪ್ರತಿನಿಧಿಗಳೂ ಈ ಬಗ್ಗೆ ಕ್ರಮವಹಿಸಬೇಕು’ ಎಂದು ಹೇಳಿದರು.

ಮಾದರಿ ಶಾಲೆ ನಿರ್ಮಿಸಿ: ಗುರುರಾಜ ಕರಜಗಿ, ‘ಮಕ್ಕಳು ಏಕೆ ಕನ್ನಡ ಮಾಧ್ಯಮ ಶಾಲೆಗಳಿಗೆ ಹೋಗುತ್ತಿಲ ಎನ್ನುವುದನ್ನು ನಾವು ಅರಿತುಕೊಳ್ಳಬೇಕು. ಶಿಕ್ಷಕರಿಗೆ ಸರಿಯಾದ ರೀತಿಯಲ್ಲಿ ತರಬೇತಿ ನೀಡಿ, ಜಿಲ್ಲೆಗೊಂದು ಮಾದರಿ ಕನ್ನಡ ಮಾಧ್ಯಮ ಶಾಲೆಯನ್ನು ರೂಪಿಸಬೇಕು. ಅಲ್ಲಿ ಒಂದು ಭಾಷೆಯಾಗಿ ಇಂಗ್ಲಿಷ್ ಬೋಧಿಸಬೇಕು. ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಯ ಶಾಲೆಗಳಿಗೆ ಅಗತ್ಯ ಸೌಕರ್ಯ ನೀಡಿ, ಅಭಿವೃದ್ಧಿಪಡಿಸಬೇಕು’ ಎಂದು ಹೇಳಿದರು.

ಜಿ.ಎಸ್. ಸಿದ್ದಲಿಂಗಯ್ಯ, ‘ರಾಜ್ಯಾಂಗದಲ್ಲಿ ಶಿಕ್ಷಣವನ್ನು ಪೋಷಕರ ಹಕ್ಕು ಎಂದು ಹೇಳಿಲ್ಲ. ಶಾಲೆಗಳ ಉಳಿವಿಗೆ ಸರ್ಕಾರ ಆಡಳಿತಾತ್ಮಕ ಕೆಲಸ ಮಾಡಬೇಕು. ಪರಿಷತ್ತಿನ ನಿಯೋಗ ಸರ್ಕಾರಕ್ಕೆ ಹಾಗೂ ವಿರೋಧ ಪಕ್ಷಕ್ಕೆ ಕನ್ನಡ ಶಾಲೆಗಳ ಪ್ರಾಮುಖ್ಯತೆ ಬಗ್ಗೆ ಮನವರಿಕೆ ಮಾಡಿಸಬೇಕು’ ಎಂದರು.

ಚಿಂತನಾ ಸಭೆಯಲ್ಲಿ ನ್ಯಾ.ಅರಳಿ ನಾಗರಾಜ್ ಮತ್ತು ಮಹೇಶ ಜೋಶಿ ಚರ್ಚಿಸಿದರು. ಗುರುರಾಜ ಕರಜಗಿ, ಪ್ರಧಾನ್ ಗುರುದತ್ತ, ಶಿವರುದ್ರ ಸ್ವಾಮೀಜಿ, ಹಂ.ಪ. ನಾಗರಾಜಯ್ಯ, ರಾಣಿ ಸತೀಶ್ ಹಾಗೂ ದೊಡ್ಡರಂಗೇಗೌಡ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

‘ಇಂಗ್ಲಿಷ್ ಕಲಿಕೆಗೂ ಅವಕಾಶ ಕಲ್ಪಿಸಿ’

‘ಸರ್ಕಾರಗಳಿಗೆ ಕನ್ನಡ ಭಾಷೆ ಹಾಗೂ ಶಿಕ್ಷಣ ಆದ್ಯತೆಯಾಗಿಲ್ಲ. ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಿ, ಮಕ್ಕಳನ್ನು ಕರೆತರಬೇಕಾದರೆ ಈ ಶಾಲೆಗಳಲ್ಲಿಯೂ ಇಂಗ್ಲಿಷ್ ಕಲಿಕೆಗೆ ಅವಕಾಶ ಕಲ್ಪಿಸಬೇಕು. ಕನ್ನಡ ಮಾಧ್ಯಮದಲ್ಲಿನ ಮಕ್ಕಳಿಗೆ ಇಂಗ್ಲಿಷ್ ಕಲಿಕೆಯ ಎಲ್ಲ ಸೌಲಭ್ಯ ಕಲ್ಪಿಸಬೇಕು. ಆಗ ಶಾಲೆ ಮತ್ತು ಕನ್ನಡ ಉಳಿಯುತ್ತದೆ. ಶಾಲೆಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ, ಸರ್ಕಾರದ ವಿರುದ್ಧ ಮುಷ್ಕರ ನಡೆಸಬೇಕು. ಈ ವಿಚಾರವಾಗಿ ಆಮರಣಾನಂತರ ಉಪವಾಸಕ್ಕೂ ನಾನು ಸಿದ್ಧ’ ಎಂದು ಹಂ.ಪ. ನಾಗರಾಜಯ್ಯ ಹೇಳಿದರು.

ಪ್ರಧಾನ್ ಗುರುದತ್ತ, ‘ಶಾಸಕರು, ಮಂತ್ರಿಗಳಿಗೆ ಕನ್ನಡ ಬೇಕಿಲ್ಲ. ಜನಪ್ರತಿನಿಧಿಗಳು ಶಾಲೆಗಳನ್ನೂ ನಡೆಸುತ್ತಿದ್ದಾರೆ. ಹೀಗಾಗಿ, ಕನ್ನಡ ಮಾಧ್ಯಮ ಶಾಲೆಗೆ ಈ ಸ್ಥಿತಿ ಬಂದಿದೆ. ಕನ್ನಡ ಮಾಧ್ಯಮಕ್ಕೆ ಮಾನ್ಯತೆ ಪಡೆದು, ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಅನುಮತಿ ಪಡೆದು ಹಳ್ಳಿಗಳಲ್ಲಿ ಸಿಬಿಎಸ್‌ಇ ಶಾಲೆಗಳನ್ನು ಪ್ರಾರಂಭ ಮಾಡಲಾಗುತ್ತಿದೆ. ಸರ್ಕಾರಕ್ಕೆ ನ್ಯಾಯಾಂಗ ಕ್ಷೇತ್ರದಿಂದ ಬರೆ ಹಾಕುವ ಕೆಲಸ ಆಗಬೇಕು’ ಎಂದರು.

ಕನ್ನಡ ಶಾಲೆ: ಪಿಐಎಲ್ ಸಲ್ಲಿಕೆಗೆ ನಿರ್ಣಯ

ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಲು ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಬೇಕು ಎಂಬ ನಿರ್ಣಯವನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಹಮ್ಮಿಕೊಂಡ ಚಿಂತನಾ ಸಭೆಯಲ್ಲಿ ಕೈಗೊಳ್ಳಲಾಯಿತು. ‘ಕನ್ನಡ ಶಾಲೆ ಉಳಿಸಿ-ಕನ್ನಡ ಬೆಳೆಸಿ’ ಚಿಂತನ ಸಭೆಯಲ್ಲಿ ಒಮ್ಮತದಿಂದ ಎರಡು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ‘ಕನ್ನಡ ಶಾಲೆಗಳನ್ನು ಉಳಿಸಲು ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಒದಗಿಸಬೇಕು. ಅಗತ್ಯಕ್ಕೆ ತಕ್ಕಷ್ಟು ಶಿಕ್ಷಕರನ್ನೂ ನೇಮಕ ಮಾಡಬೇಕು. ಈ ಅಗತ್ಯತೆಗಳನ್ನು ಆಧರಿಸಿ ನ್ಯಾಯಾಲಯದಲ್ಲಿ ಕಸಾಪ ಪಿಐಎಲ್ ಸಲ್ಲಿಸಬೇಕು. ಈ ಬಗ್ಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ತಜ್ಞರ ಸಮಿತಿಯೊಂದನ್ನು ರಚಿಸಬೇಕು’ ಎಂದು ನಿರ್ಣಯ ಕೈಗೊಳ್ಳಲಾಯಿತು.

ಕನ್ನಡದ ಇತಿಹಾಸ, ವೈಭವ, ವೈಶಿಷ್ಟ್ಯವನ್ನು ಸಾರಿದರೆ ಮಕ್ಕಳು ಭಾಷೆಯ ಕಡೆಗೆ ಆಕರ್ಷಿತರಾಗುತ್ತಾರೆ. ಪಠ್ಯದಲ್ಲಿ ಉತ್ತಮ ವಿಚಾರ ಅಳವಡಿಸಬೇಕು.
ಶಿವರುದ್ರ ಸ್ವಾಮೀಜಿ, ಬೇಲಿಮಠದ ಪೀಠಾಧ್ಯಕ್ಷ

ಕೆಲ ಕನ್ನಡ ಮಾಧ್ಯಮ ಶಾಲೆಗಳನ್ನು ಮಾದರಿ ಶಾಲೆಯನ್ನಾಗಿ ರೂಪಿಸಬೇಕು. ಮನೆಗಳಲ್ಲಿ ಪೋಷಕರಿಂದ ಕನ್ನಡದ ಬಗ್ಗೆ ಗೌರವ ಹೆಚ್ಚಿಸುವ ಕೆಲಸ ಆಗಬೇಕು. ಸರ್ಕಾರ ಕನ್ನಡಕ್ಕೆ ಆದ್ಯತೆ ನೀಡಬೇಕು.
ದೊಡ್ಡರಂಗೇಗೌಡ, ಸಾಹಿತಿ

‘ಮಹಿಳೆಯರ ಬದಲು ಮಕ್ಕಳಿಗೆ ಉಚಿತ ನೀಡಿ’

‘ವಿಧಾನಸೌಧದ ಸುತ್ತೋಲೆಗಳಿಂದ ಕನ್ನಡ ಉಳಿಸಲು ಸಾಧ್ಯವಿಲ್ಲ. ಎಲ್ಲ ಕನ್ನಡ ಮನಸ್ಸುಗಳು ಒಂದಾಗಬೇಕು. ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಕನ್ನಡ ಶಾಲೆ ಹಾಗೂ ಕನ್ನಡ ಭಾಷೆಗೆ ಅನುದಾನ ನೀಡುವ ಪ್ರಕ್ರಿಯೆ ಆಗಬೇಕು.
ಈ ಬಗ್ಗೆ ಪರಿಷತ್ತಿನ ನೇತೃತ್ವದಲ್ಲಿ ನಿಯೋಗ ತೆರಳಿ, ಮುಖ್ಯಮಂತ್ರಿಗೆ ಹಕ್ಕೊತ್ತಾಯ ಮಾಡಬೇಕು. ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ ಮಾಡುವ ಬದಲು ಮಕ್ಕಳಿಗೆ ಉಚಿತ ನೀಡಿ, ಮೈದಾನ ಒಳಗೊಂಡಂತೆ ವಿವಿಧ ಸೌಲಭ್ಯಗಳನ್ನು ಶಾಲೆಗಳಿಗೆ ಒದಗಿಸಿದರೆ ಮಕ್ಕಳನ್ನು ಆಕರ್ಷಿಸಲು ಸಾಧ್ಯ’ ಎಂದು ರಾಣಿ ಸತೀಶ್ ಅವರು ತಿಳಿಸಿದರು.

ಫಲಪುಷ್ಪ ಪ್ರದರ್ಶನದಲ್ಲಿ ‘ವಚನ ಸಾಹಿತ್ಯ’

ಬೆಂಗಳೂರು: ಈ ಬಾರಿ ಗಣರಾಜ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆವತಿಯಿಂದ ಆಯೋಜಿಸುವ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ ‘ವಿಶ್ವಗುರು ಬಸವಣ್ಣ’ ಅವರ ಹೂವಿನ ಪ್ರತಿಕೃತಿ ಕಣ್ಮನ ಸೆಳೆಯಲಿದೆ.

ಗಣರಾಜ್ಯೋತ್ಸವದ ಅಂಗವಾಗಿ 2024ರ ಜನವರಿ 18 ರಿಂದ 28ರವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದೆ. 12 ನೇ ಶತಮಾನದಲ್ಲಿ ಬಸವಣ್ಣನವರು ವಚನಗಳ ಮೂಲಕ ಸಮಾಜದಲ್ಲಿ ಕ್ರಾಂತಿ ಮಾಡಿದ್ದರು. ಅಂಥ ವಚನ ಸಾಹಿತ್ಯವನ್ನು ಪುಷ್ಪಗಳಲ್ಲಿ ಅರಳಿಸಲು ತೋಟಗಾರಿಕೆ ಇಲಾಖೆ ಸಿದ್ದತೆ ನಡೆಸಿದೆ.

‘ಬಸವಣ್ಣನವರು 12ನೇ ಶತಮಾನದಲ್ಲಿ ಲಿಂಗ ತಾರತಮ್ಯ ಹಾಗೂ ಮೂಢನಂಬಿಕೆಗಳನ್ನು ವಿರೋಧಿಸಿದ್ದರು. ಬಸವಣ್ಣನವರ ಚಿಂತನೆ, ಕಾಯಕ ವೈಖರಿಗಳು ಇಂದಿನ ಸಮಾಜಕ್ಕೆ ಮಾದರಿ. ಆದ್ದರಿಂದ, ಈ ಬಾರಿ ಬಸವಣ್ಣ ಮತ್ತು ‘ವಚನ ಸಾಹಿತ್ಯ’ದ ಕುರಿತು ಪುಷ್ಪ ಮಾದರಿಗಳನ್ನು ನಿರ್ಮಿಸಲಾಗುತ್ತಿದೆ’ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅಲ್ಲಮ್ಮ ಪ್ರಭು, ಅಕ್ಕಮಹಾದೇವಿ, ಮಡಿವಾಳ ಮಾಚಯ್ಯ ಸೇರಿದಂತೆ ವಚನಕಾರರ ಪ್ರತಿಮೆಗಳು, ಅವರ ವಚನಗಳು, ಅಂಕಿತನಾಮ ಗಳನ್ನು ಹೂವಿನ ಲೋಕದಲ್ಲಿ ಪ್ರಸ್ತುತಪಡಿಸಲಾಗುವುದು. ಈ ಬಗ್ಗೆ ವಚನ ಸಾಹಿತ್ಯದ ಸಂಶೋಧಕರು, ತಜ್ಞರು, ಸಾಹಿತಿಗಳು ಹಾಗೂ ಪ್ರಾಧ್ಯಪಕರ ಸಲಹೆ ಮತ್ತು ಮಾರ್ಗದರ್ಶನ ಪಡೆಯಲಾಗುತ್ತಿದೆ’ ಎಂದು ತಿಳಿಸಿದರು.

‘ಪುಷ್ಪಗಳಲ್ಲಿ ಬಸವಣ್ಣನವರ ಪ್ರತಿಮೆ ಮತ್ತು 12ನೇ ಶತಮಾನದ ಅನುಭವ ಮಂಟಪವನ್ನು ರಚಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಈಗಾಗಲೇ ಇಲಾಖೆಯಿಂದ ತಯಾರಿ ಪ್ರಾರಂಭಿಸಲಾಗಿದೆ. ಪುಷ್ಪ ಪ್ರದರ್ಶನಕ್ಕೆ ಬೇಕಾದ ಹೂವುಗಳನ್ನು ಸಂಗ್ರಹಿಸುವ ಕೆಲಸ ನಡೆಯುತ್ತಿದೆ’ ಎಂದರು.

ಅತ್ಯಾಚಾರ: ಗರ್ಭಪಾತಕ್ಕೆ ಅನುಮತಿ

ಬೆಂಗಳೂರು: ‘ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತ ಮಹಿಳೆ ಅಥವಾ ಬಾಲಕಿ ಗರ್ಭ ಧರಿಸಿ, ಆ ಗರ್ಭಕ್ಕೆ 24 ವಾರಗಳು ಪೂರ್ಣಗೊಂಡಿಲ್ಲ ಎಂದಾದರೆ ಅದನ್ನು ತೆಗೆಸಲು ಇರುವ ಕಾನೂನುಬದ್ಧ ಅವಕಾಶದ ಬಗ್ಗೆ ಪೊಲೀಸರು ಸಂತ್ರಸ್ತರಿಗೆ ತಿಳಿವಳಿಕೆ ನೀಡಬೇಕು‘ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಅತ್ಯಾಚಾರಕ್ಕೆ ಒಳಗಾಗಿ 23 ವಾರ ಪೂರ್ಣಗೊಂಡಿರುವ ನನ್ನ ಮಗಳ ಗರ್ಭ ತೆಗೆಸಲು ಅನುಮತಿ ನೀಡಬೇಕು‘ ಎಂದು ಕೋರಿ ಸಂತ್ರಸ್ತ ಬಾಲಕಿಯ ತಂದೆ ಸಲ್ಲಿಸಿದ್ದ ರಿಟ್ ಅರ್ಜಿಯೊಂದನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಗೃಹ ಇಲಾಖೆಗೆ ನಿರ್ದೇಶನ ನೀಡಿದೆ.

‘ಅತ್ಯಾಚಾರಕ್ಕೆ ಒಳಗಾದವರಲ್ಲಿ ಸಾಕಷ್ಟು ಸಂತ್ರಸ್ತರು ಬಡವರು ಮತ್ತು ಅಸಹಾಯಕರೇ ಇರುತ್ತಾರೆ. ಹೀಗಾಗಿ, ಅವರ ದೈಹಿಕ ಮತ್ತು ಮಾನಸಿಕ ಹಿಂಸೆಯ ಬಗ್ಗೆ ಸಂವೇದನಾಶೀಲತೆ ಹೊಂದಿರಬೇಕು. 24 ವಾರಗಳ ಒಳಗಿನ ಗರ್ಭವಿದ್ದರೆ ಕಾನೂನು ಪ್ರಕಾರ ಗರ್ಭಪಾತ ಮಾಡಿಸಿಕೊಳ್ಳುವ ಅಧಿಕಾರ ಇದೆ ಎಂಬುದರ ಬಗ್ಗೆ ಪೊಲಿಸರೇ ಅವರಿಗೆ ಅರಿವು ಮೂಡಿಸಬೇಕು ಎಂದು ನ್ಯಾಯಪೀಠ ಹೇಳಿದೆ.

ಬಾಕಿ ಪಾವತಿ ವಿಳಂಬ: ಹೈಕೋರ್ಟ್ ತರಾಟೆ

ಬೆಂಗಳೂರು: ಗುತ್ತಿಗೆದಾರರಿಗೆ ಕಾಮಗಾರಿಗಳ ಬಾಕಿ ಹಣ ಪಾವತಿಸಲು ವಿಳಂಬ ಮಾಡುತ್ತಿರುವ ಬಗ್ಗೆ ರಾಜ್ಯ ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ನಡೆಯನ್ನು ಹೈಕೋರ್ಟ್ ಪುನಃ ತರಾಟೆಗೆ ತೆಗೆದುಕೊಂಡಿದೆ.

ಈ ಸಂಬಂಧ ‘ಮೆಸರ್ಸ್ ನಿಕ್ಷೇಪ ಇನ್ಫ್ರಾ ಪ್ರಾಜೆಕ್ಟ್ಸ್’ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಗುತ್ತಿಗೆದಾರರಿಂದ ಕೆಲಸ ಮಾಡಿಸಿಕೊಂಡ ಮೇಲೆ ಬಿಲ್ ಪಾವತಿಸಲು ತಕರಾರೇಕೆ? ಸರ್ಕಾರವೇ ನಾಗರಿಕರ ಮೊದಲ ಶತ್ರು ಎಂಬ ಮಾತು ಸತ್ಯ ಎಂಬುದು ನಮಗೆ ಭಾಸವಾಗುತ್ತಿದೆ‘ ಎಂದು ಕುಟುಕಿದೆ.

ವಿಚಾರಣೆ ವೇಳೆ ಸರ್ಕಾರಿ ವಕೀಲರು, ‘ಅರ್ಜಿದಾರರಿಗೆ ಕಂತಿನಲ್ಲಿ ಬಿಲ್ ಪಾವತಿ ಮಾಡಲಾಗುತ್ತಿದೆ. ಇದಕ್ಕಾಗಿ ಫೆಬ್ರುವರಿವರೆಗೆ ಕಾಲಾವಕಾಶ ನೀಡಬೇಕು. ಅಂತೆಯೇ, ಗುತ್ತಿಗೆ ಕಾಮಗಾರಿಗಳ ಅಕ್ರಮ ಕುರಿತಂತೆ ತನಿಖೆ ನಡೆಸಲು ಎಸ್‌ಐಟಿ ಮತ್ತು ಏಕವ್ಯಕ್ತಿ ಆಯೋಗ ರಚನೆ ಮಾಡಿರುವುದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ‘ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ನಿಮ್ಮ ನಡೆಯಿಂದ ಗುತ್ತಿಗೆದಾರರು ಕೆಲಸ ಮಾಡಲು ಹಿಂಜರಿಯುವ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ‘ ಎಂದು ಬೇಸರ ವ್ಯಕ್ತಪಡಿಸಿತಲ್ಲದೆ, ‘ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಮುಂದಿನ ಕ್ರಮ ಕೈಗೊಳ್ಳಬಾರದು‘ ಎಂದು ಸೂಚಿಸಿ ವಿಚಾರಣೆಯನ್ನು 2024ರ ಫೆಬ್ರುವರಿ 13ಕ್ಕೆ ಮುಂದೂಡಿತು.

ಗುತ್ತಿಗೆ ಕಾಮಗಾರಿಗಳಲ್ಲಿ ಅಕ್ರಮದ ಆರೋಪ

ನಾಗಮೋಹನ ದಾಸ್ ಆಯೋಗಕ್ಕೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೂ (ಬಿಬಿಎಂಪಿ) ಸೇರಿದಂತೆ ವಿವಿಧ ಇಲಾಖೆಗಳ ಗುತ್ತಿಗೆ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಆರೋಪಗಳ ಕುರಿತಂತೆ ವಿಚಾರಣೆ ನಡೆಸಲು ನೇಮಕಗೊಂಡಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗವು 45 ದಿನಗಳ ಒಳಗಾಗಿ ವಿಚಾರಣೆ ನಡೆಸಿ ಹೈಕೋರ್ಟ್‌ಗೆ ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸಬೇಕು‘ ಎಂದು ಹೈಕೋರ್ಟ್ ಗಡುವು ನೀಡಿದೆ.

ಈ ಸಂಬಂಧ ‘ಮೆಸರ್ಸ್ ನಿಕ್ಷೇಪ ಇನ್ಫ್ರಾ ಪ್ರಾಜೆಕ್ಟ್ಸ್’ ಸೇರಿದಂತೆ ಗುತ್ತಿಗೆ ಕಂಪನಿಗಳು ಮತ್ತು ಹಲವು ಗುತ್ತಿಗೆದಾರರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಈ ಕುರಿತಂತೆ ಆದೇಶಿಸಿದೆ.

‘2019-20ರಿಂದ 2022-23ರವರೆಗೆ ಬಿಬಿಎಂಪಿ ಸೇರಿದಂತೆ ರಾಜ್ಯದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಗೆ ವಹಿಸಿದ ಎಲ್ಲಾ ಗುತ್ತಿಗೆ ಕಾಮಗಾರಿಗಳ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ. ಈ ಎಸ್‌ಐಟಿ ರಚನೆಯ ಸಿಂಧುತ್ವವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಆದರೆ, ಎಸ್‌ಐಟಿ ರಚನೆಯ ನಂತರ ಯಾವುದೇ ಪ್ರಕ್ರಿಯೆ ನಡೆದಿಲ್ಲ. ಮತ್ತೊಂದೆಡೆ 2019ರಿಂದ 2023ರವರೆಗಿನ ಗುತ್ತಿಗೆ ಕಾಮಗಾರಿಗಳಲ್ಲಿ ನಡೆದಿರುವ ಅಕ್ರಮದ ಆರೋಪಗಳ ಕುರಿತು ವಿಚಾರಣೆ ನಡೆಸಲು ನ್ಯಾ.ನಾಗಮೋಹನ ದಾಸ್ ಅವರ ಏಕವ್ಯಕ್ತಿ ಆಯೋಗ ರಚಿಸಲಾಗಿದೆ. ಅಲ್ಲಿಯೂ ಯಾವುದೇ ಪ್ರಕ್ರಿಯೆ ನಡೆದಿಲ್ಲ‘ ಎಂದು ನ್ಯಾಯಪೀಠ ಹೇಳಿದೆ. ವಿಚಾರಣೆಯನ್ನು 2024ರ ಫೆಬ್ರುವರಿ 6ಕ್ಕೆ ಮುಂದೂಡಲಾಗಿದೆ.

ಎಜಿ ವಿವರಣೆ: ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ (ಎಜಿ) ಕೆ.ಶಶಿಕಿರಣ ಶೆಟ್ಟಿ, ಗುತ್ತಿಗೆದಾರಿಗೆ ಹಣ ಪಾವತಿ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಪೀಠಕ್ಕೆ ವಿವರಿಸಿದರು.

‘ಯಾವುದೇ ಅಕ್ರಮಗಳ ಆರೋಪ ಹೊಂದಿರದ ಗುತ್ತಿಗೆದಾರರಿಗೆ ಅವರು ಕ್ಲೇಮು ಮಾಡಿದ ಹಣದ ಪೈಕಿ ಶೇ.75ರಷ್ಟು ಮೊತ್ತವನ್ನು ಹಿರಿತನದ ಆಧಾರದ ಮೇಲೆ ಪಾವತಿಸಲಾಗುತ್ತದೆ. ಆರೋಪ ಹೊತ್ತಿರುವ ಗುತ್ತಿಗೆದಾರಿಗೆ ಶೇ.50ರಷ್ಟು ಮಾತ್ರವೇ ಪಾವತಿಸಲಾಗುತ್ತದೆ. ಈ ಕುರಿತ ಸರ್ಕಾರದ ಆದೇಶಗಳು ಹೈಕೋರ್ಟ್ ಅಥವಾ ಏಕವ್ಯಕ್ತಿ ಆಯೋಗದ ಮುಂದಿರುವ ಪ್ರಕ್ರಿಯೆಗಳಿಗೆ ಬದ್ಧವಾಗಿರುತ್ತವೆ‘ ಎಂದು ನ್ಯಾಯಪೀಠಕ್ಕೆ ಭರವಸೆ ನೀಡಿದರು.

ತನಿಖೆ ಪ್ರಶ್ನಿಸಿದ ಅರ್ಜಿಗಳು: ಬಿಬಿಎಂಪಿ ವ್ಯಾಪ್ತಿಯಲ್ಲಿ 2019ರಿಂದ 2023ರ ಮೇ ತಿಂಗಳ ಅವಧಿಯಲ್ಲಿ 15ನೇ ಹಣಕಾಸು ಆಯೋಗದ ಅನುದಾನ, ನಗರೋತ್ಥಾನ ಅನುದಾನ ಮತ್ತು ಬಿಬಿಎಂಪಿ ಅನುದಾನಗಳ ಅಡಿಯಲ್ಲಿ ಕೈಗೊಂಡಿದ್ದ ಹಲವು ಕಾಮಗಾರಿಗಳಲ್ಲಿ ನಡೆದಿರುವ ಅಕ್ರಮಗಳ ತನಿಖೆಗೆ ನಾಲ್ಕು ಪ್ರತ್ಯೇಕ ಎಸ್‌ಐಟಿ ರಚನೆ ಮಾಡಿ ರಾಜ್ಯ ಸರ್ಕಾರ 2023ರ ಆಗಸ್ಟ್ 5ರಂದು ಆದೇಶಿಸಿತ್ತು.

ಅರ್ಜಿದಾರರು ಈ ಆದೇಶಗಳನ್ನು ಪ್ರಶ್ನಿಸಿದ್ದು, ಇವುಗಳನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಇದೇ 7ರಂದು ವಿಚಾರಣೆ ನಡೆಸಿ ಎಸ್‌ಐಟಿ ತನಿಖೆಗೆ ತಡೆ ನೀಡಿತ್ತು. ಅಂತೆಯೇ, ಈ ಅರ್ಜಿಗಳ ವಿಚಾರಣೆಯನ್ನು ನ್ಯಾಯಾಲಯ ಇದೇ 19ಕ್ಕೆ ನಿಗದಿಪಡಿಸಿದೆ.

ಶಿವಾಜಿನಗರದಲ್ಲಿರುವ ಚರಕ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ರೋಗಿಗಳಿಲ್ಲದೆ ಬಿಕೋ ಎನ್ನುತ್ತಿರುವುದು (ಎಡ ಚಿತ್ರ). ಆಸ್ಪತ್ರೆಯ ತೀವ್ರ ನಿಗಾ ಘಟಕ

ಪ್ರಜಾವಾಣಿ ಚಿತ್ರಗಳು:ಎಂ.ಎಸ್.ಮಂಜುನಾಥ್

ಎರಡು ವರ್ಷಗಳಿಂದ ಬಳಕೆಯಾಗದ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ಆಸ್ಪತ್ರೆಯಿದ್ದರೂ ಸೇವೆಯಿಲ್ಲ!

• ವರುಣ ಹೆಗಡೆ

ಬೆಂಗಳೂರು: ಸುಸಜ್ಜಿತವಾದ ನಾಲ್ಕು ಮಹಡಿಗಳ ಕಟ್ಟಡವಿದ್ದರೂ ಚಿಕಿತ್ಸೆಗೆ ವೈದ್ಯರು ಹಾಗೂ ಶುಶ್ರೂಷಕರಿಲ್ಲ. ಅತ್ಯಾಧುನಿಕ ವೈದ್ಯಕೀಯ ಯಂತ್ರೋಪಕರಣಗಳಿದ್ದರೂ ಅದರ ನಿರ್ವಹಣೆಗೆ ತಂತ್ರಜ್ಞರಿಲ್ಲ.

ಇದು ನಗರದ ಕೇಂದ್ರ ಭಾಗವಾದ ಶಿವಾಜಿನಗರದಲ್ಲಿರುವ ಚರಕ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಿತಿ. ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಎಬಿವಿಎಂಸಿಆರ್‌ಐ) ಈ ಆಸ್ಪತ್ರೆ, ಎರಡು ವರ್ಷದಿಂದ ನಿರುಪಯುಕ್ತವಾಗಿದೆ. ಸದ್ಯ ಈ ಆಸ್ಪತ್ರೆಯಲ್ಲಿ ತಲಾ ಇಬ್ಬರು ಶುಶ್ರೂಷಕರು, ಗ್ರೂಪ್ ಡಿ ಸಿಬ್ಬಂದಿ ಹಾಗೂ ರಕ್ಷಣಾ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಟ್ಟಡ ತಲೆಯೆತ್ತಿ ನಾಲ್ಕು ವರ್ಷವಾದರೂ ಅಗತ್ಯವಿರುವ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿಯ ನೇಮಕಾತಿ ನಡೆಯಲಿಲ್ಲ. ಇದರಿಂದ ಇಲ್ಲಿ ವೈದ್ಯಕೀಯ ಸೇವೆ ದೊರೆಯದಂತಾಗಿದೆ.

ಬ್ರಾಡ್‌ವೇ ರಸ್ತೆಯಲ್ಲಿ ಬಿಬಿಎಂಪಿಯಿಂದ ನಿರ್ಮಿಸಲಾಗಿದ್ದ ಈ ಆಸ್ಪತ್ರೆಯನ್ನು, 2020ರ ಆಗಸ್ಟ್‌ನಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಿದ್ದರು. ಈ ಕಟ್ಟಡ ನಿರ್ಮಾಣಕ್ಕೆ ಸಹಯೋಗ ನೀಡಿದ್ದ ಇನ್ಫೊಸಿಸ್ ಫೌಂಡೇಷನ್, ಆಸ್ಪತ್ರೆಗೆ ಅವಶ್ಯಕ ಯಂತ್ರೋಪಕರಣ, ಹಾಸಿಗೆ ಮತ್ತಿತರ ಸೌಕರ್ಯಗಳನ್ನು ಕಲ್ಪಿಸಲು ₹ 11 ಕೋಟಿ ದೇಣಿಗೆ ನೀಡಿತ್ತು. ಈ ಆಸ್ಪತ್ರೆಯನ್ನು ಕೋವಿಡ್ ಮೊದಲ ಹಾಗೂ ಎರಡನೇ ಅಲೆಯಲ್ಲಿ ಸರ್ಕಾರ ಬಳಸಿಕೊಂಡಿತ್ತು. ಆ ವೇಳೆ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವೈದ್ಯರು ಈ ಆಸ್ಪತ್ರೆಗೆ ಬಂದು, ಸೇವೆ ಸಲ್ಲಿಸಿದ್ದರು. ಕೆಲ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿಯನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗಿತ್ತು. ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಇಲ್ಲಿ ಒಳರೋಗಿಗಳ ವೈದ್ಯಕೀಯ ಸೇವೆ ಸ್ಥಗಿತಗೊಂಡಿತ್ತು.

ಕಳೆದ ವರ್ಷಾಂತ್ಯದವರೆಗೆ ಹೃದಯ ಹಾಗೂ ನರರೋಗ ವಿಜ್ಞಾನ ವಿಭಾಗದಲ್ಲಿ ಹೊರರೋಗಿ ಸೇವೆ ಮಾತ್ರ ಒದಗಿಸಲಾಗಿತ್ತು. ಬೌರಿಂಗ್ ಆಸ್ಪತ್ರೆಯ ವೈದ್ಯರು ಇಲ್ಲಿಗೆ ಬಂದು ಸೇವೆ ನೀಡುತ್ತಿದ್ದರು. ಈಗ ಆ ಸೇವೆಯೂ ಇಲ್ಲವಾಗಿದ್ದು, ಖಾಲಿ ಕಟ್ಟಡ ಬಿಕೋ ಎನ್ನುತ್ತಿದೆ.

ಬಳಕೆಯಾಗದ ಯಂತ್ರೋಪಕರಣ: ಎರಡು ವರ್ಷದಿಂದ ಆಸ್ಪತ್ರೆಯಲ್ಲಿ ಒಳರೋಗಿಗಳ ವಿಭಾಗ ಕಾರ್ಯನಿರ್ವಹಿಸುತ್ತಿಲ್ಲ. ತೀವ್ರ ನಿಗಾ ಘಟಕ (ಐಸಿಯು), ಪ್ರಯೋಗಾಲಯ ಸೇರಿ ವಿವಿಧ ವಿಭಾಗಗಳ ಯಂತ್ರೋಪಕರಣಗಳು ಬಳಕೆಯಾಗುತ್ತಿಲ್ಲ. ಇದರಿಂದಾಗಿ ಯಂತ್ರೋಪಕರಣಗಳು ದೂಳು ಹಿಡಿದಿವೆ. ಆಸ್ಪತ್ರೆಯ ಮೂರು ಗೇಟ್‌ಗಳಲ್ಲಿ ಎರಡು ಗೇಟ್‌ಗಳಿಗೆ ಬೀಗ ಹಾಕಲಾಗಿದೆ. ಆವರಣದಲ್ಲಿ ಎಲ್ಲೆಂದರಲ್ಲಿ ಕಸ ಬಿದ್ದಿದ್ದು, ಹಿಂಭಾಗದಲ್ಲಿ ಕೋಳಿ ತ್ಯಾಜ್ಯ ಹಾಕಲಾಗಿದೆ. ಅಲ್ಲಿಯೇ ಮೂತ್ರ ವಿಸರ್ಜನೆ ಮಾಡಲಾಗುತ್ತಿದೆ. ಇದರಿಂದಾಗಿ ಆಸ್ಪತ್ರೆ ಸುತ್ತ ಮೂಗು ಮುಚ್ಚಿಕೊಂಡು ಸಾಗಬೇಕಾಗಿದೆ.

‘ಸರ್ಕಾರಗಳು ಕಟ್ಟಡ ನಿರ್ಮಾಣಕ್ಕೆ ತೋರುವ ಆಸಕ್ತಿಯನ್ನು ವೈದ್ಯರು ಹಾಗೂ ಶುಶ್ರೂಷಕರ ನೇಮಕಕ್ಕೆ ತೋರುವುದಿಲ್ಲ. ಅತ್ಯಾಧುನಿಕ ಸೌಲಭ್ಯ ಹೊಂದಿರುವ ಆಸ್ಪತ್ರೆಯಿದ್ದರೂ ಚಿಕಿತ್ಸೆ ದೊರೆಯುತ್ತಿಲ್ಲ. ಇದರಿಂದಾಗಿ ಬೌರಿಂಗ್ ಹಾಗೂ ವಿಕ್ಟೋರಿಯಾ ಆಸ್ಪತ್ರೆಗೆ ತೆರಳಿ, ದಿನವಿಡೀ ಕಾಯಬೇಕಾಗಿದೆ. ಈ ಸರ್ಕಾರವಾದರೂ ಆದಷ್ಟು ಬೇಗ ನೇಮಕಾತಿ ಪ್ರಕ್ರಿಯೆ ನಡೆಸಿ, ವೈದ್ಯಕೀಯ ಸೇವೆ ಪ್ರಾರಂಭಿಸಬೇಕು’ ಎಂದು ಸ್ಥಳೀಯರು ಆಗ್ರಹಿಸಿದರು.

ಆಸ್ಪತ್ರೆ ಪುನರಾರಂಭಕ್ಕೆ ₹ 22 ಕೋಟಿ ಬಜೆಟ್‌ಗೆ ಅನುಮೋದನೆ ದೊರೆತಿದೆ. ವೈದ್ಯರು, ಶುಶ್ರೂಷಕರ ನೇಮಕಾತಿ ಪ್ರಕ್ರಿಯೆ ನಡೆಯಲಿದೆ

ಡಾ. ಮನೋಜ್ ಕುಮಾರ್,
ಎಬಿವಿಎಂಸಿಆರ್‌ಐ ಡೀನ್

ಅಂಕಿ–ಅಂಶ

₹24.38 ಕೋಟಿ
ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ತಗುಲಿದ್ದ ವೆಚ್ಚ

6,908.18 ಚ.ಮೀ.
ಆಸ್ಪತ್ರೆ ಕಟ್ಟಡದ ಒಟ್ಟು ವಿಸ್ತೀರ್ಣ

130
ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ

ಅತ್ಯಾಧುನಿಕ ಸೌಲಭ್ಯ

ಈ ಆಸ್ಪತ್ರೆಯಲ್ಲಿ ಆಮ್ಲಜನಕ ಪೂರಣ ವ್ಯವಸ್ಥೆಯ 20 ಹಾಸಿಗೆ ಸಾಮರ್ಥ್ಯದ ತೀವ್ರ ನಿಗಾ ಘಟಕ (ಐ.ಸಿ.ಯು) ಇದೆ. 20 ವೆಂಟಿಲೇಟರ್‌ ಗಳನ್ನೂ ಕಲ್ಪಿಸಲಾಗಿದೆ. ಹೊರರೋಗಿಗಳಿಗೆ ಸಾಮಾನ್ಯ ಮತ್ತು ತುರ್ತು ಚಿಕಿತ್ಸಾ ಸಲಹಾ ವ್ಯವಸ್ಥೆ, ಪ್ರಯೋಗಾಲಯ, ಡಯಾಲಿಸಿಸ್ ಸೌಲಭ್ಯ, ತಲಾ 2 ಹಾಸಿಗೆ ಹಾಗೂ 5 ಹಾಸಿಗೆಗಳ ಕೊಠಡಿಗಳ ವಾರ್ಡ್‌ಗಳು, ಶಸ್ತ್ರಚಿಕಿತ್ಸಾ ಕೊಠಡಿ, ಸಿಸಿಯು, ಕ್ಯಾಥ್ ಲ್ಯಾಬ್ ಸೇರಿ ವಿವಿಧ ಸೌಕರ್ಯಗಳನ್ನು ಆಸ್ಪತ್ರೆಯು ಒಳಗೊಂಡಿದೆ.

ಮಳೆ ನೀರನ್ನು ಸಂಗ್ರಹಿಸಿ, ಬಳಸುವ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. 750 ಕೆ.ವಿ ವಿದ್ಯುತ್ ಸೌಲಭ್ಯ ಹಾಗೂ ಜನರೇಟರ್ ವ್ಯವಸ್ಥೆ ಒದಗಿಸಲಾಗಿದೆ. ನಿತ್ಯ ಬಳಕೆಗೆ ಎರಡು ಲಿಫ್ಟ್‌ಗಳು ಹಾಗೂ ಒಂದು ಸರ್ವೀಸ್ ಲಿಫ್ಟ್ ಆಸ್ಪತ್ರೆಯಲ್ಲಿದೆ.

ಪ್ರಜಾವಾಣಿ ವಿಶೇಷ

ತಲೆಯಲ್ಲಿ ಸೇರಿದ್ದ ‘ನೊಣದ ಕುಟುಂಬ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರ ನೆತ್ತಿಯ ಭಾಗದಲ್ಲಿ ಸೇರಿಕೊಂಡಿದ್ದ ಜೀವಂತ ಬಾಟ್‌ಫ್ಲೈ (ನೊಣದ ಕುಟುಂಬ) ಲಾರ್ವಾವನ್ನು ಶಸ್ತ್ರ-ಚಿಕಿತ್ಸೆ ಮೂಲಕ ಹೊರತೆಗೆಯುವಲ್ಲಿ ಇಲ್ಲಿನ ಟ್ರೈಲೈಫ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿದ್ದಾರೆ.

ಮಹಿಳೆಯ ತಲೆಯಲ್ಲಿದ್ದ ಬಾಟ್‌ಫ್ಲೈ ಲಾರ್ವಾ

ವನ್ಯಜೀವಿ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರೇತರ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ನಗರದ 26 ವರ್ಷ ವರ್ಷದ ಮಹಿಳೆಯ ತಲೆಯನ್ನು ಬಾಟ್‌ಫ್ಲೈ ಲಾರ್ವಾ ಸೇರಿಕೊಂಡಿತ್ತು. ಇದರಿಂದ ತಲೆಯ ಭಾಗದಲ್ಲಿ ಊತ ಕಾಣಿಸಿಕೊಂಡಿತ್ತು. ವಾರದಿಂದ ತೀವ್ರತರ ನೋವನ್ನು ಅನುಭವಿಸುತ್ತಿದ್ದರು. ಊತದ ಭಾಗವನ್ನು ಸಣ್ಣದಾಗಿ ಸೀಳಿ, ಬಾಟ್‌ಫ್ಲೈ ಲಾರ್ವಾವನ್ನು ಹೊರ ತೆಗೆಯಲಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

‘ಈ ಊತ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಪ್ರತಿದಿನ ತಲೆಯ ಚರ್ಮದ ಭಾಗದಲ್ಲಿ ಏನೋ ಓಡಾಡಿದಂತೆ ಮಹಿಳೆಗೆ ಭಾಸವಾಗುತ್ತಿತ್ತು. ಬಾಟ್‌ಫ್ಲೈನ ಲಾರ್ವಾವನ್ನು ಜೀವಂತವಾಗಿ ಹೊರತೆಗೆಯಲಾಗಿದೆ. ಒಂದುವೇಳೆ ಇದು ತಲೆಯಲ್ಲಿಯೇ ಇದ್ದಿದ್ದರೆ ಅಂಗಾಂಶ ನಾಶವಾಗುವುದರ ಜೊತೆಗೆ ಲಾರ್ವಾವು ಬಾಟ್‌ಫ್ಲೈ ಕೀಟವಾಗಿ ಅಲ್ಲಿಯೇ ಬೆಳವಣಿಗೆ ಹೊಂದುತ್ತಿತ್ತು’ ಎಂದು ಶಸ್ತ್ರಚಿಕಿತ್ಸಕ ಡಾ. ರಾಘವೇಂದ್ರ ಕಲಾದಗಿ ಹೇಳಿದ್ದಾರೆ.

‘ಬಾಟ್‌ಫ್ಲೈಗಳು ಹೆಚ್ಚಾಗಿ ಇರುವಂತಹ ಸ್ಥಳಗಳಿಗೆ ಪ್ರಯಾಣ ಬೆಳೆಸುವವರು ಈ ರೀತಿಯ ಸಮಸ್ಯೆಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಇವು ದಕ್ಷಿಣ ಅಮೆರಿಕದಲ್ಲಿ, ಅಮೆಜಾನ್ ಕಾಡುಗಳಲ್ಲಿಯೂ ಹೆಚ್ಚಿವೆ. ಆದ್ದರಿಂದ ಈ ಸ್ಥಳಗಳಿಗೆ ಹೋಗುವವರು ಸಂಪೂರ್ಣ ದೇಹವನ್ನು ಮುಚ್ಚುವಂತಹ ಬಟ್ಟೆ ಧರಿಸಬೇಕು’ ಎಂದು ತಿಳಿಸಿದ್ದಾರೆ.

ತಲೆಯಲ್ಲಿನ ಗುಂಡನ್ನು ಕಿವಿಯ ಮೂಲಕ ಹೊರ ತೆಗೆದ ವೈದ್ಯರು

ಬೆಂಗಳೂರು: ಯೆಮನ್ ದೇಶದ 29 ವರ್ಷದ ವ್ಯಕ್ತಿಯ ತಲೆಯಲ್ಲಿದ್ದ 3 ಸೆಂ.ಮೀ ಉದ್ದದ ಗುಂಡನ್ನು (ಬುಲೆಟ್) ಕಿವಿಯ ಮೂಲಕ ಹೊರತೆಗೆಯುವಲ್ಲಿ ಜೆ.ಪಿ. ನಗರದ ಆಸ್ಟರ್ ಆರ್‌ವಿ ಆಸ್ಪತ್ರೆಯ ಇಎನ್‌ಟಿ ಶಸ್ತ್ರಚಿಕಿತ್ಸಕರು ಯಶಸ್ವಿಯಾಗಿದ್ದಾರೆ.

ವ್ಯಕ್ತಿಯ ತಲೆಯಲ್ಲಿದ್ದ ಗುಂಡು

ಯೆಮನ್‌ನಲ್ಲಿ ನಡೆದ ಸಂಘರ್ಷವೊಂದರಲ್ಲಿ ವ್ಯಕ್ತಿಯ ತಲೆಗೆ ಗುಂಡು ತಗುಲಿತ್ತು. ಈ ಗುಂಡು 18 ವರ್ಷಗಳಿಂದ ವ್ಯಕ್ತಿಯ ತಲೆಯಲ್ಲಿತ್ತು. ಇದರಿಂದಾಗಿ ಅವರು ಯಾತನೆ ಅನುಭವಿಸುತ್ತಿದ್ದರು. ಗಾಯದ ಪರಿಣಾಮ ಶಾಶ್ವತ ಕಿವುಡುತನಕ್ಕೂ ಒಳಗಾಗಿದ್ದರು. ಸೂಕ್ತ ಚಿಕಿತ್ಸೆಗಾಗಿ ಅಲೆದಾಡಿದ ಅವರು, ಅಂತಿಮವಾಗಿ ಇಲ್ಲಿಗೆ ಬಂದರು. ಡಾ. ರೋಹಿತ್ ಉದಯ ಪ್ರಸಾದ್ ಹಾಗೂ ಡಾ. ವಿನಾಯಕ್ ಕುರ್ಲೆ ನೇತೃತ್ವದ ವೈದ್ಯರ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದೆ ಎಂದು ಆಸ್ಪತ್ರೆ ತಿಳಿಸಿದೆ.

‘ಇಬ್ಬರು ಮಕ್ಕಳ ತಂದೆಯಾಗಿರುವ ವ್ಯಕ್ತಿ, ಯೆಮನ್‌ನಲ್ಲಿ ವ್ಯಾಪಾರ ನಡೆಸುತ್ತಿದ್ದರು. ನಿರಂತರ ಕಿವಿ ಸೋರುವಿಕೆ ಮತ್ತು ದೀರ್ಘಕಾಲದ ತಲೆನೋವಿಗೆ ಶಾಶ್ವತ ಪರಿಹಾರ ಪಡೆಯಲು ಅವರು ನಮ್ಮ ಆಸ್ಪತ್ರೆಗೆ ಬಂದರು. ಮೂಳೆಯಲ್ಲಿ ಗುಂಡು ಆಳವಾಗಿ ತಳವೂರಿತ್ತು. ಇದು ಶಸ್ತ್ರಚಿಕಿತ್ಸೆಯನ್ನು ಸವಾಲಾಗಿಸಿತು. ಗುಂಡು ಮತ್ತು ನಾಳೀಯ ರಚನೆಗಳಿಗೆ ಸಾಮೀಪ್ಯ ಗುರುತಿಸಲು ಸಿ.ಟಿ ಆಂಜಿಯೋಗ್ರಫಿ ಮಾಡಲಾಯಿತು. ಎಕ್ಸ್-ರೇ ಸಹ ನಡೆಸಿ, ಎಚ್ಚರಿಕೆಯಿಂದ ಶಸ್ತ್ರಚಿಕಿತ್ಸೆ ನಡೆಸಿದವು’ ಎಂದು ಡಾ. ರೋಹಿತ್ ಉದಯ ಪ್ರಸಾದ್ ಹೇಳಿದರು.

‘ಶಸ್ತ್ರಚಿಕಿತ್ಸೆಯ ನಂತರ ವ್ಯಕ್ತಿಯು ತೀವ್ರತರ ತಲೆನೋವಿನಿಂದ ಮುಕ್ತಿ ಹೊಂದಿದರು. ಅವರ ಆರೋಗ್ಯದಲ್ಲಿ ಗಮನಾರ್ಹವಾದ ಸುಧಾರಣೆ ಕಂಡುಬಂದಿತು. ವ್ಯಕ್ತಿ ಈಗ ಚೇತರಿಸಿಕೊಂಡು ತಮ್ಮ ದೇಶಕ್ಕೆ ಮರಳಿದ್ದಾರೆ’ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಅಭಿವೃದ್ಧಿ ಕಾರ್ಯಗಳನ್ನು ಕಡೆಗಣಿಸಿ, ಜನ ವಿರೋಧಿ ನೀತಿ ಅನುರಿಸುತ್ತಿದೆ ಎಂದು ಆರೋಪಿಸಿ ಬಿಜೆಪಿ ನಾಯಕ ಸಿ.ಟಿ.ರವಿ ನೇತೃತ್ವದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

‘ಮಂಥನ್–2023’ ವಾರ್ಷಿಕ ತಾಂತ್ರಿಕ–ಸಾಂಸ್ಕೃತಿಕ ಉತ್ಸವ: ಅತಿಥಿಗಳು: ಅಭಿಷೇಕ್ ಅಂಬರೀಶ್, ಧನ್ವೀರ್ ಗೌಡ, ಅಶ್ವಿನ್ ಡಿ. ಗೌಡ, ಅಧ್ಯಕ್ಷತೆ: ಎಸ್. ಕೆ. ಧರ್ಮೇಶ್ ಸಿರಿಬೈಲ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ, ಕೃಷ್ಣರಾಜೇಂದ್ರ ರಸ್ತೆ, ವಿ.ವಿ. ಪುರ, ಬೆಳಿಗ್ಗೆ 9ರಿಂದ

‘ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು 2023–24’ ಸಮಾರೋಪ ಸಮಾರಂಭ: ಅತಿಥಿಗಳು: ಬರಗೂರು ರಾಮಚಂದ್ರಪ್ಪ, ಸಿಂಧು ಬಿ. ರೂಪೇಶ್, ಆನಂದರಾಜ್ ಎ., ಉಪಸ್ಥಿತಿ: ಆರ್. ರಾಜಗೋಪಾಲ್, ಪುರುಷೋತ್ತಮ ಜಿ.ಎಸ್., ಅಧ್ಯಕ್ಷತೆ: ಸೆಬಾಸ್ಟಿನ್ ಮಥಾಯ್, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಸ್ಥಳ: ಕ್ರೈಸ್ಟ್ ಪಿ.ಯು. ಕಾಲೇಜು, ಹೊಸೂರು ರಸ್ತೆ, ಮಧ್ಯಾಹ್ನ 2ರಿಂದ

ಬರಗೂರು ರಾಮಚಂದ್ರಪ್ಪ

ವಾರ್ಷಿಕೋತ್ಸವ ಸಮಾರಂಭದ ಉದ್ಘಾಟನೆ: ಯು.ಬಿ. ವೆಂಕಟೇಶ್, ಅಧ್ಯಕ್ಷತೆ: ಎಂ.ಎಸ್. ಆಶಾದೇವಿ, ಅತಿಥಿ: ಕೆ.ವಿ. ನಾಗರಾಜಮೂರ್ತಿ, ಸನ್ಮಾನ: ಮಾಲತಿಶ್ರೀ ಮೈಸೂರು, ‘ಪ್ರತಿಭಾಶ್ರೀ’ ಪ್ರಶಸ್ತಿ ಪುರಸ್ಕಾರ: ಡಾ. ರಶ್ಮಿ ಶೇಷಪ್ರಸಾದ್, ಆಯೋಜನೆ: ಶೇಷ ಮಹಾಗಣಪತಿ ಮಹಿಳಾ ಸಂಘ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಮಧ್ಯಾಹ್ನ 3

ನಟರಾಜ್ ಹುಳಿಯಾರ್ ಅವರ ‘ಕಥಾನಂತರ’ ಪುಸ್ತಕ ಬಿಡುಗಡೆ: ಅತಿಥಿಗಳು: ಮೊಗಳ್ಳಿ ಗಣೇಶ್, ದು. ಸರಸ್ವತಿ, ಕಥಾಮಂಡನೆ: ಕಿರಣ್ ನಾಯಕ್ ಮತ್ತು ತಂಡ, ಆಯೋಜನೆ: ಸಮತಾ ಚಿಂತನ ಪಲ್ಲವ ಪ್ರಕಾಶನ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 6

‘ಲೋಕದ ಒಳಹೊರಗೆ’ ನಾಟಕ ಪ್ರದರ್ಶನ: ನಿರ್ದೇಶನ: ಬಿ. ಸುರೇಶ, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ದಾಸಗಾನಾಮೃತ: ಗಾಯನ: ಸುಷ್ಮಾ ಜೋಯಿಸ್ ಸಿಂಧನೂರು, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸುಷ್ಮಾ ಜೋಯಿಸ್ ಸಿಂಧನೂರು

ಸುಧಾ, ಮಯೂರ ಓದಿ

‘ಪ್ರಜಾವಾಣಿ’ ಕ್ವಿಜ್ ವಲಯಮಟ್ಟದ ವಿಜೇತರು...

‘ಪ್ರಜಾವಾಣಿ’ ಪತ್ರಿಕಾ ಬಳಗವು ಬೆಂಗಳೂರಿನ ಪರಿಶ್ರಮ ಪಿಯು ಕಾಲೇಜು ಹಾಗೂ ಭೀಮಾ ಜ್ಯುವೆಲ್ಲರ್ಸ್ ಸಹಯೋಗದಲ್ಲಿ ಧಾರವಾಡದ ಸೃಜನಾ ರಂಗಮಂದಿರದಲ್ಲಿ ಬುಧವಾರ ಏರ್ಪಡಿಸಿದ್ದ ‘ಪ್ರಜಾವಾಣಿ’ ಕ್ವಿಜ್ ಚಾಂಪಿಯನ್‌ಷಿಪ್‌ನ ಧಾರವಾಡ ವಲಯ ಮಟ್ಟದ ಸ್ಪರ್ಧೆಯಲ್ಲಿ ವಿಜೇತರಾದ ಧಾರವಾಡದ ಸರ್ಕಾರಿ ಆದರ್ಶ ವಿದ್ಯಾಲಯದ ಸಮರ್ಥ್ ಪತ್ತಾರ, ಪ್ರೀತಂ ಸಾತಪ್ಪನವರ ಅವರಿಗೆ ಧಾರವಾಡದ ಐಸಿಎಸ್ ಮಹೇಶ ಪಿಯು ಕಾಲೇಜಿನ ನಿರ್ದೇಶಕ ಬಸವಕಿರಣ ಬಹುಮಾನ ವಿತರಿಸಿದರು. -ಪ್ರಜಾವಾಣಿ ಚಿತ್ರ

ಸತ್ಯಜೀತ್‌ಗೆ ಅತಿವಿಶಿಷ್ಟ ರೈಲ್ ಸೇವಾ ಪುರಸ್ಕಾರ

ಹುಬ್ಬಳ್ಳಿ: ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಹಿರಿಯ ವಿಭಾಗೀಯ ಎಂಜಿನಿಯರ್ ಸತ್ಯಜೀತ್ ಹರ್ನೆ ಅವರಿಗೆ ಅತಿ ವಿಶಿಷ್ಟ ರೈಲ್ ಸೇವಾ ಪುರಸ್ಕಾರ–2023 ಪ್ರಶಸ್ತಿ ಲಭಿಸಿದೆ.

ಮಧ್ಯಪ್ರದೇಶದ ಇಂದೋರ್‌ನವರಾದ ಸತ್ಯಜೀತ್ ಅವರು ಪ್ರಸ್ತುತ ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ನವದೆಹಲಿಯಲ್ಲಿ ಇದೇ 15ರಂದು ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಇಂಡಿಯಾ ಬೆಂಬಲಕ್ಕೆ ಸಿದ್ಧ: ಎಸ್‌ಡಿಪಿಐ

ಮೈಸೂರು: ‘2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಬಲ ಪಂಥೀಯ ಪಕ್ಷಗಳನ್ನು ಅಧಿಕಾರದಿಂದ ದೂರವಿಡಲು ‘ಇಂಡಿಯಾ’ ಒಕ್ಕೂಟ ಬಲಪಡಿಸುವ ಅಗತ್ಯವಿದೆ. ಮುಕ್ತ ಆಹ್ವಾನ ನೀಡಿದರೆ ಪಕ್ಷವು ಬೆಂಬಲಿಸಲಿದೆ. ಇಲ್ಲದಿದ್ದರೆ ದೇಶದ 60 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದೇವೆ’ ಎಂದು ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ. ಫೈಝಿ ಹೇಳಿದರು.

ನಗರದಲ್ಲಿ ಬುಧವಾರ ರಾಷ್ಟ್ರೀಯ ಕಾರ್ಯಕಾರಿಣಿ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಡಿಜಿಟಲ್ ಉಪಕರಣಗಳು, ₹7.3 ಲಕ್ಷ ನಗದು ಜಪ್ತಿ ಮಾಡಿದ ಎನ್‌ಐಎ

ಶಂಕಿತ ಉಗ್ರರ ಮನೆ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದ ಆರೋಪದ ಮೇರೆಗೆ ಬಂಧನಕ್ಕೊಳಗಾಗಿದ್ದ ಲಷ್ಕರ್ ಎ ತಯಬಾ ಸಂಘಟನೆಯ ಐವರ ಪೈಕಿ, ನಾಲ್ವರು ಶಂಕಿತ ಉಗ್ರರು ಸೇರಿದಂತೆ ಆರು ಮಂದಿ ಮನೆಗಳ ಮೇಲೆ ರಾಷ್ಟ್ರೀಯ ತನಿಖಾ ದಳ(ಎನ್‌ಐಎ) ಅಧಿಕಾರಿಗಳು ಬುಧವಾರ ದಾಳಿ ನಡೆಸಿ ಶೋಧ ಕಾರ್ಯ ಕೈಗೊಂಡರು.

ಕೊಡಿಗೇಹಳ್ಳಿಯ ಮೊಹಮ್ಮದ್ ಉಮರ್, ಭದ್ರಪ್ಪ ಲೇಔಟ್ ನಿವಾಸಿ ಮೊಹಮ್ಮದ್ ಫೈಸಲ್ ರಬ್ಬಾನಿ, ಮೊಹಮ್ಮದ್ ಫಾರೂಕ್, ತನ್ವೀರ್ ಅಹ್ಮದ್ ಮತ್ತು ದುಬೈನಲ್ಲಿ ತಲೆಮರೆಸಿಕೊಂಡಿರುವ ಜುನೈದ್ ಅಹ್ಮದ್ ಸೇರಿದಂತೆ ಆರು ಮಂದಿಯ ಮನೆಗಳಲ್ಲಿ ಅಧಿಕಾರಿಗಳು ಇಡೀ ದಿನ ಶೋಧ ನಡೆಸಿದರು ಎಂದು ಮೂಲಗಳು ಹೇಳಿವೆ.

ಡಿಜಿಟಲ್ ಉಪಕರಣಗಳು, ₹7.3 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ.

ಜುಲೈನಲ್ಲಿ ಬೆಂಗಳೂರಿನ ಕೇಂದ್ರ ಅಪರಾಧ ವಿಭಾಗ(ಸಿಸಿಬಿ) ಸಿಬ್ಬಂದಿ ಐವರು ಶಂಕಿತ ಉಗ್ರರನ್ನು ಬಂಧಿಸಿದ್ದರು. ಈ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. 7 ಪಿಸ್ತೂಲ್‌ಗಳು, 45 ಜೀವಂತ ಗುಂಡುಗಳು, 4 ವಾಕಿಟಾಕಿಗಳು ಹಾಗೂ ಶಂಕಿತರ ಮನೆಯಲ್ಲಿ 4 ಹ್ಯಾಂಡ್ ಗ್ರೆನೇಡ್‌ಗಳು ಪತ್ತೆಯಾಗಿದ್ದವು. ಅವುಗಳನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿಕೊಂಡಿದ್ದರು.

‘ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ 2008ರ ಬೆಂಗಳೂರು ಸರಣಿ ಬಾಂಬ್ ಸ್ಫೋಟದ ರೂವಾರಿ ಟಿ.ನಾಸೀರ್ ಕೃತ್ಯವಾಡದ ಬಗ್ಗೆ ಶಂಕಿತರು ವಿಚಾರಣೆ ವೇಳೆ ಬಾಯಿಬಿಟ್ಟಿದ್ದರು. ಅದಾದ ಮೇಲೆ ಬಾಡಿ ವಾರಂಟ್ ಪಡೆದು ಜೈಲಿನಿಂದಲೇ ಸಿಸಿಬಿ ಪೊಲೀಸರು ನಾಸೀರನನ್ನು ಬಂಧಿಸಿ ವಿಚಾರಣೆ ನಡೆಸಿದ್ದರು.

ನಂತರ ಪ್ರಕರಣವನ್ನು ಎನ್‌ಐಎಗೆ ವರ್ಗಾವಣೆ ಮಾಡಲಾಗಿತ್ತು. ಎನ್‌ಐಎ ಅಧಿಕಾರಿಗಳು ಎಲ್ಲಾ ಆರೋಪಿಗಳನ್ನು ವಿಚಾರಣೆ ನಡೆಸಿದ್ದರು. ಈ ಸಂಬಂಧ ಹೆಚ್ಚಿನ ಮಾಹಿತಿ ಕಲೆ ಹಾಕಲು ಶಂಕಿತ ಮನೆಗಳಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ಎಲ್‌ಇಟಿ ಸದಸ್ಯ ಟಿ.ನಾಸೀರ್, ಬೆಂಗಳೂರು ಸೇರಿ ರಾಜ್ಯದಲ್ಲಿ ವಿಧ್ವಂಸಕ ಕೃತ್ಯ ಎಸಗಲು ಆರೋಪಿಗಳಿಗೆ ಪ್ರಚೋದನೆ ನೀಡಿದ್ದ. ಬೆಂಗಳೂರು ಸೇರಿದಂತೆ ರಾಜ್ಯದ ಬೇರೆ ಬೇರೆ ಭಾಗದ ಜನದಟ್ಟಣೆ ಪ್ರದೇಶದಲ್ಲಿ ಸ್ಫೋಟಕ್ಕೆ ಸಂಚು ರೂಪಿಸಿದ್ದರು. ಎಲ್‌ಇಟಿ ಶಂಕಿತರ ಸಹಾಯದಿಂದ ಅಕ್ರಮವಾಗಿ ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳು, ಪಿಸ್ತೂಲ್, ಜೀವಂತ ಗುಂಡುಗಳನ್ನು ಖರೀದಿಸಲು ಹಣ ಕೊಡಿಸಲು ನಾಸೀರ್ ಸಹಾಯ ಮಾಡಿದ್ದ. ಈ ಪ್ರಕರಣದಲ್ಲಿ ತನಿಖೆ ಮುಂದುವರಿದಿದೆ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಬಾರ್ ಪರವಾನಗಿಗೆ ಲಂಚ; ಲೋಕಾಯುಕ್ತ ದಾಳಿಯಲ್ಲಿ ಸಿಕ್ಕಿಬಿದ್ದವರಿಗೇ ಮಣೆ

‘ಅಮಾನತಾಗಿದ್ದ ಸಿಬ್ಬಂದಿಗೆ ಮತ್ತದೇ ಹುದ್ದೆ’

ಪ್ರಜಾವಾಣಿ ವಾರ್ತೆ

ರಘುನಾಥ

ದಾವಣಗೆರೆ: ‘ಲಂಚ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ಹಣದ ಸಮೇತ ಸಿಕ್ಕಿಬಿದ್ದು, ಬಂಧನಕ್ಕೊಳಗಾಗಿ ಅಮಾನತುಗೊಂಡಿದ್ದ ಇಲ್ಲಿನ ಅಬಕಾರಿ ಇಲಾಖೆ ಕಚೇರಿಯ ಐವರು ಸಿಬ್ಬಂದಿ ಕೆಲವೇ ದಿನಗಳಲ್ಲಿ ಮತ್ತೆ ಅದೇ ಹುದ್ದೆಗಳಲ್ಲಿ ನಿಯುಕ್ತಿಗೊಳಿಸಿರುವುದು ಸರಿಯಲ್ಲ. ಅವರನ್ನು ಬೇರೆ ಜಿಲ್ಲೆಗೆ ವರ್ಗಾಯಿಸಬೇಕು’ ಎಂದು ಲೋಕಾಯುಕ್ತಕ್ಕೆ ದೂರು ನೀಡಿದ್ದ, ಬಾರ್ ಮಾಲೀಕ ಡಿ.ಜಿ. ರಘುನಾಥ ಒತ್ತಾಯಿಸಿದರು.

‘ಅಮಾನತುಗೊಂಡಿದ್ದ ಐವರು ಸಿಬ್ಬಂದಿ ಪೈಕಿ ಮೂವರು ಅದೇ ಹುದ್ದೆಗಳಲ್ಲಿ ಮುಂದುವರರಿದಿರುವುದು ಸಾಕ್ಷ್ಯ ನಾಶದ ಜೊತೆಗೆ, ದೂರುದಾರನಾದ ನನಗೆ ತೊಂದರೆ ನೀಡುವ ಸಾಧ್ಯತೆ ಇದೆ’ ಎಂದು ಅವರು ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಆತಂಕ ವ್ಯಕ್ತಪಡಿಸಿದರು.

‘ಸಿಎಲ್– 7 ಬಾರ್‌ಗೆ ಪರವಾನಗಿ ನೀಡಲು ಅಬಕಾರಿ ಇಲಾಖೆ ಅಧಿಕಾರಿಗಳು ₹ 60 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಸೆಪ್ಟೆಂಬರ್ 13ರಂದು ಲೋಕಾಯುಕ್ತಕ್ಕೆ ದೂರು ನೀಡಿ, ಸೆ. 14ರಂದು ಮುಂಗಡವಾಗಿ ₹ 3 ಲಕ್ಷ ಲಂಚ ನೀಡುವಾಗ ಲೋಕಾಯುಕ್ತ ಸಿಬ್ಬಂದಿ ದಾಳಿ ನಡೆಸಿ, ಅಬಕಾರಿ ಇಲಾಖೆಯ ಉಪ ಆಯುಕ್ತೆ ಆರ್.ಎಸ್. ಸ್ವಪ್ನಾ, ಹರಿಹರ ಇನ್‌ಸ್ಪೆಕ್ಟರ್ ಶೀಲಾ, ಎಫ್‌ಡಿಎಗಳಾದ ಅಶೋಕ್, ಶೈಲಶ್ರೀ ಅವರನ್ನು ಬಂಧಿಸಿದ್ದರು. ಮತ್ತೊಬ್ಬ ಆರೋಪಿ, ಇಲಾಖೆಯ ಡೆಪ್ಯುಟಿ ಸೂಪರಿಂಟೆಂಡೆಂಟ್ ರವಿಕುಮಾರ್ ಮರಿಗೌಡರ್ ತಲೆಮರೆಸಿಕೊಂಡಿದ್ದರು. ನಂತರ ಎಲ್ಲರೂ ನ್ಯಾಯಾಲಯದಿಂದ ಜಾಮೀನು ಪಡೆದಿದ್ದರು’ ಎಂದು ಅವರು ತಿಳಿಸಿದರು.

‘ಪ್ರಕರಣದ ಎಲ್ಲ ಐವರು ಆರೋಪಿಗಳನ್ನು ಇಲಾಖೆ ತಕ್ಷಣ ಅಮಾನತು ಮಾಡಿತ್ತು. ಜಾಮೀನು ಪಡೆದು ಜೈಲಿನಿಂದ ಹೊರಬಂದ ಸಿಬ್ಬಂದಿ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ)ಯಿಂದ ಅಮಾನತು ಆದೇಶಕ್ಕೆ ತಡೆ ತಂದಿದ್ದಾರೆ. ಆ ಪೈಕಿ ಶೀಲಾ, ರವಿಕುಮಾರ್ ಮರಿಗೌಡರ್, ಸ್ವಪ್ನಾ ಅವರು ಮತ್ತೆ ಅದೇ ಕಚೇರಿಯ, ಅದೇ ಹುದ್ದೆಗೆ ಮರಳಿದ್ದಾರೆ. ದೂರು ನೀಡಿದ ನಂತರ ಇಲಾಖೆ ನನಗೆ ವ್ಯಾಪಾರಕ್ಕೆ ಲೈಸೆನ್ಸ್ ನೀಡಿದೆ. ಭ್ರಷ್ಟ ಸಿಬ್ಬಂದಿ ಅದೇ ಹುದ್ದೆಯಲ್ಲಿ ಮುಂದುವರಿದಿದ್ದರಿಂದ ನನಗೆ ನ್ಯಾಯ ಸಿಗುವುದು ಅನುಮಾನ’ ಎಂದು ಅವರು ಅಳಲು ತೋಡಿಕೊಂಡರು.

‘ಅಮಾನತುಗೊಂಡ ಸಿಬ್ಬಂದಿಯನ್ನು ಈ ಹಿಂದೆ ಸೇವೆ ಸಲ್ಲಿಸಿದ ಹುದ್ದೆಗೆ ನಿಯೋಜಿಸಬಾರದು. ಅವರನ್ನು ನಾನ್ ಎಕ್ಸಿಕ್ಯುಟಿವ್ ಹುದ್ದೆಯಲ್ಲಿ ಪುನರ್ ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು 2014ರಲ್ಲಿ ಸರ್ಕಾರ ಹೊರಡಿಸಿದ ಸುತ್ತೋಲೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ’ ಎಂದು ಅವರು ವಿವರಿಸಿದರು.

ಇದೇ ಸಂದರ್ಭ ಅವರು ಭ್ರಷ್ಟ ಸಿಬ್ಬಂದಿಯೊಂದಿಗೆ ಮಾತುಕತೆ ನಡೆಸಿದ ಆಡಿಯೊ ತುಣುಕುಗಳನ್ನು ಬಿಡುಗಡೆ ಮಾಡಿದರು.

‘ಭ್ರಷ್ಟಾಚಾರ ನಿರ್ಮೂಲನೆಗಾಗಿ ಲೋಕಾಯುಕ್ತ ಅಧಿಕಾರಿಗಳು ಯೋಜಿತ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿ, ಸಾಕ್ಷ್ಯ ಕಲೆಹಾಕುತ್ತಾರೆ. ದಾಳಿ ವೇಳೆ ಲಂಚದ ಹಣದ ಸಮೇತ ಸಿಕ್ಕು, ಬಂಧನಕ್ಕೆ ಒಳಗಾದ ಅಧಿಕಾರಿಗಳು ಮತ್ತೆ ಅದೇ ಊರಿನಲ್ಲಿ, ಅದೇ ಹುದ್ದೆಯಲ್ಲಿ ಮುಂದುವರಿದರೆ ಸಾಕ್ಷ್ಯ ನಾಶ ಮತ್ತು ದೂರುದಾರರಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಈ ರೀತಿಯಾದರೆ ಜನರಿಗೆ ಲೋಕಾಯುಕ್ತದ ಮೇಲಿನ ನಂಬಿಕೆ ದೂರವಾಗುವ ಸಾಧ್ಯತೆಯೂ ಇದೆ’ ಎಂದು ಲೋಕಾಯುಕ್ತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಶಾಸಕ ಯತ್ನಾಳ್ ಆರೋಪಗಳಿಗೆ ಉತ್ತರಿಸಲಿ’

ಬೆಳಗಾವಿ: ‘ಬಿಜೆಪಿ ಶಾಸಕರೇ ಆಗಿರುವ ಬಸನಗೌಡ ಪಾಟೀಲ ಯತ್ನಾಳ್ ಅವರು ಸದನದ ಒಳಗೆ ಮತ್ತು ಹೊರಗೆ ಬಿ.ಎಸ್. ಯಡಿಯೂರಪ್ಪ, ಅವರ ಮಗ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಬಸವರಾಜ ಬೊಮ್ಮಾಯಿ ವಿರುದ್ಧ ಮಾಡಿರುವ ಆರೋಪಗಳ ಬಗ್ಗೆ ಬಿಜೆಪಿ ನಾಯಕರು ಮೊದಲು ಉತ್ತರ ನೀಡಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

‘ಯತ್ನಾಳ್ ತಮ್ಮ ಪಕ್ಷದವರ ವಿರುದ್ಧವೇ ಮಾಡಿರುವ ಆರೋಪಗಳು ಗಂಭೀರ ಸ್ವರೂಪದ್ದಾಗಿವೆ. ಇದಕ್ಕೆ ಉತ್ತರ ನೀಡಬೇಕಾಗಿರುವುದು ರಾಜ್ಯ ಬಿಜೆಪಿ ನಾಯಕರ ಕರ್ತವ್ಯ’ ಎಂದಿದ್ದಾರೆ.

ಕೆ–ಸೆಟ್ ಪರೀಕ್ಷೆ ಜ.13ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಹಾಯಕ ಪ್ರಾಧ್ಯಾಪಕರ ನೇಮಕಾತಿಗಾಗಿ ನಡೆಸುವ ಅರ್ಹತಾ ಪರೀಕ್ಷೆಯನ್ನು (ಕೆ–ಸೆಟ್) ಡಿ.31ರ ಬದಲಿಗೆ ಜನವರಿ 13ರಂದು ನಡೆಸಲಿದೆ.

ಈ ವಿಷಯವನ್ನು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇದಲ್ಲದೆ, ಕಲಬುರಗಿ ಮತ್ತು ವಿಜಯಪುರ ಜಿಲ್ಲೆಗಳನ್ನು ತಮ್ಮ ಪರೀಕ್ಷಾ ಕೇಂದ್ರಗಳಾಗಿ ಆಯ್ಕೆ ಮಾಡಿಕೊಂಡಿದ್ದ ಅಭ್ಯರ್ಥಿಗಳು ಕ್ರಮವಾಗಿ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಬೇಕು.

ಧಾರವಾಡ ಜಿಲ್ಲಾ ಪರೀಕ್ಷಾ ಕೇಂದ್ರಗಳಿಗೆ ಹೆಚ್ಚುವರಿಯಾಗಿ ಹಾವೇರಿ ಮತ್ತು ಮೈಸೂರು ಜಿಲ್ಲಾ ಕೇಂದ್ರಗಳಿಗೆ ಮಂಡ್ಯ ಪರೀಕ್ಷಾ ಕೇಂದ್ರಗಳನ್ನು ಸೇರಿಸಲಾಗಿದೆ.

ಇವು ಬಿಟ್ಟು ಉಳಿದ ಜಿಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ ಎಂದು ಅವರು ವಿವರಿಸಿದ್ದಾರೆ.

ಅಭ್ಯರ್ಥಿಗಳಿಗೆ ತೊಂದರೆ

ಕಲಬುರಗಿ: ಕೆ–ಸೆಟ್ ಪರೀಕ್ಷಾ ಕೇಂದ್ರ ಬೆಂಗಳೂರಿಗೆ ಸ್ಥಳಾಂತರ ಆಗಿರುವುದಕ್ಕೆ ಜಿಲ್ಲೆಯ ಅಭ್ಯರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಈ ಹಿಂದೆ ಜಿಲ್ಲೆಯಲ್ಲಿ ನಡೆದ ಕೆಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬ್ಲೂಟೂತ್ ಸಾಧನ ಬಳಸಿ ಬರೆದ ಅಕ್ರಮ ಪ್ರಕರಣಗಳ ಬಿಸಿ ಇದೀಗ ಕೆ–ಸೆಟ್ ಪರೀಕ್ಷೆ ಮೇಲೂ ಬಿದ್ದಿದೆ.

‘ದೂರದ ಬೆಂಗಳೂರಿಗೆ ಹೋಗಿ ಪರೀಕ್ಷೆ ಬರೆಯಲು ನಾಲ್ಕೈದು ಸಾವಿರ ರೂಪಾಯಿ ಖರ್ಚಾಗುತ್ತದೆ’ ಎಂದು ಅಭ್ಯರ್ಥಿಗಳು ಅಳಲು ತೋಡಿಕೊಂಡಿದ್ದಾರೆ. ‘ಬೆಂಗಳೂರು ಜಿಲ್ಲೆಯ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಕಲಬುರಗಿ ಕೇಂದ್ರದ ಅಭ್ಯರ್ಥಿಗಳಿಗೆ ಎಲ್ಲ ವ್ಯವಸ್ಥೆ ಮಾಡಲಾಗುವುದು. ಸದ್ಯ ಪರೀಕ್ಷಾ ಕೇಂದ್ರವನ್ನು ಕಲಬುರಗಿಗೆ ಮತ್ತೆ ಸ್ಥಳಾಂತರಿಸಲು ಸಾಧ್ಯವಿಲ್ಲ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ರೈತರ ಸಾಲ ಮನ್ನಾ ಮಾಡದಿದ್ದರೆ ಹೋರಾಟ’

ಒಂದನೇ ಪುಟದಿಂದ...

‘ಅಲ್ಪಸಂಖ್ಯಾತರಿಗೆ ₹10ಸಾವಿರ ಕೋಟಿ ಕೊಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಅದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಆದರೆ, ರೈತರ ಪಾಡೇನು? ಮುಸ್ಲಿಮರನ್ನು ತೃಪ್ತಿಪಡಿಸುವ ಕೆಲಸ ಮಾಡುವ ಬದಲಿಗೆ ಅನ್ನದಾತರ ನೆರವಿಗೆ ಬರಬೇಕಿತ್ತು’ ಎಂದರು.

‘ಚಳಿಗಾಲದ ಅಧಿವೇಶನ ಮುಗಿದ ನಂತರ ಮುಖಂಡರೆಲ್ಲ ಜೊತೆ ಸೇರಿ ರಾಜ್ಯದಾದ್ಯಂತ ಹಳ್ಳಿ–ಪಟ್ಟಣಗಳಿಗೆ ಸಂಚರಿಸಿ ಹೋರಾಟ ಮಾಡುವೆ. ಸರ್ಕಾರ ಕೆಳಗಿಳಿಸುವವರೆಗೆ ಶ್ರಮಿಸುವುದಿಲ್ಲ. ನನ್ನೊಂದಿಗೆ ನೀವೂ ಬನ್ನಿ’ ಎಂದು ಜನರಿಗೆ ಕರೆ ಕೊಟ್ಟರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ‘ಸಿದ್ದರಾಮಯ್ಯ ಅವರು ಅಧಿವೇಶನಕ್ಕೆ ಬಂದು ಗಾಳಿ ಬಡಿದಂತೆ ಕೂರುತ್ತಾರೆ. ಕಾಂಗ್ರೆಸ್ ನಾಯಕರು ಅವರನ್ನು ಯಾರದ್ದಾದರೂ ಬಳಿ ಕರೆದೊಯ್ದು ಗಾಳಿ ಬಿಡಿಸಬೇಕಿದೆ’ ಎಂದರು.

‘ಬರ ಪರಿಹಾರವಾಗಿ ಪ್ರತಿ ಎಕರೆಗೆ ₹25 ಸಾವಿರ ನೀಡುವಂತೆ ಆಗ್ರಹಿಸಿದ್ದೇವೆ. ಆದರೆ, ಸಿದ್ದರಾಮಯ್ಯ ಮುಲ್ಲಾಗಳನ್ನು ಮೆಚ್ಚಿಸಲು ಮುಂದಾಗಿದ್ದಾರೆ’ ಎಂದು ಕಿಡಿ ಕಾರಿದರು.

‘ರಾಜ್ಯದಲ್ಲಿ 60 ರೀತಿಯ ತೆರಿಗೆಗಳನ್ನು ಹೆಚ್ಚಿಸಿದ್ದಾರೆ. ₹2,500 ಕೋಟಿ ತೆರಿಗೆ ಹಣ ಈಗಾಗಲೇ ಬಂದಿದೆ. ಹಾಲಿಗೆ ₹3, ಮದ್ಯಕ್ಕೆ ₹5 ಹೆಚ್ಚಿಸಿದ್ದಾರೆ. ನಿಮ್ಮ ದುಡ್ಡನ್ನೇ ತೆಗೆದುಕೊಂಡು ನಿಮಗೇ ಉಚಿತ ಕೊಟ್ಟಿದ್ದೇವೆ ಎನ್ನುತ್ತಾರೆ. ಈ ಉಚಿತ ಕೊಡುಗೆ ಎನ್ನುವುದೇ ಮೋಸ’ ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮುಖಂಡರಾದ ಕೆ.ಎಸ್.ಈಶ್ವರಪ್ಪ, ಗೋವಿಂದ ಕಾರಜೋಳ, ಬಿ.ಶ್ರೀರಾಮುಲು, ಎನ್.ರವಿಕುಮಾರ, ಮಹಾಂತೇಶ ಕವಟಗಿಮಠ ಮಾತನಾಡಿದರು. ಜಿಲ್ಲೆಯ ಬಿಜೆಪಿಯ ಎಲ್ಲ ಶಾಸಕರು, ಮುಖಂಡರೂ ಉಪಸ್ಥಿತರಿದ್ದರು.

ಕಾಪು: ಲೀಲಾಧರ ಶೆಟ್ಟಿ ದಂಪತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಲೀಲಾಧರ ಶೆಟ್ಟಿ, ವಸುಂಧರಾ ಶೆಟ್ಟಿ

ಕಾಪು (ಉಡುಪಿ ಜಿಲ್ಲೆ): ರಂಗ ಕಲಾವಿದ, ಸಮಾಜ ಸೇವಕ ಕೆ.ಲೀಲಾಧರ ಶೆಟ್ಟಿ (68) ಹಾಗೂ ವಸುಂಧರಾ ಶೆಟ್ಟಿ (58) ದಂಪತಿ ಮಂಗಳವಾರ ತಡರಾತ್ರಿ ಮನೆಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ದತ್ತು ಪುತ್ರಿ ಮನೆಬಿಟ್ಟು ಹೋಗಿದ್ದಕ್ಕೆ ತೀವ್ರವಾಗಿ ಮನನೊಂದಿದ್ದ ದಂಪತಿ ಆತ್ಮಹತ್ಯೆಗೆ ಶರಣಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಬುಧವಾರ ಮೃತರ ಅಂತ್ಯಕ್ರಿಯೆ ಕರಂದಾಡಿಯ ತೋಟದ ಮನೆಯಲ್ಲಿ ನೆರವೇರಿತು. ಅಂತ್ಯಸಂಸ್ಕಾರಕ್ಕೂ ಮುನ್ನ ಕಾಪು ಪಟ್ಟಣದಲ್ಲಿ ಪಾರ್ಥಿವ ಶರೀರಗಳನ್ನು ಮೆರವಣಿಗೆ ಮೂಲಕ ಕೊಂಡೊಯ್ದು ಮಜೂರು ಶಾಲೆಯ ಬಳಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ವರ್ತಕರು ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಮೃತರಿಗೆ ಗೌರವ ಸಲ್ಲಿಸಿದರು.

ಕಾಪು ಪಟ್ಟಣದಲ್ಲಿ ಅಘೋಷಿತ ಬಂದ್ ವಾತಾವರಣ ನಿರ್ಮಾಣ ಆಗಿತ್ತು. ಕಲೆ, ಸಂಸ್ಕೃತಿ, ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದ ಲೀಲಾಧರ ಶೆಟ್ಟಿ ‘ಲೀಲಣ್ಣ’ ಎಂದೇ ಕಾಪು ಭಾಗದಲ್ಲಿ ಪ್ರಸಿದ್ಧಿ ಪಡೆದಿದ್ದರು. ಕಾಪು ರಂಗ ತರಂಗ ನಾಟಕ ತಂಡ ಕಟ್ಟಿಕೊಂಡು ತಿರುಗಾಟ ನಡೆಸುತ್ತಿದ್ದರು.

ಕಾಪು ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಹಾಗೂ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಒಮ್ಮೆ ಮಜೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು – 560027
ಸಂಖ್ಯೆ: ಬೆಮಸಾ/ಕೇಕ/ಕಾಇ/ಕಾನಿಅ/1281/2023–24 ದಿನಾಂಕ: 12.12.2023
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 20/2023–24
ಬೆಂ.ಮ.ಸಾ.ಸಂಸ್ಥೆಯ ಶಾಂತಿನಗರ ಸಾರಿಗೆ ಸಂಕೀರ್ಣದಲ್ಲಿ ಹೌಸ್‌ಕೀಪಿಂಗ್ ನಿರ್ವಹಣೆಯನ್ನು ನಿರ್ವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಕಂಪನಿಯಿಂದ ಈ ಕಾಮಗಾರಿಗಾಗಿ e-proc ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ ಮೊತ್ತ: ರೂ. 2,11,000/-. ಈ ಕಾಮಗಾರಿಗಾಗಿ e-proc ಬಿಡುಗಡೆಯಾಗುವ ದಿನಾಂಕದಂದು ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್: kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.
(1) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ: 23.12.2023. (2) ಟೆಂಡರ್ ತೆರೆಯುವ ದಿನಾಂಕ: 27.12.2023.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಬೆ.ಮ.ಸಾ.ಸಂಸ್ಥೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN - U04010KA2002SGC030438
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು, ತುಮಕೂರು ವೃತ್ತ ಕಛೇರಿ ಸಂಕೀರ್ಣಕ್ಕೆ ಯಾಂತ್ರೀಕೃತ ಹೌಸ್ ಕೀಪಿಂಗ್ ಸೇವೆಗಳು ಮತ್ತು ಇತರೆ ಸಂಬಂಧಿತ ಸೇವೆಗಳನ್ನು ನೀಡುವ ಕಾಮಗಾರಿಗಾಗಿ ಕೆಪಿಪಿಪಿ ಪೋರ್ಟಲ್ ಮೂಲಕ (ದ್ವಿಲಕೋಟೆ ಪದ್ಧತಿ) ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್ ವಿಚಾರಣೆ ಸಂ. ಮುಇಂವಿ/ಚಿವ/ಕಾನಿಇಂ(ಸಿ)/2023–24/ಸಿಸಿಸಿಟಿ/01 ಟೆಂಡರ್‌ಗಿಟ್ಟ ಮೊತ್ತ : ರೂ. 23,65,200/– ಇ.ಎಂ.ಡಿ ಮೊತ್ತ : ರೂ. 59,150/–
ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಅಡಿಯಲ್ಲಿ ದಿನಾಂಕ : 13–12–2023ರ ನಂತರ ತಮ್ಮ ಬಳಕೆ ಐ.ಡಿ ರಿಜಿಸ್ಟರ್ ಮಾಡಿ ಲಾಗಿನ್ ಆಗುವ ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ
ಸಹಿ/– ಮುಖ್ಯ ಇಂಜಿನಿಯರ್ (ವಿ), ಕಾ & ಪಾ ವಲಯ, ಬೆವಿಕಂ, ಚಿತ್ರದುರ್ಗ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಭಾರತೀಯ ರೈಲ್ವೆ
ಸಾರ್ವಜನಿಕ ಪ್ರಕಟಣೆ
ಭಾರತೀಯ ರೈಲ್ವೆಯ ಸೂಚಿತ ವಲಯದಡಿ ಪೂರ್ಣಗೊಂಡ ವಿಭಾಗದಲ್ಲಿ ಬರುವ 25 ಸಾವಿರ ವೋಲ್ಟ್ 50 ಎಚ್.ಝಡ್ ಎ.ಸಿ ರಲ್ಲಿ ಇರುವ ರೈಲ್ವೆ ಮಾರ್ಗದ ಮತ್ತು ಆವರಣದ ಎಲ್ಲ ಬಳಕೆದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ನಿರ್ದಿಷ್ಟಪಡಿಸಿದ ವಿಭಾಗಕ್ಕೆ ಪ್ರತಿಯಾದ ದಿನಾಂಕದಂದು ಅಥವಾ ನಂತರ ಕಂಬಗಳ ಮೇಲೆ ಎಳೆಯಲಾದ ತಂತಿಗಳಲ್ಲಿ ವಿದ್ಯುತ್ ಪ್ರವಹಿಸಲಾಗುವುದು. ಅಂದಿನಿಂದ ಮತ್ತು ಅದೇ ದಿನಾಂಕದಿಂದ ಕಂಬಗಳಲ್ಲಿ ಮೇಲೆ ಎಳೆಯಲಾದ ಮಾರ್ಗಗಳನ್ನು ಎಲ್ಲ ಕಾಲದಲ್ಲೂ ‘ಜೀವಂತ’ ಎಂದು ಪರಿಗಣಿಸಲಾಗುವುದು ಮತ್ತು ಯಾವುದೇ ಅನಧಿಕೃತ ವ್ಯಕ್ತಿ ಸದರಿ ಮೇಲೆ ಎಳೆಯಲಾದ ವಿದ್ಯುತ್ ಮಾರ್ಗಗಳ ಸಮೀಪ ಸುಳಿಯುವಂತಿಲ್ಲ ಅಥವಾ ಕೆಲಸ ಮಾಡುವಂತಿಲ್ಲ.

ನಂ.	ವಿಭಾಗ	ದಿನಾಂಕ
1	ಕಡೂರು Km Ch 00/000.00 to ಚಿಕ್ಕಮಗಳೂರು (Incl.) Km Ch 46/125.00	20.12.2023
2	ಹಾಸನ (Incl.) Km Ch 00/000.00 to ಸಕಲೇಶಪುರ (Incl.) Km Ch 44/000.00	20.12.2023
3	ಸುಬ್ರಮಣ್ಯ ರೋಡ್ (Incl.) Km Ch 95/000 to ಕಬಕ ಪುತ್ತೂರು (Incl.) Ch 138/000.00	20.12.2023
4	ಹೊಳೆನರಸೀಪುರ (Excl.) Km Ch 88/000.00 to ಹಾಸನ (Incl.) (ASK End) Km Ch 120/500.00	20.12.2023
5	ಹಾಸನ (Incl) Ch 00/000 to HPCL (ಹಾಸನ) ಸೈಡಿಂಗ್ Km Ch 2/000.00	20.12.2023
6	ಹಾಸನ (Incl) Km Ch 00/000 to ಹಾಸನ ಯಾರ್ಡ್ ಯಶವಂತಪುರ ಎಂಡ್ Km Ch 164/500.00	20.12.2023
7	ಮೈಸೂರ್ ನ್ಯೂ ಗೂಡ್ಸ್ ಟರ್ಮಿನಲ್ - ಎಮ್‌ಎನ್‌ಜಿಟಿ (Excl.) Km Ch 00/000 to ಎಮ್ ಬಿ ಬಿಸಿ (Incl.) ಬೈ ಪಾಸ್ Km Ch 02/000	20.12.2023

ಪ್ರಾಜೆಕ್ಟ್ ಇನ್ ಚಾರ್ಜ್ ಆರ್‌ಐಟಿಇಎಸ್ ಲಿಮಿಟೆಡ್

ಕರ್ನಾಟಕ ಸರಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ
ಟೆಂಡರ್ ಪ್ರಕಟಣೆ ಸಂ:ಕಾಇಂ/ಪಂರಾಇಂವಿಉ/ಟೆಂಡರ್ ಪ್ರಕಟಣೆ ನಂ 20/2023–24:ಜೆಇ–1/2552 ದಿನಾಂಕ: 12–12–2023.
ಟೆಂಡರ್ ಪ್ರಕಟಣೆ
(ಇ–ಪೋರ್ಟಲ್ ಪದ್ದತಿಯಲ್ಲಿ e- portal ನಡಿಯಲ್ಲಿ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರವರಿಂದ ತಾಲೂಕು ಪಂಚಾಯತ್ ನಿಧಿ–3 ರ ಲೆಕ್ಕ ಶೀರ್ಷಿಕೆ: 2515–00–001–0–97/090 ಯೋಜನೆಯಡಿಯಲ್ಲಿ ಈ ಕೆಳಗಿನ ಕಾಮಗಾರಿಗಳಿಗೆ ಇ–ಪೋರ್ಟಲ್ ಪದ್ಧತಿಯಲ್ಲಿ (Standard Tender Documents for Procurement of Goods) ನ ನಿಭಂದನೆಗೊಳ ಪಟ್ಟಂತೆ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ದ್ವಿ ಲಕೋಟೆಯಲ್ಲಿ ಟೆಂಡರ್ ಅನ್ನು ಅಹ್ವಾನಿಸಲಾಗಿದ್ದು, ಇ–ಪೋರ್ಟಲ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal WEB site https://www.kppp.karnataka.gov.in ಆನ್‌ಲೈನ್ ಮೂಖಾಂತರ ಸ್ವೀಕರಿಸಲಾಗುವುದು.
ಕಾಮಗಾರಿಯ ವಿವರ: ಕುಂದಾಪುರ ನಗರ ಪ್ರದೇಶ ವ್ಯಾಪ್ತಿಯ ತಾಲೂಕು ಪಂಚಾಯತ್ ಕಛೇರಿ ಕಟ್ಟಡ ನಿವೇಶನದ ಹಿಂಭಾಗದ ಸ.ನಂ. 192/1ಎ3ಬಿ1ಎ ರ ಸ್ಥಳದಲ್ಲಿ ಕುಂದಾಪುರ ತಾಲೂಕು ಪಂಚಾಯತ್ ಅಧಿಕಾರಿ/ಸಿಬ್ಬಂದಿಗಳ ವಸತಿ ಸಮುಚ್ಚಯ ನಿರ್ಮಾಣ. ಟೆಂಡರಿಗಿಟ್ಟ ಅಂದಾಜು ಮೊತ್ತ ರೂ.200.00 ಲಕ್ಷ, ಇ.ಎಂ.ಡಿ. ಮೊತ್ತ ರೂ.3,00,000.00, ಗುತ್ತಿಗೆದಾರರ ಅರ್ಹತೆ: ಕ್ಲಾಸ್–3 ಹಾಗೂ ಮೇಲ್ಪಟ್ಟ ಗುತ್ತಿಗೆದಾರರು
(1) ಟೆಂಡರ್ ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 13–12–2023 ರಿಂದ 27–12–2023ರ 4.00 (PM) ಗಂಟೆಯವರೆಗೆ. (2) ಟೆಕ್ನಿಕಲ್ ಬಿಡ್ಡುಗಳನ್ನು ತೆರೆಯುವ ದಿನಾಂಕ: 28–12–2023 ರ 4.30 (PM) ಗಂಟೆಯ ನಂತರ. (3) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 01–01–2024 ರ 11.00 (AM) ಗಂಟೆಯ ನಂತರ.
ಇನ್ನಿತರೆ ನಿಬಂಧನೆಗಳು, ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್ ಸೈಟ್ https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಚೇರಿಯುವರಿಂದ ಪಡೆಯಬಹುದಾಗಿದೆ.
ವಾಸಾಇ/ಸನಿಉ/ಕೆಎಸ್‌ಎಂಸಿಎ/532/23–24 ದಿ: 13.12.2023
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ
Tel. No.: 08338-275101 E-Mail:ee.rdws.ckd@gmail.com
ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲು3&4: ಟೆಂಡರ್: 2023–24/16/2017 ದಿನಾಂಕ:13/12/2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-1,2,3 &4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಚು ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪ್ರೊಟಾಲ್ (Viz., http://eproc.karnataka.Gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.
ಕ್ರಮ ಸಂಖ್ಯೆ:1:ಕಾಮಗಾರಿಯ ವಿವರ:Providing Operation and Maintenance to Water Supply Scheme to 27 Villages of Hukkeri Taluka of Belagavi District (KUWS and DB Handed Over Scheme) 1st Year 2023-24(INDENT NO.4300CALL-3),ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):79.92, ಇ.ಎಮ್.ಡಿ: 160000/–, ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ (ಮಳೆಗಾಲ ಸೇರಿ): 1 ವರ್ಷಗಳು.
1) ಟೆಂಡರ ಪೂರ್ವಬಾವಿ ಸಭೆ:– 15–12–2023 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ, 2)ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:20–12–2023 ಸಾಯಂಕಾಲ 17.00 ಘಂಟೆವರೆಗೆ, 3)ಇ–ಪ್ರೊಕ್ಯೂರ್‌ಮೆಂಟ್ ತಾಂತಿಕ ಬಿಡ್ಡನ್ನು ತೆರೆಯುವ ದಿನಾಂಕ:21–12–2023 ಸಂಜೆ 17.30 ಘಂಟೆ ನಂತರ
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.
DIPR/BGM/RO-NO-763/KSMCA/2023-24

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
ದೂರವಾಣಿ: 080–23407011–25, ವೆಬ್‌ಸೈಟ್:www.kssidc.co.in ಇ–ಮೇಲ್: kssidcho@vsnl.com
ಸಂಖ್ಯೆ:ಇಎನ್‌ಜಿ:ಅ.ಅ:ಇಪಿ–76: ಹೌಸ್‌ಕೀಪಿಂಗ್ ಸರ್ವಿಸಸ್:2ನೇ ಕರೆ:ರಾಜಾಜಿನಗರ:2023–24 ದಿನಾಂಕ 13.12.2023
ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ
ವಿಷಯ: Providing House Keeping Services for Corporate Office, A.O. Building and S.J. Building, KSSIDC at Industraial Estate, Rajajinagar, Bangalore (2nd Call).
ಉಲ್ಲೇಖ: ನೋಟಿಫಿಕೇಷನ್ ಸಂಖ್ಯೆ: ಇಎನ್‌ಜಿ:ಅ.ಅ:ಇಪಿ–76: ಹೌಸ್‌ಕೀಪಿಂಗ್ ಸರ್ವಿಸಸ್:ರಾಜಾಜಿನಗರ:2023–24 ದಿನಾಂಕ 28.11.2023
ಬಿಡ್ಡುದಾರರ ಮಾಹಿತಿಗಾಗಿ ಮೇಲಿನ ಉಲ್ಲೇಖದಲ್ಲಿ ಪ್ರಕಟಣೆಗೊಂಡಿರುವ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು (Online submission) ನಿಗದಿಪಡಿಸಿದ ಕೊನೆಯ ದಿನಾಂಕವನ್ನು 21.12.2023, 17:30 ಗಂಟೆಯವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.kppp.karnataka.gov.in ಮುಖಾಂತರ ಪಡೆಯಬಹುದು.
ವಾಸಾಸಂಇ/ವಾಪ್ರ/ಜಿಎ/2546/2023–24
ಸಹಿ/– ಅಧೀಕ್ಷಕ ಅಭಿಯಂತರರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂಖ್ಯೆ: EE/RWS&SD/HPT/e-tender/Tech/2023-24/816 ದಿನಾಂಕ: 11–12–2023
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ–04/2023–24
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು 2022–23ನೇ ಸಾಲಿನ ಅನುಮೋದನೆಯಾದ ಕೂಡ್ಲಿಗಿ ತಾಲ್ಲೂಕಿನ ಜೆ.ಜೆ.ಎಂ ಯೋಜನೆಯಡಿ 12 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ: 11.12.2023 ರಿಂದ 18.12.2023ರ ಸಾಯಂಕಾಲ 05.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ: 19.12.2023 ರಂದು ಸಾಯಂಕಾಲ 05.05 ಗಂಟೆಗೆ ಹಾಗೂ ದಿನಾಂಕ: 16.12.2023 ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ, ವಿಭಾಗ, ಹೊಸಪೇಟೆಯಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.kppp.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.
ವಾ.ಸಾ.ಇ./ವಿಜಯನಗರ/258/2023–24/ದೇಶಪಾಂಡೆ ಪಬ್ಲಿಸಿಟಿ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಬಳ್ಳಾರಿ ವಿಭಾಗ : ಬಳ್ಳಾರಿ.
ಸಿರುಗುಪ್ಪ ರಸ್ತೆ, ಎಸ್.ಪಿ ಸರ್ಕಲ್, ಬಳ್ಳಾರಿ
ಸಂಖ್ಯೆ: ಕಕರಸಾನ/ಕಾನಅ/ಕಾವಿಬ/ತಾಂತ್ರಿಕ/516/2023–24 ದಿನಾಂಕ:07–12–2023
ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ: 10 / 2023–24 Through GOK e-procurement platform www.kppp.karnataka.gov.in
ಕಾಮಗಾರಿ ವಿವರ 1) ಯಲಬುರ್ಗಾ ತಾಲ್ಲೂಕಿನ ಹಿರೇವಂಕಲಕುಂಟಾ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು ರೂ 300.00 ಲಕ್ಷಗಳು.
ಲೆಕ್ಕ ಶೀರ್ಷಿಕೆ 1) 2023–24 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. 50% ಯೋಜನೆ ಅನುದಾನದ ಅಡಿಯಲ್ಲಿ 2) 2023–24 ನೇ ಸಾಲಿನ ಬಂಡವಾಳ ವೆಚ್ಚ 50% ಯೋಜನೆ ಅನುದಾನದ ಅಡಿಯಲ್ಲಿ
ಟೆಂಡರಿಗಿಟ್ಟ ಮೊತ್ತ ಕನಷ್ಠ ರೂ. 300.00 ಲಕ್ಷ ಗರಿಷ್ಠ ರೂ. 300.00 ಲಕ್ಷ
ಗುತ್ತಿಗೆದಾರರ ಅರ್ಹತೆ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ
ಟೆಂಡರ್‌ನ ಸ್ಪಷ್ಟೀಕರಣದ ಅಂತಿಮ ದಿನಾಂಕ 12–01–2024 ಸಾಯಂಕಾಲ 5:00 ಗಂಟೆಯವರೆಗೆ
ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 16–01–2024 ಸಾಯಂಕಾಲ 17.00 ಗಂಟೆಯವರೆಗೆ
ಟೆಂಡರ್ ಬಿಡ್ ತೆರೆಯುವ ದಿನಾಂಕ 17–01–2024 ಮುಂಜಾನೆ 11:00 ಗಂಟೆಗೆ
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಬಳ್ಳಾರಿ ಮೋ. ನಂ 7760992035, 9972039797 / 08392–294828
ಅಂತರ್‌ಜಾಲ ತಾಣದ ವಿಳಾಸ ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ ದಿನಾಂಕ 15–12–2023 ರ ನಂತರ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ. www.kppp.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕ.ಕ.ರ.ಸಾ.ನಿಗಮ, ಕಾಮಗಾರಿ ವಿಭಾಗ
ಡಿಐಪಿಆರ್/ಬಳ್ಳಾರಿ/535/ಎಂಸಿಎ/2022–23

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.1, ಸಕಲೇಶಪುರ, ಹಾಸನ ಜಿಲ್ಲೆ. ದೂರವಾಣಿ ಸಂಖ್ಯೆ:08173–244454
No:EE/VJNL/YPD-1/SKP/AE-5 /2023-24/997 Dated: 13.12.2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಸಕಲೇಶಪುರ ವಿಭಾಗ ವ್ಯಾಪ್ತಿಯಲ್ಲಿ ಬರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ಉಪ ವಿಭಾಗ ನಂ.1, ನಂ.8, ನಂ.13, ವಿದ್ಯುತ್ ಉಪ ವಿಭಾಗ, ಸಕಲೇಶಪುರ, ಮತ್ತು ಉಪ ವಿಭಾಗ ನಂ.09, ಆಲೂರು ಕಛೇರಿಗೆ ಬಾಡಿಗೆ ಆಧಾರದಲ್ಲಿ ವಾಹನ ಪಡೆದುಕೊಳ್ಳುವ. ಕಾಮಗಾರಿಯನ್ನು ಎಕ ಲಕ್ಕೋಟೆ ಪದ್ದತಿಯಲ್ಲಿ Registered Travel Agency/Vehicle Owner. ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ https://kppp.karnataka. gov.in ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು. ಇಂಡೆಂಟ್ ಸಂಖ್ಯೆ, ಟೆಂಡರ್‌ಗಿಟ್ಟ ಕಾಮಗಾರಿಯ ಅಂದಾಜು ಮೊತ್ತ, ಇ.ಎಂ.ಡಿ ಮೊತ್ತ/ ಟೆಂಡರ್ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು (ತಾಂತ್ರಿಕ ಬಿಡ್) ಇ–ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.1 ಸಕಲೇಶಪುರ.
ವಾಸಾಸಂಇ/ಹಿಸನಿ/ಹಾಸನ/558/ಕೆಎಸ್‌ಎಂಸಿಎ/562/2023–24

ಭಾರತೀಯ ರೈಲ್ವೆ
25 ಕೆವಿ ಎಸಿ ಟ್ರ್ಯಾಕ್ಷನ್ ಪರಿಚಯ
“ರಸ್ತೆ ಬಳಕೆದಾರರಿಗೆ ಎಚ್ಚರಿಕೆ”
ಸಾರ್ವಜನಿಕರ ಮಾಹಿತಿಗಾಗಿ ಅಧಿಸೂಚಿಸುವುದೇನೆಂದರೆ, ಹೆಚ್ಚಿನ ಎತ್ತರದ ಭಾರವಿರುವ ವಾಹನ ‘ಜೀವಂತ’ ತಂತಿಗಳ ಸಂಪರ್ಕಕ್ಕೆ ಬರುವ ಅಥವಾ ಎಳೆದ ತಂತಿಗಳ ಅಪಾಯಕಾರಿ ಸಾಮೀಪ್ಯಕ್ಕೆ ಬರುವುದನ್ನು ತಡೆಗಟ್ಟುವ ದೃಷ್ಟಿಯಿಂದ ಭಾರತೀಯ ರೈಲ್ವೆಯ ಈ ಕೆಳಗಿನ ವಿಭಾಗಗಳ ಪ್ರತಿಯಾಗಿ ಉಲ್ಲೇಖಿಸಲಾದ ದಿನಾಂಕಗಳಂದು ಮತ್ತು ದಿನಾಂಕದಿಂದ 25 ಕೆ.ವಿ, 50 ಎಚ್.ಝಡ್ ಎ.ಸಿ. ಎಲೆಕ್ಟ್ರಿಲ್ ತಂತಿಗಳ ಎತ್ತರ ಮಾಪಕಗಳನ್ನು ಎಲ್ಲ ರೈಲು ಹಳಿ ದಾಟುವ ಸ್ಥಳ (ಲೆವೆಲ್ ಕ್ರಾಸಿಂಗ್)ಗಳಲ್ಲಿ ರಸ್ತೆ ಮಟ್ಟದಿಂದ ಸ್ಪಷ್ಟ ಎತ್ತರವಾದ 4.77 ಮೀಟರ್‌ಗಳದ್ದು ಮೇಲಕ್ಕೆ ಎತ್ತರಿಸಲಾಗುವುದು.

ನಂ.	ವಿಭಾಗ	ದಿನಾಂಕ
1	ಕಡೂರು Km Ch 00/000.00 to ಚಿಕ್ಕಮಗಳೂರು (Incl.) Km Ch 46/125.00	20.12.2023
2	ಹಾಸನ (Incl.) Km Ch 00/000.00 to ಸಕಲೇಶಪುರ (Incl.) Km Ch 44/000.00	20.12.2023
3	ಸುಬ್ರಮಣ್ಯ ರೋಡ್ (Incl.) Km Ch 95/000 to ಕಬಕ ಪುತ್ತೂರು (Incl.) Ch 138/000.00	20.12.2023
4	ಹೊಳೆನರಸೀಪುರ (Excl.) Km Ch 88/000.00 to ಹಾಸನ (Incl.) (ASK End) Km Ch 120/500.00	20.12.2023
5	ಹಾಸನ (Incl) Ch 00/000 to HPCL (ಹಾಸನ) ಸೈಡಿಂಗ್ Km Ch 2/000.00	20.12.2023
6	ಹಾಸನ (Incl) Km Ch 00/000 to ಹಾಸನ ಯಾರ್ಡ್ ಯಶವಂತಪುರ ಎಂಡ್ Km Ch 164/500.00	20.12.2023
7	ಮೈಸೂರ್ ನ್ಯೂ ಗೂಡ್ಸ್ ಟರ್ಮಿನಲ್ - ಎಮ್‌ಎನ್‌ಜಿಟಿ (Excl.) Km Ch 00/000 to ಎಮ್ ಬಿ ಬಿಸಿ (Incl.) ಬೈ ಪಾಸ್ Km Ch 02/000	20.12.2023

ವಾಹನಗಳಲ್ಲಿ ಸರಕು ತುಂಬುವ ಉದ್ದೇಶಕ್ಕಾಗಿ ಮೇಲೆ ಸ್ಪಷ್ಟಪಡಿಸಲಾದ ಎತ್ತರವನ್ನು ಗಮನಿಸುವಂತೆ ಮತ್ತು ರಸ್ತೆಯಲ್ಲಿ ಸಾಗುವ ವಾಹನಗಳ ಭಾರವು ಯಾವುದೇ ಸನ್ನಿವೇಶದಲ್ಲೂ ಎತ್ತರದ ಮಾಪಕದ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.
ವಿಪರೀತ ಎತ್ತರದ ಭಾರದಿಂದಾಗುವ ಅಪಾಯಗಳು ಕೆಳಕಂಡಂತಿವೆ :
i. ಎತ್ತರದ ಮಾಪಕಕ್ಕೆ ಅಪಾಯ ಮತ್ತು ರಸ್ತೆಗೆ ಹಾಗೂ ಮಾರ್ಗಕ್ಕೆ ಪದೇಪದೇ ಅಡಚಣೆ.
ii. ಸಾಗಿಸಲಾಗುವ ಸರಕು ಅಥವಾ ಸಲಕರಣೆಗಳಿಗೆ ಅಥವಾ ಸ್ವತಃ ವಾಹನಗಳಿಗೇ ಅಪಾಯ.
iii. ವಿದ್ಯುತ್ ಪ್ರವಹಿಸುವ ತಂತಿಯ ಸಾಮಿಪ್ಯಕ್ಕೆ ಬರುವ ಅಪಾಯ ಮತ್ತು ತಾಗಿದಲ್ಲಿ ಆಗ್ನಿ ಅನಾಹುತದ ಅಪಾಯ ಮತ್ತು ಜೀವಕ್ಕೆ ಅಪಾಯ.
ಪ್ರಾಜೆಕ್ಟ್ ಇನ್ ಚಾರ್ಜ್ ಆರ್‌ಐಟಿಇಎಸ್ ಲಿಮಿಟೆಡ್

'ಹುದ್ದೆ ಬದಲಿಸಿ ಅಥವಾ ಸ್ವಯಂ ನಿವೃತ್ತಿಗೆ ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ಕೆಲಸ ಕಾರ್ಯಗಳಿಂದ ಮಾನಸಿಕ ಒತ್ತಡ ಉಂಟಾಗಿ ಆರೋಗ್ಯ ತುಂಬಾ ಹದಗೆಟ್ಟಿದೆ. ಕಂದಾಯ ಪರಿವೀಕ್ಷಕ ಹುದ್ದೆಯಿಂದ ಸಮಾನ ಹುದ್ದೆಗೆ ಬದಲಾವಣೆ ಮಾಡಿ. ಇದು ಸಾಧ್ಯವಿಲ್ಲದಿದ್ದರೆ ಸ್ವಯಂ ನಿವೃತ್ತಿಗೆ ಪರಿಗಣಿಸಿ...'

ಬಿಬಿಎಂಪಿ ಪೂರ್ವ ವಲಯದ ಎಚ್‌ಬಿಆರ್ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿ ಕಚೇರಿಯಲ್ಲಿರುವ ಕಂದಾಯ ಪರಿವೀಕ್ಷಕ ಹೇಮಂತ್ ಕುಮಾರ್ ಅವರು ಬಿಬಿಎಂಪಿ ಆಡಳಿತ ವಿಶೇಷ ಆಯುಕ್ತರಿಗೆ ಸಲ್ಲಿಸಿರುವ ಮನವಿ ಇದು.

'ಹುದ್ದೆ ಬದಲಾವಣೆ ಅಥವಾ ಸ್ವಯಂ ನಿವೃತ್ತಿಗೆ ಪರಿಗಣಿಸುವ ಬಗ್ಗೆ' ಎಂಬ ವಿಷಯವಾಗಿ ಡಿಸೆಂಬರ್ 13ರಂದು ಪತ್ರ ಬರೆಯಲಾಗಿದೆ. ಈ ಪತ್ರದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಕೆಲಸ ಒತ್ತಡದಿಂದ ಆರೋಗ್ಯ ಹದಗೆಟ್ಟಿದೆ. ಮನೆಯಲ್ಲಿ ವಯಸ್ಸಾದ ತಾಯಿಯ ಕಾಳಜಿ ವಹಿಸಬೇಕಾಗಿದೆ. ನನಗೆ ಇತ್ತೀಚೆಗೆ ಸಕಾಲದಲ್ಲಿ ಸಾರ್ವಜನಿಕ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಕಚೇರಿ ಕೆಲಸಗಳು ವಿಳಂಬವಾಗುತ್ತಿವೆ. ಆದ್ದರಿಂದ ನನ್ನನ್ನು ಕಂದಾಯ ಪರಿವೀಕ್ಷಕ ಹುದ್ದೆಯಿಂದ ಸಮಾನ ಹುದ್ದೆ/ ಕಾರ್ಯನಿರ್ವಾಹಕವಲ್ಲದ ಹುದ್ದೆಗೆ ಬದಲಾವಣೆ ಮಾಡಿ ವರ್ಗಾಯಿಸಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಹುದ್ದೆ ಬದಲಾವಣೆಗೆ ಅವಕಾಶವಿಲ್ಲದ ಪಕ್ಷದಲ್ಲಿ ನನ್ನ ಮನವಿಯನ್ನು ಸ್ವಯಂ ನಿವೃತ್ತಿ ಎಂದು ಪರಿಗಣಿಸಿ ಅಂಗೀಕರಿಸಲು ತಮ್ಮಲ್ಲಿ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

ತುಷಾರ್ ಗಿರಿನಾಥ್ ಭರವಸೆ: 'ಕಂದಾಯ ವಿಭಾಗದ ಸಿಬ್ಬಂದಿ ಮೇಲೆ ಸಾಕಷ್ಟು ಒತ್ತಡವಾಗುತ್ತಿದೆ. ಚುನಾವಣೆ ಕೆಲಸದ ಜೊತೆಗೆ ಆಸ್ತಿ ಪರಿಶೀಲನೆ ಕೆಲಸದ ಗುರಿ ನೀಡಿರುವುದು ಮಾನಸಿಕ ಒತ್ತಡ ತಂದಿದೆ. ಇದನ್ನು ಪರಿಗಣಿಸಿ, ಕೆಲಸದ ಒತ್ತಡ ಕಡಿಮೆ ಮಾಡಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಡಿಸೆಂಬರ್ 7ರಂದು ಮನವಿ ಮಾಡಲಾಗಿದೆ. ಅವರು ಇದಕ್ಕೆ ಸ್ಪಂದಿಸಿ ಆಡಳಿತ, ಚುನಾವಣೆ, ಕಂದಾಯ ವಿಭಾಗದ ವಿಶೇಷ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ವಿಭಾಗಗಳಲ್ಲಿ ಕೆಲವು ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ. ಇದನ್ನು ನಿವಾರಿಸಬೇಕೆಂದು' ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತರಾಜ್ ಆಗ್ರಹಿಸಿದರು.

ಹಿಂದೆ ಆಗಿದ್ದ ತಪ್ಪು ಸರಿಪಡಿಸುತ್ತಿದ್ದೇವೆ: ರಾಮಲಿಂಗಾ ರೆಡ್ಡಿ

ಮನೆ, ಅಪಾರ್ಟ್‌ಮೆಂಟ್ ಶುಲ್ಕ ಕಡಿತ: ಡಿಕೆಶಿ

ಪ್ರಜಾವಾಣಿ ವಾರ್ತೆ

ವಿಧಾನಸಭೆ: 'ಮನೆ, ಅಪಾರ್ಟ್‌ಮೆಂಟ್‌ಗಳಿಗೆ ನಿರ್ಮಾಣದ ಹಂತದಲ್ಲಿ ಈಗ ವಿಧಿಸಲಾಗುತ್ತಿರುವ ವಿವಿಧ ಶುಲ್ಕಗಳನ್ನು ಕಡಿಮೆ ಮಾಡುವ ಬಗ್ಗೆ ನಮ್ಮ ಸರ್ಕಾರ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಿದೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರೇ ಕಾನೂನು ತಿದ್ದುಪಡಿ ಮಸೂದೆ ಕುರಿತು ವಿವರ ನೀಡಿದ ಅವರು, 'ನಿಯಮ ಉಲ್ಲಂಘಿಸಿದ ಕಟ್ಟಡಗಳಿಗೆ ಬಡ್ಡಿ ಸಹಿತ ಶುಲ್ಕ ವಸೂಲು ಮಾಡಲು ಹಿಂದಿನ ಸರ್ಕಾರ ಸುತ್ತೋಲೆ ಮೂಲಕ ಅವಕಾಶ ಕಲ್ಪಿಸಿತ್ತು. ಹೀಗೆ, ಶುಲ್ಕ ಬಡ್ಡಿ ಸಹಿತ ₹1,750 ಕೋಟಿ ವಸೂಲು ಮಾಡಲಾಗಿತ್ತು. ಇದನ್ನು ಪ್ರಶ್ನಿಸಿ, ಕೆಲವರು ಕೋರ್ಟ್ ಮೊರೆ ಹೋಗಿದ್ದರು. 'ಸುತ್ತೋಲೆ ಮೂಲಕ ಜಾರಿಗೊಳಿಸಿದ್ದು ಸರಿಯಲ್ಲ' ಎಂದು ಕೋರ್ಟ್ ಹೇಳಿತ್ತು. ಮಸೂದೆಗೆ ತಂದ ತಿದ್ದುಪಡಿಯನ್ನು ಕೋರ್ಟ್ ವಜಾಗೊಳಿಸಿತ್ತು. ವಸೂಲು ಮಾಡಿ, ಖರ್ಚು ಮಾಡಿಕೊಂಡ ದುಡ್ಡನ್ನು ವಾಪಸ್ ಕೊಡಬೇಕಾದ ಅನಿವಾರ್ಯ ಸೃಷ್ಟಿಯಾಗಿತ್ತು. ವಾಪಸ್ ಕೊಡದೇ ಇರುವಂತೆ ರಕ್ಷಣೆ ಪಡೆಯಲು ಈ ತಿದ್ದುಪಡಿ ತರಲಾಗಿದೆ' ಎಂದರು.

ಇದನ್ನು ಒಪ್ಪದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಎಸ್. ಸುರೇಶ್ ಕುಮಾರ್, ಸಿ.ಎನ್. ಅಶ್ವತ್ಥನಾರಾಯಣ ಅವರು, 'ನೀವು ತಿದ್ದುಪಡಿ ಮಾತ್ರ ಮಾಡಿಲ್ಲ. ಗರಿಷ್ಠ ಶೇ 35ರಷ್ಟು ದಂಡ ವಿಧಿಸಲು ಅವಕಾಶ ಕಲ್ಪಿಸಿದ್ದೀರಿ. ಎಲ್ಲ ಶುಲ್ಕವನ್ನು ಹೆಚ್ಚಿಸಿದ್ದೀರಿ. ನಿವೇಶನ ಅಳತೆಯ ಬದಲು ಕಟ್ಟಡಕ್ಕೆ ಶುಲ್ಕ ವಿಧಿಸಲು ಅನುವು ಮಾಡಿಕೊಟ್ಟಿದ್ದೀರಿ. ಈಗಲೇ ಬೆಂಗಳೂರಿನಲ್ಲಿ ಮನೆ ನಿರ್ಮಾಣ ದುಬಾರಿಯಾಗಿದ್ದು, ಯಾರೂ ಖರೀದಿಸದ ಸ್ಥಿತಿ ಇದೆ' ಎಂದರು.

ಇದಕ್ಕೆ ಧ್ವನಿಗೂಡಿಸಿದ ಬಿಜೆಪಿಯ ಮುನಿರತ್ನ, 'ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದವರು ಕೋರ್ಟ್‌ಗೆ ಹೋಗಿದ್ದಾರೆ. ಯಾರ್‍ಯಾರು ಎಷ್ಟು ಪ್ರಮಾಣದ ನಿಯಮ ಉಲ್ಲಂಘಿಸಿದ್ದಾರೆ ಎಂದು ಪರಿಶೀಲಿಸಿ, ಅದರ ಪ್ರಕಾರ ದಂಡ ವಿಧಿಸಿ' ಎಂದು ಆಗ್ರಹಿಸಿದರು.

'ನಿಮ್ಮ ಸರ್ಕಾರ ಇದ್ದಾಗ ತಂದಿದ್ದ ಸುತ್ತೋಲೆಯನ್ನು ಮಸೂದೆ ರೂಪದಲ್ಲಿ ತಂದಿದ್ದೇವೆ. ಯಾವುದೇ ಹೆಚ್ಚಳ ಮಾಡಿಲ್ಲ. ನಿಮ್ಮ ಕಾಲದಲ್ಲಿ ಆದ ತಪ್ಪನ್ನು ತಿದ್ದುಪಡಿ ಮೂಲಕ ಸರಿಪಡಿಸುವ ಕೆಲಸ ಮಾಡುತ್ತಿದ್ದೇವೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಮಜಾಯಿಷಿ ನೀಡಿದರು.

ಆಗ ಮಾತನಾಡಿದ ಎಸ್. ಸುರೇಶ್ ಕುಮಾರ್, 'ಯಾವ್ಯಾವ ಶುಲ್ಕಗಳು ಹಿಂದೆ ಎಷ್ಟು ಇತ್ತು, ಈಗ ಮಂಡಿಸಲಾದ ಮಸೂದೆಯ ಅನುಸಾರ ಎಷ್ಟು ಮೊತ್ತ ಇದೆ ಎಂಬುದನ್ನಾದರೂ ಹೇಳಿ. ಇಲ್ಲವೇ ಹಳೆಯ ದರವನ್ನೇ ನಮೂದಿಸಿ ಪರಿಷ್ಕೃತ ಮಸೂದೆಯನ್ನು ಶುಕ್ರವಾರ ಮಂಡಿಸಿ' ಎಂದು ಪಟ್ಟು ಹಿಡಿದರು.

ಆ ಬಗ್ಗೆ ಮಾಹಿತಿ ಇರದ ಶಿವಕುಮಾರ್, 'ತಿದ್ದುಪಡಿಗೆ ಒಪ್ಪಿಗೆ ಕೊಡಿ. ಇದರಿಂದ ಸಮಸ್ಯೆಯಾಗದು. ಶುಲ್ಕ ಇಳಿಸುವ ಬಗ್ಗೆ ನಮ್ಮ ಗುರಿ ಇದೆ ಹೊರತು, ಏರಿಸುವ ಬಗ್ಗೆಯಲ್ಲ. ಎಷ್ಟು ಇಳಿಸಬೇಕು ಎಂಬುದನ್ನು ಚರ್ಚಿಸುವೆ' ಎಂದರು.

ಬಿಜೆಪಿ ಸದಸ್ಯರ ಆಕ್ಷೇಪದ ಮಧ್ಯೆಯೇ, ಸಭಾಧ್ಯಕ್ಷ ಯು.ಟಿ. ಖಾದರ್, ಮಸೂದೆಯನ್ನು ಮತಕ್ಕೆ ಹಾಕಿ ಅಂಗೀಕಾರವನ್ನೂ ಕೊಡಿಸಿದರು.

ಕಂದಾಯ ಬಡಾವಣೆಗಳ ಪರಿಶೀಲನೆಗೆ ತಂಡ

ವಿಧಾನಸಭೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಂದಾಯ ಬಡಾವಣೆಗಳ ಪರಿಶೀಲನೆಗೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ತಂಡವೊಂದನ್ನು ರಚಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬುಧವಾರ ಸದನದಲ್ಲಿ ಗಮನ ಸೆಳೆಯುವ ಸೂಚನೆ ಮಂಡಿಸಿ ಮಾತನಾಡಿದ ಬಿಜೆಪಿಯ ಎಸ್.ಆರ್. ವಿಶ್ವನಾಥ್, 'ಬೆಂಗಳೂರು ನಗರ ಜಿಲ್ಲೆಯ ಹೆಸರಘಟ್ಟ ಹೋಬಳಿಯಿಂದ ತಿಪ್ಪಗೊಂಡನಹಳ್ಳಿಯವರೆಗೂ ಅನಧಿಕೃತವಾಗಿ ಕಂದಾಯ ಬಡಾವಣೆಗಳ ನಿರ್ಮಾಣವಾಗುತ್ತಿದೆ. ಇದರಿಂದ ನಗರದ ಅಭಿವೃದ್ಧಿಗೆ ತೊಡಕಾಗುತ್ತಿದೆ. ಖರೀದಿದಾರರೂ ಮೋಸ ಹೋಗುತ್ತಿದ್ದಾರೆ' ಎಂದರು.

ಉತ್ತರ ನೀಡಿದ ಶಿವಕುಮಾರ್, 'ಹಿರಿಯ ಅಧಿಕಾರಿಗಳ ತಂಡವೊಂದನ್ನು ರಚಿಸಲಾಗುವುದು. ಅನಧಿಕೃತ ಬಡಾವಣೆಗಳ ನಿರ್ಮಾಣ, ಕಂದಾಯ ನಿವೇಶನಗಳ ನೋಂದಣಿ ಕಂಡುಬಂದಲ್ಲಿ ಕ್ರಮ ಜರುಗಿಸಲಾಗುವುದು' ಎಂದು ಭರವಸೆ ನೀಡಿದರು.

ನಾಯಿ ಬೊಗಳಿದ್ದಕ್ಕೆ ಮಾಲೀಕನಿಗೆ ಇರಿತ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಸಾಕು ನಾಯಿ ಬೊಗಳಿದ್ದಕ್ಕೆ ಅದರ ಮಾಲೀಕನಿಗೆ ಚಾಕುವಿನಿಂದ ಇರಿದಿರುವ ಘಟನೆ ತಾಲ್ಲೂಕಿನ ದೊಡ್ಡ ಚೀಮನಹಳ್ಳಿಯಲ್ಲಿ ನಡೆದಿದೆ.

ಮಧುಕುಮಾರ್ (34) ಇರಿತಕ್ಕೆ ಒಳಗಾದ ವ್ಯಕ್ತಿ. ಅದೇ ಗ್ರಾಮದ ಸುನೀಲ್, ಅನಿಲ್, ದೇವರಾಜ್ ಮತ್ತು ಅಜಯ್ ಎಂಬವರು ಕೃತ್ಯ ಎಸಗಿದ್ದಾರೆ ಎಂದು ದೂರಲಾಗಿದೆ. ಆರೋಪಿಗಳು ನಾಪತ್ತೆಯಾಗಿದ್ದು ಈ ಸಂಬಂಧ ವಿಶ್ವನಾಥಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನೆ ಏನು?: 'ನಮ್ಮನ್ನು ನೋಡಿ ನಾಯಿ ಬೊಗಳುತ್ತಿದೆ ಎಂದು ಆರೋಪಿಗಳು ತಾಕೀತು ಮಾಡಿ ಗಲಾಟೆ ಮಾಡಿದ್ದಾರೆ' ಎಂದು ಮಧುಕುಮಾರ್ ಅವರ ಸಹೋದರ ಮಂಜುನಾಥ ಪೊಲೀಸ್ ಠಾಣೆಗೆ ದೂರು ನೀಡಿದ್ದರು. 'ಈ ಬಳಿಕ ಆರೋಪಿಗಳು ಮಧುಕುಮಾರ್ ಅವರ ಮನೆ ಬಳಿ ಬಂದಾಗ ನಾಯಿ ಮತ್ತೆ ಬೊಗಳಿದೆ. ಇದರಿಂದ ಕುಪಿತಗೊಂಡ ಆರೋಪಿಗಳು ಘರ್ಷಣೆಗೆ ಇಳಿದಿದ್ದಾರೆ. ಮಾತಿನ ಚಕಮಕಿ ನಡೆದು ನಾಯಿ ಮಾಲೀಕನಿಗೆ ಚಾಕುವಿನಿಂದ ಇರಿದು ಪರಾರಿ ಆಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ. .

ಮಧುಕುಮಾರ್ ದೊಡ್ಡಬಳ್ಳಾಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವನಕಲ್ಲು ಮಠದಲ್ಲಿ ಲಕ್ಷ ದೀಪೋತ್ಸವ ಆಚರಣೆ

ವನಕಲ್ಲು ಮಠದಲ್ಲಿ ನಡೆದ ಲಕ್ಷ ದೀಪೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಸಚಿವ ವಿ.ಸೋಮಣ್ಣ, ವಿವಿಧ ಸ್ವಾಮೀಜಿಗಳು ಭಾಗವಹಿಸಿದ್ದರು.

ದಾಬಸ್ ಪೇಟೆ: 'ದೇವರನ್ನು ಹುಡುಕಿಕೊಂಡು ಹೋದರೆ ಸಿಗುವುದಿಲ್ಲ. ಭಗವಂತ ಇದ್ದಾನೆ ಎಂಬ ನಂಬಿಕೆ ಎಲ್ಲರಲ್ಲೂ ಇದೆ. ಆ ನಂಬಿಕೆಯೇ ಲಕ್ಷ ದೀಪೋತ್ಸವ ಆಚರಣೆ ಮಾಡಲು ಕಾರಣವಾಗಿದೆ' ಎಂದು ಮಾಜಿ ಸಚಿವ ವಿ.ಸೋಮಣ್ಣ ತಿಳಿಸಿದರು.

ವನಕಲ್ಲು ಮಠದಲ್ಲಿ ನಡೆದ ಲಕ್ಷ ದೀಪೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

'ದೀಪದಿಂದ ದೀಪ ಹಚ್ಚಿ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವಂತೆ, ನಾವು ಅಜ್ಞಾನದಿಂದ ಜ್ಞಾನದೆಡೆಗೆ ಸಾಗಬೇಕು' ಎಂದು ಮಠದ ಬಸವರಮಾನಂದ ಸ್ವಾಮೀಜಿ ಹೇಳಿದರು.

ಮಲಯ ಶಾಂತಮುನಿ ದೇಶಿಕೇಂದ್ರ ಸ್ವಾಮೀಜಿ, ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಉಪಸ್ಥಿತರಿದ್ದರು. ನೂರಾರು ಭಕ್ತರು ಹಣತೆ ಹಚ್ಚಿದರು.

ವಾಹನ ತಡೆದು ರೈತರ ಆಕ್ರೋಶ

100 ದಿನ ಪೂರೈಸಿದ ಕಾವೇರಿ ಹೋರಾಟ: ಕಪ್ಪು ಪಟ್ಟಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನೇತೃತ್ವದಲ್ಲಿ ಬುಧವಾರ ನಗರದ ಸರ್ ಎಂ.ವಿ. ಪ್ರತಿಮೆ ಎದುರು ರಸ್ತೆ ತಡೆ ನಡೆಯಿತು

ಮಂಡ್ಯ : ಕಾವೇರಿ ನದಿಯಿಂದ ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯು ನಗರದ ನಗರದ ಸರ್ ಎಂ.ವಿ. ಪ್ರತಿಮೆ ಎದುರು ನಡೆಸುತ್ತಿರುವ ಪ್ರತಿಭಟನೆಯು ಬುಧವಾರ ನೂರನೇ ದಿನಕ್ಕೆ ಕಾಲಿಟ್ಟಿದ್ದು, ಹೋರಾಟಗಾರರು ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿನ ವಾಹನಗಳ ಸಂಚಾರವನ್ನು ತಡೆದ ಪ್ರತಿಭಟನಾಕಾರರು, ಮಾನವ ಸರಪಳಿ ನಿರ್ಮಿಸಿ ರಸ್ತೆಯಲ್ಲೇ ಕೆಲ ಹೊತ್ತು ಧರಣಿ ಕುಳಿತರು. ಕಪ್ಪು ಬಾವುಟ ಪ್ರದರ್ಶಿಸಿ ಕೇಂದ್ರ -ರಾಜ್ಯ ಸರ್ಕಾರ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಕಾವೇರಿ ನದಿ ನೀರು ರಕ್ಷಣೆಗಾಗಿ ಕಳೆದ ನೂರು ದಿನದಿಂದ ಹೋರಾಟ ಮಾಡುತ್ತಾ ಬಂದಿದ್ದರೂ ಸಹ ರಾಜ್ಯ ಸರ್ಕಾರ ತಮಿಳುನಾಡಿಗೆ ಈಗಲೂ ಕದ್ದು ಮುಚ್ಚಿ ನೀರು ಹರಿಸುತ್ತಿದೆ. ವಿಧಾನಮಂಡಲದ ಅಧಿವೇಶನದಲ್ಲಿ ಕಾವೇರಿ ವಿವಾದ ಕುರಿತು ಚರ್ಚಿಸದೇ ಉದಾಸೀನತೆ ತೋರಿ ಕಾಲ ಹರಣ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎರಡು ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಡೆಸಲು ಮುಂದಾಗದ ಪ್ರಧಾನಿ ನರೇಂದ್ರ ಮೋದಿ,ಸಂಕಷ್ಟ ಸನ್ನಿವೇಶದಲ್ಲೂ ಹಠಮಾರಿತನದಿಂದ ನೀರು ಹರಿಸಿಕೊಳ್ಳುತ್ತಿರುವ ತಮಿಳುನಾಡು, ರಾಷ್ಟ್ರೀಯ ಜಲ ನೀತಿ ರೂಪಿಸದ ಕೇಂದ್ರ ಸರ್ಕಾರದ ವಿರುದ್ಧ ಹೋರಾಟಗಾರರು ಕಿಡಿಕಾರಿದರು.

ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದ ಜಯರಾಂ ಮಾತನಾಡಿ, ಜ್ವಲಂತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದೆ ರಾಜ್ಯ ಸರ್ಕಾರ ಹೊಣೆಗೇಡಿತನ ಪ್ರದರ್ಶಿಸುತ್ತಿದೆ. ಕಾವೇರಿ ಹೋರಾಟಗಾರರ ಕಿವಿಗೆ ಹೂವು ಇಡಲು ಸಾಧ್ಯವಿಲ್ಲ. ಸದನದಲ್ಲಿ ಕಾವೇರಿ ವಿಚಾರ ಚರ್ಚಿಸದೇ ಇದುವರೆಗೆ ಕಾಲಹರಣ ಮಾಡಿದ್ದು ಸಾಕು. ಇನ್ನು ಎರಡು ದಿನ ಕಾಲಾವಕಾಶವಿದ್ದು ಚರ್ಚಿಸಿ ದೃಢ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜೆಡಿಎಸ್ ಮುಖಂಡ ಕೆ.ಟಿ. ಶ್ರೀಕಂಠೇಗೌಡ ಮಾತನಾಡಿ, 'ಕಾವೇರಿ ಹೋರಾಟ ಐತಿಹಾಸಿಕ ದಾಖಲೆ ಮಾಡಿದೆ, ಶತಮಾನದಲ್ಲಿಯೇ ನೂರು ದಿನ ಪೂರೈಸಿರುವ ಹೋರಾಟ ಇತಿಹಾಸದ ಪುಟ ಸೇರಿದೆ. ಇಂತಹ ಹೋರಾಟಕ್ಕೆ ಕೇಂದ್ರ ರಾಜ್ಯ ಸರ್ಕಾರದ ನಿರ್ಲಕ್ಷ್ಯತೆ, ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಹಾಗೂ ಪ್ರಾಧಿಕಾರದ ಪಕ್ಷಪಾತ ಕಾರಣ' ಎಂದು ದೂರಿದರು.

'ಕಾವೇರಿ ಹೋರಾಟದ ಬಗ್ಗೆ ರಾಜ್ಯ ಸರ್ಕಾರ ತಿರಸ್ಕಾರ ಮನೋಭಾವ ಹೊಂದಿದೆ. ರೈತರು ಸರ್ಕಾರದ ವಿರುದ್ಧ ಹತಾಶರಾಗಿದ್ದಾರೆ. ಇದುವರೆಗೆ ಹೋರಾಟಗಾರರ ಮಾತುಕತೆಗೆ ಕರೆದಿಲ್ಲ, ಚರ್ಚೆ ಮಾಡಿಲ್ಲ. ಇಂತಹ ಸರ್ಕಾರವನ್ನು ಹಿಂದೆ ನೋಡಿಲ್ಲ. ಬೇರೆ ಸರ್ಕಾರಗಳಿದ್ದರೆ ಇಷ್ಟೊತ್ತಿಗೆ ಮೂರು ನಾಲ್ಕು ಬಾರಿ ಮಾತುಕತೆ ಮಾಡುತ್ತಿದ್ದವು' ಎಂದರು.

ಆಸ್ಪತ್ರೆಯಲ್ಲಿ ಭ್ರೂಣ ಪತ್ತೆ ಸ್ವಯಂ ಪ್ರೇರಿತ ತನಿಖೆ

ಹೊಸಕೋಟೆ: ತಾಲ್ಲೂಕಿನ ತಿರುಮಶೆಟ್ಟಿಹಳ್ಳಿ ಕ್ರಾಸ್ ಬಳಿ ಇರುವ ಎಸ್.ಪಿ.ಜಿ ಆಸ್ಪತ್ರೆಯಲ್ಲಿ 16ರಿಂದ ರಿಂದ 17ವಾರಗಳ ಭ್ರೂಣ ಬುಧವಾರ ಪತ್ತೆಯಾಗಿದೆ. ಆಸ್ಪತ್ರೆ ಮಾಲೀಕ ಡಾ.ಶ್ರೀನಿವಾಸ್ ನಾಪತ್ತೆಯಾಗಿದ್ದಾರೆ. ರಾಜ್ಯದ ಕೆಲವಡೆ ಭ್ರೂಣ ಹತ್ಯೆ ಘಟನೆಗಳು ಸಂಚಲನ ಸೃಷ್ಟಿಸಿರುವ ಬೆನ್ನಲ್ಲೇ ಈ ಪ್ರಕರಣ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಈ ಕುರಿತು ಸ್ವಯಂ ಪ್ರೇರಿತ ತನಿಖೆ ಕೈಗೊಳ್ಳಲಾಗಿದೆ. ಆರೋಗ್ಯ ಇಲಾಖೆ ಅಧಿಕಾರಿಗಳಿಂದ ಆಸ್ಪತ್ರೆಯಲ್ಲಿ ಶೋಧ ಕಾರ್ಯ ನಡೆದಿದೆ ಎಂದು ಡಿಎಚ್‌ಒ ಡಾ.ಎಂ. ಸಿ.ಸುನೀಲ್ ಕುಮಾರ್ ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

CONNECT ಕ್ಲಾಸಿಫೈಡ್ಸ್

ROOF LEAKAGE?!
BATH ROOM / SIDE WALL / SUMP
Permanent Solution with Guarantee
95911 64233
www.noleakage.in
We do Constructions and Painting also.
Unique Speciality Systems Pvt. Ltd.

Grand Flea Market Presents
ಇಂಡಿಯನ್ ಆರ್ಟಿಸನ್ ಬಜಾರ್
Indian Artisan Bazaar
Arts, Crafts, Handlooms & Lifestyle Exhibition
Exclusively for Christmas & New Year 2024

Date: 8th December 2023 to 17th December 2023
10 Days Exhibition
Timings: 11 am to 7 pm
Karnataka Chitrakala Parishath
Kumara Krupa Road, Bengaluru

Karaoke Live Performance | 16th Dec 2023 5.00 PM - 7.00 PM | Fire Show Live Performance | 17th Dec 2023 5.30 PM - 6.30 PM
Grand Flea Market | 10 DAYS EXHIBITION | 100+ STALLS | Live PERFORMANCE | Entry FREE
For Details Contact: 6364685716 / 9036658774

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

JANATHA EDUCATION SOCIETY®
Vivekananda College Premises, Dr. Rajakumar Road, Rajajinagar, 2nd Stage, Bangalore – 560055

TENDER NOTIFICATION

Sealed item wise tenders are invited in duplicate from reputed Civil Contractors for the following works. The Interested Contractors who have completed similar works should produce work done certificates for obtaining the tender documents.

	Name of the work
1	Construction of Compound in Sy.no.52 Lakshmipura village,Dasanapura Hobli, Madanayakanahalli , Bangalore North **Estimated Cost in Rs.128 Lakhs | EMD (in Rs.) 128000/- Cost of Tender in Rs.5000/-**
2	Providing Main L.T Distribution panel to VKIT, Kumbalagodu,Bangalore-74 **Estimated Cost in Rs. 14.3 Lakhs | EMD (in Rs.) 50000/- Cost of Tender in Rs.3000/-**
3	Construction of TERRACE FLOOR at Vivekananda College of Law, Gayathrinagar, Bangalore -560021 **Estimated Cost in Rs.12 Lakhs | EMD (in Rs.) 50000/- Cost of Tender in Rs.3000/-**

E.M.D by way of DD payable in favor of Secretary, Janatha Education Society, Bangalore.

Tender documents will be issued from **18/12/2023 to 23/12/2023** during office hours on all working days. The Completed tenders will be received up to 2.00 p.m. on **29/12/2023** and will be opened on the same day at 3.00 p.m.Or on **30/12/2023** at 11 AM. The Management reserves the right to accept or reject any or all tender without assigning any reason.

For further information contact -95139 53482,

Sd/-
H. G Balagopal - Secretary

PUBLIC NOTICE

It is hereby notified that, I Sri.Gopi Janardan has agreed to purchase the property from its owner Smt.Sunanda Mahadev W/o Mahadev aged about 58 years residing at No.142/A, Santhrupthi, I Main road, 2nd Stage, West of Chord road, Mahalakshmipuram, Bengalore-560086. If any person have any manner of claim, right, tittle, interest or demand of any nature in or over the Schedule property, they are hereby requested to file their objections along with the photocopies of the documents on which they are relying, with the undersigned within 7 (Seven days) from the date of publication of this notice. Objections received thereafter will not be binding on me.

SCHEDULE

All the piece and parcel of residential immovable property bearing Municiple No.15/1, PID NO.53-192-15/1, 7th Main road, Nagendra Block, BBMP old Ward No.53 Srinagar, New Ward No.162-Girinagar, Bangalore (Earlier No.15, formed out of Sy.No.27/3, Gavipura village, Kasaba Hobli, Bangalore North taluk) measuring East to West :35-0 feet North to South Eastern side 32.6 feet and Western side 27.6 totally measuring 1050 Sq.feet together 800 Square feet in the Ground Floor, 800 Square feet in the First floor and 800 Square feet in the Second floor the building is of RCC roofing, brick wall with cement, mosaic floor, jungle wood doors and windows, with water, light and sanitation and bounded on:
East by: Byrappa and Krishnappa property. **West by:** 20 feet road. **North by:** 50 feet Road by Trust board. **South by:** Site No.14.

Sri. GOPI JANARDAN
No.150/A, 7th Cross, 2nd Main, Muneshwara layout, Govt. Hospital Road, Laggere, Bengaluru - 560 058.
8780321345, 9379295001

PUBLIC NOTICE

This is to inform the General Public at large, our client has misplaced/lost the following property documents viz.,
1) Original Un- Registered WILL dated 05-04-2002-- executed by Dr. V. Ramachandra Naidu in favour of his wife Smt. Jayamma.
If any person/s coming in possession of the same, the same may be handed it over to me or to my client within TEN DAYS from the date of publication of this notice. In the meanwhile, General public and financial institution/s are also hereby put in notice, not to have any kind of dealings or create any charge/s based on the above said misplaced/ lost documents.

B.N.BYRAPPA, Advocate
No. 9. 1st Block, 2nd Cross
Akshyanagara Ramamurthy Nagara (P)
Bangalore -560016, M:7829456181

JOB OPPORTUNITIES

Teachers/ Professors

ARUNODAYA INSTITUTE OF LEGAL STUDIES. No. 57, 80 feet Ring Road, Mariyappanapalaya, Bangalore-560056. Contact 9972500899. Invites application for Full time Faculty for 3 years LLB & 5 years BA, LLB: 05 Posts. Qualification: LLM & Ph.D. Physical education Director: 01 post. Qualification: M.PEd. Clerk/ Computer Operator: 2 posts (Qualification: Any Degree with computer knowledge) Attenders: 4 posts (Qualification: SSLC/PUC). ARUNODAYA COLLEGE, Contact: 9902800492. Computer Science: 01, Qualification: M.Sc/MCA/ M.Tech. WALK-IN: on 18-12-2023, Method of Selection: Demo & Interview.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

REAL ESTATE SELLING

Commerical

J P Nagar

J.P.NAGAR 60X90 Commercial, Ring Road, Jayanagar Residential 80x120 (old house) genuine buyers, Suraj Realtors -9845232711

PERSONAL

Change of Name

I, NAZI KHAN residing at Bengaluru-83 have changed my name as NAZI IRFAN SHAH, vide affidavit dated 13/12/2023 before Notary P.C.Ramaiah, Bengaluru

I, SIRI R/o.#267, Ground`Floor, 5th_B Main,REMCO Layout Vijayanagar Bengaluru- 560104 have`changed my_name`to SIRI_RAGHURAJ DESHPANDE vide`affidavit dated:12.12.2023 before_Notary L.Puttaraju, Bengaluru

I, CHETHANA DINESH RAO R/o. No. 2010, 4th Floor, 20th Main, RS Elegance JP Nagar 2nd Phase, Bangalore-560078, have changed my name to CHETHANA vide affidavit dated 11.12.2023, sworn before notary Mohammed Hussain, Bangalore.

Celebrating Contemporary Art !!
at Palace Grounds, Kings Court Gate No.5, Bellary Road, Bengaluru
14-15-16-17 December 2023
11.00 am - 8.00 pm
INDIA ART FESTIVAL™ India's Contemporary Art Fair
Parking free
25 Art Galleries | 400 Artists | 3500 Artworks | 100 Booths

Tickets available on bookmyshow | Ticket ₹299/- | Scan QR code to book the tickets
India Art Festival tickets are available at Venue also
M: +91 8976044104-5-7-8 | E: indiaartfestival@gmail.com

CHANGE OF NAME
I, **SINGA PADMANABAN** residing at No. 51, SLN PMS Layout, Rampura, Bidarahalli Hobali, Bangalore- 560049, have changed my name to **PADHMANABHAN,** vide affidavit dated 13/12/2023 before Notary Mamatha N.K, Bangalore. Henceforth I shall be called **PADHMANABHAN,** only.

ಹೆಸರು ಬದಲಾವಣೆ
ಗಣಪತಿ N S ಅವರ ಮಗನಾದ **ಮುತ್ತಣ್ಣ ಗಣಪತಿ** N ಎಂಬ ನಾನು, NO.52, 11ನೇ ಕ್ರಾಸ್, ವಿರೂಪಾಕ್ಷಪುರ, ಕೊಡಿಗೇಹಳ್ಳಿ, ಬೆಂಗಳೂರು 560 097 ನಿವಾಸದಲ್ಲಿ ವಾಸವಿದ್ದು, ನನ್ನ ಮಗನಾದ N M **ನಂಜಪ್ಪನ** ಹೆಸರನ್ನು, N M **ಯುವ ನಂಜಪ್ಪ** ಎಂದು ದಿನಾಂಕ 12.12.2023 ರಂದು ನೋಟರಿ R ವಿಶ್ವನಾಥ ಅವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ.

CHANGE OF NAME
I, **MANJUNATHA. S** Residing at No. 9/5, Sree Renuka, 15th Cross, Pipeline Road, Vijayanagar, Near IOC Pertol Bunk, Magadi Road, Bengaluru-560023 have changed my name to **MANJUNATH. S** vide affidavit dated 05/12/2023, before notary T. Mllikarjuna, Bengaluru. Henceforth I shall be alled **MANUNATH. S** only.

CHANGE OF NAME
I, **SINGA RAJESHWARI** residing at No. 51, SLN PMS Layout, Rampura, Bidarahalli Hobali, Bangalore- 560049, have changed my name to **RAJESHWARI,** vide affidavit dated 13/12/2023 before Notary Mamatha N.K, Bangalore. Henceforth I shall be called **RAJESHWARI** only.

CHANGE OF NAME
I, **SWATHI SM** Residing at No. 13, 18/4, 2nd Cross, Ramachandra Reddy layout, Mangammanapalya, Bommanahalli, Bengaluru-68 have changed my name, after Marriage to **SWATHI KRISHNA MURTHY,** vide affidavit dated 12.12.2023 before notary B.M. Chandrashekar, Bengaluru. Henceforth I shall called **SWATHI KRISHNA MURTHY,** only.

I, GOWRIAMMA VIJAYALAKSHMI, resident of 2002, I Block, Janapriya Heavens, Allalasandra, Bengaluru-560065 have changed my name to GOWRIAMMA VIJAYALAKSHMI NAIR vide affidavit dated 08/12/2023 before Notary H.Sridhar Rao, Bengaluru.

DH DECCAN HERALD Classifieds More value, more impact
REAL ESTATE
ಪ್ರಜಾವಾಣಿ
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡುವಂತೆ ವಿಧಾನಸಭೆಯಲ್ಲಿ ಬಿಜೆಪಿ ಒತ್ತಾಯ

ಕಾನೂನು ಸುವ್ಯವಸ್ಥೆ ಚರ್ಚೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಬುಧವಾರ ಆರೋಪಿಸಿದ ಬಿಜೆಪಿ ಸದಸ್ಯರು, ಈ ಕುರಿತು ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡುವಂತೆ ಆಗ್ರಹಿಸಿದರು.

ವಿಷಯ ಪ್ರಸ್ತಾಪಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಕಾಂಗ್ರೆಸ್ ನೇತೃತ್ವದ ಸರ್ಕಾರ ಮೇ ತಿಂಗಳಲ್ಲಿ ಅಧಿಕಾರಕ್ಕೆ ಬಂತು. ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ರಾಜ್ಯದಲ್ಲಿ 43,412 ಅಪರಾಧ ಪ್ರಕರಣಗಳು ದಾಖಲಾಗಿವೆ. ಕೊಲೆ, ಅತ್ಯಾಚಾರ, ದರೋಡೆ, ಹಲ್ಲೆಯಂತಹ ಘಟನೆಗಳು ಸರಣಿಯೋಪಾದಿಯಲ್ಲಿ ನಡೆಯುತ್ತಿವೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದೆ' ಎಂದು ದೂರಿದರು.

ಚಿಕ್ಕಮಗಳೂರಿನಲ್ಲಿ ಪೊಲೀಸರು ವಕೀಲರ ಮೇಲೆ ಹಲ್ಲೆ ನಡೆಸಿದ್ದಾರೆ. ಪ್ರಕರಣ ದಾಖಲಿಸಿದ ಕಾರಣಕ್ಕೆ ಸರ್ಕಾರದ ವಿರುದ್ಧ ಪೊಲೀಸರೇ ಪ್ರತಿಭಟನೆ ನಡೆಸಿದ್ದಾರೆ. ಇದು ಆಡಳಿತ ವ್ಯವಸ್ಥೆ ಬಿಗಿ ಕಳೆದುಕೊಂಡಿರುವುದರ ಸಂಕೇತ ಎಂದರು.

ಎಸ್‌ಪಿ ಅಮಾನತಿಗೆ ಆಗ್ರಹ: 'ಸುವರ್ಣ ವಿಧಾನಸೌಧದಲ್ಲಿ ಅಧಿವೇಶನ ನಡೆಸುತ್ತಿದ್ದೇವೆ. ಈ ಅವಧಿಯಲ್ಲೇ ಬೆಳಗಾವಿಯ ಎಸ್‌ಪಿ ಸುವರ್ಣ ವಿಧಾನಸೌಧದ ಎದುರಿನಲ್ಲೇ ತೊಡೆ ತಟ್ಟಿ ರೈತರನ್ನು ಬೆದರಿಸಿದ್ದಾರೆ. ಈ ಸರ್ಕಾರದಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲವೆ? ಸರ್ಕಾರ ಬದುಕಿದೆಯೋ? ಸತ್ತಿದೆಯೋ? ಎಂಬ ಅನುಮಾನ ಕಾಡುತ್ತಿದೆ. ಸರ್ಕಾರ ಬದುಕಿದ್ದರೆ ಎಸ್‌ಪಿಯನ್ನು ತಕ್ಷಣ ಅಮಾನತು ಮಾಡಬೇಕು' ಎಂದು ಆಗ್ರಹಿಸಿದರು.

ಕಾನೂನು ಸುವ್ಯವಸ್ಥೆ ವಿಷಯದಲ್ಲಿ ನಿಲುವಳಿ ಸೂಚನೆ ಮಂಡಿಸಲು ಅವಕಾಶವಿಲ್ಲ ಎಂದ ಸಭಾಧ್ಯಕ್ಷ ಯು.ಟಿ. ಖಾದರ್, ನಿಯಮ 69ರಡಿ ಚರ್ಚೆಗೆ ಅವಕಾಶ ಕಲ್ಪಿಸುವುದಾಗಿ ಪ್ರಕಟಿಸಿದರು.

'ಉತ್ತರ' ಸಿಗದ ಪ್ರಶ್ನೆಗಳ ಮುಂದಿಟ್ಟ ಬೆಲ್ಲದ

ವಿಧಾನಸಭೆ: ಉತ್ತರ ಕರ್ನಾಟಕದ ಜಿಲ್ಲೆಗಳ ನಿರ್ಲಕ್ಷ್ಯ, ಹಿಂದುಳಿದಿರುವಿಕೆ, ಈವರೆಗಿನ ಸರ್ಕಾರಗಳ ತಾರತಮ್ಯ ಧೋರಣೆಗಳನ್ನು ಅಂಕಿ ಅಂಶ ಸಮೇತ ಸದನದ ಮುಂದಿಟ್ಟ ಬಿಜೆಪಿಯ ಅರವಿಂದ ಬೆಲ್ಲದ, ಸರ್ಕಾರದ ಗಮನ ಸೆಳೆದರು.

ಉತ್ತರ ಕರ್ನಾಟಕ ಕುರಿತ ಚರ್ಚೆ ಮೇಲೆ ಮಾತನಾಡಲು ತಯಾರಿ ಮಾಡಿಕೊಂಡೇ ಬಂದಿದ್ದ ಬೆಲ್ಲದ ಅವರು, 'ಅನೇಕ ಕ್ಷೇತ್ರಗಳಲ್ಲಿ ಕರ್ನಾಟಕ ನಂಬರ್ 1 ಆಗಿದೆ. ಆದರೆ, ನಮಗೆ ಗಂಟೆ ಇಲ್ಲದ ಸ್ಥಿತಿ ಇದೆ. ಬೆಂಗಳೂರು, ಮೈಸೂರು ಬೆಳವಣಿಗೆಯನ್ನು ನೋಡಿದರೆ ಖುಷಿಯಾಗುತ್ತದೆ. ಕಿತ್ತೂರು, ಕಲ್ಯಾಣ ಕರ್ನಾಟಕದ ಸ್ಥಿತಿ ನೋಡಿದರೆ ಅಳು ಬರುತ್ತದೆ' ಎಂದರು.

'ಬೆಂಗಳೂರಿನ ತಲಾದಾಯ ₹6.21 ಲಕ್ಷ ಇದ್ದರೆ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ನಂತರದ ಸ್ಥಾನಗಳಲ್ಲಿವೆ. ಕಲಬುರಗಿಯ ತಲಾದಾಯ ₹1.24 ಲಕ್ಷ ಇದ್ದರೆ, ಉಳಿದ ಜಿಲ್ಲೆಗಳ ಸ್ಥಾನ ಕೊನೆಯಿಂದ ಶುರುವಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದಾಗ ಶೇ 90 ರಷ್ಟು ದಕ್ಷಿಣದ ಜಿಲ್ಲೆಗಳ ಪಾಲಾದರೆ ನಮಗೆ ಸಿಗುವುದೇ ಇಲ್ಲ. ಹಿಂದಿನ ಸರ್ಕಾರದ ಅವಧಿಯ ನಮ್ಮ ಕ್ಲಿನಿಕ್ ಆರಂಭಿಸಿದ ನನ್ನ ಮತಕ್ಷೇತ್ರಕ್ಕೆ ಒಂದೇ ಒಂದು ಕೊಡಲಿಲ್ಲ' ಎಂದು ನೋವು ತೋಡಿಕೊಂಡರು.

ಐದು ಹೊಸ ಶಾಲೆ ಮಂಜೂರಾದರೆ ಒಂದು ಮಾತ್ರ ಉತ್ತರ ಕರ್ನಾಟಕಕ್ಕೆ ಸಿಗುತ್ತದೆ. ಹರಿಹರ ಹೊಳೆಯಿಂದ ಕೆಳಗಿನ ಜಿಲ್ಲೆಗಳು ಎಲ್ಲ ರ‍್ಯಾಂಕಿಂಗ್‌ನಲ್ಲಿ ಕೊನೆಯಿಂದಲೇ ಆರಂಭವಾಗುತ್ತವೆ. ಪ್ರವಾಸೋದ್ಯಮಕ್ಕೆ ನೀಡುವ ಆದ್ಯತೆ, ನೆರವಿನಲ್ಲಿ ನಮ್ಮ ಜಿಲ್ಲೆಗಳು ಲೆಕ್ಕಕ್ಕೇ ಇಲ್ಲ. ಕಡಲತೀರ ಇದ್ದರೂ ಅಭಿವೃದ್ಧಿಗೆ ಆದ್ಯತೆಯೇ ಸಿಕ್ಕಿಲ್ಲ. ಐ.ಟಿ. ಪಾರ್ಕ್, ಹಾರ್ಡ್‌ವೇರ್ ಪಾರ್ಕ್, ಫುಡ್ ಪಾರ್ಕ್, ಟೆಲಿಕಾಂ ಪಾರ್ಕ್ ಹಾಗೂ ಎಲ್ಲ ಕೈಗಾರಿಕೆಗಳು ಬೆಂಗಳೂರು ಸುತ್ತಲೇ ಕೇಂದ್ರೀಕೃತವಾಗಿವೆ. ಔದ್ಯೋಗಿಕ ಕೊರತೆ, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಮೊದಲ ಸ್ಥಾನದಲ್ಲಿ ಈ ಭಾಗದ ಜಿಲ್ಲೆಗಳು ಇವೆ' ಎಂದು ಹೇಳಿದರು.

ಕಾಂಗ್ರೆಸ್‌ನ ಅನಿಲ್ ಚಿಕ್ಕಮಾದು, ಚನ್ನಾರೆಡ್ಡಿ, ಬಿಜೆಪಿಯ ಬಸವರಾಜ ಮತ್ತಿಮಾಡ ಮಾತನಾಡಿದರು.

ಮಂತ್ರಿಯಾಗದೇ ಇರುವುದಕ್ಕೆ ತಲೆ ಕೆಡಿಸಿಕೊಳ್ಳಲ್ಲ: ದೇಶಪಾಂಡೆ

ವಿಧಾನಸಭೆ: 'ಎಂಟು ಜನ ಮುಖ್ಯಮಂತ್ರಿಗಳ ಜತೆ ಕೆಲಸ ಮಾಡಿದ್ದೇನೆ. ಹಾಗಾಗಿ ಮಂತ್ರಿಯಾಗದಿರುವ ಸಣ್ಣಪುಟ್ಟ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದು ಕಾಂಗ್ರೆಸ್‌ನ ಆರ್.ವಿ. ದೇಶಪಾಂಡೆ ಹೇಳಿದರು.

ಹುಬ್ಬಳ್ಳಿ-ಧಾರವಾಡಕ್ಕೆ ಕೈಗಾರಿಕೆಗಳನ್ನು ತಂದಿರುವ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಮಧ್ಯ ಪ್ರವೇಶಿಸಿದ ಬಿಜೆಪಿಯ ಆರಗ ಜ್ಞಾನೇಂದ್ರ, 'ನಿಮ್ಮನ್ನು ಹಿಂದಿನ ಸೀಟಿಗೆ ತಳ್ಳಿರುವುದು ಸರಿಯಲ್ಲ' ಎಂದು ದೇಶಪಾಂಡೆ ಅವರನ್ನು ಉದ್ದೇಶಿಸಿ ಹೇಳಿದರು.

'ಆಶೀರ್ವಾದ ಮಾಡುವವರು ಹಿಂದಿನಿಂದ ಮಾಡುವುದಲ್ಲವೇ. ಅವರು ಹಿರಿಯರು' ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ಆಗ ಮಾತನಾಡಿದ ದೇಶಪಾಂಡೆ, 'ಹಿಂದಿನ ಆಸನವನ್ನು ಕೊಡಿ ಎಂದು ಕೇಳಿ ಪಡೆದಿದ್ದೇನೆ. ದೇವೇಗೌಡರು, ಎಸ್.ಎಂ.ಕೃಷ್ಣ, ಸಿದ್ದರಾಮಯ್ಯನವರಂತಹ ದೊಡ್ಡವರ ಜತೆ ಕೆಲಸ ಮಾಡಿದ್ದೇನೆ. ಅಧಿಕಾರ ಬರುತ್ತದೆ ಹೋಗುತ್ತದೆ. ಅಂತಹ ವಿಷಯಗಳು ಪ್ರಮುಖವಲ್ಲ' ಎಂದರು. 'ದೇಶಪಾಂಡೆ ಸಚಿವರಾಗದೆ ಇರುವುದು ನಮಗೆಲ್ಲ ಅಲ್ಲ; ರಾಜ್ಯಕ್ಕೆ ನಷ್ಟ' ಎಂದು ಅಪ್ಪಾಜಿ ನಾಡಗೌಡ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲೆ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ಬುಧವಾರ ನಸುಕಿನಲ್ಲಿ ನಡೆದ ಲಕ್ಷ ದೀಪೋತ್ಸವದ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿದ್ದರು– ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಭಾಷೆ ಉಳಿವಿಗೆ ಸಾಂವಿಧಾನಿಕ ಬದಲಾವಣೆ ಅಗತ್ಯ: ನಾಗಾಭರಣ

ಬೆಂಗಳೂರು: 'ಕನ್ನಡವೂ ಸೇರಿದಂತೆ ಎಲ್ಲ ಪ್ರಾದೇಶಿಕ ಭಾಷೆಗಳ ಉಳಿವಿಗೆ ಸಾಂವಿಧಾನಿಕ ಬದಲಾವಣೆ ತರುವ ಅಗತ್ಯವಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.

ಟಿ.ಎಸ್. ನಾಗಾಭರಣ

ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ಕಾರ್ಮಿಕ ಲೋಕ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ–ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'1965ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯಾದಾಗ ರಾಜ್ಯದ ಗಡಿ, ಅಧಿಕಾರಗಳಂತಹ ವಿಚಾರವನ್ನು ಸಂವಿಧಾನಕ್ಕೆ ಸೇರಿಸಲಾಯಿತು. ಆದರೆ, ರಾಜ್ಯ ಭಾಷೆಗಳ ಸ್ಥಾನಮಾನ ವ್ಯಾಪ್ತಿಯ ಬಗ್ಗೆ ಸಂವಿಧಾನಕ್ಕೆ ಅಗತ್ಯ ಮಾರ್ಪಾಡು ಮಾಡಲಿಲ್ಲ. ಹಾಗಾಗಿ, ಕನ್ನಡ ಶಿಕ್ಷಣ, ಆಡಳಿತ, ಸಾರ್ವಜನಿಕ ವಲಯಗಳಲ್ಲಿ ಭಾಷೆ ಬಳಕೆಯ ಬಗ್ಗೆ ಗೊಂದಲವಿದೆ' ಎಂದು ಹೇಳಿದರು.

ಕವಿ ದೊಡ್ಡರಂಗೇಗೌಡ, 'ಇತ್ತೀಚೆಗೆ ಕನ್ನಡ ನಮ್ಮ ಮನೆ-ಮನಗಳಿಂದ ದೂರವಾಗುತ್ತಿದೆ. ತಂದೆ-ತಾಯಿ ಮತ್ತು ಮನೆಯ ಹಿರಿಯರು ಮಕ್ಕಳಿಗೆ ಕನ್ನಡ ಕಲಿಸಬೇಕು. ಕನ್ನಡ ಶಾಲೆಗಳನ್ನು ಉಳಿಸುವ ಪ್ರಯತ್ನಗಳಿಗೆ ಜನ ಸ್ಪಂದಿಸುತ್ತಿಲ್ಲ. ಇದಕ್ಕೆ ಖಾಸಗಿ ಶಾಲೆಗಳು ಸೃಷ್ಟಿಸಿರುವ ಭ್ರಮೆ ಕಾರಣವಾಗಿದೆ. ಖಾಸಗಿ ಶಾಲೆಗಳ ಲಾಬಿ ಕನ್ನಡ ಬೆಳೆಯಲು ಬಿಡುತ್ತಿಲ್ಲ. ಹಾಗಾಗಿ, ಕನ್ನಡದ ಕಾಯಕಲ್ಪಕ್ಕೆ ಮತ್ತು ರೋಗಗ್ರಸ್ತ ಮನಸ್ಸುಗಳಿಗೆ ಚಿಕಿತ್ಸೆ ನೀಡಲು 'ಗೋಕಾಕ್ ಚಳವಳಿ' ಮಾದರಿಯಲ್ಲಿ ಒಂದು ದೊಡ್ಡ ಆಂದೋಲನ ನಡೆಯುವ ಅನಿವಾರ್ಯತೆ ಇದೆ' ಎಂದರು.

ಕಾರ್ಯಕ್ರಮದಲ್ಲಿ ಎನ್.ಎಸ್. ತಾರಾನಾಥ ಅವರಿಗೆ 'ಡಾ. ಎಂ. ಚಿದಾನಂದಮೂರ್ತಿ ಕನ್ನಡ ಸಂಸ್ಕೃತಿ ಪ್ರಶಸ್ತಿ', ಆರ್. ದೊಡ್ಡೇಗೌಡ ಅವರಿಗೆ 'ಕನ್ನಡ ಅರವಿಂದ ಪ್ರಶಸ್ತಿ', ನ. ನಾಗರಾಜಯ್ಯ ಅವರಿಗೆ 'ಕನ್ನಡ ಚಿರಂಜೀವಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಸಂತೋಷ ಕುಮಾರ್ ಮೆಹೆಂದಳೆ ಅವರ 'ವೈಜಯಂತಿಪುರ'ಕ್ಕೆ 'ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ', ಸಂಧ್ಯಾ ಅವರ 'ಪ್ರಾಚೀನ ಕರ್ನಾಟಕದ ಮಹಿಳಾ ಲೋಕ', ಅಂಜನಾತನಯ ಅವರ 'ಶ್ರೀ ತೆನ್ಮೋಟಿ ಕೈಸನ್' ಪುಸ್ತಕಗಳಿಗೆ ಸಮಾಧಾನಕರ ಬಹುಮಾನ ನೀಡಲಾಯಿತು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹಟ್ಟದ ಸರ್ಕಾರಿ ಪ್ರೌಢಶಾಲೆಗೆ 'ಉತ್ತಮ ಸರ್ಕಾರಿ ಶಾಲೆ ಬಹುಮಾನ' ನೀಡಲಾಯಿತು. ವಿದ್ವಾಂಸ ಆರ್. ಶೇಷಶಾಸ್ತ್ರಿ, ಬಳಗದ ಸಂಚಾಲಕ ರಾ. ನಂ. ಚಂದ್ರಶೇಖರ ಭಾಗವಹಿಸಿದ್ದರು.

ಮಹಾದೇವ್ ಆ್ಯಪ್ ಉಪ್ಪಲ್ ಸೆರೆ

ನವದೆಹಲಿ (ಪಿಟಿಐ): ಮಹಾದೇವ್ ಬೆಟ್ಟಿಂಗ್ ಆ್ಯಪ್ ಪ್ರವರ್ತಕರಲ್ಲಿ ಒಬ್ಬರಾದ ರವಿ ಉಪ್ಪಲ್ ಅವರನ್ನು ದುಬೈನಲ್ಲಿ ಸ್ಥಳೀಯ ಪೊಲೀಸರು ಬಂಧಿಸಿದ್ದಾರೆ. ಜಾರಿ ನಿರ್ದೇಶನಾಲಯದ (ಇ.ಡಿ) ಪರವಾಗಿ ಇಂಟರ್‌ಪೋಲ್ ಹೊರಡಿಸಿದ್ದ 'ರೆಡ್ ನೋಟಿಸ್' ಆಧಾರದಲ್ಲಿ ಬಂಧಿಸಲಾಗಿದೆ ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

ಕಳೆದ ವಾರವೇ ಉಪ್ಪಲ್ ಅವರನ್ನು ಬಂಧಿಸಲಾಗಿದ್ದು, ಅವರನ್ನು ಭಾರತಕ್ಕೆ ಗಡೀಪಾರು ಮಾಡುವುದಕ್ಕೆ ಸಂಬಂಧಿಸಿದಂತೆ ಅಲ್ಲಿನ ಅಧಿಕಾರಿಗಳೊಂದಿಗೆ ಇ.ಡಿ ನಿರಂತರ ಸಂಪರ್ಕದಲ್ಲಿದೆ ಎಂದೂ ಅವರು ಹೇಳಿದರು.

ಆ್ಯಪ್‌ಗಳ ಮೂಲಕ ಅಕ್ರಮವಾಗಿ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಉಪ್ಪಲ್ ಮತ್ತಿತರರಿಗಾಗಿ ಛತ್ತೀಸಗಢ, ಮುಂಬೈ ಪೊಲೀಸರು ಮತ್ತು ಇ.ಡಿ ಶೋಧ ನಡೆಸುತ್ತಿತ್ತು. ಕಳೆದ ಅಕ್ಟೋಬರ್‌ನಲ್ಲಿ ಉಪ್ಪಲ್ ಮತ್ತು ಮತ್ತೊಬ್ಬ ಆ್ಯಪ್ ಪ್ರವರ್ತಕ ಸೌರಭ್ ಚಂದ್ರಕಾರ್ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಛತ್ತೀಸಗಢದ ರಾಯಪುರ ಕೋರ್ಟ್‌ನಲ್ಲಿ ಇ.ಡಿ ದೋಷಾರೋಪ ಪಟ್ಟಿ ದಾಖಲಿಸಿತ್ತು. ಕೋರ್ಟ್, ಇಬ್ಬರ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಹೊರಡಿಸಿತ್ತು.

ಇ.ಡಿ ಮನವಿಯ ಆಧಾರದಲ್ಲಿ ಇಂಟರ್‌ಪೋಲ್ ಇಬ್ಬರ ವಿರುದ್ಧ 'ರೆಡ್ ನೋಟಿಸ್' ಬಿಡುಗಡೆ ಮಾಡಿತ್ತು.

ಪ್ರಕರಣದ ಮತ್ತೊಬ್ಬ ಆರೋಪಿ ಚಂದ್ರಕಾರ್ ಪತ್ತೆಗೆ ತನಿಖೆ ನಡೆಯುತ್ತಿದೆ ಎಂದೂ ಮೂಲಗಳು ತಿಳಿಸಿವೆ.

ಡೆವಲಪರ್ ವಿರುದ್ಧ ದೂರು ದಾಖಲು

ಆನೇಕಲ್ : ಜಿಗಣಿ ಹೋಬಳಿ ಹೆನ್ನಾಗರ ಕೆರೆ ಒಂದು ಭಾಗವನ್ನು ಒತ್ತುವರಿ ಮಾಡಿಕೊಂಡ ಆರೋಪದ ಮೇಲೆ ಖಾಸಗಿ ಡೆವಲಪರ್ ಒಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ.

ಕೆರೆಯ ಒಂದು ಭಾಗವನ್ನು ಒತ್ತುವರಿ ಮಾಡಿಕೊಳ್ಳಲು ಯತ್ನಿಸಿದ್ದಾರೆ ಎಂದು ಆರೋಪಿಸಿ ಸ್ಥಳೀಯರು ಜಿಲ್ಲಾಧಿಕಾರಿಗೆ ದೂರು ನೀಡಿದ್ದರು. ತಹಶೀಲ್ದಾರ್ ಶಿವಪ್ಪ.ಎಚ್.ಲಮಾಣಿ ಮಂಗಳವಾರ ಸ್ಥಳ ಪರಿಶೀಲನೆ ನಡೆಸಿ, ಜಿಗಣಿ ಠಾಣೆಗೆ ದೂರು ನೀಡಿದ್ದರು.

'ಸರ್ವೆ ನಂ.147ರಲ್ಲಿ 53 ಎಕರೆ 12 ಗುಂಟೆ ವಿಸ್ತೀರ್ಣದ ಹೆನ್ನಾಗರ ಕೆರೆ ಅಂಗಳದ ಪಕ್ಕದಲ್ಲಿಯೇ ಖಾಸಗಿ ಕಂಪನಿಯೊಂದು ಹಿಡುವಳಿ ಜಮೀನಿನಲ್ಲಿ ಬಡಾವಣೆ ನಿರ್ಮಾಣ ಮಾಡಿದೆ. ಅಲ್ಲದೆ, ಕೆರೆ ಅಂಗಳದಲ್ಲಿ ಅಕ್ರಮವಾಗಿ ಮಣ್ಣು ಹಾಕಿ ಮೂರು ಎಕರೆ ವಿಸ್ತೀರ್ಣದ ಕೆರೆ ಜಾಗ ಮುಚ್ಚಲಾಗಿದೆ. ಕೆರೆ ಜಾಗದಲ್ಲಿ ಜೆಸಿಬಿ ಮತ್ತು ಇಟಾಚಿ ಇದ್ದು ವಶಕ್ಕೆ ಪಡೆಯಲಾಗಿದೆ' ಎಂದು ತಹಶೀಲ್ದಾರ್ ಶಿವಪ್ಪ.ಎಚ್.ಲಮಾಣಿ ತಿಳಿಸಿದರು.

ಉಪತಹಶೀಲ್ದಾರ್ ಚಂದ್ರಶೇಖರ್, ಕಂದಾಯ ನಿರೀಕ್ಷಕ ನಾಗೇಂದ್ರ ಇದ್ದರು.

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಧರಣಿ

'ಯಾವ ಸರ್ಕಾರವಿದ್ದರೂ ಹೋರಾಟ ತಪ್ಪಲ್ಲ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲೇಬೇಕು' ಎಂದು ಆಗ್ರಹಿಸಿ ಇಲ್ಲಿನ ರಾಣಿ ಚನ್ನಮ್ಮ ವೃತ್ತದಲ್ಲಿ ಬುಧವಾರ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಧರಣಿ ನಡೆಯಿತು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ನಾನು ಚೆನ್ನಾಗಿದ್ದೇನೆ ಎಂದು ಹಲವರು ಹೇಳುತ್ತಾರೆ. ನಾವು ಯಾರ ಜೊತೆಗೆ ಚೆನ್ನಾಗಿದ್ದರೂ ಅಥವಾ ಇರದಿದ್ದರೂ ಸಮಾಜಕ್ಕಾಗಿ ಹೋರಾಟ ಮಾತ್ರ ನಿಲ್ಲಿಸುವುದಿಲ್ಲ. ಸರ್ಕಾರಗಳು ಬರುತ್ತವೆ ಮತ್ತು ಹೋಗುತ್ತವೆ. ಮೀಸಲಾತಿ ಪಡೆಯುವವರೆಗೆ ಸುಮ್ಮನೆ ಕೂರಲ್ಲ' ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಹೋರಾಟ ಸಮಿತಿ ಅಧ್ಯಕ್ಷ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, 'ನಮ್ಮ ಸರ್ಕಾರ ಇದ್ದಾಗ ಮುಖ್ಯಮಂತ್ರಿ ವಿರುದ್ಧವೇ ಸಿಡಿದೆದ್ದು ನಾನು ಹೋರಾಡಿದ್ದೇನೆ. ಈಗ ಕಾಂಗ್ರೆಸ್ ಸರ್ಕಾರವಿದೆ. ಕಾಂಗ್ರೆಸ್‌ನಲ್ಲಿರುವ ನಮ್ಮ ಸಮಾಜದ ಸಚಿವರು, ಶಾಸಕರು ಸಮಾಜದ ಪರ ನಿಲ್ಲಬೇಕು.

ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲೇಬೇಕು ಎಂದು ಆಗ್ರಹಿಸಿ ಬೆಳಗಾವಿಯ ರಾಣಿ ಚನ್ನಮ್ಮ ವೃತ್ತದಲ್ಲಿ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಬುಧವಾರ ಧರಣಿ ನಡೆಯಿತು. ಸಚಿವ ಶಿವಾನಂದ ಪಾಟೀಲ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ವಾರ ಕಾಲಾವಕಾಶ ಕೇಳಿದ್ದಾರೆ. ಇನ್ನೆರಡು ವಾರ ಕಾಯೋಣ. ಲೋಕಸಭೆ ಚುನಾವಣೆ ಬರುವಷ್ಟರಲ್ಲಿ ಮೀಸಲಾತಿ ಘೋಷಿಸದಿದ್ದರೆ ರಾಜ್ಯದಲ್ಲಿ ಕ್ರಾಂತಿ ಆಗಲಿದೆ' ಎಂದರು.

'ರಾಣಿ ಚನ್ನಮ್ಮ ರಕ್ತ ಪಂಚಮಸಾಲಿಗರ ಮೈಯಲ್ಲಿ ಹರಿಯುತ್ತಿದೆ. ನಾನು ಸಮಾಜದ ಮಗಳಾಗಿ ಹೋರಾಟದಲ್ಲಿ ಇದ್ದೇನೆ. ಮುಖ್ಯಮಂತ್ರಿ ಅವರಿಗೆ ಮನವರಿಕೆ ಮಾಡಿ, ಮೀಸಲಾತಿ ಸೌಲಭ್ಯಕ್ಕೆ ಪ್ರಯತ್ನಿಸುವೆ' ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಭರವಸೆ ನೀಡಿದರು.

ಸಚಿವ ಶಿವಾನಂದ ಪಾಟೀಲ, ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಮಾತನಾಡಿದರು. ವಿನಯ ಕುಲಕರ್ಣಿ, ಅಶೋಕ ಮನಗೂಳಿ, ಮಾಜಿ ಶಾಸಕರಾದ ಎಚ್.ಎಂ.ಶಿವಶಂಕರಪ್ಪ ಇದ್ದರು.

ಡ್ರಗ್ಸ್ ಪೂರೈಕೆ ಬೆದರಿಕೆ: ಸುಲಿಗೆ

ಒಂದನೇ ಪುಟದಿಂದ

ನಿಮ್ಮನ್ನು ಈ ಪ್ರಕರಣದಿಂದ ರಕ್ಷಣೆ ಮಾಡಲು ಹಣ ನೀಡುವಂತೆ ಕೇಳಿದ್ದ. ಕರೆ ಮಾಡಿದ್ದ ಎಲ್ಲರೂ ಇಂಗ್ಲಿಷ್‌ನಲ್ಲೇ ಮಾತನಾಡಿದ್ದರು' ಎಂದು ಮೂಲಗಳು ಹೇಳಿವೆ. 'ಜೋಶಿಗೆ ಬೆದರಿಸಿದ್ದ ಆರೋಪಿಗಳು 15 ದಿನಗಳಲ್ಲಿ 25 ಬೇರೆ ಬೇರೆ ಖಾತೆಗಳಿಗೆ ಹಣವನ್ನು ವರ್ಗಾವಣೆ ಮಾಡಿಸಿಕೊಂಡಿದ್ದರು. ಜೋಶಿ ಅವರ ತಮ್ಮ ಉಳಿತಾಯ ಖಾತೆಯಲ್ಲಿದ್ದ ₹4.82 ಕೋಟಿ ಹಾಗೂ ಸ್ಥಿರ ಠೇವಣಿಯಲ್ಲಿದ್ದ ಹಣವನ್ನು ವರ್ಗಾವಣೆ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

ಅಪರಿಚಿತ ಕರೆಗಳು ಹಾಗೂ ಸಂದೇಶಗಳು ಬಂದರೆ ಯಾರೂ ಪ್ರತಿಕ್ರಿಯಿಸಬಾರದು. ಬ್ಯಾಂಕ್ ಖಾತೆ ವಿವರ, ವೈಯಕ್ತಿಕ ಮಾಹಿತಿ ನೀಡಬಾರದು ಎಂದು ಪೊಲೀಸರು ಮನವಿ ಮಾಡಿದ್ದಾರೆ.

₹85 ಲಕ್ಷ ಜಪ್ತಿ: 'ಹಣ ಕಳೆದುಕೊಂಡಿದ್ದ ₹9.14 ಕೋಟಿಯಲ್ಲಿ ₹85 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ. ಐಟಿ ಕಾಯ್ದೆ ಹಾಗೂ ಐಪಿಸಿ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ದೊಡ್ಡ ಮೊತ್ತವಾಗಿರುವ ಕಾರಣಕ್ಕೆ ಪ್ರಕರಣವನ್ನು ಸಿಐಡಿ ತನಿಖೆ ನಡೆಸುವಂತೆ ಕೋರಿ ಪತ್ರ ಬರೆಯಲಾಗಿದೆ' ಎಂದು ಸೈಬರ್ ಪೊಲೀಸರು ತಿಳಿಸಿದ್ದಾರೆ. ಹಣ ಕಳೆದು ಕೊಂಡವರು ಪ್ರತಿಕ್ರಿಯೆಗೆ ನಿರಾಕರಿಸಿದ್ದಾರೆ.

ವಿದ್ಯುತ್ ಚಿತಾಗಾರದ ಚಿಮಿಣಿಯಲ್ಲಿ ಸಮಸ್ಯೆ

ಹರಿಶ್ಚಂದ್ರ ಘಾಟ್ ಸುತ್ತಮುತ್ತ ಹೊಗೆ, ವಾಸನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರಿಶ್ಚಂದ್ರ ಘಾಟ್‌ನಲ್ಲಿರುವ ವಿದ್ಯುತ್ ಚಿತಾಗಾರದ ಚಿಮಿಣಿ ಮುರಿದುಹೋಗಿ ವರ್ಷ ಕಳೆದಿದ್ದರೂ ಅದನ್ನು ದುರಸ್ತಿ ಮಾಡಿಲ್ಲ. ಇದರಿಂದ ಹೊಗೆ ಹಾಗೂ ವಾಸನೆ ಸುತ್ತಮುತ್ತಲು ಹರಡಿಕೊಳ್ಳುತ್ತಿದೆ.

'ವರ್ಷದ ಹಿಂದೆ ಚಿಮಿಣಿ ಮುರಿದುಹೋಗಿದ್ದು, ಇದನ್ನು ದುರಸ್ತಿಪಡಿಸುವಂತೆ ಹಲವು ಬಾರಿ ಮನವಿ ಮಾಡಿಕೊಂಡಿದ್ದೇವೆ. ಆದರೆ, ಬಿಬಿಎಂಪಿಯವರು ಇತ್ತ ಗಮನಹರಿಸಿಲ್ಲ. ಪ್ರತಿ ನಿತ್ಯ ಹೊಗೆ ಹಾಗೂ ವಾಸನೆ ಆವರಿಸಿಕೊಳ್ಳುತ್ತಿದ್ದು, ಉಸಿರಾಡಲೂ ಕಷ್ಟವಾಗುತ್ತಿದೆ' ಎಂದು ಸ್ಥಳೀಯ ನಿವಾಸಿಗಳು ದೂರಿದರು.

'ಪೈಪ್ ಮಧ್ಯದಲ್ಲಿ ಮುರಿದುಹೋಗಿದ್ದು, ಹೊಗೆಯು ಸುತ್ತುವರಿಯುತ್ತದೆ. ಚಿಮಣಿ ಮುರಿದ ನಂತರ ತುಂಬಾ ಅನನುಕೂಲವಾಗಿದೆ. ದುರ್ವಾಸನೆಯೊಂದಿಗೆ ಹೊಗೆಯು ಕೆಲವೊಮ್ಮೆ ಅಸಹನೀಯವಾಗಿರುತ್ತದೆ. ಮೃತದೇಹಗಳ ಮೆರವಣಿಗೆಯ ಸಮಯದಲ್ಲಿ ಬಳಸುವ ಬ್ಯಾಂಡ್‌ಗಳ ದೊಡ್ಡ ಶಬ್ದವು ಸಹ ಪ್ರಮುಖ ಕಳವಳಕಾರಿಯಾಗಿದೆ' ಎಂದು ನಿವಾಸಿಗಳು ಆರೋಪಿಸಿದರು.

'ಚಿಮಿಣಿಯ ಕೊಳವೆಯ ಮಧ್ಯಭಾಗದಲ್ಲಿ ರಂಧ್ರವಾಗಿದ್ದು, ಅದನ್ನು ದುರಸ್ತಿಗೊಳಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ, ಬದಲಾಯಿಸಬೇಕಿದೆ. ಬಿಬಿಎಂಪಿ ಪಶ್ಚಿಮ ವಲಯದಿಂದ ಟೆಂಡರ್ ಆಹ್ವಾನಿಸಲಾಗಿದೆ. ಇದನ್ನು ಅಂತಿಮಗೊಳಿಸಿ, ಕೆಲವು ತಿಂಗಳಲ್ಲಿ ಚಿಮಿಣಿಯನ್ನು ಬದಲಾಯಿಸಲಾಯಿಸುವ ಕಾರ್ಯ ಮಾಡಲಾಗುತ್ತದೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.



ಹರಿಶ್ಚಂದ್ರ ಘಾಟ್ ಹೊರಭಾಗದಲ್ಲಿರುವ ಚಿಮಣಿ –ಪ್ರಜಾವಾಣಿ ಚಿತ್ರ

ಕರ್ನಾಟಕ ಸರ್ಕಾರ – ಸಹಕಾರ ಇಲಾಖೆ

ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್ ರಸ್ತೆ), ಮಲ್ಲೇಶ್ವರಂ, ಬೆಂಗಳೂರು–560 003.

ಸ್ಥಿರಾಸ್ತಿಯ ಬಹಿರಂಗ ಹರಾಜು ಇಸ್ತಿಹಾರು

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ

ಶ್ರೀಮತಿ ಎನ್. ಗೌರಮ್ಮ (ಅ.ನಂ. 13259) ಮನೆ ನ. 15(ಹಳೇ ನಂ.87), ಖಾತಾ ನಂ.24/3. ಹೊಸಕೆರೆಹಳ್ಳಿ, 11 ನೇ ಮೈನ್ ರೋಡ್, ಪಿಐಡಿ ನಂ.55–263–15. ಉತ್ತರಹಳ್ಳಿ ಹೋಬಳಿ, ಬನಶಂಕರಿ 3 ನೇ ಹಂತ, ಬೆಂಗಳೂರು–560085. ಇವರು ಮೇಲ್ಕಂಡ ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನ ಕೇಂದ್ರ ಕಛೇರಿಯಲ್ಲಿ ತಮ್ಮ ಸ್ಥಿರಾಸ್ತಿಯನ್ನು ಬ್ಯಾಂಕಿಗೆ ಈಡು ಮಾಡಿ ಸಾಲವನ್ನು ಪಡೆದಿದ್ದರು. ಸದರಿ ಸಾಲಗಾರರು ಸಾಲದ ಕರಾರಿನ ರೀತ್ಯಾ ಸಕಾಲದಲ್ಲಿ ಸಾಲ ಮರುಪಾವತಿ ಮಾಡದೆ ಸುಸ್ತಿದಾರರಾಗಿದ್ದರಿಂದ ಇವರ ವಿರುದ್ಧ ಸಾಲದ ಹಣ ವಸೂಲಾತಿಗಾಗಿ ಸಹಕಾರ ಸಂಘಗಳ ಕಾಯ್ದೆ ಕಲಂ 70(1) ರ ಅಡಿಯಲ್ಲಿ ಸಾಲ ವಸೂಲಾತಿಗಾಗಿ ದಾವಾವನ್ನು ಹೂಡಲಾಗಿತ್ತು. ಈ ದಾವಾದ ಪ್ರಕಾರ ವ್ಯಾಜ್ಯ ಸಂಖ್ಯೆ: ಎಆರ್‌ಡಿ/ಯುಬಿಎಫ್/250/2021–2022 ದಿನಾಂಕ:16–03–2022 ರಲ್ಲಿದ್ದಂತೆ ಸಾಲಗಾರರ ಸ್ಥಿರಾಸ್ತಿಯನ್ನು ಬಹಿರಂಗ ಹರಾಜು ಮಾಡುವ ಮೂಲಕ ಸ್ಥಿರ ಸ್ವತ್ತನ್ನು ಮಾರಾಟ ಮಾಡಿ ಸಾಲದ ಮೊಬಲಗಿಗೆ ಶೇ 14 ರಂತೆ ಸರಳ ಬಡ್ಡಿ, ಶೇ 2 ರಂತೆ ದಂಡದ ಬಡ್ಡಿ, ದಾವಾ ಫೀ, ಅಮಲ್ಜಾರಿ ಫೀ ಮತ್ತು ಇತ್ಯಾದಿಗಳನ್ನು ವಸೂಲಿ ಮಾಡಿಕೊಳ್ಳುವಂತೆ ಆದೇಶ ನೀಡಲಾಗಿದೆ. ಈ ಆದೇಶ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ–441) ಹಾಗೂ ವಸೂಲಾಧಿಕಾರಿಗಳು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ನಂ.132. ಕೆ. ಹೆಚ್. ರಸ್ತೆ, ಬೆಂಗಳೂರು–560 027. ರವರು ತಮ್ಮ ಹುಕುಂ ಸಿ.ಇ.ಪಿ.ನಂ.ಎಆರ್‌ಇ/ಯುಬಿಎಫ್/312/2021–2022 ದಿನಾಂಕ:29–03–2022 ರ ಪ್ರಕಾರ ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ಅಮಲ್ಜಾರಿ ಕ್ರಮ ನಡೆಸುವಂತೆ ಅಧಿಕಾರ ನೀಡಿರುತ್ತಾರೆ. ಈ ಆದೇಶದ ಪ್ರಕಾರ **ಈ ಕೆಳಕಂಡ ಸ್ವತ್ತಿನ ಬಹಿರಂಗ ಹರಾಜನ್ನು ಸ್ವತ್ತಿನ ಸ್ಥಳದಲ್ಲಿಯೇ ದಿನಾಂಕ : 29–12–2023 ರಂದು ಶುಕ್ರವಾರ ಬೆಳಿಗ್ಗೆ 11.00 ಘಂಟೆಗೆ** ಸಹಕಾರ ಸಂಘಗಳ ನಿಯಮಾನುಸಾರ ಮಾರಾಟ ಷರತ್ತಿಗೆ ಒಳಪಟ್ಟು ಹರಾಜನ್ನು ನಡೆಸಲಾಗುತ್ತದೆ. ಹರಾಜಿನಲ್ಲಿ ಪಾಲ್ಗೊಳ್ಳುವವರು ಷರತ್ತಿಗೆ ಒಳಪಟ್ಟಂತೆ ಪಾಲ್ಗೊಳ್ಳಬಹುದು.

ಕ್ರಮ ಸಂಖ್ಯೆ	ಸಾಲ ಪಡೆದವರ ಹೆಸರು	ಸಿ.ಇ.ಪಿ.ನಂ ಮತ್ತು ದಿನಾಂಕ	ಹರಾಜು ಮಾಡುವ ಆಸ್ತಿಯ ವಿವರ	ಹರಾಜು ಮಾಡುವ ದಿನಾಂಕ ಮತ್ತು ಸಮಯ	ಹರಾಜು ಮಾಡುವ ಸ್ಥಳ	ಸುಸ್ತಿದಾರರಿಂದ ವಸೂಲಾಗಬೇಕಾಗಿರುವ ಮೊಬಲಗು
1.	ಶ್ರೀಮತಿ ಎನ್. ಗೌರಮ್ಮ	ಸಿ.ಇ.ಪಿ.ನಂ ಎ ಆರ್‌ಇ/ ಯುಬಿಎಫ್/ 312/ 2021–2022 ದಿನಾಂಕ : 29–03–2022	ಮನೆ ನಂ. 15 (ಹಳೇ ನಂ.87), ಖಾತಾ ನಂ.24/3. ಹೊಸಕೆರೆಹಳ್ಳಿ, 11 ನೇ ಮೈನ್ ರೋಡ್, ಪಿಐಡಿ ನಂ.55–263–15. ಉತ್ತರಹಳ್ಳಿ ಹೋಬಳಿ, ಬನಶಂಕರಿ 3ನೇ ಹಂತ, ಬೆಂಗಳೂರು–560085. ಚಕ್ಕು ಬಂಧಿ : ಪೂರ್ವಕ್ಕೆ : ಸ್ವತ್ತಿನ ಸಂಖ್ಯೆ 94 ಪಶ್ಚಿಮಕ್ಕೆ : ರಸ್ತೆ ಉತ್ತರಕ್ಕೆ : ಸ್ವತ್ತಿನ ಸಂಖ್ಯೆ 88 ದಕ್ಷಿಣಕ್ಕೆ : ಸ್ವತ್ತಿನ ಸಂಖ್ಯೆ 86 ಪೂರ್ವದಿಂದ ಪಶ್ಚಿಮ 40–00 ಅಡಿಗಳು, ಉತ್ತರದಿಂದ ದಕ್ಷಿಣ 30–00 ಅಡಿಗಳು ಒಟ್ಟು 1200 ಚದರ ಅಡಿಗಳು. ನಿವೇಶನ ನೆಲಮಹಡಿ ಮೊದಲನೇ ಮಹಡಿ ಹೊಂದಿರುವ ವಸತಿ ಕಟ್ಟಡದ ಬಿಲ್ಟ್ ಅಪ್ ಪ್ರದೇಶ ಸರಿ ಸುಮಾರು 2000 ಚದರ ಅಡಿಗಳು.	29–12–2023 ಶುಕ್ರವಾರ ಬೆಳಿಗ್ಗೆ 11.00 ಘಂಟೆಗೆ	ಆಸ್ತಿ ಇರುವ ಸ್ಥಳದಲ್ಲ ಮನೆ ನಂ15 (ಹಳೇ ನಂ.87) ಖಾತಾ ನಂ.24/3. ಹೊಸಕೆರೆಹಳ್ಳಿ, 11 ನೇ ಮೈನ್ ರೋಡ್, ಪಿಐಡಿ ನಂ. 55–263–15. ಉತ್ತರಹಳ್ಳಿ ಹೋಬಳಿ, ಬನಶಂಕರಿ 3ನೇ ಹಂತ, ಬೆಂಗಳೂರು–560085	ರೂ 43,70,655/– (ಅಸಲು ಮತ್ತು ಬಡ್ಡಿ ಸೇರಿ ದಿನಾಂಕ; 02–11–2023 ರವರೆಗೆ) ಮತ್ತು ಮುಂದುವರೆದ ಬಡ್ಡಿ ಹಾಗೂ ಮುಂದುವರೆದ ಇತರೆ ವೆಚ್ಚಗಳು.

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಅಥವಾ ಮಾರಾಟಾಧಿಕಾರಿ ರವರುಗಳಿಂದ ಪಡೆಯಬಹುದು ಹಾಗೂ ಡಿಕ್ರಿ ಅವಾರ್ಡಿನ ತಾರೀಖಿನಿಂದ ಹರಾಜು ತಾರೀಖಿನವರೆಗೆ ಡಿಕ್ರಿ ಮೊಬಲಗು ಹಾಗೂ ಬಡ್ಡಿ ಮತ್ತು ಇತರೆ ಖರ್ಚುಗಳು ಸುಸ್ತಿದಾರರಿಂದ ಬರಬೇಕಾಗಿರುತ್ತದೆ. (ಅಂದಿನಿಂದ ಅವರು ಪಾವತಿ ಮಾಡಿರುವುದನ್ನು ಕಳೆದು) ಸದರಿ ಹರಾಜನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು. (ನಿ.441) ಹಾಗೂ ವಸೂಲಾಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ನಂ. 132.ಕೆ.ಹೆಚ್.ರಸ್ತೆ. ಬೆಂಗಳೂರು–27 ಇವರ ಹುಕುಂ ಮೇರೆಗೆ ಹೊರಡಿಸಲಾಗಿದೆ. ದೂರವಾಣಿ : 080 23564151 080 23563302 ಮೊಬೈಲ್ ನಂ.6363581188.

ಹರಾಜಿನ ಷರತ್ತುಗಳು

1. ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಹರಾಜಿನ ಮುನ್ನ ಇ.ಎಂ.ಡಿ.ಯಾಗಿ ರೂ.25,000/–ಗಳನ್ನು ಮಾರಾಟಾಧಿಕಾರಿಯವರಲ್ಲಾಗಲೀ ಅಥವಾ ಬ್ಯಾಂಕಿನಲ್ಲಾಗಲೀ ನಗದು/ಡಿಡಿ ಮೂಲಕ ಪಾವತಿಸಿ ರಸೀದಿ ಪಡೆದು ಹರಾಜಿನಲ್ಲಿ ಭಾಗವಹಿಸತಕ್ಕದ್ದು. (ಕೆ.ವೈ.ಸಿ ದಾಖಲೆಗಳಾದ ಆಧಾರ್ ಕಾರ್ಡ್, ಪಾನ್ ಕಾರ್ಡ್, ಅಸಲು ಪ್ರತಿ ಮತ್ತು ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ತರುವುದು)
2. ಹರಾಜಿನಲ್ಲಿ ಹೆಚ್ಚಿನ ಬಿಡ್ ನಿಂತವರು (Higher Bidder) ಹರಾಜು ಮೊಬಲಗಿನ ಶೇ.15% ರಷ್ಟು ಹಣವನ್ನು ಸ್ಥಳದಲ್ಲಿಯೇ ನಗದು /ಡಿಡಿ ಮೂಲಕ ಪಾವತಿಸಿ ರಶೀತಿಯನ್ನು ಪಡೆಯತಕ್ಕದ್ದು. ಉಳಿದ ಮೊಬಲಗನ್ನು ಮತ್ತು ಇದಕ್ಕೆ ತಗಲುವ ಸ್ಟ್ಯಾಂಪ್ ಪೇಪರ್ ಹಾಗೂ ಇತರೆ ವೆಚ್ಚಗಳ ಮೊಬಲಗನ್ನು ಬಿಡ್ ಮಾಡಿದ 45 ದಿವಸಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್ ದಿವಸ ಪಾವತಿಯಾಗಿರುವ ಮೊಬಲಗನ್ನು ವಾಪಸ್ಸು ಕೊಡಲಾಗುವುದಿಲ್ಲ. ಇದನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಹರಾಜಿನ ಇತರೆ ಷರತ್ತುಗಳನ್ನು ಫಾರಂ.8 ರಲ್ಲಿ ಪ್ರಕಟಿಸಿ ಬಹಿರಂಗ ಪಡಿಸಿರುತ್ತೆ.
4. ನಿವೇಶನ ಮತ್ತು ಕಟ್ಟಡದ ವಿಸ್ತೀರ್ಣದ ವಿಷಯದಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ಬ್ಯಾಂಕಿನವರು ಜವಾಬ್ದಾರರಲ್ಲವೆಂಬುದನ್ನು ತಿಳಿದಿರತಕ್ಕದ್ದು.
5. ಮೇಲ್ಕಂಡ ಸ್ವತ್ತನ್ನು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೇ ಹರಾಜು ಮಾಡಲಾಗುವುದು. ಇದನ್ನು ಬಿಡ್ದುದಾರರು ತಿಳಿದಿರತಕ್ಕದ್ದು.
6. ಸರ್ಕಾರಿ ಮಾರ್ಗದರ್ಶಿ ದರಕ್ಕಿಂತ ಕಡಿಮೆ ಮೊಬಲಗಿಗೆ ಬಿಡ್ (ಸವಾಲು) ಮಾಡಿದರೆ ಆ ಆಸ್ತಿಯನ್ನು ಬಿಡ್‌ದಾರರಿಗೆ ಬಿಡುವುದು ಅಥವಾ ಬಿಡದಿರುವುದು ಕೆ.ಸಿ.ಎಸ್.ರೂಲ್ಸ್ 38(6)ರ ಪ್ರಕಾರ ಮಾರಾಟಾಧಿಕಾರಿಯವರ ವಿವೇಚನೆಗೆ ಬಿಟ್ಟಿರುತ್ತದೆ.
7. ಹರಾಜು ಒಪ್ಪುವುದು ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರ ಮಾರಾಟಾಧಿಕಾರಿಯವರಿಗೆ ಸೇರಿರುತ್ತದೆ.
8. ಸುಸ್ತಿದಾರರು ಹರಾಜಿಗೆ ಮುನ್ನ ಪೂರ್ಣ ಸಾಲ ಮತ್ತು ಸಾಲದ ಬಡ್ಡಿ ಇತರೆ ಮೊಬಲಗನ್ನು ಮರು ಪಾವತಿ ಮಾಡಿದರೆ ಬಹಿರಂಗ ಹರಾಜನ್ನು ರದ್ದುಗೊಳಿಸಲಾಗುವುದು.

ಸಹಿ/– ಮಾರಾಟಾಧಿಕಾರಿ
ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್ ರಸ್ತೆ), ಮಲ್ಲೇಶ್ವರಂ, ಬೆಂಗಳೂರು–560003
ದೂ : 080 23564151 / 23563302. ಮೊ : 6363581188.

ದಿನಾಂಕ : 14–12–2023
ಸ್ಥಳ : ಬೆಂಗಳೂರು

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಬೆಂಗಳೂರು ಗ್ರಾಮಾಂತರ ಶಾಖೆ : ನಂ. 197, 2ನೇ ಮಹಡಿ, 2ನೇ ಹಂತ, ವೆಸ್ಟ್ ಆಫ್ ಕಾರ್ಡ್ ರೋಡ್, (ರಾಜಾಜಿನಗರ 1ನೇ ಬ್ಲಾಕ್ ಬಸ್ ನಿಲ್ದಾಣದ ಹತ್ತಿರ) ಬೆಂಗಳೂರು–ಫೋನ್: 080–23494628 / 23495821

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ರಾಜ್ಯದ ಹಣಕಾಸು ಸಂಸ್ಥೆಗಳ ವಸೂಲಾತಿ ಕಾಯಿದೆ 1951ರ ಕಲಂ 29ರ ಅನ್ವಯ. ಈ ಕೆಳಕಂಡ ಯಂತ್ರೋಪಕರಣಗಳನ್ನು ಸ್ವಾಧೀನ ಪಡಿಸಿ ಕೊಂಡಿದ್ದು, ಅವುಗಳನ್ನು ಇ ಹರಾಜಿನ ಮೂಲಕ **"ಎಲ್ಲಿ ಹೇಗಿವೆಯೋ ಹಾಗೆ ಇದ್ದ ಸ್ಥಿತಿಯಲ್ಲಿ"** ಮಾರಾಟಕ್ಕೆ ಲಭ್ಯವಿರುತ್ತದೆ.

1) **ಮೆ॥ ಎಸ್‌ಎಲ್‌ಎನ್ ಬೆವರೇಜಸ್:** ಬೆವರಿಜ್ ಇಂಡಸ್ಟ್ರಿ/ಪ್ಯಾಕೆಜಿಂಗ್ ಡ್ರಿಂಕಿಂಗ್ ವಾಟರ್ ಪ್ಲಾಂಟ್, ಜಾಗದ ನಂ. 11/3, ಖಾತಾ ನಂ.16, ಪಷ್ಮೀನ ವಾಟರ್ ಫ್ರಂಟ್ ಅಪಾರ್ಟ್‌ಮೆಂಟ್ ಎದುರು, ಬಿಬಿಎಂಪಿ ವಾರ್ಡ್, ಭಟ್ಟರಹಳ್ಳಿ, ಬೀದರಹಳ್ಳಿ ಹೋಬಳಿ, ಹಳೆಯ ಮದ್ರಾಸ್ ರಸ್ತೆ, ಬೆಂಗಳೂರು–560049.

ಯಂತ್ರೋಪಕರಣಗಳ ವಿವರ: 1) 4000 ಲೀಟರ್ಸ್ ಸಾಮರ್ಥ್ಯದ ಆರ್.ಓ. ಪ್ಲಾಂಟ್‌ನ ಜೊತೆಗೆ ಮೋಟರ್ಸ್ ಮತ್ತು ಬಿಡಿಭಾಗಗಳು–1ಸೆಟ್, (2) ಪೋಸ್ಟ್ ಆರ್.ಓ ನೀರಿನ ಚಿಕಿತ್ಸಾ ಪ್ಲಾಂಟ್, (ಎ) ಒಝೋನೈಸರ್ ಮತ್ತು (ಬಿ) ಯುವಿ ಸಿಸ್ಟಮ್, (3) ಸಂಗ್ರಹ ಟ್ಯಾಂಕ್ ಎಸ್‌ಎಸ್ 4000 ಲೀಟರ್ಸ್ ಸಾಮರ್ಥ್ಯ – 4 ಸಂಖ್ಯೆಗಳು ಮತ್ತು 3000 ಲೀಟರ್‌ನ ಸಾಮರ್ಥ್ಯ–1 ಸಂಖ್ಯೆ, (4) ಸ್ವಯಂಚಾಲಿತ ನಿಯಂತ್ರಣ ಮಾಡುವ ಮಲ್ಟಿಫಂಕ್ಷನ್ ಬಾಟಲಿಂಗ್ ಮಿಷನ್ (ರಿನ್ಸಿಂಗ್, ಫಿಲ್ಲಿಂಗ್ ಮತ್ತು ಕ್ಯಾಪಿಂಗ್), (5) ಮೆಟ್ರೋದ ಹಳೆಯ ಕಂಪ್ರೆಸರ್ –1 ಸಂಖ್ಯೆ. (6) ಜಾರ್ ಫಿಲ್ಲಿಂಗ್ ಮೆಷಿನ್, ರಿನ್ಸಿಂಗ್ ಮೆಷಿನ್– 20 ಲೀಟರ್ಸ್ ತುಂಬುವ ಸಾಮರ್ಥ್ಯವಿರುವ ಜಾರ್ (7) ಸ್ಕ್ರಾಪ್‌ಸ್ಥಿತಿಯಲ್ಲಿ ಇರುವ, ನಿರ್ದಿಷ್ಟತೆಯಲ್ಲಿರದ ಡಿಜಿ ಸೆಟ್ (8) ಕ್ಯಾಪ್ ಎಲಿವೆಟರ್– 1 ಸಂಖ್ಯೆ (9) ಸ್ಕ್ರಾಪ್ ಸ್ಥಿತಿಯಲ್ಲಿರುವ ಪೆಟ್ ಬಾಟಲ್ ರಿನ್ಸರ್–1 ಸಂಖ್ಯೆ (10) ಟೆಕ್ಸ್ಮೋ ಮೋಟರ್‌ನೊಂದಿಗೆ ಸಬ್‌ಮಿರ್ಸಬಲ್ ಬೋರ್‌ವೆಲ್ ಪಂಪ್–10.5 ಹೆಚ್‌ಪಿ–1 ಸಂಖ್ಯೆ (11) ಜೆನಿತ್ ಏರ್ ಡ್ರೈಯರ್, ಚಿಲ್ಲರ್ ಇನ್ ಸ್ಕ್ರಾಪ್ ಕಂಡೀಷನ್ (12) ಎಸ್‌ಎಸ್ ಇಂಟರ್‌ಕನೆಕ್ಟಿಂಗ್ ಪೈಪ್‌ಲೈನ್.

ಕಾಯ್ದಿರಿಸಿದ ಬೆಲೆ:29.39 ಲಕ್ಷ ಇಎಮ್‌ಡಿ ಮೊತ್ತ–ರೂ.2,93,900/–, ಬಿಡ್ ಮಲ್ಟಿಪ್ಲೇಯರ್ ಮೊತ್ತ: ರೂ.5,000/–, ಇಎಮ್‌ಡಿ ಪಾವತಿಯ ಕೊನೆಯ **ದಿನಾಂಕ: 18.01.2024 ಮಧ್ಯಾಹ್ನ 2:00 ಗಂಟೆಗೆ.** ಸೈಟ್‌ನಲ್ಲಿ ಪರಿಶೀಲನೆಯ **ದಿನಾಂಕ ಮತ್ತು ಸಮಯ: 27.12.2023 ಬೆಳಿಗ್ಗೆ 11.00 ರಿಂದ ಸಂಜೆ 2.00 ರವರೆಗೆ** ಇ–ಹರಾಜು: **ಪ್ರಾರಂಭವಾಗುವ ದಿನಾಂಕ: 16.01.2024 ರಂದು ಬೆಳಿಗ್ಗೆ 11.00ಕ್ಕೆ ಮತ್ತು ಮುಕ್ತಾಯವಾಗುವ ದಿನಾಂಕ: 19.01.2024 ರಂದು ಸಂಜೆ 5:00 ಗಂಟೆಗೆ.**

(2) **ಮೆ॥ ಇಂಡೋಯ್ ಮ್ಯಾನಿಫ್ಯಾಕ್ಚರಿಂಗ್**– ಇದು ಅಬ್ರೆಸೀವ್ ಉತ್ಪನ್ನಗಳ ತಯಾರಿಕೆಯ ಘಟಕ ನಂ.547ಎ, 4ನೇ ಹಂತ, ಪೀಣ್ಯ ಇಂಡಸ್ಟ್ರೀಯಲ್ ಏರಿಯಾ, ಬೆಂಗಳೂರು–560058.

ಯಂತ್ರೋಪಕರಣಗಳ ವಿವರ: 1) ಆಟೋಮೆಟಿಕ್ ಫ್ಲಾಪ್ ಡಿಸ್ಕ್ ಮೆಕಿಂಗ್ ಮೆಷಿನ್ A4F ಸೈಜ್ ರೇಂಜ್ 75–180mm, (2) ಲೆಬಲಿಂಗ್ ಮೆಷಿನ್ (3) ಓವನ್ (4) ಟೆಸ್ಟರ್ (5) ಜಂಬೂ ರೋಲ್ ಸ್ಲಿಟಿಂಗ್ ಮೆಷಿನ್, (6) ಸ್ಮಾಲ್ ರೋಲ್ ಸ್ಲಿಟಿಂಗ್ ಮೆಷಿನ್ (7) ಸ್ಟ್ರೈಟ್ ಜ್ಯಾಂಟ್ ಕಟ್ ಟು ಲೆನ್ತ್ ಕಟ್ಟಿಂಗ್ ಮೆಷಿನ್ (8) ಕನ್ಟಿನ್ಯೂಯಸ್ ಪೀಲಿಂಗ್ ಮೆಷಿನ್ (9) ಅಬ್ರೆಸೀವ್ ಬೆಲ್ಟ್ ಪ್ರೆಸ್ ಮೆಷಿನ್ (10) ಅಬ್ರೆಸೀವ್ ಬೆಲ್ಟ್ ಸ್ಲೀಟಿಂಗ್ ಮೆಷಿನ್ 650 (11) ಅಬ್ರೆಸೀವ್ ಬೆಲ್ಟ್ ಸ್ಲೀಟಿಂಗ್ ಮೆಷಿನ್ 300 (12) ಅಬ್ರೆಸೀವ್ ಬೆಲ್ಟ್ ಟೆಸ್ಟರ್ (13) ಫ್ಲಾಪ್ ಡಿಸ್ಕ್ ಶ್ರಿಂಕಿಂಗ್ ಮೆಷಿನ್ (14) ಎಲ್‌ಜಿ ಮೇಕ್ ಕಂಪ್ರೆಸ್ಸರ್, ಜೆಮಿನಿ ಸರ್ವೋ ಸ್ಟಾಬ್ಲೆಜರ್ 100 ಕೆ.ವಿ.ಎ (15) ಅಬ್ರೆಸೀವ್ ವೀಲ್ ಸ್ಮಾಲ್ ಗ್ರೈಡಿಂಗ್ ಮೆಷಿನ್, ವರ್ಕಿಂಗ್ ಟೇಬಲ್ ಬಿಗ್ – 2 ಸಂಖ್ಯೆಗಳು ಮತ್ತು ಚಿಕ್ಕದು 2 ಸಂಖ್ಯೆಗಳು, ಆಫೀಸ್ ಟೇಬಲ್ 1 ಸಂಖ್ಯೆ, ಪ್ರಿಂಟರ್–1 ಸಂಖ್ಯೆ ಮತ್ತು ಮಾನಿಟರ್–1 ಸಂಖ್ಯೆ, ಕ್ಲೀನಿಂಗ್ ಮೆಷಿನ್, ಸೆಮಿ ಅಟೋಮೆಟಿಕ್ ಸ್ಟ್ರಾಪಿಂಗ್ ಮೆಷಿನ್ ಸ್ಟೂಲ್–ಚಿಕ್ಕದು–1 ಸಂಖ್ಯೆ ಮತ್ತು ದೊಡ್ಡ ಸ್ಟೂಲ್–1 ಸಂಖ್ಯೆ, ವುಡೆನ್ ರ್‍ಯಾಕ್.

ಕಾಯ್ದಿರಿಸಿದ ಬೆಲೆ:63.98 ಲಕ್ಷಗಳು, ಇ.ಎಂ.ಡಿ. ಮೊತ್ತ : 6,39,800/–, ಬಿಡ್ ಮಲ್ಟಿಪ್ಲೇಯರ್‌ನ ಮೊತ್ತ : 5,000/– ರೂಪಾಯಿಗಳು, ಇಎಮ್‌ಡಿ ಪಾವತಿಯ ಕೊನೆಯ **ದಿನಾಂಕ: 18.01.2024 ಮಧ್ಯಾಹ್ನ 2:00 ಗಂಟೆಗೆ. ಆಸ್ತಿಯ ಪರಿವೀಕ್ಷಣೆ ದಿನಾಂಕ ಮತ್ತು ಸಮಯ: 28.12.2023 ಬೆಳಿಗ್ಗೆ 11.00 ರಿಂದ ಸಂಜೆ 4:00 ಗಂಟೆವರೆಗೆ, ಇ–ಹರಾಜು ಪ್ರಾರಂಭ ದಿನಾಂಕ: 16.01.2024 ಬೆಳಿಗ್ಗೆ 11:00 ಗಂಟೆಗೆ, ಮತ್ತು ಮುಕ್ತಾಯವಾಗುವ ದಿನಾಂಕ: 19.01.2024, ಸಂಜೆ 5.00 ಗಂಟೆಗೆ.**

1) **ಷರತ್ತು ಮತ್ತು ನಿಬಂಧನೆಗಳು** : ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಆಸಕ್ತಿಯುಳ್ಳವರು ವೆಬ್‌ಸೈಟ್: **http://kppp.karnataka.gov.in** ನಲ್ಲಿ ವೀಕ್ಷಿಸಿ ಪಡೆಯಬಹುದು. ಪೂರಕ ಭದ್ರತೆಯ ಮಾಲೀಕರಿಗೆ ಮತ್ತು ಸಾಲಗಾರರಿಗೆ ನಿಯಮ 8(6) ಮತ್ತು 9(1) ರಡಿ ಆಸ್ತಿಗಳ ಮಾರಾಟಕ್ಕಾಗಿ ನೀಡಿರುವ 30 ದಿನಗಳ ಶಾಸನಾತ್ಮಕ ಸೂಚನೆಯು ಇದಾಗಿರುತ್ತದೆ. ಇ–ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 91–8046010000, +918022631200 ಗೆ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಕೋಶ 4ನೇ ಮಹಡಿ, ಶ್ರೀ ಅರವಿಂದ ಭವನ, ಮೈತಿಕ ಸೊಸೈಟಿ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–560001 ಇವರಿಂದ ಖುದ್ದಾಗಿ ತರಬೇತಿ ಪಡೆಯಬಹುದು.

ಸ್ಥಳ: ಬೆಂಗಳೂರು
ದಿನಾಂಕ: 14.12.2023

ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು,
ಬೆಂಗಳೂರು ಗ್ರಾಮಾಂತರ ಶಾಖೆ

ಆಕ್ಸಿಸ್ ಬ್ಯಾಂಕ್

ಹರಾಜಿಗೆ ಸಾರ್ವಜನಿಕ ಸೂಚನೆ

ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟಿಸ್

ಈ ಮೂಲಕ ಸಾಲಗಾರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟೀಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 26.12.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ	ಡಿಮ್ಯಾಂಡ್ ನೋಟೀಸ್ ದಿನಾಂಕ	ಒಟ್ಟು ತೂಕ	ನಿವ್ವಳ ತೂಕ
ಬಸವನಗುಡಿ, ಬೆಂಗಳೂರು [ಕೆಟಿ]	XXXXXXXXXXX7531	ಮಂಜುನಾಥ್ ಕೆ ಟಿ	26224	30-Sep-23	6.740	6.590
ಭಟ್ಟರಹಳ್ಳಿ ಬೆಂಗಳೂರು [ಕೆಟಿ]	XXXXXXXXXXX0536	ಮನೋಜ್‌ಕುಮಾರ್.ಆರ್	78150	30-May-23	24.400	24.400
ಚಾಮರಾಜಪೇಟೆ, ಬೆಂಗಳೂರು [ಕೆಟಿ]	XXXXXXXXXXX3674	ಫೈಜುದ್ದೀನ್ ಪಿ ಕೆ	306611	30-May-23	96.100	87.000
ಚಾಮರಾಜಪೇಟೆ, ಬೆಂಗಳೂರು [ಕೆಟಿ]	XXXXXXXXXXX5219	ಫೈಜುದ್ದೀನ್ ಪಿ ಕೆ	195043	30-May-23	50.700	50.400
ಕಾಕ್ಸ್ ಟೌನ್, ಬೆಂಗಳೂರು [ಕೆಟಿ]	XXXXXXXXXXX8624	ಎಸ್ ಜೋಸೆಫ್	76178	10-Oct-23	21.200	20.900
ಚಿಕ್ಕಬಳ್ಳಾಪುರ ಕೋಲ [ಕೆಟಿ]	XXXXXXXXXXX6164	ಆರ್ ಸುಮನ್	34988	30-Sep-23	10.200	10.000
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು [ಕೆಟಿ	XXXXXXXXXXX6087	ಜುಗಲ್ ಕಿಶೋರ್	145349	9-Nov-23	42.400	36.600
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು [ಕೆಟಿ	XXXXXXXXXXX7526	ವಿನೋತ್ ಕುಮಾರ್	103212	25-Oct-23	29.800	28.800
ಗಾರ್ವೆಭಾವಿಪಾಳ್ಯ [ಕೆಟಿ]	XXXXXXXXXXX9030	ಡಿ ಸಾಯಿನಾಥ್	71945	10-Oct-23	17.000	17.000
ಗೋವಿಂದರಾಜನಗರ, ಬೆಂಗಳೂರು [ಕೆಟಿ]	XXXXXXXXXXX6700	ತಿಮ್ಮಪ್ಪ ಎಲ್	35677	18-Jul-23	16.500	10.500
ಹೊಸಕೋಟೆ, ಬೆಂಗಳೂರು [ಕೆಟಿ]	XXXXXXXXXXX2864	ರಘುನಾಥ	97930	9-Nov-23	30.300	28.000
ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು [ಕೆಟಿ]	XXXXXXXXXXX3084	ಭರತ್ ಕುಮಾರ್ ಈರಂಕಿ	330000	25-Oct-23	94.200	90.000
ಜಯನಗರ, ಬೆಂಗಳೂರು [ಕೆಟಿ]	XXXXXXXXXXX3129	ನರ್ತನ್ ಪೂವಣ್ಣ ಎಂ ಜೆ	48841	25-Aug-23	13.800	13.700
ಕಸ್ತೂರಿ ನಗರ, ಬೆಂಗಳೂರು [ಕೆಟಿ]	XXXXXXXXXXX5160	ಸುರೇಶ್ ಬಾಬು ಆರ್	137473	30-Oct-23	37.100	36.000
ಕಸ್ತೂರಿಬಾನಗರ ಮೈಸೂರು ರಸ್ತೆ [ಕೆಟಿ]	XXXXXXXXXXX8880	ವಸೀಂ ಪಾಷಾ	31195	30-Sep-23	10.600	9.700
ಕೋಲಾರ [ಕೆಟಿ]	XXXXXXXXXXX7272	ಅಕ್ಕಿರಾಜು ಹರ್ಷವರ್ಧನ್ ರಾಜು	56165	25-Oct-23	14.500	14.400
ಕೋರಮಂಗಲ, ಬೆಂಗಳೂರು [ಕೆಟಿ]	XXXXXXXXXXX9161	ಅಜೀತ್ ಎನ್	518878	10-Oct-23	128.300	126.500
ಕೋರಮಂಗಲ, ಬೆಂಗಳೂರು [ಕೆಟಿ]	XXXXXXXXXXX7179	ಅಜೀತ್ ಎನ್	504031	10-Oct-23	127.800	126.800
ಮಾಲೂರು [ಕೆಟಿ]	XXXXXXXXXXX7695	ಮಧು ಜಿ ಕೆ	50000	20-Oct-23	21.000	19.000
ಮಾರತಹಳ್ಳಿ, ಬೆಂಗಳೂರು [ಕೆಟಿ]	XXXXXXXXXXX0419	ಅರ್ಸಾದ್ ಉದ್ದೀನ್ ಮೊಂಡಲ್ ಶೇಖ್	174565	25-Oct-23	50.300	47.300
ಮಾರತಹಳ್ಳಿ, ಬೆಂಗಳೂರು [ಕೆಟಿ]	XXXXXXXXXXX6373	ಕಿರಣ್ ಕುಮಾರ್ ಎಸ್	64519	9-Nov-23	19.800	19.400
ಮಾರತಹಳ್ಳಿ, ಬೆಂಗಳೂರು [ಕೆಟಿ]	XXXXXXXXXXX1495	ಸಂಪಾರ ನರೇಶ್	58763	10-Oct-23	16.200	15.700
ನಾಗರಭಾವಿ, ಬೆಂಗಳೂರು [ಕೆಟಿ]	XXXXXXXXXXX1070	ಎ ರಮೇಶ್	508152	10-Oct-23	136.200	133.600
ನೆಲಮಂಗಲ, ಬೆಂಗಳೂರು [ಕೆಟಿ]	XXXXXXXXXXX3807	ಜಿ ಶ್ರೀನಿವಾಸ್	282214.91	30-May-23	140.900	133.700
ಹಳೆಯ ಮದ್ರಾಸ್ ರಸ್ತೆ ಬ್ಯಾನ್ [ಕೆಟಿ]	XXXXXXXXXXX1664	ವಸುಪ್ರದಾ ಸಿ ಕೆ	318722	9-Nov-23	83.500	81.800
ಹಳೆಯ ಮದ್ರಾಸ್ ರಸ್ತೆ ಬ್ಯಾನ್ [ಕೆಟಿ]	XXXXXXXXXXX9140	ವಸುಪ್ರದಾ ಸಿ ಕೆ	79074	10-Oct-23	21.900	19.600
ರಾಬರ್ಟ್‌ಸನ್‌ಪೇಟ್ [ಕೆಟಿ]	XXXXXXXXXXX9491	ವಿ ಸುರೇಶ್ ಕುಮಾರ್	113538	25-Oct-23	33.100	33.000
ಸಹಕಾರ್‌ನಗರ, ಬೆಂಗಳೂರು [ಕೆಟಿ]	XXXXXXXXXXX4736	ರಾಜೇಶ್ ಬಿ ಎಲ್	277061	9-Nov-23	75.300	69.500
ಸಹಕಾರ್‌ನಗರ, ಬೆಂಗಳೂರು [ಕೆಟಿ]	XXXXXXXXXXX0890	ಮನೋಜ್ ಕುಮಾರ್ ಜಿ	65176	5-Sep-23	21.800	19.300
ಸರ್ಜಾಪುರ ರಸ್ತೆ ಬ್ಯಾನ್ [ಕೆಟಿ]	XXXXXXXXXXX0199	ಅಭಿಲಾಷ್ ಜಿ	52733	30-May-23	14.200	13.200
ವಿದ್ಯಾರಣ್ಯಪುರ, ಬೆಂಗಳೂರು [ಕೆಟಿ]	XXXXXXXXXXX7555	ಅವಿನಾಶ ತರಗಾರ್	223600	20-Oct-23	61.900	59.700
ವಿದ್ಯಾರಣ್ಯಪುರ, ಬೆಂಗಳೂರು [ಕೆಟಿ]	XXXXXXXXXXX1050	ಅಭಿಜಿತ್ ಪಿ	121631	30-May-23	34.890	33.890
ವಿದ್ಯಾರಣ್ಯಪುರ, ಬೆಂಗಳೂರು [ಕೆಟಿ]	XXXXXXXXXXX2343	ಅಭಿಜಿತ್ ಪಿ	46095	18-Jul-23	13.630	13.530
ವಿಜಯನಗರ, ಬೆಂಗಳೂರು [ಕೆಟಿ]	XXXXXXXXXXX0385	ಹರ್ಮನ್ ಎಸ್	41661	25-Oct-23	13.500	13.480
ವಿಜಯನಗರ, ಬೆಂಗಳೂರು [ಕೆಟಿ]	XXXXXXXXXXX0343	ಹೀನಾ ಕೌಸರ್ ಶಾಫಿ ಉಲ್ಲಾ	39986	25-Aug-23	11.700	11.700
ವೈಟ್‌ಫೀಲ್ಡ್ ಮುಖ್ಯ ಬ್ಯಾನ್ [ಕೆಟಿ]	XXXXXXXXXXX2558	ವಿನೋದ ನಾಗಪ್ಪ ಬೆನ್ನೂರು	26241	20-Nov-23	7.400	6.900
ಯಲಹಂಕ, ಬೆಂಗಳೂರು [ಕೆಟಿ]	XXXXXXXXXXX9832	ಸಿ ರಾಜೇಶ್	640000	9-Nov-23	162.700	155.800

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ **https://gold.samil.in** ನಲ್ಲಿ **ದಿನಾಂಕ : 26.12.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್

ಸಂಕ್ಷಿಪ್ತ ಸುದ್ದಿಗಳು

‘ಯುವ ನಿಧಿ’ಗೆ 26ರಿಂದ ನೋಂದಣಿ ಆರಂಭ

ಬೆಂಗಳೂರು: ‘ರಾಜ್ಯ ಸರ್ಕಾರದ ಐದನೇ ‘ಗ್ಯಾರಂಟಿ’ ಯೋಜನೆ ‘ಯುವ ನಿಧಿ’ಗೆ ಇದೇ 26ರಿಂದ ನೋಂದಣಿ ಆರಂಭ ಆಗಲಿದೆ’ ಎಂದು ಕೌಶಲಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ ಪಾಟೀಲ ತಿಳಿಸಿದರು.

‘ಅರ್ಹ ಅಭ್ಯರ್ಥಿಗಳು ಸೇವಾ ಸಿಂಧು ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು. 2024ರ ಜನವರಿ 1ರಿಂದ ಯೋಜನೆ ಆರಂಭವಾಗಲಿದೆ’ ಎಂದು ಅವರು ತಿಳಿಸಿದರು.

2022-23 ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪದವಿ ಪಡೆದು ಆರು ತಿಂಗಳು ಪೂರೈಸಿದವರು ಮತ್ತು ಉನ್ನತ ಶಿಕ್ಷಣ ಅಥವಾ ಯಾವುದೇ ಉದ್ಯೋಗಕ್ಕೆ ಸೇರದೇ ಇರುವವರು ಅರ್ಜಿ ಸಲ್ಲಿಸಲು ಅರ್ಹರು. ಪದವಿ ಹೊಂದಿರುವವರಿಗೆ ಮತ್ತು ಡಿಪ್ಲೊಮಾ ತೇರ್ಗಡೆ ಆದವರಿಗೆ ಈ ಯೋಜನೆ ಅನ್ವಯಿಸಲಿದೆ ಎಂದಿದ್ದಾರೆ.

ಯೋಜನೆಯಡಿ ನಿರುದ್ಯೋಗಿ ಪದವೀಧರರಿಗೆ ಮಾಸಿಕ ₹ 3 ಸಾವಿರ, ಡಿಪ್ಲೊಮಾ ಹೊಂದಿರುವವರಿಗೆ ₹ 1,500 ಆರ್ಥಿಕ ನೆರವು ನೀಡಲಾಗುತ್ತದೆ. ಉದ್ಯೋಗ ಸಿಗುವವರೆಗೆ ಅಥವಾ ಎರಡು ವರ್ಷ ಅವಧಿಯಲ್ಲಿ ಯಾವುದು ಮೊದಲೋ ಅಲ್ಲಿಯವರಿಗೆ ಈ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತದೆ ಎಂದು ವಿವರಿಸಿದರು.

ಉನ್ನತ ಶಿಕ್ಷಣ ಇಲಾಖೆ ನೀಡಿರುವ ಅಂಕಿಅಂಶಗಳ ಪ್ರಕಾರ, ಅಂದಾಜು 5 ಲಕ್ಷ ಫಲಾನುಭವಿಗಳಿದ್ದು, ಯೋಜನೆ ಅನುಷ್ಠಾನಕ್ಕೆ ವಾರ್ಷಿಕ ₹ 2,500 ಕೋಟಿ ಅಗತ್ಯವಿದೆ ಎಂದರು.

₹ 20 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಇ.ವಿಗಳಿಗೆ ತೆರಿಗೆ ರದ್ದು

ವಿಧಾನಸಭೆ: ₹ 20 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ವಿದ್ಯುತ್ ಚಾಲಿತ ವಾಹನಗಳಿಗೆ ತೆರಿಗೆ ರದ್ದತಿಯ ತಿದ್ದುಪಡಿಯೊಂದಿಗೆ ‘ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಮಸೂದೆ–2023’ಕ್ಕೆ ವಿಧಾನಸಭೆ ಬುಧವಾರ ಅಂಗೀಕಾರ ನೀಡಿತು.

1.5 ಟನ್‌ನಿಂದ 12 ಟನ್‌ವರೆಗಿನ ತೂಕದ ಹಾಗೂ 10 ಲಕ್ಷದಿಂದ ₹ 15 ಲಕ್ಷದವರೆಗಿನ ಮೋಟಾರ್ ಕ್ಯಾಬ್ ಮತ್ತು ಸರಕು ಸಾಗಣೆ ವಾಹನಗಳಿಗೆ ಜೀವಿತಾವಧಿ ತೆರಿಗೆ ಬದಲಿಗೆ ತ್ರೈಮಾಸಿಕ ತೆರಿಗೆ ಪಾವತಿ ಪದ್ಧತಿಯನ್ನು ಪುನಃ ಅನುಷ್ಠಾನಕ್ಕೆ ತರುವ ಉದ್ದೇಶದಿಂದ ಈ ಮಸೂದೆ ತರಲಾಗಿದೆ. ₹ 20 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ವಿದ್ಯುತ್ ಚಾಲಿತ ವಾಹನಗಳಿಗೆ ವಾಹನದ ಮೌಲ್ಯದ ಶೇಕಡ 10ರಷ್ಟು ತೆರಿಗೆ ವಿಧಿಸುವ ಪ್ರಸ್ತಾವ ಮಸೂದೆಯಲ್ಲಿತ್ತು. ಅದನ್ನು ಕೈಬಿಡುವಂತೆ ವಿರೋಧ ಪಕ್ಷಗಳ ಸದಸ್ಯರು ಆಗ್ರಹಿಸಿದರು. ಬೇಡಿಕೆಯನ್ನು ಒಪ್ಪಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ₹20 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ವಿದ್ಯುತ್ ಚಾಲಿತ ಸರಕು ಸಾಗಣೆ ವಾಹನ ಮತ್ತು ಕ್ಯಾಬ್‌ಗಳಿಗೆ ವಾಹನಗಳಿಗೆ ತೆರಿಗೆ ವಿನಾಯ್ತಿ ನೀಡುವುದಾಗಿ ಪ್ರಕಟಿಸಿದರು. ಮಸೂದೆಗೆ ಸದನ ಅಂಗೀಕಾರ ನೀಡಿತು.

‘ನಕಲಿ ವೈದ್ಯರ ಪತ್ತೆಗೆ ಸೂಚನೆ’

ವಿಧಾನ ಪರಿಷತ್: ‘ನಕಲಿ ವೈದ್ಯರ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಮುಲಾಜಿಗೆ ಒಳಗಾಗದೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ (ಡಿಎಚ್‌ಒ) ಸೂಚನೆ ನೀಡಲಾಗಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಶೂನ್ಯ ವೇಳೆಯಲ್ಲಿ ಬಿಜೆಪಿಯ ಎಚ್.ಎಸ್. ಗೋಪಿನಾಥ್ ಅವರು ವಿಷಯ ಪ್ರಸ್ತಾಪಿಸಿದಾಗ ಉತ್ತರಿಸಿದ ಸಚಿವರು, ‘ನಕಲಿ ವೈದ್ಯರ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ದುರಂತವೆಂದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮುಂದಾದರೆ, ಕ್ರಮ ತೆಗೆದುಕೊಳ್ಳದಂತೆ ನಮ್ಮ ಜನಪ್ರತಿನಿಧಿಗಳೇ ಒತ್ತಡ ಹಾಕುತ್ತಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಇತ್ತೀಚೆಗೆ ಮೈಸೂರಿನಲ್ಲಿ 15 ನಕಲಿ ವೈದ್ಯರ ಮೇಲೆ ಅಲ್ಲಿನ ಅಧಿಕಾರಿಗಳು ದಾಳಿ ನಡೆಸಿ ಕ್ರಮ ಕೈಗೊಂಡಿದ್ದಾರೆ. ನಕಲಿ ವೈದ್ಯರಿರುವ ಕಡೆಗಳಲ್ಲಿ ಯಾವುದೇ ಒತ್ತಡಕ್ಕೂ ಮಣಿಯದೆ ಕಠಿಣ ಕ್ರಮ ಕೈಗೊಳ್ಳುವಂತೆ ಡಿಎಚ್‌ಒಗಳಿಗೆ ಸೂಚಿಸಲಾಗಿದೆ’ ಎಂದರು.

‘ಕೆಲವು ನಾಟಿ ವೈದ್ಯರು, ಪಾರಂಪರಿಕ ಚಿಕಿತ್ಸೆ ನೀಡುವ ವೈದ್ಯರೂ ಇದ್ದಾರೆ. ನಾಟಿ ಚಿಕಿತ್ಸೆ ನೀಡುವ ವೈದ್ಯರಿಗೂ ಸಂಘ ಸಂಸ್ಥೆಗಳು ಇವೆ. ಅವರನ್ನು ಸರ್ಕಾರದಡಿ ನೋಂದಾಯಿಸಿಕೊಳ್ಳಬೇಕೆಂಬ ಬೇಡಿಕೆಯೂ ಇದೆ’ ಎಂದೂ ಸಚಿವರು ಹೇಳಿದರು.

ಗ್ರಾಮೀಣ ಸೇವೆ ಕಡ್ಡಾಯ ರದ್ದು: ಪರಿಷತ್ ಅಂಗೀಕಾರ

ವಿಧಾನ ಪರಿಷತ್: ರಾಜ್ಯದಲ್ಲಿ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎಂಬ ನಿಯಮ ರದ್ದು ಮಾಡಲು ಅವಕಾಶ ಕಲ್ಪಿಸುವ ‘ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ಮಸೂದೆ –2023’ಗೆ ಅಂಗೀಕಾರಗೊಂಡಿತು.

ಮಸೂದೆ ಮಂಡಿಸಿ ವಿವರಣೆ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ‘ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಮಿತಿಗೊಳಿಸಿ ಅಭ್ಯರ್ಥಿಗಳು ಸರ್ಕಾರಿ ಸೇವೆಗೆ ನೇಮಿಸಲು ಈ ತಿದ್ದುಪಡಿಯಿಂದ ಅವಕಾಶ ಆಗಲಿದೆ. ಇದರ ಹಿಂದೆ ಯಾವುದೇ ದುರುದ್ದೇಶ ಇಲ್ಲ. ಹಣ ಉಳಿಸುವ ಉದ್ದೇಶವೂ ಇಲ್ಲ’ ಎಂದರು.

ಬಿಜೆಪಿಯ ವೈ.ಎ. ನಾರಾಯಣ ಸ್ವಾಮಿ, ಎನ್. ರವಿಕುಮಾರ್, ಪಿ.ಎಚ್. ಪೂಜಾರ್, ‘ಈ ತಿದ್ದುಪಡಿ ಮೂಲ ಕಾಯ್ದೆಯನ್ನು ದುರ್ಬಲಗೊಳಿಸಲಿದೆ. ಹೀಗಾಗಿ, ತಿದ್ದುಪಡಿ ಮಸೂದೆಯನ್ನು ವಾಪಸ್ ಪಡೆಯಬೇಕು’ ಎಂದು ಆಗ್ರಹಿಸಿದರು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ಮಸೂದೆ, ಕರಾವಳಿ ಅಭಿವೃದ್ಧಿ ಮಂಡಳಿ ಮಸೂದೆ ಮತ್ತು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ಮಸೂದೆ ಪರಿಷತ್‌ನಲ್ಲಿ ಅಂಗೀಕಾರಗೊಂಡವು.

ಹಾಸ್ಟೆಲ್ ಭೋಜನಾ ವೆಚ್ಚ ಹೆಚ್ಚಳಕ್ಕೆ ಪ್ರಸ್ತಾವ

ವಿಧಾನಸಭೆ: ಪ್ರಸ್ತುತ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ಸಮಾಜ ಕಲ್ಯಾಣ ಇಲಾಖೆ ಅಧೀನದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ ಭೋಜನಾ ವೆಚ್ಚವನ್ನು ಹೆಚ್ಚಿಸುವ ಪ್ರಸ್ತಾವವಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.

ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ‘ವಸತಿ ಶಾಲೆಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಮಾಸಿಕ ₹ 1,450, ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಮಾಸಿಕ ₹ 1,650, ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಮಾಸಿಕ ₹ 1,750, ಖಾಸಗಿ ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಮಾಸಿಕ ₹ 1,350 ಮತ್ತು ಖಾಸಗಿ ಅನುದಾನಿತ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಮಾಸಿಕ ₹ 1,450 ಭೋಜನಾ ವೆಚ್ಚ ನೀಡಲಾಗುತ್ತಿದೆ. ಅದನ್ನು ಹೆಚ್ಚಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ’ ಎಂದರು. ಪ್ರತಿ ತಿಂಗಳಿಗೆ ಬಾಲಕರಿಗೆ ₹ 93 ವೆಚ್ಚದಲ್ಲಿ ಹಾಗೂ ಬಾಲಕಿಯರಿಗೆ ₹134 ವೆಚ್ಚದಲ್ಲಿ ಶುಚಿ ಕಿಟ್ ನೀಡಲಾಗುತ್ತಿದೆ. ಆಹಾರ ಸಂಶೋಧನಾ ಸಂಸ್ಥೆಯ ಮಾನದಂಡಗಳ ಪ್ರಕಾರ ಗುಣ ಮಟ್ಟದ ಆಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಪ್ರವರ್ಗ–1ಕ್ಕೆ ಶೇ 4, 2ಎಗೆ ಶೇ 15ರಷ್ಟು ಮೀಸಲು ಪ್ರಸ್ತಾವ: ತಿದ್ದುಪಡಿ ಮಸೂದೆ ಮಂಡನೆ

ಗುತ್ತಿಗೆಯಲ್ಲಿ ಒಬಿಸಿಗೆ ಮೀಸಲು

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಸರ್ಕಾರದ ವಿವಿಧ ಇಲಾಖೆಗಳಲ್ಲಿ ₹ 1 ಕೋಟಿವರೆಗಿನ ವೆಚ್ಚದ ಕಾಮಗಾರಿಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1 ಮತ್ತು ಪ್ರವರ್ಗ 2–ಎ ಪಟ್ಟಿಯಲ್ಲಿರುವ ಜಾತಿಗಳಿಗೆ ಸೇರಿದ ಗುತ್ತಿಗೆದಾರರಿಗೆ ಮೀಸಲಾತಿ ಕಲ್ಪಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯನ್ನು ಬುಧವಾರ ಮಂಡಿಸಲಾಯಿತು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುತ್ತಿಗೆದಾರರಿಗೆ ₹ 1 ಕೋಟಿಯವರೆಗಿನ ವೆಚ್ಚದ ಕಾಮಗಾರಿಗಳಲ್ಲಿ ಮೀಸಲಾತಿ ನೀಡುವ ವ್ಯವಸ್ಥೆ ಇದೆ. ಅದೇ ಮಾದರಿಯಲ್ಲಿ ಹಿಂದುಳಿದ ವರ್ಗಗಳ ಗುತ್ತಿಗೆದಾರರಿಗೂ ಮೀಸಲಾತಿ ಕಲ್ಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ಪ್ರಕಟಿಸಿದ್ದರು.

₹ 1 ಕೋಟಿವರೆಗಿನ ವೆಚ್ಚದ ಕಾಮಗಾರಿಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1ರ ಪಟ್ಟಿಯಲ್ಲಿರುವವರಿಗೆ ಶೇಕಡ 4ರಷ್ಟು ಮತ್ತು ಪ್ರವರ್ಗ 2–ಎ ಪಟ್ಟಿಯಲ್ಲಿರುವ ಜಾತಿಗಳಿಗೆ ಸೇರಿದ ಗುತ್ತಿಗೆದಾರರಿಗೆ ಶೇ 15ರಷ್ಟನ್ನು ಮೀಸಲಿಡಲು ಈ ತಿದ್ದುಪಡಿ ಅವಕಾಶ ಕಲ್ಪಿಸಲಿದೆ. ಇದಕ್ಕಾಗಿ ಕೆಟಿಪಿಪಿ ಕಾಯ್ದೆ–1999 ಕ್ಕೆ ತಿದ್ದುಪಡಿ ತರುವ ಮಸೂದೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಸೂದೆಯಲ್ಲಿ ಮಂಡಿಸಿದರು.

ಬಾಂಬೆ ಸಾರ್ವಜನಿಕ ಟ್ರಸ್ಟ್ ಕಾಯ್ದೆ–1950 ರ ಅಡಿಯಲ್ಲಿ ನೋಂದಣಿಯಾಗಿದ್ದ ಸಾರ್ವಜನಿಕ ಮತ್ತು ಕೌಟುಂಬಿಕ ಟ್ರಸ್ಟ್ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಪುನಃ ಅದೇ ಕಾಯ್ದೆ ವ್ಯಾಪ್ತಿಗೆ ತರುವ ‘ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಮಸೂದೆ– 2023’ ಅನ್ನೂ ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಬಾಂಬೆ ಸಾರ್ವಜನಿಕ ಟ್ರಸ್ಟ್ ಕಾಯ್ದೆಯನ್ನು 1997ರಲ್ಲಿ ಹಿಂಪಡೆಯಲಾಗಿತ್ತು. ನಂತರ ಆ ಕಾಯ್ದೆಯಡಿ ನೋಂದಣಿಯಾಗಿದ್ದ ಸಾರ್ವಜನಿಕ ಮತ್ತು ಕೌಟುಂಬಿಕ ಟ್ರಸ್ಟ್‌ಗಳು ಹಾಗೂ ಶಿಕ್ಷಣ ಸಂಸ್ಥೆಗಳ ನಿಯಂತ್ರಣಕ್ಕೆ ಯಾವುದೇ ಕಾಯ್ದೆ ಇರಲಿಲ್ಲ. ಈಗ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳಿಗೆ ಸೀಮಿತವಾಗಿ ಬಾಂಬೆ ಸಾರ್ವಜನಿಕ ಟ್ರಸ್ಟ್ ಕಾಯ್ದೆಯನ್ನು ಹಿಂಪಡೆಯುವ ನಿರ್ಧಾರವನ್ನು ಉಳಿಸಿಕೊಂಡು, ಟ್ರಸ್ಟ್ ಮತ್ತು ಶೈಕ್ಷಣಿಕ ಸಂಸ್ಥೆಗಳಿಗಾಗಿ ಪುನಃ ಜಾರಿಗೆ ತರುವ ಪ್ರಸ್ತಾವ ತಿದ್ದುಪಡಿ ಮಸೂದೆಯಲ್ಲಿದೆ.

ಕೆಆರ್‌ಐಡಿಎಲ್‌ಗೆ ‘ಕೆಟಿಪಿಪಿ’ ವಿನಾಯ್ತಿ: ಶಿಫಾರಸು

ವಿಧಾನಸಭೆ: ₹ 5 ಕೋಟಿವರೆಗಿನ ಮೌಲ್ಯದ ಕಾಮಗಾರಿಗಳನ್ನು ನೇರವಾಗಿ ಕೈಗೊಳ್ಳಲು ಅನುಕೂಲವಾಗುವಂತೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಡಿ ವಿನಾಯ್ತಿ ನೀಡುವಂತೆ ವಿಧಾನಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿ ಶಿಫಾರಸು ಮಾಡಿದೆ.

ಕೆಆರ್‌ಐಡಿಎಲ್‌ಗೆ ಸಂಬಂಧಿಸಿದ ಸಮಿತಿಯ ವರದಿಯನ್ನು ಸಾರ್ವಜನಿಕ ಉದ್ಯಮಗಳ ಸಮಿತಿ ಸದಸ್ಯ ಯು.ಬಿ. ಬಣಕಾರ್ ಸದನದಲ್ಲಿ ಬುಧವಾರ ಮಂಡಿಸಿದರು.

ನಿಗಮವು ಈಗ ಕಟ್ಟಡ ಮತ್ತು ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಮಾತ್ರ ನಿರ್ವಹಿಸುತ್ತಿದೆ. ಕಚೇರಿಗಳ ಆಧುನೀಕರಣ, ಗ್ರಂಥಾಲಯಗಳಿಗೆ ಪೀಠೋಪಕರಣ ಪೂರೈಕೆ, ಕಂಪ್ಯೂಟರ್, ಲ್ಯಾಪ್‌ಟಾಪ್ ಪೂರೈಕೆ, ಸೋಲಾರ್ ದೀಪಗಳು ಮತ್ತು ಹೈಮಾಸ್ಟ್ ದೀಪಗಳ ಅಳವಡಿಸಲು ಅನುಕೂಲವಾಗುವಂತೆ ನಿಯಮಗಳಿಗೆ ತಿದ್ದುಪಡಿ ತರಬೇಕು ಎಂಬ ಶಿಫಾರಸು ವರದಿಯಲ್ಲಿದೆ.

ನಿಗಮವು ಕಾಮಗಾರಿಗಳ ಕುರಿತು ಸಮಗ್ರ ಮಾಹಿತಿ ನೀಡುವಂತಹ ಹೊಸ ತಂತ್ರಾಂಶ ಅಳವಡಿಸಿಕೊಳ್ಳಬೇಕು. ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಬಳಿಕವೇ ಕಾಮಗಾರಿ ಕೈಗೊಳ್ಳಬೇಕು. ಕಾಮಗಾರಿಗಳನ್ನು ಕೈಗೊಳ್ಳಲು ವಿಫಲವಾಗುವ ವೆಂಡರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ಆದೇಶ ಹೊರಡಿಸಬೇಕು. ₹ 2 ಕೋಟಿಗಿಂತ ಹೆಚ್ಚು ಮೌಲ್ಯದ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ವಿಭಜಿಸುವುದನ್ನು ನಿರ್ಬಂಧಿಸಿ ಆರ್ಥಿಕ ಇಲಾಖೆಯು ಸುತ್ತೋಲೆ ಹೊರಡಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಬರ: ಬಿಜೆಪಿ ಸಭಾತ್ಯಾಗ

ವಿಧಾನ ಪರಿಷತ್: ಬರ ಪರಿಸ್ಥಿತಿ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ರೈತರ ನೆರವಿಗೆ ಧಾವಿಸದೆ ಕೇಂದ್ರದ ದೂಷಣೆಯಲ್ಲೇ ತೊಡಗಿದೆ ಎಂದು ಆರೋಪಿಸಿ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಬರ ಪರಿಸ್ಥಿತಿ ಕುರಿತು ಬುಧವಾರ ನಡೆದ ಚರ್ಚೆಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಇಡೀ ದೇಶದಲ್ಲಿ ನಾವೇ ಮೊದಲು ಬರ ಘೋಷಣೆ ಮಾಡಿದ್ದು, ರೈತರ ಖಾತೆಗೆ ಮೊದಲ ಕಂತಾಗಿ ₹2 ಸಾವಿರ ನೀಡಲು ಕ್ರಮ ಕೈಗೊಳ್ಳಲಾಗಿದೆ’ ಎಂದರು.

‘ಫ್ರೂಟ್’ ತಂತ್ರಾಂಶದ ಆಧಾರದಲ್ಲಿ ರೈತರ ಖಾತೆಗೆ ಮುಂದಿನ ವಾರವೇ ಹಣ ಜಮೆ ಮಾಡಲಾಗುವುದು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನಿಂದ ಆರಂಭಿಸಲಾಗುವುದು ಎಂದು ಹೇಳಿದರು.

ಬರ ಪರಿಸ್ಥಿತಿಯ ಸಂಪೂರ್ಣ ಮಾಹಿತಿ ಪಡೆದು ₹18,171 ಕೋಟಿ ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ರಾಜ್ಯದ ಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ಪ್ರಧಾನಿ ಭೇಟಿಗೆ ಅವಕಾಶ ದೊರೆತಿಲ್ಲ. ಹಣವನ್ನೂ ಬಿಡುಗಡೆ ಮಾಡಿಲ್ಲ ಎಂದರು.

ಸಭಾಧ್ಯಕ್ಷರ ಪೀಠದ ಬಗ್ಗೆ ಸಚಿವ ಜಮೀರ್ ಅಹಮದ್ ಖಾನ್ ನೀಡಿದ್ದ ಹೇಳಿಕೆ ಖಂಡಿಸಿ ಬುಧವಾರ ವಿಧಾನ ಪರಿಷತ್‌ನಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಪ್ರತಾಪ್ ಸಿಂಹ ಹೆಸರು ಪ್ರಸ್ತಾಪ: ಕೋಲಾಹಲ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಲೋಕಸಭೆ ಒಳಗೆ ನುಗ್ಗಿ ದಾಳಿಗೆ ಯತ್ನಿಸಿದ ಪ್ರಕರಣದಲ್ಲಿ ಬಿಜೆಪಿ ಸಂಸದ ಪ್ರತಾಪ ಸಿಂಹ ಹೆಸರನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಸ್ತಾಪಿಸಿದ್ದು, ಕೋಲಾಹಲಕ್ಕೆ ಕಾರಣವಾಯಿತು.

ವಿಷಯ ಪ್ರಸ್ತಾಪಿಸಿದ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು, ಸಂಸತ್‌ನಲ್ಲಿ ಭದ್ರತಾ ಲೋಪ ಆಗಿದ್ದು ಶಾಸಕರಿಗೆ, ದೇಶದ ಜನರಿಗೆ ಆತಂಕ ತಂದಿದ್ದು, ಕಳವಳಕ್ಕೆ ಕಾರಣವಾಗಿದೆ. ಸರ್ವರೂ ಜಾಗೃತರಾಗಿ ಇರಬೇಕಾದ ಸಂದರ್ಭ ಇದಾಗಿದೆ. ಭದ್ರತಾ ವಿಷಯದಲ್ಲಿ ರಾಜಿ ಸಲ್ಲದು. ಭಯ ಹುಟ್ಟಿಸುವ ಶಕ್ತಿಗಳನ್ನು ಎಲ್ಲರೂ ಸೇರಿ ಖಂಡಿಸಬೇಕಾಗಿದೆ ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಧ್ವನಿಗೂಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ಮುಖ್ಯಮಂತ್ರಿ, ಸಚಿವರು ಎಂದು ಹೇಳಿದರೂ ತಪಾಸಣೆ ನಡೆಸದೇ ಒಳಗೆ ಬಿಡುವುದಿಲ್ಲ. ಒಳಗೆ ಬರುವವರು ಕೆಟ್ಟವರು, ಒಳ್ಳೆಯವರು, ಭಯೋತ್ಪಾದಕರೂ ಇರಬಹುದು. ಭದ್ರತಾ ಲೋಪ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಇಂತಹ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇನೆ’ ಎಂದರು.

ಮತ್ತೆ ಮಾತನಾಡಿದ ಡಿಸಿಎಂ ಶಿವಕುಮಾರ್, ‘ಪ್ರತಾಪ ಸಿಂಹ ಬುದ್ಧಿವಂತ. ಅವರ ಹೆಸರು ಪ್ರಸ್ತಾಪಿಸುವುದು ನನಗೆ ಇಷ್ಟವಿಲ್ಲ. ನಮ್ಮ ರಾಜ್ಯದ ಸಂಸದರಾಗಿದ್ದು, ಅವರೇ ಪಾಸ್ ಕೊಟ್ಟಿರುವುದರಿಂದ ಹೇಳಲೇಬೇಕಾಗಿದೆ’ ಎಂದರು.

> ಯಾರನ್ನೂ ಮೆಚ್ಚಿಸಲು ಹೋಗಬೇಡಿ. ಅದಕ್ಕಾಗಿ ಸದನದ ಸಮಯ ವ್ಯರ್ಥ ಮಾಡಬೇಡಿ. ಇದು ಪೌರುಷ ತೋರಿಸುವ ಸಮಯವಲ್ಲ, ಪ್ರಬುದ್ಧತೆ ಪ್ರದರ್ಶಿಸಬೇಕಾಗಿದೆ
>
> **ಯು.ಟಿ. ಖಾದರ್,** ಸಭಾಧ್ಯಕ್ಷ

ಕಾಂಗ್ರೆಸ್‌ನ ನಯನಾ ಮೋಟಮ್ಮ, ’ಬಿಜೆಪಿ ಸಂಸದರು ಬಿಟ್ಟು ಬೇರೆಯವರು ಪಾಸ್ ಕೊಟ್ಟಿದ್ದರೆ ಇಷ್ಟೊತ್ತಿಗೆ ಪರಿಸ್ಥಿತಿ ಹೇಗೆ ಇರ್ತಿತ್ತು. ನೀವೂ ಏರಿದ ಧ್ವನಿಯಲ್ಲಿ ಖಂಡಿಸಿ’ ಎಂದು ಬಿಜೆಪಿಯವರನ್ನು ಒತ್ತಾಯಿಸಿದರು.

‘ನಾವೂ ಖಂಡನೆ ಮಾಡಿದ್ದೇವೆ. ಶಿವಕುಮಾರ್ ಅವರ ತಮ್ಮ ಸಂಸದರಾಗಿದ್ದು ಅವರೇ ಪಾಸ್ ಕೊಟ್ಟಿದ್ದರೆ ಆಗ ಏನಾಗುತ್ತಿತ್ತು? ರಾಜಕಾರಣ ಬೇಡ’ ಎಂದು ಅಶೋಕ ಹೇಳಿದರು.

ಗದ್ದಲ ಜೋರಾಗುತ್ತಿದ್ದಂತೆ ಕಲಾಪ ಮುಂದೂಡಿದ ಸಭಾಧ್ಯಕ್ಷ ಯು.ಟಿ. ಖಾದರ್, ಸಂಧಾನ ಸಭೆ ನಡೆಸಿದರು.

ಬಳಿಕ ಕಲಾಪ ಆರಂಭವಾದಾಗ ಮಾತನಾಡಿದ ಸಭಾಧ್ಯಕ್ಷರು, ‘ಎಲ್ಲರಿಗೂ ಎಚ್ಚರಿಕೆ ಕೊಡುವ ಘಟನೆ ಇದಾಗಿದೆ. ತಪ್ಪಿತಸ್ಥರನ್ನು ಹುಡುಕಿ ಶಿಕ್ಷಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಲಿ. ಯಾರೋ ಪಾಸ್ ಕೇಳುತ್ತಾರೆ, ಮಾನವೀಯತೆ ಮೇಲೆ ಪಾಸ್ ಕೊಡುತ್ತೇವೆ. ಇನ್ನುಮುಂದೆ ಯಾರೊಬ್ಬರೂ ಅಪರಿಚಿತರಿಗೆ ಪಾಸ್ ಕೊಡಬೇಡಿ. ಆಪ್ತ ಸಹಾಯಕರು ಶಾಸಕರಿಗಿಂತ ಹೆಚ್ಚಿನ ಪ್ರಭಾವ ಹೊಂದಿದ್ದಾರೆ. ಒಳಗೆ ಬಿಡುವುದಿಲ್ಲವೆಂದ ಪೊಲೀಸರ ಮೇಲೆ ದಬ್ಬಾಳಿಕೆ ನಡೆಸುತ್ತಾರೆ. ಇದು ತಪ್ಪಬೇಕು. ನಾವೆಲ್ಲ ಎಚ್ಚರವಹಿಸೋಣ. ಲೋಕಸಭೆಯಲ್ಲಿ ನಡೆದ ಘಟನೆಯನ್ನು ಸರ್ವಾನುಮತದಿಂದ ಖಂಡಿಸೋಣ’ ಎಂದು ಹೇಳಿ ವಿಷಯವನ್ನು ಕೊನೆಗೊಳಿಸಿದರು.

‘ದೇಶದ್ರೋಹದ ಹಣೆಪಟ್ಟಿ ಕಟ್ಟುತ್ತಿದ್ದಿರಿ’

ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಕಾಂಗ್ರೆಸ್ ಸದಸ್ಯರು, ‘ನಮ್ಮ ಪಕ್ಷದವರು ಪಾಸ್ ಕೊಟ್ಟಿದ್ದರೆ ಇಷ್ಟೊತ್ತಿಗೆ ದೇಶದ್ರೋಹದ ಹಣೆಪಟ್ಟಿ ಕಟ್ಟಿ, ಏನೇನೋ ಮಾಡಿಬಿಡುತ್ತಿದ್ದೀರಿ. ಪ್ರಕರಣ ಖಂಡಿಸಿ ಧರಣಿ ಮಾಡಿ. ಪ್ರತಾಪ ಸಿಂಹ ಧೋರಣೆ ಖಂಡಿಸಿ’ ಎಂದು ಆಗ್ರಹಿಸಿದರು. ಕಲಾಪ ಗದ್ದಲದ ಗೂಡಾಯಿತು.

ಈ ವೇಳೆ, ಅಶೋಕ ಹೇಳಿದ ಮಾತೊಂದು ಸಚಿವರು, ಕಾಂಗ್ರೆಸ್‌ನವರನ್ನು ಕೆರಳಿಸಿತು. ಸಿಟ್ಟಾದ ಎಚ್.ಕೆ. ಪಾಟೀಲರು, ‘ಅನಾರೋಗ್ಯಕರ ರಾಜಕೀಯ ಮಾಡ್ತಾ ಇದ್ದೀರಿ. ನಾವೇನಾದರೂ ಪ್ರತಾಪ ಸಿಂಹ ರಾಜೀನಾಮೆ ಕೇಳಿದ್ದೇವೆಯೇ? ನೀವಾದರೆ ಏನು ಮಾಡುತ್ತಿದ್ದೀರಿ’ ಎಂದು ಅಬ್ಬರಿಸಿದರು.

‘ಯಾರ್‍ಯಾರಿಗೋ ಪಾಸ್ ಕೊಟ್ಟಿರುತ್ತಾರೆ. ಅದಕ್ಕೆ ಸಂಸದರು ಹೇಗೆ ಹೊಣೆ? ಭದ್ರತಾ ವೈಫಲ್ಯ ಇರಬಹುದು’ ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಹೇಳಿದರು. ಇದನ್ನು ಉಲ್ಲೇಖಿಸಿದ, ಸಚಿವ ಪ್ರಿಯಾಂಕ್, ‘ಕೇಂದ್ರ ಗೃಹ ಸಚಿವರ ಲೋಪವೇ, ಅವರು ಸಮರ್ಥರಾ’ ಎಂದು ಕೆಣಕಿದರು.

ಜಮೀರ್ ವಿರುದ್ಧ ಕೆರಳಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ತೆಲಂಗಾಣ ವಿಧಾನಸಭೆಗೆ ನಡೆದ ಚುನಾವಣೆ ಪ್ರಚಾರದ ವೇಳೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಸಭಾಧ್ಯಕ್ಷ ಪೀಠದ ಬಗ್ಗೆ ನೀಡಿದ ಹೇಳಿಕೆ ವಿಧಾನಪರಿಷತ್‌ನಲ್ಲಿ ಬುಧವಾರ ಭಾರಿ ಗದ್ದಲಕ್ಕೆ ಕಾರಣವಾಯಿತು. ಜಮೀರ್ ಕ್ಷಮೆ ಯಾಚಿಸಲೇಬೇಕು ಎಂದು ಪಟ್ಟು ಹಿಡಿದ ಬಿಜೆಪಿ ಸದಸ್ಯರು, ಪ್ರಶ್ನೋತ್ತರ ಕಲಾಪ ಬಹಿಷ್ಕರಿಸಿ ಸಭಾತ್ಯಾಗ ನಡೆಸಿದರು.

ಪ್ರಶ್ನೋತ್ತರ ವೇಳೆ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಕೇಳಿದ ಪ್ರಶ್ನೆಗೆ ಉತ್ತರ ನೀಡಲು ಜಮೀರ್ ಮುಂದಾಗುತ್ತಿದ್ದಂತೆ, ಬಿಜೆಪಿಯ ಕೋಟ ಶ್ರೀನಿವಾಸ್ ಪೂಜಾರಿ, ವೈ.ಎ. ನಾರಾಯಣಸ್ವಾಮಿ, ತೇಜಸ್ವಿನಿಗೌಡ ಮತ್ತಿತರ ಸದಸ್ಯರು ಎದ್ದು ನಿಂತು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ಸಭಾಧ್ಯಕ್ಷ ಪೀಠಕ್ಕೆ ಅಗೌರವ ತೋರಿರುವವರಿಂದ ಉತ್ತರ ಕೊಡಿಸುವುದು ಎಷ್ಟರ ಮಟ್ಟಿಗೆ ಸರಿ’ ಎಂದು ಬಿಜೆಪಿ ಸದಸ್ಯರು ಪ್ರಶ್ನಿಸಿದರು. ಆಗ ಸದನದಲ್ಲಿ ಗದ್ದಲ ಉಂಟಾಯಿತು. ಪರಿಸ್ಥಿತಿ ತಿಳಿಗೊಳಿಸಲು ಸಭಾಪತಿ ಬಸವರಾಜ ಹೊರಟ್ಟಿ ಪ್ರಯತ್ನಿಸಿದರೂ ಬಿಜೆಪಿ ಸದಸ್ಯರು ಸಮಾಧಾನಗೊಳ್ಳಲಿಲ್ಲ.

ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡ ಜಮೀರ್, ‘ನಾನು ಎಲ್ಲಿಯೂ ಸಭಾಧ್ಯಕ್ಷ ಸ್ಥಾನಕ್ಕೆ ಅಗೌರವ ತೋರಿಸಿಲ್ಲ. ತೋರಿಸುವುದೂ ಇಲ್ಲ. ಮುಂದೆಯೂ ಆ ರೀತಿ ನಡೆದುಕೊಳ್ಳುವುದಿಲ್ಲ. ನನ್ನ ಹೇಳಿಕೆಯನ್ನು ಬಿಜೆಪಿಯವರು ತಿರುಚುತ್ತಿದ್ದಾರೆ. ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ’ ಎಂದರು.

ಸಭಾನಾಯಕ ಎನ್.ಎಸ್. ಬೋಸರಾಜು, ‘ಜಮೀರ್ ಅವರು ಈಗಾಗಲೇ ಸ್ಪಷ್ಟನೆ ಕೊಟ್ಟಿರುವುದರಿಂದ ಮತ್ತೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದರಲ್ಲಿ ಅರ್ಥವಿಲ್ಲ. ಅಲ್ಲದೆ, ಅವರು ಕೆಳಮನೆ ಬಗ್ಗೆ ಮಾತನಾಡಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಕಲಾಪಕ್ಕೆ ಅಡ್ಡಿಪಡಿಸುವುದು ಸರಿಯಲ್ಲ’ ಎಂದರು. ಈ ಹಂತದಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ಆರಂಭವಾಯಿತು. ಪರಿಸ್ಥಿತಿ ತಹಬದಿಗೆ ಬಾರದ ಕಾರಣ ಸಭಾಪತಿ 10 ನಿಮಿಷ ಸದನ ಮುಂದೂಡಿದರು.

ಮತ್ತೆ ಸದನ ಸೇರಿದಾಗ ಬಿಜೆಪಿ ಸದಸ್ಯರು ತಮ್ಮ ಆಕ್ಷೇಪವನ್ನು ಮುಂದುವರೆಸಿದರು. ಆಗ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಪ್ರತಿಷ್ಠೆಯನ್ನು ಬಿಟ್ಟು ಕಲಾಪ ನಡೆಯಲು ಎಲ್ಲರೂ ಸಹಕಾರ ಕೊಡಬೇಕು’ ಎಂದು ಮನವಿ ಮಾಡಿದರು. ಗದ್ದಲ ಮುಂದುವರಿದಾಗ ಸಭಾಪತಿ ಮತ್ತೆ 10 ನಿಮಿಷ ಸದನ ಮುಂದೂಡಿದರು.

ಪುನಃ ಸಭೆ ಸೇರಿದಾಗ, ‘ಎರಡು ಬಾರಿ ಸದನ ಮುಂದೂಡಲಾಗಿದೆ. ಸಂಬಂಧಪಟ್ಟ ಸಚಿವರು ಉತ್ತರ ನೀಡಿದ್ದಾರೆ. ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಆಗಬೇಕಿದೆ. ಕಲಾಪ ನಡೆಸಲು ಸಹಕರಿಸಿ’ ಎಂದು ಸಭಾಪತಿ ಮನವಿ ಮಾಡಿದರು. ಆಗ ಕೋಟ ಶ್ರೀನಿವಾಸ ಪೂಜಾರಿ, ‘ಜಮೀರ್ ಸಚಿವ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು. ಇಲ್ಲವೇ ಈ ಸದನಲ್ಲಿ ಕ್ಷಮೆ ಯಾಚಿಸಬೇಕು ಅಥವಾ ಈ ವಿಷಯವನ್ನು ಹಕ್ಕು ಬಾಧ್ಯತಾ ಸಮಿತಿಗೆ ವಹಿಸಬೇಕು’ ಎಂದು ಒತ್ತಾಯಿಸಿದರು. ಅದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯ ರಘುನಾಥ್ ರಾವ್ ಮಲ್ಕಾಪುರೆ, ‘ಜಮೀರ್ ಕ್ಷಮೆ ಕೇಳಬೇಕು ಇಲ್ಲವೇ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು. ಇಲ್ಲದಿದ್ದರೆ ನಾವು ಅವರ ಯಾವುದೇ ಪ್ರಶ್ನೆಗಳಿಗೆ ಉತ್ತರ ಬಯಸುವುದಿಲ್ಲ, ಕಲಾಪ ಬಹಿಷ್ಕರಿಸುತ್ತೇವೆ’ ಎಂದು ಗುಡುಗಿದರು. ಅಂತಿಮವಾಗಿ ಸಭಾಪತಿ ಪ್ರಶ್ನೋತ್ತರ ಕಲಾಪ ಆರಂಭಿಸುತ್ತಿದ್ದಂತೆ, ಜಮೀರ್ ವಿರುದ್ಧ ಘೋಷಣೆ ಕೂಗುತ್ತಾ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಜಮೀನು ಅಕ್ರಮ ವರ್ಗಾವಣೆ: ತನಿಖೆಗೆ ಆಗ್ರಹ

ವಿಧಾನಸಭೆ: ಕಬ್ಬಿಣ ಮತ್ತು ಉಕ್ಕು ತಯಾರಿಕಾ ಕಾರ್ಖಾನೆ ಆರಂಭಿಸುವುದಾಗಿ 4,877 ಎಕರೆ ಜಮೀನು ಪಡೆದುಕೊಂಡಿದ್ದ ಬ್ರಹ್ಮಿಣಿ ಸ್ಟೀಲ್ಸ್ ಆ ಜಮೀನನ್ನು ಅಕ್ರಮವಾಗಿ ಉತ್ತಮ್ ಗಾಲ್ವಾ ಎಂಬ ಕಂಪನಿಗೆ ಮಾರಾಟ ಮಾಡಿರುವ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್‌ನ ಈ. ತುಕಾರಾಂ ಆಗ್ರಹಿಸಿದರು.

ಉತ್ತರ ಕರ್ನಾಟಕದ ಸಮಸ್ಯೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಬುಧವಾರ ಮಾತನಾಡಿದ ಅವರು, ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಜಿ. ಜನಾರ್ದನ ರೆಡ್ಡಿ ಹೆಸರನ್ನು ಉಲ್ಲೇಖಿಸದೇ ವಾಗ್ದಾಳಿ ನಡೆಸಿದರು. ರೆಡ್ಡಿ ಮಂಗಳವಾರ ಸದನದಲ್ಲಿ ಆಡಿದ್ದ ಮಾತುಗಳಿಗೆ ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿದರು.

‘ಬಳ್ಳಾರಿ ಜಿಲ್ಲೆಯಲ್ಲಿ 11,000 ಎಕರೆ ಜಮೀನನ್ನು ಕೈಗಾರಿಕೆಗಳ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಆರ್ಸೆಲರ್ ಮಿತ್ತಲ್, ಬ್ರಹ್ಮಿಣಿ ಸ್ಟೀಲ್ಸ್ ಸೇರಿದಂತೆ ಹಲವು ಕಂಪನಿಗಳಿಗೆ ಜಮೀನು ನೀಡಲಾಗಿತ್ತು. ಒಬ್ಬರೂ ಕೈಗಾರಿಕೆ ಸ್ಥಾಪಿಸಿಲ್ಲ. ಅಂತಹ ಜಮೀನು ರಿಯಲ್ ಎಸ್ಟೇಟ್ ಉದ್ದೇಶಕ್ಕೆ ದುರ್ಬಳಕೆಯಾಗುತ್ತಿದೆ. ತಕ್ಷಣ ಈ ಜಮೀನುಗಳನ್ನು ವಶಕ್ಕೆ ಪಡೆಯಬೇಕು. ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ನೀಡಬೇಕು ಅಥವಾ ರೈತರಿಗೆ ಮರಳಿಸಬೇಕು’ ಎಂದು ಒತ್ತಾಯಿಸಿದರು.

‘ಬಳ್ಳಾರಿಯಲ್ಲಿ ‘ರಿಪಬ್ಲಿಕ್’ ಮಾಡಿಕೊಂಡಿದ್ದವರು ಈಗ ಏನೇನೋ ಮಾತನಾಡುತ್ತಿದ್ದಾರೆ. 2011ರ ಸೆಪ್ಟೆಂಬರ್ ನಂತರ ಅವರು ಎಲ್ಲಿದ್ದರು ಎಂಬುದು ಗೊತ್ತಿದೆ. ಈಗ ತಾವೇ ಬಳ್ಳಾರಿ ಅಭಿವೃದ್ಧಿಪಡಿಸಿದ್ದಾಗಿ ಮಾತನಾಡುತ್ತಿದ್ದಾರೆ’ ಎಂದು ಟೀಕಿಸಿದರು. ಬಳ್ಳಾರಿಯಲ್ಲಿ ಮತ್ತೆ ‘ರಿಪಬ್ಲಿಕ್’ ನಡೆಸಲು ಯಾರಿಗೂ ಅವಕಾಶ ಕೊಡಬಾರದು. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆಯನ್ನು ಚುರುಕುಗೊಳಿಸಬೇಕು. ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಕೆಲವು ಅಧಿಕಾರಿಗಳು ಮತ್ತೆ ಬಳ್ಳಾರಿ ಜಿಲ್ಲೆಗೆ ಬಂದಿದ್ದಾರೆ. ಅಂತಹ ಅಧಿಕಾರಿಗಳನ್ನು ತಕ್ಷಣ ವರ್ಗಾವಣೆ ಮಾಡಬೇಕು ಎಂದು ಒತ್ತಾಯಿಸಿದರು.

‘ಸುವರ್ಣಸೌಧ ಟೂರಿಂಗ್ ಟಾಕೀಸ್’

ಪ್ರಜಾವಾಣಿ ವಾರ್ತೆ

ವಿಧಾನಸಭೆ: ವರ್ಷದಲ್ಲಿ 10 ದಿನ ಕಲಾಪ ನಡೆಯುವುದರಿಂದ ಸುವರ್ಣ ವಿಧಾನಸೌಧವು ‘ಟೂರಿಂಗ್ ಟಾಕೀಸ್’ ರೀತಿಯಾಗಿದೆ ಎಂದು ಬಿಜೆಪಿಯ ಅಭಯ ಪಾಟೀಲ ಹೇಳಿದರು.

ಉತ್ತರ ಕರ್ನಾಟಕದ ಸಮಸ್ಯೆ ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ಅವರು, ಕಲಾಪ ನಡೆಯುವ ವೇಳೆ ಕೆಲವು ಶಾಸಕರು ಗೋವಾ ಮತ್ತು ದೇವಸ್ಥಾನಗಳ ಸುತ್ತಾಟದಲ್ಲೇ ನಿರತರಾಗಿರುತ್ತಾರೆ. ಸುವರ್ಣಸೌಧ ನಿರ್ಮಾಣದ ಆಶಯ ಈಡೇರುತ್ತಿಲ್ಲ ಎಂದರು.

‘ಗೋವಾಕ್ಕೆ ಹೋಗುವ ರಸ್ತೆಗಳ ಗಡಿಯಲ್ಲಿ ಶಾಸಕರನ್ನು ನಿರ್ಬಂಧಿಸಿ, ಅಲ್ಲಿಂದಲೇ ವಾಪಸ್ ಕಳುಹಿಸುವ ವ್ಯವಸ್ಥೆ ಮಾಡಿ’ ಎಂದು ಬಿಜೆಪಿಯ ಎಸ್.ಆರ್. ವಿಶ್ವನಾಥ್ ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, ‘ನಮ್ಮ ಸ್ವಾಭಿಮಾನದ ಶಕ್ತಿ ಕೇಂದ್ರ ಇದು. ಇದನ್ನು ಕಟ್ಟುವ ಹಿಂದೆ ಬೇರೆ ಬೇರೆ ಉದ್ದೇಶಗಳೂ ಇದ್ದವು. ಕಟ್ಟಿದ ಮೇಲೆ ಸಮಸ್ಯೆಗಳು ಕಡಿಮೆಯಾಗಿದ್ದು, ಅಭಿವೃದ್ಧಿಯೂ ಆಗಿದೆ. ಈಗ ಏನು ಮಾಡಬೇಕು ಹೇಳಿ’ ಎಂದರು.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ

ಪರೀಕ್ಷೆ: ಗ್ರಾ.ಪಂ. ಸಿಬ್ಬಂದಿ ಬಳಕೆ ಇಲ್ಲ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ಎಸ್‌ಎಸ್‌ಎಲ್‌ಸಿ ಪರಿಕ್ಷಾ ಕಾರ್ಯಕ್ಕೆ ಗ್ರಾಮ ಪಂಚಾಯಿತಿ ಸಿಬ್ಬಂದಿ ನಿಯೋಜಿಸಲು ಸಾಧ್ಯವಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪರೀಕ್ಷಾ ಕೇಂದ್ರಗಳನ್ನು ಕಡಿಮೆ ಮಾಡಬಾರದು, ಪರೀಕ್ಷಾ ಕಾರ್ಯಕ್ಕೆ ಗ್ರಾಮ ಪಂಚಾಯಿತಿ ‘ಡಿ’ ಗ್ರೂಪ್ ನೌಕರರನ್ನು ಬಳಸಿಕೊಳ್ಳಬಾರದು ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ, ಎಸ್.ಎಲ್.ಭೋಜೇಗೌಡ ಅವರು ನಿಯಮ 330ರ ಅಡಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಅವರು, ‘ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ಬಂದರೂ, ಅನುಮತಿ ನೀಡುವುದಿಲ್ಲ. ಇಲಾಖೆಯ ಸಿಬ್ಬಂದಿ ಸಾಕಷ್ಟು ಕೆಲಸಗಳಿರುತ್ತವೆ’ ಎಂದರು.

ಶಿಕ್ಷಕರ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸವನ್ನು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮಾಡುತ್ತಿದೆ. ಪರೀಕ್ಷಾ ಮೇಲ್ವಿಚಾರಣೆಗೆ ಪ್ರಾಥಮಿಕ ಶಿಕ್ಷಕರನ್ನು ಬಳಸಿಕೊಳ್ಳುವ ಬದಲು ಮೊದಲಿನಂತೆ ಒಂದು ವಿಷಯದ ಪರೀಕ್ಷೆಗೆ ಬೇರೆ ವಿಷಯದ ಪ್ರೌಢಶಾಲಾ ಶಿಕ್ಷಕರನ್ನೇ ಬಳಸಿಕೊಳ್ಳಬೇಕು. ಡ್ರೋನ್ ಬಳಕೆ ಬದಲು, ಪರೀಕ್ಷಾ ಕೇಂದ್ರಗಳ ಬಳಿ ನಿಷೇಧಾಜ್ಞೆ ಜಾರಿ ಮಾಡಬೇಕು. ಪೊಲೀಸ್ ನಿಯೋಜಿಸಬೇಕು. ಪಿಯು ಉಪ ನಿರ್ದೇಶಕರ ಮೇಲ್ವಿಚಾರಣೆ ಜಿಲ್ಲಾ ಪಂಚಾಯಿತಿಗೆ ನೀಡಬಾರದು ಎಂದು ಆಗ್ರಹಿಸಿದರು.

ಬೆಂಗಳೂರಿನಲ್ಲಿ ಅಂಬಿಗರ ಚೌಡಯ್ಯ ಪ್ರತಿಮೆ: ಅಂಬಿಗರ ಚೌಡಯ್ಯ ಪ್ರತಿಮೆಯನ್ನು ಬೆಂಗಳೂರಿನ ಪ್ರತಿಷ್ಠಿತ ಸ್ಥಳದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳುವುದಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕಾಂಗ್ರೆಸ್‌ನ ತಿಪ್ಪಣ್ಣಪ್ಪ ಕಮಕನೂರ ಅವರ ಪ್ರಸ್ತಾವಕ್ಕೆ ಪ್ರತಿಕ್ರಿಯಿಸಿದ ಅವರು, ವಿಧಾನಸೌಧ, ಶಾಸಕರ ಭವನದ ಬಳಿ ಈಗಾಗಲೇ ಸಾಕಷ್ಟು ಪ್ರತಿಮೆ ಸ್ಥಾಪಿಸಲಾಗಿದೆ. ಸೂಕ್ತ ಸ್ಥಳ ಗುರುತಿಸಿದ ನಂತರ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಮೌಢ್ಯ ಆಚರಣೆ, ಮಾಟ–ಮಂತ್ರಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು.

ಕಾಂಗ್ರೆಸ್‌ನ ಯುಬಿ.ವೆಂಕಟೇಶ್ ಪ್ರಶ್ನೆಗೆ ಉತ್ತರಿಸಿದ ಅವರು, ತುಮಕೂರು ತಾಲ್ಲೂಕಿನ ಮಲ್ಲೇನಹಳ್ಳಿಯಲ್ಲಿ ಬಾಣಂತಿ ಮತ್ತು ಮಗುವನ್ನು ಊರ ಹೊರಗಿನ ಗುಡಿಸಲಲ್ಲಿ ಇಟ್ಟ ಕಾರಣ ಮಗು ಮೃತಪಟ್ಟಿದೆ. ಕುಟುಂಬದ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದರು.

ನಡುಗಡ್ಡೆ ರೈತರಿಗೆ ಸೌಲಭ್ಯಕ್ಕೆ ಆಗ್ರಹ

ಆಲಮಟ್ಟಿ ಹಿನ್ನೀರಿನಿಂದ ನಡುಗಡ್ಡೆಯಾಗಿರುವ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಕಂಕಣವಾಡಿ ಗ್ರಾಮದ 700 ಎಕರೆ ಭೂಮಿಯ ರೈತರಿಗೆ ಅಗತ್ಯ ನೆರವು ನೀಡಬೇಕು ಎಂದು ಬಿಜೆಪಿಯ ಹಣಮಂತ ನಿರಾಣಿ ಒತ್ತಾಯಿಸಿದರು.

ರೈತರು ಸ್ವತಃ ಹಣ ಹಾಕಿಕೊಂಡು ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಬೆಳೆಗಳನ್ನು ಸಾಗಿಸಲು, ಓಡಾಟಕ್ಕೆ ಸೂಕ್ತ ಬೋಟ್ ಒದಗಿಸಬೇಕು. ಇಲ್ಲವೇ, ಭೂಸ್ವಾಧೀನ ಮಾಡಿಕೊಂಡು ಸೂಕ್ತ ಪರಿಹಾರ ನೀಡಬೇಕು ಎಂದರು.

ಅವರ ಪ್ರಶ್ನೆಗೆ ಉತ್ತರಿಸಿದ ಸಭಾ ನಾಯಕ ಎನ್.ಎಸ್.ಬೋಸರಾಜು, ಅಧಿಕಾರಿಗಳು, ಜನಪ್ರತಿನಿಧಿಗಳ ಸಭೆ ಕರೆದು ಸೂಕ್ತ ಪರಿಹಾರ ಒದಗಿಸುವ ಭರವಸೆ ನೀಡಿದರು.

‘ಭೂ ಒಡೆತನ: ತನಿಖೆಗೆ ಸಿದ್ಧ’

ವಿಧಾನಸಭೆ: ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಭೂ ಒಡೆತನ ಯೋಜನೆ ಅನುಷ್ಠಾನದಲ್ಲಿ ಅಕ್ರಮ ನಡೆದಿರುವ ಆರೋಪದ ಬಗ್ಗೆ ದಾಖಲೆ ಒದಗಿಸಿದರೆ ತನಿಖೆಗೆ ಸಿದ್ಧ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಭರವಸೆ ನೀಡಿದರು.

ಜೆಡಿಎಸ್‌ನ ನೇಮಿರಾಜ ನಾಯ್ಕ ಪ್ರಶ್ನೆಗೆ ಬುಧವಾರ ಉತ್ತರಿಸಿದ ಅವರು, ‘ಅನುದಾನದ ಲಭ್ಯತೆಯನ್ನು ಆಧರಿಸಿ ಭೂ ಒಡೆತನ ಯೋಜನೆಯಡಿ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಜಮೀನು ವಿತರಿಸಲಾಗುತ್ತಿದೆ. ನಿಯಮ ಉಲ್ಲಂಘನೆ, ಅಕ್ರಮ ನಡೆದಿರುವುದಕ್ಕೆ ಸಾಕ್ಷ್ಯಗಳಿದ್ದರೆ ನೇರವಾಗಿ ನನಗೆ ತಲುಪಿಸಿ. ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದರು.

ಅಧಿಕಾರಿಗಳು ಅಕ್ರಮವಾಗಿ ಹಣ ವಿತರಿಸಲು ಪ್ರಯತ್ನಿಸುತ್ತಿದ್ದಾರೆ. ನಿಗಮದ ಭೂ ಒಡೆತನ ಯೋಜನೆಯಲ್ಲಿ ₹ 115 ಕೋಟಿ ಅವ್ಯವಹಾರ ನಡೆದಿರುವ ದಾಖಲೆಗಳಿವೆ. ಇದರ ತನಿಖೆಯಾಗಬೇಕು ಎಂದು ನೇಮಿರಾಜ ನಾಯ್ಕ ಆಗ್ರಹಿಸಿದರು.

ಆರ್ಥಿಕ ಸ್ಥಿತಿ ಹಾಳಾಗಿ ಹೋಗಲು ಕೇಂದ್ರ ಕಾರಣ: ಸಿದ್ದರಾಮಯ್ಯ

ವಿಧಾನಸಭೆ: ‘ಕೇಂದ್ರ ಸರ್ಕಾರ ನಮ್ಮ ಸರ್ಕಾರಕ್ಕೆ ಮಾತ್ರವಲ್ಲ. ನಿಮ್ಮ ಸರ್ಕಾರ ಇದ್ದಾಗಲೂ ಅನುದಾನ ಕೊಟ್ಟಿಲ್ಲ. ಇದನ್ನು ಪ್ರಶ್ನಿಸದ ನೀವು ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದೀರಿ. ನಿಮ್ಮ ಪಕ್ಷದಿಂದ ರಾಜ್ಯದ ಆರ್ಥಿಕ ಸ್ಥಿತಿ ಹಾಳಾಗಿ ಹೋಯಿತು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಬ್ಬರಿಸಿದರು.

₹3,542 ಕೋಟಿ ಮೊತ್ತದ ಪೂರಕ ಅಂದಾಜಿನ ಮೇಲೆ ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ವಿಸ್ತೃತವಾಗಿ ಮಾತನಾಡಿದರು. ಕೇಂದ್ರದಿಂದ ಬರಬೇಕಾದ ಅನುದಾನ ನೀಡದೇ ಇದ್ದರೂ ರಾಜ್ಯದ ಸಂಸದರು ಧ್ವನಿ ಎತ್ತಿಲ್ಲ. ಇದರಿಂದ ರಾಜ್ಯದ ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎಂದು ಹೇಳಿದರು.

ಆಗ, ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ಎಸ್.ಆರ್. ವಿಶ್ವನಾಥ್, ಸುರೇಶ್ ಗೌಡ ಆಕ್ಷೇಪ ವ್ಯಕ್ತಪಡಿಸಿದರು. ಕಾಂಗ್ರೆಸ್, ಬಿಜೆಪಿ ಸದಸ್ಯರ ಮಧ್ಯೆ ವಾಕ್ಸಮರ ನಡೆಯಿತು. ಮಧ್ಯ ಪ್ರವೇಶಿಸಿದ ಸಿದ್ದರಾಮಯ್ಯ, ‘ರಾಜ್ಯವನ್ನು ಪ್ರತಿನಿಧಿಸುವ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಂದಲೇ ಅನ್ಯಾಯವಾಗಿದೆ. ನಮಗೆ ಒಟ್ಟು ₹1.23 ಲಕ್ಷ ಕೋಟಿ ಅನುದಾನ ಬರಬೇಕಿತ್ತು. ₹50,572 ಕೋಟಿ ಮಾತ್ರ ಬಂದಿದೆ. ₹73 ಸಾವಿರ ಕೋಟಿ ಬಾಕಿ ಆಗಿಲ್ಲವೇ? ನಮಗೂ ಬಂದಿಲ್ಲ ಎಂದರೆ ನಿಮಗೂ ಬಂದಿಲ್ಲ. ನಿಮಗೆ ರಾಜ್ಯದ ಹಿತ ಮುಖ್ಯವೇ ಅಲ್ಲ’ ಎಂದು ಕಿಡಿಕಾರಿದರು.

‘ಹೊರಗೆ ಹೋರಾಡಿ ಏನು ಪ್ರಯೋಜನ’

ಬೆಳಗಾವಿ: ‘ಸಮಸ್ಯೆಗಳ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆ ಮಾಡಬೇಕೆಂದು ಬಿಜೆಪಿಯ 66 ಶಾಸಕರನ್ನು ಜನ ಆಯ್ಕೆ ಮಾಡಿದ್ದಾರೆ. ಆದರೆ, ಅವರು ಸದನದಲ್ಲಿ ಚರ್ಚೆ ಮಾಡದೆ ಹೊರಗೆ ಹೋರಾಟ ಮಾಡಿದರೆ ಏನು ಪ್ರಯೋಜನ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

‘ಯಡಿಯೂರಪ್ಪ ಕೂಡಾ ಯಾವುದಾದರೂ ಕ್ಷೇತ್ರ ಆಯ್ಕೆ ಮಾಡಿಕೊಂಡು, ಸದನಕ್ಕೆ ಬಂದು ಮಾತನಾಡಲಿ ಅಭ್ಯಂತರವಿಲ್ಲ’ ಎಂದರು.

ಮನೋರಂಜನ್ ಮನೆಯಲ್ಲಿ ದೊರೆತ ಪುಸ್ತಕಗಳು– ಪ್ರಜಾವಾಣಿ ಚಿತ್ರ

ಬೆಂಗಳೂರು, ದೆಹಲಿಯ ಸಂಪರ್ಕದಲ್ಲಿದ್ದ ಮನೋರಂಜನ್

ಎಂಜಿನಿಯರಿಂಗ್ ಓದಿದ್ದ ಈ ಯುವಕ ಪುಸ್ತಕಪ್ರೇಮಿ

ಪ್ರಜಾವಾಣಿ ವಾರ್ತೆ

ಮೈಸೂರು: ಲೋಕಸಭೆಯಲ್ಲಿ ಕಲಾಪ ನಡೆಯುತ್ತಿದ್ದಾಗ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದ ಡಿ.ಮನೋರಂಜನ್ (34) ಇಲ್ಲಿನ ವಿಜಯನಗರದ 2ನೇ ಹಂತದಲ್ಲಿರುವ ಮನೆಯಲ್ಲಿ ವಾಸಿಸುತ್ತಿದ್ದು, ಎರಡು ದಿನಗಳ ಹಿಂದೆ ಬೆಂಗಳೂರಿಗೆ ತೆರಳಿದ್ದರು. ಅವರ ಮನೆಯಲ್ಲಿ ದೇಶ–ವಿದೇಶಗಳ ಲೇಖಕರ, ಚಿಂತಕರ ಕೃತಿಗಳು ದೊರೆತಿದ್ದು, ಅವುಗಳೇ ಅವರಿಗೆ ಪ್ರೇರಣೆಯಾಗಿತ್ತೇ ಎಂಬ ಪ್ರಶ್ನೆ ಮೂಡಿದೆ.

ಅದಕ್ಕೆ ಪೂರಕವೆಂಬಂತೆ, 'ಅತಿಯಾಗಿ ಓದಿದ್ದೇ ಆತನಿಗೆ ತಿರುವಾಯಿತೋ, ಏನೋ' ಎಂದು ತಂದೆ ದೇವರಾಜೇ ಗೌಡ ಅಲವತ್ತುಕೊಂಡಿದ್ದಾರೆ. ಅವರು ಸಂಸದ ಪ್ರತಾಪಸಿಂಹ ಅವರ ಬೆಂಬಲಿಗರು. 'ಹೀಗಾಗಿಯೇ ಮನೋರಂಜನ್‌ಗೆ ಲೋಕಸಭೆ ಪ್ರವೇಶಿಸಲು ಪಾಸ್ ಸಿಕ್ಕಿರಬಹುದೇ' ಎಂಬ ಚರ್ಚೆಯೂ ನಡೆದಿದೆ.

ಜೆ.ಕೆ ಟಯರ್ಸ್ ಹಾಗೂ ವಿಕ್ರಾಂತ್ ಕಂಪನಿಯ ಉದ್ಯೋಗಿಯಾಗಿದ್ದ ದೇವರಾಜೇಗೌಡ, ನಿವೃತ್ತಿಯ ಬಳಿಕ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಮೂಲತಃ ಹಾಸನ ತಾಲ್ಲೂಕಿನ ರಾಮನಾಥಪುರ ಹೋಬಳಿಯ ಮಲ್ಲಾಪುರದವರಾಗಿದ್ದು, 15 ವರ್ಷದ ಹಿಂದೆ ಮಗನ ವಿದ್ಯಾಭ್ಯಾಸಕ್ಕಾಗಿ ವಿಜಯನಗರಕ್ಕೆ ಬಂದು ಮೂರಂತಸ್ತಿನ ಸ್ವಂತ ಮನೆಯಲ್ಲಿ ವಾಸವಿದ್ದಾರೆ.

ಮನೋರಂಜನ್ ಅವರಿಗೆ ಮರಿಮಲ್ಲಪ್ಪ ಶಾಲೆಯಲ್ಲಿ ಪ್ರೌಢ ಶಿಕ್ಷಣ ಮತ್ತು ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಪಿಯು ಶಿಕ್ಷಣ ಕೊಡಿಸಿದ್ದರು. ಬಳಿಕ ಬಿ.ಇ ಶಿಕ್ಷಣಕ್ಕಾಗಿ ಬೆಂಗಳೂರಿನ ಬಿಐಟಿ ಕಾಲೇಜಿಗೆ ಸೇರಿಸಿದ್ದರು.

ಮುಖ್ಯಾಂಶಗಳು

- ತಪ್ಪಿದ್ದರೆ ಗಲ್ಲು ಶಿಕ್ಷೆ ವಿಧಿಸಲಿ ಎಂದ ತಂದೆ
- 'ರಾಜಕೀಯದ ಸಹವಾಸ ಬೇಡವೆಂದಿದ್ದೆ'

'ಬಾಲ್ಯದಿಂದಲೇ ಮಗನಿಗೆ ವಿವೇಕಾನಂದರ ಕುರಿತ ಪುಸ್ತಕಗಳ ಬಗ್ಗೆ ಆಸಕ್ತಿಯಿತ್ತು. ಮನೆಯಲ್ಲಿ ಸಾವಿರಾರು ಪುಸ್ತಕಗಳಿವೆ' ಎನ್ನುವ ಅವರ ಮಾತಿಗೆ ಪೂರಕವೆಂಬಂತೆ ಮನೆಯಲ್ಲಿ ಕೌಟಿಲ್ಯನ 'ಅರ್ಥಶಾಸ್ತ್ರ', ಪ್ಲೇಟೊ ರಚಿತ 'ರಿಪಬ್ಲಿಕ್', ಚೆಗುವರಾ ಅವರ 'ಗೆರಿಲ್ಲಾ ವಾರ್‌ಫೇರ್', ಲಾವೋಶೆಯ 'ದಾವ್ ದ ಜಿಂಗ್', ವಂದನಾ ಶಿವ ಅವರ 'ಒನ್‌ನೆಸ್', 'ವಯಲೆನ್ಸ್ ಆಫ್ ಗ್ರೀನ್ ರೆವಲೂಷನ್', 'ವಾಟರ್ ವಾರ್ಸ್', 'ಹು ರಿಯಲೀ ಫೀಡ್ಸ್ ದ ವರ್ಲ್ಡ್', ರಿಚರ್ಡ್ ಡಿ. ವೂಲ್ಫ್ ಅವರ 'ಡೆಮಾಕ್ರಸಿ ಅಟ್ ವರ್ಕ್ಸ್', ಆ್ಯಡಂ ಸ್ಮಿತ್‌ನ 'ವೆಲ್ತ್ ಆಫ್ ನೇಷನ್ಸ್', ಲಿಯೊ ಟಾಲ್‌ಸ್ಟಾಯ್‌ನ 'ವಾರ್ ಆ್ಯಂಡ್ ಪೀಸ್', ರಿಚರ್ಡ್ ಡಾಕಿನ್ಸ್‌ನ 'ದ ಗ್ರೇಟೆಸ್ಟ್ ಶೋ ಆನ್ ಅರ್ಥ್, ಚಾರ್ಲ್ಸ್ ಡಿಕನ್ಸ್‌ನ 'ಗ್ರೇಟ್ ಎಕ್ಸ್‌ಪೆಕ್ಟೇಶನ್ಸ್', 'ಆಲಿವರ್ ಟ್ವಿಸ್ಟ್', 'ಡೇವಿಡ್ ಕಾಪರ್‌ಫೀಲ್ಡ್', ಹುಸೈನ್ ಝೈದಿ ಅವರ 'ಬೈಕುಲಾ ಟು ಬ್ಯಾಂಕಾಕ್', ಸನ್ ತ್ಸು ಅವರ 'ದ ಆರ್ಟ್ ವಾರ್', ಅಗ್ನಿಶ್ರೀಧರ್ ಅವರ ದಾದಾಗಿರಿಯ ದಿನಗಳು 1, 2, ಎದೆಗಾರಿಕೆ, ಟೈಗರ್ ಅಶೋಕ್ ಕುಮಾರ್ ಅವರ 'ಹುಲಿಯ ನೆನಪುಗಳು', ಅಮಿಶ್ ಮೆಕ್ ಡೊನಾಲ್ಡ್ 'ಅಂಬಾನಿ ಅಂಡ್ ಸನ್ಸ್' ಪುಸ್ತಕಗಳ ಸಾಲೇ ಇವೆ.

2013–14ರಲ್ಲಿ ಶಿಕ್ಷಣ ಮುಗಿಸಿದ ಬಳಿಕ ಹಾಸನದ ಕೃಷಿ ಜಮೀನಿನಲ್ಲಿ ದುಡಿಯಲು ತಂದೆ ತಿಳಿಸಿದರೂ, ಮನೋರಂಜನ್ ಮನೆಯಲ್ಲೇ ಹೆಚ್ಚಿನ ಸಮಯ ಕಳೆಯುತ್ತಿದ್ದರು. ಆಗಾಗ್ಗೆ ಬೆಂಗಳೂರು ಹಾಗೂ ದೆಹಲಿಗೆ ಭೇಟಿ ನೀಡುತ್ತಿದ್ದರು. ಬೆಂಗಳೂರಿನಲ್ಲಿರುವ ವಿವಾಹಿತ ತಂಗಿಯನ್ನು ಭೇಟಿ ಮಾಡಲು ಹೋಗುತ್ತಿರಬಹುದೆಂದು ಪಾಲಕರು ತಿಳಿದಿದ್ದರು.

'ನಾವು ಪ್ರತಾಪ ಸಿಂಹ ವೋಟರ್ಸ್, ನನಗೂ ಅವರು ಆತ್ಮೀಯರು. ಹೀಗಾಗಿ ಪಾಸ್ ಪಡೆದಿದ್ದಾನೋ ಗೊತ್ತಿಲ್ಲ. ಪ್ರಧಾನಿ ಮೋದಿ ಬಗ್ಗೆ ಅಭಿಮಾನವಿತ್ತು. ಸಮಾಜಕ್ಕೆ ಅನ್ಯಾಯ ಮಾಡಿದ್ದರೆ ಆತ ನನ್ನ ಮಗನೇ ಅಲ್ಲ. ತಪ್ಪು ಮಾಡಿದವರಿಗೆ ಗಲ್ಲು ಶಿಕ್ಷೆಯಾಗಲಿ' ಎಂದು ದೇವರಾಜೇ ಗೌಡ ಆಕ್ರೋಶದಿಂದ ನುಡಿದರು.

'ಮಗನಿಗೆ ಗೆಳೆಯರ್‍ಯಾರೂ ಇರಲಿಲ್ಲ. ಎರಡು ದಿನಗಳ ಹಿಂದೆ ಕರೆ ಮಾಡಿ, ಮನೆಯಲ್ಲಿದ್ದ ತಂಗಿಯ ಮಗುವನ್ನು ನೋಡಬೇಕೆಂದಿದ್ದ. ಅದೇ ಕೊನೆ' ಎಂದು ತಾಯಿ ಶೈಲಜಾ ಬೇಸರ ವ್ಯಕ್ತಪಡಿಸಿದರು. ವಿಜಯನಗರ ಎಸಿಪಿ ಗಜೇಂದ್ರ ಪ್ರಸಾದ್ ಹಾಗೂ ಇನ್‌ಸ್ಪೆಕ್ಟರ್ ಸುರೇಶ್ ಅವರು ಮನೋರಂಜನ್ ಮನೆಗೆ ತೆರಳಿ ಪೋಷಕರಿಂದ ಮಾಹಿತಿ ಪಡೆದರು.

ಸಂಸದರ ಕಚೇರಿಗೆ ಮುತ್ತಿಗೆ ಯತ್ನ

ಸಂಸದ ಪ್ರತಾಪ ಸಿಂಹ ಪಾಸ್ ನೀಡಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಜಲದರ್ಶಿನಿಯಲ್ಲಿರುವ ಸಂಸದರ ಕಚೇರಿಗೆ ಮುತ್ತಿಗೆ ಹಾಕಲು ನುಗ್ಗಿದರು. ಪೊಲೀಸರು ತಡೆದಾಗ ತಡೆಗೋಡೆ ಹಾಗೂ ಗೇಟ್ ಏರಿದರು. 'ದೇಶದ್ರೋಹದ ಕೆಲಸಕ್ಕೆ ಸಂಚು ರೂಪಿಸಿದ್ದ ಸಂಸದರ ಕಚೇರಿಯನ್ನು ನಮ್ಮ ಎದುರೇ ಮಹಜರು ಮಾಡಿ, ಬೀಗ ಜಡಿಯಬೇಕು' ಎಂದು ಒತ್ತಾಯಿಸಿದರು.

ಪ್ರತಾಪ ಸಿಂಹ ಅವರನ್ನು ಬಂಧಿಸಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ, ಮೈಸೂರು– ಮಂಗಳೂರು ಹೆದ್ದಾರಿಯಲ್ಲಿ ಮಲಗಿದರು. ಅದರಿಂದಾಗಿ ಸಂಚಾರ ದಟ್ಟಣೆಯೂ ಉಂಟಾಯಿತು.

'ದೇಶದ್ರೋಹಿ ಪ್ರತಾಪ ಸಿಂಹನಿಗೆ ಧಿಕ್ಕಾರ', 'ಪ್ರತಾಪ ಸಿಂಹ ಬಂಧಿಸಿ', 'ದೇಶ ಒಡೆದ ಪ್ರತಾಪ ಸಿಂಹನಿಗೆ ಧಿಕ್ಕಾರ', 'ಲೋಕಸಭಾ ಸದಸ್ಯತ್ವದಿಂದ ಅಮಾನತು ಮಾಡಿ' ಘೋಷಣೆಗಳನ್ನು ಕೂಗಿದರು. ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಮಾತನಾಡಿ, 'ಮನೋರಂಜನ್ ಬಿಜೆಪಿ ಐಟಿ ಸೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಡಿ.7ರಂದು ಸಂಸದರ ಕಚೇರಿಯಲ್ಲಿ ಸಭೆ ಮಾಡಿ ಇಂದಿನ ಘಟನೆಗೆ ರೂಪರೇಷೆ ಹಾಕಿದ್ದರು. ಅಲ್ಲಿನ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಬೇಕು ಹಾಗೂ ಕಡತಗಳನ್ನು ಪರಿಶೀಲನೆ ನಡೆಸಬೇಕು' ಎಂದರು.

ಮೈಸೂರಿನ ಸಂಸದರ ಕಚೇರಿಗೆ ಮುತ್ತಿಗೆ ಹಾಕಲು ನುಗ್ಗಿದ ಕಾಂಗ್ರೆಸ್ ಕಾರ್ಯಕರ್ತರು – ಪ್ರಜಾವಾಣಿ ಚಿತ್ರ

> ಪ್ರತಾಪ ಸಿಂಹ ಅವರು ಪಾಸ್ ನೀಡುವಾಗ ಎಚ್ಚರಿಕೆ ವಹಿಸಬೇಕಿತ್ತು. ಅವರ ನಿರ್ಲಕ್ಷ್ಯವೇ ಈ ಘಟನೆಗೆ ಕಾರಣ.
> **ಡಿ.ಕೆ. ಸುರೇಶ್,** ಬೆಂಗಳೂರು ಗ್ರಾಮಾಂತರ ಸಂಸದ

> ಅಪರಿಚಿತ ವ್ಯಕ್ತಿಗಳಿಬ್ಬರು ಶೂನಲ್ಲಿ ಗ್ಯಾಸ್ ಕ್ಯಾನ್‌ಗಳನ್ನು ಅಡಗಿಸಿಟ್ಟುಕೊಂಡಿದ್ದರು. ಒಬ್ಬ ಆರೋಪಿ ಸರ್ವಾಧಿಕಾರಿ ಆಡಳಿತ ನಡೆಯುವುದಿಲ್ಲ ಎಂದು ಘೋಷಣೆ ಕೂಗಿದ್ದಾನೆ.
> **ರಾಮಪ್ರೀತ್ ಮಂಡಲ್,** ಜೆಡಿಯು ಸಂಸದ

> ಹಳದಿ ಬಣ್ಣದ ಅನಿಲವು ದುರ್ವಾಸನೆ ಬೀರುತ್ತಿತ್ತು. ಸಂಸದರು ಅವರನ್ನು ಹಿಡಿಯಲು ಧಾವಿಸಿದರು. ಒಬ್ಬ ವ್ಯಕ್ತಿ ಕೆಲವು ಘೋಷಣೆಗಳನ್ನು ಕೂಗಿದ. ಇದು ಹೊಸ ಸಂಸತ್ ಭವನದ ಭದ್ರತೆ ಕುರಿತು ಗಂಭೀರ ಪ್ರಶ್ನೆಗಳನ್ನು ಎತ್ತಿದೆ.
> **ಗೌರವ್ ಗೊಗೋಯ್** ಕಾಂಗ್ರೆಸ್ ಸಂಸದ

> ಸಾಗರ್ ಎಂಬಾತ ಸಂಸದ ಪ್ರತಾಪ ಸಿಂಹ ಪಾಸ್ ಮೇಲೆ ಪ್ರವೇಶ ಪಡೆದಿದ್ದ. ಇದೊಂದು ದೊಡ್ಡ ಭದ್ರತಾ ಲೋಪ. ಸಂಸತ್ ಭವನದ ಮೇಲಿನ ದಾಳಿ ನಡೆದ ದಿನವೇ ಈ ಲೋಪ ಆಗಿದೆ. ಈ ಬಗ್ಗೆ ತನಿಖೆ ನಡೆಯಬೇಕು.
> **ಡ್ಯಾನಿಶ್ ಅಲಿ,** ಬಿಎಸ್‌ಪಿಯಿಂದ ಅಮಾನತಾದ ಸಂಸದ

> ಗೃಹ ಸಚಿವ ಅಮಿತ್ ಶಾ ಅವರು ದೊಡ್ಡದಾಗಿ ಭಾಷಣಗಳನ್ನು ಬಿಗಿಯುತ್ತಾರೆ. ಆದರೆ, ಅವರಿಗೆ ಸಂಸತ್ತಿನಲ್ಲಿ ಭದ್ರತೆ ಕಾಪಾಡಲು ಸಾಧ್ಯವಾಗಿಲ್ಲ
> **ಕಲ್ಯಾಣ್ ಬ್ಯಾನರ್ಜಿ** ಟಿಎಂಸಿ ಸಂಸದ

ಭದ್ರತಾ ವ್ಯವಸ್ಥೆಯಲ್ಲಿ ಬದಲಾವಣೆ

ನವದೆಹಲಿ: ಸಂಸತ್ ಭವನದ ಭದ್ರತಾ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಸಂಬಂಧಪಟ್ಟ ಅಧಿಕಾರಿಗಳು ಕೆಲಸ ಆರಂಭಿಸಿದ್ದಾರೆ. ಸಂಸದರಿಗೆ, ಸಂಸತ್ ಭವನದ ಸಿಬ್ಬಂದಿಗೆ ಹಾಗೂ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತ್ಯೇಕ ಪ್ರವೇಶ ವ್ಯವಸ್ಥೆ ಕಲ್ಪಿಸುವ ಆಲೋಚನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಸಂದರ್ಶಕರಿಗೆ ಸಂಸತ್ ಭವನ ಪ್ರವೇಶಿಸಲು ಅವಕಾಶ ನೀಡುವುದು ಆರಂಭವಾದ ನಂತರ, ಅವರು ನಾಲ್ಕನೆಯ ಗೇಟಿನಿಂದ ಒಳಗೆ ಬರುತ್ತಾರೆ ಎಂದು ಮೂಲಗಳು ಹೇಳಿವೆ. ಬುಧವಾರದ ಭದ್ರತಾ ಲೋಪದ ನಂತರ ಸಂದರ್ಶಕರಿಗೆ ಪ್ರವೇಶ ನಿಷೇಧಿಸಲಾಗಿದೆ.

ಸಂದರ್ಶಕರ ಗ್ಯಾಲರಿಯಲ್ಲಿ ಕುಳಿತವರು, ಸದನಕ್ಕೆ ನುಗ್ಗುವುದನ್ನು ತಡೆಯಲು, ಗ್ಯಾಲರಿಗೆ ಗಾಜಿನ ತಡೆಗೋಡೆ ಅಳವಡಿಸುವ ಸಾಧ್ಯತೆ ಇದೆ. ವಿಮಾನ ನಿಲ್ದಾಣಗಳಲ್ಲಿ ಇರುವಂತ ದೇಹ ತಪಾಸಣಾ ಯಂತ್ರಗಳನ್ನು ಸಂಸತ್ ಭವನದಲ್ಲಿಯೂ ಅಳವಡಿಸಲಾಗುತ್ತದೆ ಎಂದು ಮೂಲಗಳು ವಿವರಿಸಿವೆ.

ಸಂಸತ್ ಭವನದಲ್ಲಿ ಇರುವ ಭದ್ರತಾ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚು ಮಾಡಲಾಗಿದೆ. ಸಂಸತ್ತಿಗೆ ಭೇಟಿ ನೀಡುವ ಸಂದರ್ಶಕರು ನಾಲ್ಕು ಹಂತಗಳ ತಪಾಸಣೆಗೆ ಒಳಪಡಬೇಕು. ಹಳೆಯ ಸಂಸತ್ ಭವನದಲ್ಲಿ ಭದ್ರತಾ ಸಿಬ್ಬಂದಿಯು ಸಂದರ್ಶಕರನ್ನು, ಅವರ ಭೇಟಿಯ ಅವಧಿ ಪೂರ್ಣಗೊಂಡಾಗ ಹೊರಗೆ ಕಳುಹಿಸುತ್ತಿದ್ದರು. ಆದರೆ, ಹೊಸ ಕಟ್ಟಡದಲ್ಲಿ ಅವರ ನಿಯೋಜನೆಯು ಕಡಿಮೆ ಇದೆ.

ಭದ್ರತಾ ಸಿಬ್ಬಂದಿಯ ಮಂಜೂರಾದ ಹುದ್ದೆಗಳ ಸಂಖ್ಯೆ 301. ಆದರೆ 176 ಹುದ್ದೆಗಳು ಮಾತ್ರ ಭರ್ತಿಯಾಗಿವೆ, 125 ಹುದ್ದೆಗಳು ಖಾಲಿ ಇವೆ ಎಂದು ಮೂಲಗಳನ್ನು ಉಲ್ಲೇಖಿಸಿ ಪಿಟಿಐ ವರದಿ ಮಾಡಿದೆ.

ತಳಹಂತದ ಅಧಿಕಾರಿಗಳ ಹುದ್ದೆಗಳಲ್ಲಿ ಅತಿಹೆಚ್ಚಿನ ಹುದ್ದೆಗಳು ಖಾಲಿ ಇವೆ. 72 ಎರಡನೆಯ ಶ್ರೇಣಿಯ ಭದ್ರತಾ ಸಹಾಯಕರ ನೇಮಕಕ್ಕೆ ಮಂಜೂರಾತಿ ಇದೆ. ಆದರೆ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಒಂಬತ್ತು ಮಾತ್ರ. 69 ಮೊದಲ ಶ್ರೇಣಿಯ ಭದ್ರತಾ ಸಹಾಯಕರ ನೇಮಕಕ್ಕೆ ಮಂಜೂರಾತಿ ಇದ್ದರೂ, 24 ಹುದ್ದೆಗಳು ಮಾತ್ರ ಭರ್ತಿಯಾಗಿವೆ ಎಂದು ಪಿಟಿಐ ವರದಿ ಹೇಳಿದೆ. ಮೂಲಗಳ ಪ್ರಕಾರ, ಹತ್ತು ವರ್ಷಗಳಿಂದ ಹೊಸ ನೇಮಕಾತಿಗಳು ನಡೆದಿಲ್ಲ.

ಪನ್ನೂ ಎಚ್ಚರಿಕೆ ನೀಡಿದ್ದ ದಿನವೇ ಭದ್ರತಾ ಲೋಪ!

ನವದೆಹಲಿ: ಸಂಸತ್ ಮೇಲೆ ಡಿಸೆಂಬರ್ 13 ಅಥವಾ ಅದಕ್ಕೂ ಮೊದಲೇ ದಾಳಿ ಮಾಡುವುದಾಗಿ ಖಾಲಿಸ್ತಾನಿ ಭಯೋತ್ಪಾದಕ ಗುರುಪತ್ವಂತ್ ಸಿಂಗ್ ಪನ್ನೂ ಬೆದರಿಕೆಯೊಡ್ಡಿದ್ದ. ಪನ್ನೂ, ಎಚ್ಚರಿಕೆ ಕೊಟ್ಟಿದ್ದ ದಿನಾಂಕದಂದೇ ಸಂಸತ್ತಿನಲ್ಲಿ ಭಾರಿ ಭದ್ರತಾ ಲೋಪ ಸಂಭವಿಸಿದೆ. ಸಂಸತ್‌ಗೆ ನುಗ್ಗಿದ ವ್ಯಕ್ತಿಗಳು ಮತ್ತು ಪನ್ನೂ ನಡುವೆ ಏನಾದರೂ ನಂಟಿದೆಯೇ ಎಂಬುದು ತನಿಖೆಗಳಿಂದ ಬಹಿರಂಗವಾಗಬೇಕಿದೆ.

ಹಿಂದಿನ ಪ್ರಕರಣಗಳು

• ಕಲ್ಯಾಣ್ ರೇ

ನವದೆಹಲಿ: ಸಂದರ್ಶಕರಾಗಿ ಸಂಸತ್ ಭವನಕ್ಕೆ ಬಂದವರಲ್ಲಿ ಕೆಲವರು ಪ್ರತಿಭಟನೆ ನಡೆಸಿದ, ಘೋಷಣೆಗಳನ್ನು ಕೂಗಿದ ಕೆಲವು ಘಟನೆಗಳನ್ನು 75 ವರ್ಷಗಳ ಇತಿಹಾಸದಲ್ಲಿ ಸಂಸತ್ ಭವನವು ಕಂಡಿದೆ. ಆದರೆ, ಸಂದರ್ಶಕರ ಗ್ಯಾಲರಿಯಲ್ಲಿ ಕುಳಿತಿದ್ದವರು ಸದನದೊಳಕ್ಕೆ ಜಿಗಿದ ನಿದರ್ಶನ ಒಂದು ಮಾತ್ರ. ಅದು 25 ವರ್ಷಗಳ ಹಿಂದೆ ಆಗಿತ್ತು.

1990ರ ದಶಕದ ಕೊನೆಯಲ್ಲಿ, ಪ್ರತ್ಯೇಕ ಉತ್ತರಾಖಂಡ ರಾಜ್ಯಕ್ಕೆ ಆಗ್ರಹಿಸಿ ಪ್ರತಿಭಟನಕಾರನೊಬ್ಬ ಸದನದೊಳಕ್ಕೆ ಜಿಗಿದಿದ್ದ. ಆತನನ್ನು ಭದ್ರತಾ ಸಿಬ್ಬಂದಿ ಹಿಡಿದು, ಪೊಲೀಸರಿಗೆ ಹಸ್ತಾಂತರಿಸಿದ್ದರು ಎಂದು ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಇದೊಂದು ಘಟನೆ ಹೊರತುಪಡಿಸಿ, ರಾಜ್ಯಸಭೆಯಲ್ಲಿ ಅಥವಾ ಲೋಕಸಭೆಯಲ್ಲಿ ವೀಕ್ಷಕರ ಗ್ಯಾಲರಿಯಿಂದ ಸದನದೊಳಕ್ಕೆ ಯಾರಾದರೂ ಜಿಗಿದ ಘಟನೆ ಯಾರ ನೆನಪಿನಲ್ಲಿಯೂ ಇಲ್ಲ.

2016ರಲ್ಲಿ ಮಧ್ಯಪ್ರದೇಶದ ವ್ಯಕ್ತಿಯೊಬ್ಬ ಲೋಕಸಭೆಯಲ್ಲಿ ಸದನಕ್ಕೆ ಜಿಗಿಯಲು ಯತ್ನಿಸಿದ್ದ. ಆದರೆ ಭದ್ರತಾ ಸಿಬ್ಬಂದಿ ಆತನನ್ನು ತಕ್ಷಣವೇ ಹಿಡಿದಿದ್ದರು. 1982ರ ಮಾರ್ಚ್‌ನಲ್ಲಿ 14 ಮಂದಿ ರಾಜ್ಯಸಭೆಯ ಸಂದರ್ಶಕರ ಗ್ಯಾಲರಿಯಿಂದ ಘೋಷಣೆಗಳನ್ನು ಕೂಗಿದ್ದರು. ನಂತರ ಅವರನ್ನು ವಶಕ್ಕೆ ಪಡೆಯಲಾಗಿತ್ತು. ಅವರಿಗೆ ಒಂದು ವಾರದ ಜೈಲುಶಿಕ್ಷೆ ವಿಧಿಸಲು ಸದನವು ನಿರ್ಣಯ ಅಂಗೀಕರಿಸಿತ್ತು.

ಮಾರ್ಚ್‌ನಲ್ಲಿ ಮಹಿಳೆಯೊಬ್ಬರು ಸಂದರ್ಶಕರ ಗ್ಯಾಲರಿಯಿಂದ ಘೋಷಣೆ ಕೂಗಿದ್ದರು. ಅವರು ಮಾನಸಿಕ ಸ್ಥಿಮಿತದಲ್ಲಿ ಇಲ್ಲದಿದ್ದ ಕಾರಣ ಅವರಿಗೆ ಎಚ್ಚರಿಕೆ ನೀಡಿ ಬಿಟ್ಟುಕಳುಹಿಸಲಾಗಿತ್ತು.

ಉತ್ತರ ಪ್ರದೇಶದ ಸಂದರ್ಶಕನೊಬ್ಬ 1983ರಲ್ಲಿ ಘೋಷಣೆ ಕೂಗಿ, ಸದನದೊಳಕ್ಕೆ ಚಪ್ಪಲಿ ಎಸೆದಿದ್ದ. ಆತನನ್ನು ಅಧಿವೇಶನದ ಅವಧಿ ಪೂರ್ಣಗೊಳ್ಳುವವರೆಗೆ ಸಾದಾ ಜೈಲುಶಿಕ್ಷೆ ಗುರಿಪಡಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ಇಂಥದ್ದೇ ಘಟನೆಯು 1967ರಲ್ಲಿ ಮೇಲ್ಮನೆಯಲ್ಲಿ ನಡೆದಿತ್ತು.

ಅಮೋಲ್ ಶಿಂದೆ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಝರಿ ಗ್ರಾಮದ ಶಿಂಧೆ ದಂಪತಿಗೆ ಬುಧವಾರ ಆಘಾತ ಕಾದಿತ್ತು. ಇವರ ಮಗ ಅಮೋಲ್ ಶಿಂಧೆ ಸಂಸತ್ ಭವನದ ಭದ್ರತಾ ಲೋಪ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ.

12ನೇ ತರಗತಿ ತೇರ್ಗಡೆಯಾಗಿರುವ ಅಮೋಲ್ ಕೆಲಸ ಹುಡುಕುತ್ತಿದ್ದ. ಈತನ ಪಾಲಕರು ಕೃಷಿ ಕಾರ್ಮಿಕರು. ಈತ ಪೊಲೀಸ್ ಅಥವಾ ಸಶಸ್ತ್ರಪಡೆಗೆ ಸೇರಲು ಯತ್ನಿಸುತ್ತಿದ್ದ ಎನ್ನಲಾಗಿದೆ.

ಲಾತೂರ್ ಪೊಲೀಸರು ಈತನ ಮನೆಯನ್ನು ಶೋಧಿಸಿದ್ದಾರೆ. 'ಏನಾಗಿದೆ ಎಂದು ನಮಗೆ ಗೊತ್ತಿಲ್ಲ. ನಮಗೆ ಯಾವ ಸುಳಿವೂ ಇಲ್ಲ. ಕೆಲ ದಿನಗಳ ಹಿಂದೆ ಆತ ನೇಮಕಾತಿ ಅಭಿಯಾನದಲ್ಲಿ ಪಾಲ್ಗೊಳ್ಳಲು ಮನೆ ಬಿಟ್ಟಿದ್ದಾನೆ' ಎಂದು ಆತನ ತಂದೆ ಧನರಾಜ್ ಶಿಂಧೆ ಹೇಳಿದರು.

'ಡಿ. 10ರಿಂದ ಆತನ ಮೊಬೈಲ್ ಬಂದ್ ಆಗಿದೆ. ಹಿಂದೆಯೂ ಅವನು ರತ್ನಗಿರಿ, ಔರಂಗಬಾದ್, ನಾಸಿಕ್, ದೆಹಲಿಯಲ್ಲಿ ನೇಮಕಾತಿ ಅಭಿಯಾನದಲ್ಲಿ ಪಾಲ್ಗೊಂಡಿದ್ದ' ಎಂದರು.

ಯಾರಿದು ಸಾಗರ್ ಶರ್ಮಾ?: ಲಖನೌದ ಬಡಗಿಯೊಬ್ಬರ ಪುತ್ರನಾಗಿರುವ 26ರ ಹರೆಯದ ಸಾಗರ್ ಶರ್ಮಾ ಇ–ರಿಕ್ಷಾ ಚಾಲಕ. ಆತ ಒಂಬತ್ತನೇ ತರಗತಿಯವರೆಗೆ ಶಿಕ್ಷಣ ಪಡೆದಿದ್ದಾನೆ. 12ನೇ ವಯಸ್ಸಿನವರೆಗೆ ನವದೆಹಲಿಯಲ್ಲಿ ಇದ್ದ. ಕೋವಿಡ್–19 ಸಾಂಕ್ರಾಮಿಕದ ಅವಧಿಯಲ್ಲಿ ಎರಡು ವರ್ಷಗಳ ಕಾಲ ಬೆಂಗಳೂರಿನಲ್ಲಿ ನೆಲೆಸಿದ್ದ. ಬಳಿಕ ಲಖನೌಗೆ ತೆರಳಿದ್ದ. ಕುಟುಂಬದವರು 2006ರಿಂದ ಬಾಡಿಗೆ ಮನೆಯಲ್ಲಿ ನೆಲೆಸಿದ್ದಾರೆ. ಆತನಿಗೆ ಅಪರಾಧ ಹಿನ್ನೆಲೆ ಇಲ್ಲ ಎಂದು ಸ್ಥಳೀಯ ಪೊಲೀಸರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಲೋಕಸಭೆಗೆ ನುಗ್ಗಿ ಆತಂಕ ಸೃಷ್ಟಿಸಿದವರಲ್ಲಿ ಒಬ್ಬನನ್ನು ಸಾಗರ್ ಶರ್ಮಾ ಎಂದು ಗುರುತಿಸಲಾಗಿದೆ.

ಪೊಲೀಸ್ ಮೂಲಗಳ ಪ್ರಕಾರ ಶರ್ಮಾ ಲಖನೌದ ಆಲಂಬಾಗ್ ಪ್ರದೇಶದ ರಾಮ್‌ನಗರ ನಿವಾಸಿ. ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ಹೇಳಿ ಆತ ನಾಲ್ಕು ದಿನಗಳ ಹಿಂದೆಯೇ ದೆಹಲಿಗೆ ತೆರಳಿದ್ದ. ಹೆಚ್ಚಿನ ವಿವರಗಳನ್ನು ಮನೆಯವರ ಬಳಿ ಹೇಳಿರಲಿಲ್ಲ.

'ನನ್ನ ಮಗ ಯಾರೊಂದಿಗೂ ಜಗಳವನ್ನೂ ಆಡಿದವನಲ್ಲ' ಎಂದು ಆತನ ತಾಯಿ ಹೇಳುತ್ತಾರೆ. ಪೊಲೀಸರ ತಂಡವೊಂದು ಶರ್ಮಾ ಮನೆಗೆ ಭೇಟಿ ನೀಡಿದ್ದು ಕುಟುಂಬದವರ ವಿಚಾರಣೆ ನಡೆಸಿದೆ. ಆತನ ಬಗ್ಗೆ ಹೆಚ್ಚಿನ ವಿವರ ಪಡೆಯಲು ಯತ್ನಿಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ರೈತರ ಪ್ರತಿಭಟನೆಯಲ್ಲಿ ಭಾಗಿ': ಸಂಸತ್ತಿನ ಹೊರಗಡೆ ಬಂಧಿಸಲಾದ ನೀಲಂ ಎಂಬಾಕೆಯ ತಾಯಿ ಸರಸ್ವತಿ ಅವರು ಮಾಧ್ಯಮಗಳ ಜೊತೆ ಮಾತನಾಡಿ, 'ಘಟನೆಯ ಬಗ್ಗೆ ನನಗೆ ಮಾಧ್ಯಮಗಳಿಂದಲೇ ಗೊತ್ತಾಯಿತು' ಎಂದು ಹೇಳಿದ್ದಾರೆ. ನೀಲಂ ಅವರು ಹಿಸಾರ್‌ನಲ್ಲಿ ಒಂದು ಪಿ.ಜಿ.ಯಲ್ಲಿ ವಾಸಿಸುತ್ತಿದ್ದರು. ಅಲ್ಲಿ ಆಕೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದರು ಎಂದು ಆಕೆಯ ಸಹೋದರ ರಾಮ್ ನಿವಾಸ್ ಹೇಳಿದ್ದಾರೆ.

ನೀಲಂ ಅವರು ರೈತರ ಪ್ರತಿಭಟನೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡಿದ್ದರು ಎಂದು ನಿವಾಸ್ ತಿಳಿಸಿದ್ದಾರೆ. ನೀಲಂ ಅವರು ಸ್ನಾತಕೋತ್ತರ ಪದವಿ ಪಡೆದಿದ್ದಾರೆ, ಎಂ.ಫಿಲ್ ಕೂಡ ಮಾಡಿದ್ದಾರೆ ಎಂದು ಕುಟುಂಬದ ಸದಸ್ಯರು ಹೇಳಿದ್ದಾರೆ.

ವಿಶಾಲ್ ಶರ್ಮ ಅವರು ಕಂಪನಿಯೊಂದರಲ್ಲಿ ಚಾಲಕನಾಗಿ ಹಿಂದೆ ಕೆಲಸ ಮಾಡಿದ್ದರು. ನಂತರ ಆಟೊ ರಿಕ್ಷಾ ಓಡಿಸುತ್ತಿದ್ದರು. ಶರ್ಮ ಮದ್ಯವ್ಯಸನಿಯಾಗಿದ್ದರು, ಪತ್ನಿಯೊಂದಿಗೆ ಜಗಳ ಆಡುತ್ತಿದ್ದರು ಎಂದು ಅವರ ನೆರೆಹೊರೆಯವರು ಹೇಳಿದ್ದಾರೆ.

ಭದ್ರತೆ ಭೇದಿಸಿ ಸದನಕ್ಕೆ ಜಿಗಿದರು

ಒಂದನೇ ಪುಟದಿಂದ...

'ಪಾಸ್‌ಗಾಗಿ ಕೆಲವು ತಿಂಗಳಿಂದ ಪೀಡಿಸುತ್ತಿದ್ದ ಕಾರಣಕ್ಕೆ ಇಬ್ಬರು ವ್ಯಕ್ತಿಗಳಿಗೆ ಅನುಕೂಲ ಮಾಡಿ ಕೊಟ್ಟಿದ್ದೆ. ಅವರ ಉದ್ದೇಶಕ್ಕೆ ಬಗ್ಗೆ ತಿಳಿದಿರಲಿಲ್ಲ. ಘಟನೆ ಬಗ್ಗೆ ಸ್ಪೀಕರ್ ಅವರಿಗೆ ವಿವರಣೆ ನೀಡುತ್ತೇನೆ' ಎಂದು ಪ್ರತಾಪಸಿಂಹ ಅವರು ಕೆಲವು ವಾಹಿನಿಗಳಿಗೆ ಪ್ರತಿಕ್ರಿಯಿಸಿದ್ದಾರೆ. ಪ್ರತಿಕ್ರಿಯೆ ಪಡೆಯಲು 'ಪ್ರಜಾವಾಣಿ'ಗೆ ಲಭ್ಯರಾಗಲಿಲ್ಲ.

ಘಟನೆ ವಿವರ: ಲೋಕಸಭೆಯಲ್ಲಿ ಶೂನ್ಯವೇಳೆಯಲ್ಲಿ ಸದಸ್ಯರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಈ ಸಂದರ್ಭದಲ್ಲಿ ಸಂದರ್ಶಕರ ಗ್ಯಾಲರಿಯಿಂದ ಸದನದೊಳಕ್ಕೆ ಜಿಗಿದ ಸಾಗರ್ ಶರ್ಮಾ, ಸಂಸದರ ಕುರ್ಚಿ ಹಾಗೂ ಟೇಬಲ್‌ಗಳ ಮೇಲೆಲ್ಲ ಓಡಾಡಿ ಸ್ಪೀಕರ್ ಕುರ್ಚಿಯತ್ತ ಧಾವಿಸಲು ಪ್ರಯತ್ನಿಸಿದ. ಪರಿಸ್ಥಿತಿ ಅರಿತ ಸಭಾಧ್ಯಕ್ಷರ ಸ್ಥಾನದಲ್ಲಿದ್ದ ಮೀರತ್ ಸಂಸದ ರಾಜೇಂದ್ರ ಅಗರವಾಲ್ ಅವರು ತಕ್ಷಣ ಕಲಾಪವನ್ನು ಕೆಲಕಾಲ ಮುಂದೂಡಿದರು. ಈ ವೇಳೆ ಆರೋಪಿಯನ್ನು ಸುತ್ತುವರಿದ ಕೆಲವು ಸಂಸದರು ಆತನನ್ನು ಥಳಿಸಿದರು. ನಂತರ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದರು. ಅಷ್ಟರಲ್ಲಿ ಮತ್ತೊಬ್ಬ ಆರೋಪಿ ಮನೋರಂಜನ್ ಸ್ಮೋಕ್ ಕ್ಯಾನ್ ತೆರೆದಿದ್ದರಿಂದ ಸದನದ ಒಂದು ಭಾಗದಲ್ಲಿ ಹಳದಿ ಬಣ್ಣದ ದಟ್ಟ ಹೊಗೆ ಆವರಿಸಿತು.

ಮತ್ತೆ 2 ಗಂಟೆಗೆ ಕಲಾಪ ಆರಂಭವಾದಾಗ ಹಲವು ಸದಸ್ಯರು ಘಟನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು. ಆಗ ಸ್ಪೀಕರ್, 'ನಿಮಗೆಲ್ಲರಿಗೂ ಘಟನೆ ಕುರಿತು ಆತಂಕ ಇದೆ ಎಂದು ತಿಳಿದಿದೆ. ಇದು ದುರದೃಷ್ಟಕರ ಘಟನೆ. ಈ ಕುರಿತು ತನಿಖಾ ವರದಿ ಬಂದ ನಂತರ ನಾನು ಅದರ ಬಗ್ಗೆ ವಿವರಣೆ ಕೊಡಬಹುದು. ಸದನದಲ್ಲಿ ಈಗ ಇದರ ಬಗ್ಗೆ ಚರ್ಚೆ ಬೇಡ. ಮತ್ತೆ ಸಂಸದರ ಸಭೆ ಕರೆಯುತ್ತೇನೆ. ಅಲ್ಲಿ ಚರ್ಚಿಸೋಣ' ಎಂದು ಭರವಸೆ ನೀಡಿದರು. ಬಳಿಕ ಕೆಲ ಹೊತ್ತು ಕಲಾಪ ಮುಂದುವರಿಯಿತು. ಬಳಿಕ ಕಾಂಗ್ರೆಸ್ ಸಂಸದರು, 'ಬಿಜೆಪಿ ಸಂಸದರಿಂದ ಪಾಸ್ ಪಡೆದು ಆರೋಪಿಗಳು ಸದನ ಪ್ರವೇಶಿಸಿದ್ದಾರೆ' ಎಂದು ಗದ್ದಲ ಎಬ್ಬಿಸಿದರು. ಆಗ ಸದನದಲ್ಲಿ ಮುಂದೂಡಲಾಯಿತು.

ಭದ್ರತೆ ಹೆಚ್ಚಳ: ಘಟನೆ ನಡೆದ ಬಳಿಕ ದೆಹಲಿ ಪೊಲೀಸ್ ಕಮಿಷನರ್ ಸಂಜಯ್ ಅರೋರಾ ಸಂಸತ್ತಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿದರು. ಬಳಿಕ ಸಂಸತ್ ಭದ್ರತೆಗೆ ಪೊಲೀಸ್ ಹಾಗೂ ಅರೆಸೇನಾ ಪಡೆಯ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಯಿತು.

'ಎರಡೂ ಘಟನೆಗಳ ತನಿಖೆಯನ್ನು ದೆಹಲಿ ಪೊಲೀಸರ ವಿಶೇಷ ಕೋಶಕ್ಕೆ ವಹಿಸಲಾಗಿದೆ. ವಿಧಿ ವಿಜ್ಞಾನ ತಂಡಗಳು ಸ್ಥಳಕ್ಕೆ ಭೇಟಿ ನೀಡಿ ವೈಜ್ಞಾನಿಕ ಮತ್ತು ಭೌತಿಕ ಪುರಾವೆಗಳನ್ನು ಸಂಗ್ರಹಿಸಿವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಸತ್ತಿನ ಹೊರಗೆ ಇಬ್ಬರ ಬಂಧನ: ಸಂಸತ್ತಿನ ಕಟ್ಟಡದ ಹೊರಗೆ ಹಳದಿ ಮತ್ತು ಕೆಂಪು ಹೊಗೆಯನ್ನು ಹೊರಸೂಸಿ ಪ್ರತಿಭಟನೆ ನಡೆಸುತ್ತಿದ್ದ ಪುರುಷ ಮತ್ತು ಮಹಿಳೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಆರೋಪಿಗಳು 'ಸರ್ವಾಧಿಕಾರಕ್ಕೆ ಅವಕಾಶ ನೀಡುವುದಿಲ್ಲ', 'ಭಾರತ್ ಮಾತಾ ಕಿ ಜೈ' ಮತ್ತು 'ಜೈ ಭೀಮ್, ಜೈ ಭಾರತ್' ಎಂದು ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದರು.

ಪೊಲೀಸರು ಕರೆದುಕೊಂಡು ಹೋಗುತ್ತಿದ್ದ ವೇಳೆ ಪ್ರತಿಕ್ರಿಯಿಸಿದ ಆರೋಪಿ ಮಹಿಳೆ, 'ನಾವು ಯಾವುದೇ ಸಂಘಟನೆಗೆ ಸೇರಿದವರಲ್ಲ. ವಿದ್ಯಾರ್ಥಿಗಳು ಹಾಗೂ ನಿರುದ್ಯೋಗಿಗಳು' ಎಂದು ಹೇಳಿದರು. 'ಭಾರತ ಸರ್ಕಾರ ನಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ನಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತಿದಾಗ ನಮ್ಮನ್ನು ಹೊಡೆದು ಜೈಲಿಗೆ ಹಾಕಲಾಗುತ್ತಿದೆ. ನಮ್ಮ ಪೋಷಕರು ಕೂಲಿ ಕಾರ್ಮಿಕರು, ಕೃಷಿಕರು ಹಾಗೂ ಸಣ್ಣ ಅಂಗಡಿ ಹೊಂದಿದವರು. ನಮ್ಮ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನ ಮಾಡಲಾಗುತ್ತಿದೆ' ಎಂದು ದೂರಿದರು.

ವಿಪಕ್ಷಗಳ ಸಭೆ ಇಂದು

ಸಂಸತ್ತಿನಲ್ಲಿ ಭದ್ರತಾ ಲೋಪ ಕುರಿತು ತಮ್ಮ ಮುಂದಿನ ಕ್ರಮದ ಬಗ್ಗೆ ಚರ್ಚಿಸಲು 'ಇಂಡಿಯಾ' ಮೈತ್ರಿಕೂಟವು ಗುರುವಾರ ಬೆಳಿಗ್ಗೆ ಸಭೆ ನಡೆಸಲಿದ್ದು, ಈ ವಿಷಯದ ಕುರಿತು ಅಧ್ಯಕ್ಷೆ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲು ಯೋಜಿಸಿವೆ.

ಗುರುವಾರ ಬೆಳಿಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ವಿರೋಧ ಪಕ್ಷಗಳು ಸಭೆ ಸೇರಿ ಚರ್ಚಿಸಲಿವೆ ಎಂದು ತೃಣಮೂಲ ಕಾಂಗ್ರೆಸ್‌ನ ಸಂಸದ ಸುದೀಪ್ ಬಂಡೋಪಾಧ್ಯಾಯ ತಿಳಿಸಿದ್ದಾರೆ.

> ಸದನದಲ್ಲಿ ಇದ್ದಕ್ಕಿದ್ದಂತೆ ಗೊಂದಲ ವಾತಾವರಣ ನಿರ್ಮಾಣವಾಯಿತು. ಒಬ್ಬ ವ್ಯಕ್ತಿ ಒಂದು ಬೆಂಚ್‌ನಿಂದ ಮತ್ತೊಂದಕ್ಕೆ ಜಿಗಿಯುತ್ತಿರುವುದನ್ನು ಗಮನಿಸಿದೆವು. ಅದು ಅತ್ಯಂತ ಗಾಬರಿಯ ಕ್ಷಣವಾಗಿತ್ತು. ಏನು ಬೇಕಾದರೂ ಆಗಬಹುದಿತ್ತು. ಒಂದು ಪಕ್ಷ ಅವನು ತನ್ನ ಪಾಕೆಟ್‌ನಲ್ಲಿ ಬಾಂಬ್ ಅಥವಾ ಬೆಂಕಿ ಹಚ್ಚುವ ಸಾಧನಗಳನ್ನು ಇಟ್ಟುಕೊಂಡಿದ್ದರೆ ಗತಿಯೇನು?
> **ಸುದೀಪ್ ಬಂದೋಪಾಧ್ಯಾಯ,** ಟಿಎಂಸಿ ಸಂಸದ

3 ತಿಂಗಳಿಂದ ಪ್ರಯತ್ನ

ಮನೋರಂಜನ್ ಅವರು ಕಳೆದ ಮೂರು ತಿಂಗಳಿಂದ ಆಗಾಗ ಪ್ರತಾಪ ಸಿಂಹ ಕಚೇರಿಗೆ ಬರುತ್ತಿದ್ದ ಹಾಗೂ ಹೊಸ ಸಂಸತ್ ಭವನ ವೀಕ್ಷಣೆಗೆ ಪಾಸ್ ನೀಡುವಂತೆ ಮನವಿ ಮಾಡುತ್ತಿದ್ದ. ಸಾಗರ್‌ನನ್ನು ತನ್ನ ಸ್ನೇಹಿತ ಎಂದು ಸಂಸದರಿಗೆ ಪರಿಚಯಿಸಿದ್ದ. ಹೀಗಾಗಿ, ಅವರಿಗೆ ಪಾಸ್ ನೀಡಲಾಗಿತ್ತು. ಒಟ್ಟು ಮೂರು ಮಂದಿಗೆ ಪಾಸ್ ವ್ಯವಸ್ಥೆ ಮಾಡಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಮಯೂರ ಓದಿರಿ

'ಪ್ರತಾಪರನ್ನೂ ವಿಚಾರಣೆ ನಡೆಸಿ'

ಬೆಳಗಾವಿ: 'ಲೋಕಸಭೆ ಒಳಗೆ ನುಗ್ಗಿ ದಾಳಿಗೆ ಯತ್ನಿಸಿದ ಯುವಕರಿಗೆ ಮೈಸೂರಿನ ಸಂಸದ ಪ್ರತಾಪ ಸಿಂಹ ಅವರೇ ಪಾಸ್ ನೀಡಿದ್ದು ನಿಜವಾಗಿದ್ದರೆ ಅವರನ್ನೂ ವಿಚಾರಣೆಗೆ ಗುರಿಪಡಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಸಿದ್ದರಾಮಯ್ಯ ಅವರು, ಪ್ರತಾಪ ಸಿಂಹ ಪಾಸ್ ನೀಡಿರಬೇಕಾದರೆ ಆ ಯುವಕರು ಸಂಸದರ ಪರಿಚಯಸ್ಥರಾಗಿರಬೇಕು. ಪರಿಚಯ ಇಲ್ಲದೆ ಇದ್ದರೆ ಅಪರಿಚಿತರಿಗೆ ಪಾಸುಗಳನ್ನು ಹೇಗೆ ನೀಡಲಾಯಿತು ಎನ್ನುವ ಪ್ರಶ್ನೆ ಕೂಡಾ ಹುಟ್ಟುತ್ತದೆ. ಬೇಜವಾಬ್ದಾರಿಯಿಂದ ನಡೆಯುವ ಅನಾಹುತ ಕೂಡಾ ಕಾನೂನಿನ ಪ್ರಕಾರ ಶಿಕ್ಷಾರ್ಹ ಎಂದು ಪ್ರತಿಪಾದಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ಮೋಹನ್ ಯಾದವ್ ಛತ್ತೀಸಗಢದಲ್ಲಿ ವಿಷ್ಣುದೇವ್ ಪ್ರಮಾಣ

ಭೋಪಾಲ್/ ರಾಯಪುರ (ಪಿಟಿಐ): ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿ ಮೋಹನ್ ಯಾದವ್ ಮತ್ತು ಛತ್ತೀಸಗಢದ ಮುಖ್ಯಮಂತ್ರಿಯಾಗಿ ವಿಷ್ಣುದೇವ್ ಸಾಯ್ ಅವರು ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು.

ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿ ಉಜ್ಜೈನ್ ದಕ್ಷಿಣ ಕ್ಷೇತ್ರದ ಶಾಸಕ, ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಮೋಹನ್ ಯಾದವ್ ಅವರು ಭೋಪಾಲ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಮಲ್ಹಾರಗಢ ಶಾಸಕ ಜಗದೀಶ್ ದೇವ್ಡಾ ಮತ್ತು ರೀವಾ ಶಾಸಕ ರಾಜೇಂದ್ರ ಶುಕ್ಲಾ ಅವರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಲಾಲ್ ಪರೇಡ್ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಮಂಗುಭಾಯಿ ಪಟೇಲ್, ಪ್ರಮಾಣ ವಚನ ಬೋಧಿಸಿದರು.

ಛತ್ತೀಸಗಢದ ಮುಖ್ಯಮಂತ್ರಿಯಾಗಿ ಕುಂಕುರಿ ಶಾಸಕ ಮತ್ತು ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ವಿಷ್ಣುದೇವ್ ಸಾಯ್ ಅವರು ರಾಯಪುರದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಇವರೊಂದಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಸಾವ್ ಮತ್ತು ಶಾಸಕ ವಿಜಯ್ ಶರ್ಮಾ ಅವರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.

ರಾಯಪುರದ ವಿಜ್ಞಾನ ಕಾಲೇಜು ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ವಿಶ್ವಭೂಷಣ್ ಹರಿಚಂದನ್, ಪ್ರಮಾಣ ವಚನ ಬೋಧಿಸಿದರು. ಸಾಯ್ ಅವರು ಛತ್ತೀಸಗಢದ ನಾಲ್ಕನೆಯ ಮುಖ್ಯಮಂತ್ರಿಯಾಗಿದ್ದಾರೆ.

ಎರಡೂ ಸಮಾರಂಭಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವ ನಿತಿನ್ ಗಡ್ಕರಿ, ಕೆಲ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.



ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಬುಧವಾರ ನೂತನ ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಪಾಲ ಮಂಗುಭಾಯಿ ಪಟೇಲ್ (ಬಲದಿಂದ ಎರಡನೆಯವರು) ಮತ್ತು ಮುಖ್ಯಮಂತ್ರಿ ಮೋಹನ್ ಯಾದವ್ (ಬಲ ತುದಿ), ಉಪ ಮುಖ್ಯಮಂತ್ರಿಗಳಾದ ಜಗದೀಶ್ ದೇವ್ಡಾ ಹಾಗೂ ರಾಜೇಂದ್ರ ಶುಕ್ಲಾ ಅವರೊಂದಿಗೆ ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಮ್ಮ ಹೆಚ್ಚಿನ ಸಂಕಟಗಳು ನಮಗೆ ನಾವೇ ಹೇರಿಕೊಳ್ಳುವಂತಹವು.

–ರವೀಂದ್ರನಾಥ ಟ್ಯಾಗೋರ್

ಮಹಿಳೆಯನ್ನು ಬೆತ್ತಲೆಗೊಳಿಸಿ ದೌರ್ಜನ್ಯ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿ

ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಗ್ರಾಮದಲ್ಲಿ ಮಹಿಳೆಯೊಬ್ಬರನ್ನು ಬೆತ್ತಲೆಗೊಳಿಸಿ ಥಳಿಸಿರುವ ದೌರ್ಜನ್ಯ ಪಶು ಪ್ರವೃತ್ತಿಯನ್ನೂ ನಾಚಿಸುವಷ್ಟು ಅಮಾನುಷವಾದುದು ಹಾಗೂ ನಾಗರಿಕ ಸಮಾಜದಲ್ಲಿ ಸುಪ್ತವಾಗಿರುವ ಹಿಂಸೆ-ಕ್ರೌರ್ಯವನ್ನು ಸೂಚಿಸುವಂತಹದ್ದು. ದೌರ್ಜನ್ಯಕ್ಕೊಳಗಾದ ಮಹಿಳೆಯ ಪುತ್ರ ತನ್ನ ಪ್ರೇಮಿಯೊಂದಿಗೆ ಊರು ಬಿಟ್ಟು ಹೋಗಿರುವ ಘಟನೆಯ ಹಿನ್ನೆಲೆಯಲ್ಲಿ, ಯುವತಿಯ ಕುಟುಂಬದವರು ಈ ಹೀನಕೃತ್ಯ ಎಸಗಿದ್ದಾರೆ. ಹುಡುಗನ ತಾಯಿಯನ್ನು ಬೆತ್ತಲೆಗೊಳಿಸಿ, ಬೀದಿಯಲ್ಲಿ ಓಡಾಡಿಸಿದ ನಂತರ ಕಂಬಕ್ಕೆ ಕಟ್ಟಿ ಥಳಿಸಿದ್ದಾರೆ. ಊರು ತೊರೆದಿರುವ ಪ್ರೇಮಿಗಳಿಬ್ಬರೂ ಒಂದೇ ಜಾತಿಗೆ ಸೇರಿದ್ದರೂ ಯುವತಿಯ ಕುಟುಂಬದವರು ಮದುವೆಗೆ ಒಪ್ಪಿಗೆ ನೀಡಿಲ್ಲ. ಯುವತಿಗೆ ಬೇರೊಂದು ಸಂಬಂಧವನ್ನು ಗೊತ್ತುಪಡಿಸಿ ನಿಶ್ಚಿತಾರ್ಥ ನಡೆಸಿದ್ದಾರೆ. ಇದರಿಂದಾಗಿ ಯುವಕ, ಯುವತಿ ಯಾರಿಗೂ ಹೇಳದೆ ಊರು ಬಿಟ್ಟುಹೋಗಿದ್ದಾರೆ. ಅನಿರೀಕ್ಷಿತ ಬೆಳವಣಿಗೆಯಿಂದಾಗಿ ಕ್ರುದ್ಧಗೊಂಡ ಯುವತಿಯ ಕಡೆಯವರು ಯುವಕನ ತಾಯಿಯನ್ನು ಹೀನಾಯವಾಗಿ ನಡೆಸಿಕೊಂಡಿದ್ದಾರೆ. ಮಹಿಳೆಯರ ಮೇಲೆ ನಡೆಯುವ ಬಹುತೇಕ ದೌರ್ಜನ್ಯದ ಕೃತ್ಯಗಳಲ್ಲಿ ಜಾತಿ ವ್ಯಸನದ ವಿಕೃತಿ ಇರುತ್ತದಾದರೂ ಹೆಣ್ಣನ್ನು ತನ್ನ ಅಡಿಯಾಳಾಗಿ ಭಾವಿಸುವ ಪುರುಷ ಅಹಂಕಾರವೂ ಪ್ರಮುಖವಾಗಿ ಇರುತ್ತದೆ. ಸುಪ್ತವಾಗಿ ಇರುವ ಈ ಅಹಂಕಾರ ಅಥವಾ ದರ್ಪ, ಅವಕಾಶ ಸಿಕ್ಕಾಗ ಪ್ರಕಟಗೊಳ್ಳುತ್ತದೆ. ಹೆಣ್ಣನ್ನು ಸರಕಿನಂತೆ ಭಾವಿಸುವ ಗಂಡು ಮನಃಸ್ಥಿತಿಗೆ ಜಾತಿ ಶ್ರೇಷ್ಠತೆಯ ಗೀಳೂ ಜೊತೆಯಾದಲ್ಲಿ ಸಂತ್ರಸ್ತ ಹೆಣ್ಣಿನ ಸ್ಥಿತಿ ಮತ್ತಷ್ಟು ಘೋರವಾಗಿರುತ್ತದೆ. ಹೊಸ ವಂಟಮೂರಿ ಗ್ರಾಮದಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಮೇಲೆ ಮಾನಭಂಗ, ಕೊಲೆ ಯತ್ನ, ಹಲ್ಲೆ, ದೊಂಬಿ, ನಿಂದನೆ, ಕಾನೂನು ಸುವ್ಯವಸ್ಥೆಗೆ ಧಕ್ಕೆ, ಜೀವ ಬೆದರಿಕೆ ಸೇರಿದಂತೆ ವಿವಿಧ ಪ್ರಕರಣಗಳನ್ನು ದಾಖಲಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಹೈಕೋರ್ಟ್, ಸೂಕ್ತ ಕ್ರಮ ಕೈಗೊಳ್ಳುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ಆದೇಶಿಸಿರುವುದು ಸಮಾಧಾನ ತರುವ ಬೆಳವಣಿಗೆ. ಆದಷ್ಟು ಬೇಗ ವಿಚಾರಣೆ ಮುಗಿದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳುವ ಇಚ್ಛಾಶಕ್ತಿಯನ್ನು ಸರ್ಕಾರ ತೋರಬೇಕಾಗಿದೆ.

ಹೆಣ್ಣಿಗೆ ಅವಮಾನ ಮಾಡುವ ಕೃತ್ಯಗಳಿಗೆ ಅವಕಾಶ ಇಲ್ಲದಂತೆ ಸಮಾಜ ಹಾಗೂ ಶಿಕ್ಷಣವನ್ನು ಮಾನವೀಯಗೊಳಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆಯಬೇಕು

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ವರದಿಯ ಪ್ರಕಾರ, ಮಹಿಳೆಯರನ್ನು ಬೆತ್ತಲೆಗೊಳಿಸುವ ವಿಕೃತ ಘಟನೆಗಳು ದೇಶದ ವಿವಿಧ ಭಾಗಗಳಲ್ಲಿ ನಿರಂತರವಾಗಿ ನಡೆಯುತ್ತಿವೆ. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಕರ್ನಾಟಕದಲ್ಲಿಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ಮಹಿಳೆಯರನ್ನು ವಿವಸ್ತ್ರಗೊಳಿಸುವ ಉದ್ದೇಶದ ದೌರ್ಜನ್ಯ ಪ್ರಕರಣಗಳು 2022ರಲ್ಲಿ ಅತಿಹೆಚ್ಚು ದಾಖಲಾಗಿರುವ ಮೂರನೇ ರಾಜ್ಯ ಕರ್ನಾಟಕ. ಒಡಿಶಾ ಹಾಗೂ ಉತ್ತರಪ್ರದೇಶ ಮೊದಲೆರಡು ಸ್ಥಾನಗಳಲ್ಲಿರುವ ರಾಜ್ಯಗಳಾಗಿವೆ. ಇದೇ ವರ್ಷದ ಮೇ ತಿಂಗಳಲ್ಲಿ, ಕುಕಿ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ, ಸಾಮೂಹಿಕ ಅತ್ಯಾಚಾರ ಮಾಡಿದ ಪ್ರಕರಣ ಮಣಿಪುರದಿಂದ ವರದಿಯಾಗಿತ್ತು. ಕೌಟುಂಬಿಕ ಹಾಗೂ ಸಮುದಾಯಗಳ ನಡುವಿನ ಕಲಹಗಳು ಮಹಿಳೆಯರ ಮೇಲೆ ದೌರ್ಜನ್ಯ ಎಸಗುವಲ್ಲಿ ಕೊನೆಗೊಳ್ಳುವುದು ದುರದೃಷ್ಟಕರ. ಈ ಘಟನೆಗಳು, ಮಹಿಳೆಯರಲ್ಲಿ ಅಸುರಕ್ಷಿತ ಭಾವನೆಯನ್ನು ಉಂಟುಮಾಡುವುದರ ಜೊತೆಗೆ, ಲಿಂಗತಾರತಮ್ಯದ ಸಮರ್ಥನೆಯೂ ಆಗಿರುತ್ತವೆ. ಮಹಿಳೆಯರನ್ನು ಅವಮಾನಿಸುವ ಕೃತ್ಯಗಳು ನಡೆದಾಗ ಸಮಾಜದಲ್ಲಿ ಭಾವುಕ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ. ದೌರ್ಜನ್ಯದ ಪ್ರಕರಣಗಳನ್ನು ರಾಜಕಾರಣದ ಕಣ್ಣೋಟದ ಮೂಲಕ ವಿಶ್ಲೇಷಿಸುವ ಪ್ರಯತ್ನಗಳು ನಡೆಯುತ್ತವೆ. ಆರೋಪಿಗಳ ಮನೆಗಳನ್ನು ನೆಲಸಮಗೊಳಿಸಿ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಬೇಕೆನ್ನುವ 'ಬುಲ್ಡೋಜರ್ ನ್ಯಾಯಪದ್ಧತಿ'ಯ ಪ್ರತಿಪಾದನೆಯೂ ಆಗುತ್ತದೆ. ಆದರೆ, ದುಂಡಾವರ್ತಿ ನಡವಳಿಕೆಗಳಿಗೆ ಅದೇ ಮಾರ್ಗದಲ್ಲಿ ಪ್ರತಿಕ್ರಿಯಿಸುವುದಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿಲ್ಲ. ನ್ಯಾಯಾಲಯದ ಆಚೆಗಿನ ಯಾವುದೇ ನ್ಯಾಯನಿರ್ಣಯವು ಅಧಿಕಾರ ಮತ್ತು ಕಾನೂನಿನ ಅಪಬಳಕೆಯಾಗಿರುತ್ತದೆ ಹಾಗೂ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಪ್ರಯತ್ನವಾಗಿರುತ್ತದೆ. ಕೃತ್ಯ ಅದೆಷ್ಟೇ ಅಮಾನುಷವಾಗಿದ್ದರೂ ಅದನ್ನು ಕಾನೂನಿನ ಮೂಲಕವೇ ಎದುರಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅನಿವಾರ್ಯ. ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವಷ್ಟಕ್ಕೆ ಸರ್ಕಾರದ ಹೊಣೆಗಾರಿಕೆ ಮುಗಿಯುವುದಿಲ್ಲ. ಹೆಣ್ಣನ್ನು ಅವಮಾನಗೊಳಿಸುವ ಪ್ರತಿಯೊಂದು ಕೃತ್ಯವೂ ಲಿಂಗಸಮಾನತೆಯನ್ನು ಜಾರಿಗೆ ತರುವ ಪ್ರಯತ್ನಕ್ಕೆ ಎದುರಾಗುವ ಹಿನ್ನಡೆ ಎಂದೇ ಭಾವಿಸಬೇಕು ಹಾಗೂ ಅಂತಹ ಕೃತ್ಯಗಳಿಗೆ ಅವಕಾಶವಿಲ್ಲದಂತೆ ಸಮಾಜ ಹಾಗೂ ಶಿಕ್ಷಣವನ್ನು ಮಾನವೀಯಗೊಳಿಸುವ ಪ್ರಯತ್ನಗಳು ವ್ಯಾಪಕವಾಗಿ ನಡೆಯಬೇಕು.

ದಿನದ ಟ್ವೀಟ್

ಶತ್ರುಗಳು ಗಮನಿಸುತ್ತಿದ್ದಾರೆ...

ಎರಡು ತಿಂಗಳಿನಲ್ಲಿ ಭದ್ರತಾ ಲೋಪದ ಎರಡು ಪ್ರಕರಣಗಳು: ಒಂದು, ಸಂಸತ್ತಿನಲ್ಲಿ; ಮತ್ತೊಂದು, ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ.
1. ಇಬ್ಬರು ವ್ಯಕ್ತಿಗಳು ಗ್ಯಾಸ್ ಡಬ್ಬಿಗಳೊಂದಿಗೆ ಲೋಕಸಭೆಯನ್ನು ಪ್ರವೇಶಿಸಿದ್ದಾದರೂ ಹೇಗೆ?
2. ವ್ಯಕ್ತಿಯೊಬ್ಬ ವಿಶ್ವಕಪ್ ಪಂದ್ಯಕ್ಕೆ ಅಡ್ಡಿಪಡಿಸಿದ್ದು ಹೇಗೆ? ಆರೋಪಿಗಳು ಪ್ರತಿಭಟನಕಾರರು. ಆದರೆ ಇದು ಗಂಭೀರವಾದ ವಿಷಯ ಮತ್ತು ರಾಷ್ಟ್ರದ ಭದ್ರತೆಗೆ ಅಪಾಯಕಾರಿ. ಭಾರತದ ಶತ್ರುಗಳು ಗಮನಿಸುತ್ತಿದ್ದಾರೆ!

ಅನ್ಷುಲ್ ಸಕ್ಸೇನಾ, ವಿಶ್ಲೇಷಕ

ಕಿಡಿನುಡಿ



ಇದು, ಜಾರಿ ನಿರ್ದೇಶನಾಲಯ (ಇ.ಡಿ). ಇದರ ಕೃಪೆಗೆ ಎಲ್ಲೆಯೇ ಇಲ್ಲ. ಇದಕ್ಕೆ ಹೊಸ ಸೇರ್ಪಡೆ ಅಜಿತ್ ಪವಾರ್ ಬಣದ (ಎನ್‌ಸಿಪಿ) ಛಗನ್ ಭುಜಬಲ್. 2016ರಲ್ಲಿ ಬಂಧನ, 2018ರಲ್ಲಿ ಜಾಮೀನು ಮಂಜೂರು. ಈಗ ಮಹಾರಾಷ್ಟ್ರದಲ್ಲಿ ಸಚಿವರು. 2018ರ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು, ಅವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ವಾಪಸ್ ಪಡೆಯಲಾಗಿದೆ.

ಕಪಿಲ್ ಸಿಬಲ್, ವಕೀಲ, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 14-12-1998

• 2002ರ ವೇಳೆಗೆ ನಗರದಲ್ಲಿ 24 ತಾಸು ನೀರು

ಬೆಂಗಳೂರು, ಡಿ. 13 – ಬೆಂಗಳೂರು ನಗರಕ್ಕೆ 2002ನೇ ಇಸವಿ ವೇಳೆಗೆ ದಿನದ 24 ಗಂಟೆಗಳೂ ಕುಡಿಯುವ ನೀರು ಸರಬರಾಜು ಮಾಡಲು ಸಾಧ್ಯವಾಗುವ ಐದು ಸಾವಿರ ಕೋಟಿ ರೂಪಾಯಿಗಳ ನಾಲ್ಕು ಭಾರಿ ಯೋಜನೆಗಳನ್ನು ಜಾರಿಗೊಳಿಸಲು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿ ಕಾರ್ಯಕ್ರಮ ಹಾಕಿಕೊಂಡಿದೆ.

ಇದರಲ್ಲಿ ಸುಮಾರು 3,928 ಕೋಟಿ ರೂಪಾಯಿಗಳ ಬಂಡವಾಳವನ್ನು ಖಾಸಗಿ ಸಂಸ್ಥೆಗಳು ತೊಡಗಿಸಲಿವೆ ಎಂದು ಮಂಡಲಿಯ ಅಧ್ಯಕ್ಷ ಜೆ.ಪಿ.ಶರ್ಮಾ ಅವರು ತಿಳಿಸಿದರು.

• ಉತ್ತಮ ಚಿತ್ರಗಳಿಗೆ ಸರ್ಕಾರದ ಸಹಾಯ

ಶಿವಮೊಗ್ಗ, ಡಿ. 13 – ಕನ್ನಡ ಚಲನಚಿತ್ರ ರಂಗದ ಗುಣಾತ್ಮಕ ಬೆಳವಣಿಗೆಗೆ ಬೇಕಾದ ಎಲ್ಲ ಸಹಾಯ, ಸವಲತ್ತುಗಳನ್ನು ಒದಗಿಸಲು ರಾಜ್ಯ ಸರ್ಕಾರ ಆಸಕ್ತವಾಗಿದೆ ಎಂದು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಸಂಜೆ ಇಲ್ಲಿ ತಿಳಿಸಿದರು.

ನೆಹರೂ ಕ್ರೀಡಾಂಗಣದಲ್ಲಿ, ಜಿಲ್ಲೆಯ ನಾನಾ ಮೂಲೆಗಳಿಂದ ಬಂದಿದ್ದ ಸುಮಾರು 20 ಸಾವಿರಕ್ಕೂ ಹೆಚ್ಚು ಜನರ ಸಮ್ಮುಖದಲ್ಲಿ, 1996–97ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಮತ್ತು ಪುಟ್ಟಣ್ಣ ಕಣಗಾಲ್ ಹಾಗೂ ಡಾ. ರಾಜ್‌ಕುಮಾರ್ ಪ್ರಶಸ್ತಿಗಳನ್ನು ವಿತರಿಸಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ

ಶುಕ್ರವಾರ, 14-12-1973

• ಆಹ್ವಾನ ಪರಿಶೀಲನೆಗೆ ರಂಗನಾಥರಿಂದ ಎರಡು ದಿನ ಸಮಯ ಬೇಡಿಕೆ

ಬೆಂಗಳೂರು, ಡಿ. 13 – ರಾಜ್ಯದ ಮಂತ್ರಿಮಂಡಲದ 'ಮಧ್ಯಮ ಪ್ರಮಾಣದ ಪುನರ್ ರಚನೆಯಲ್ಲಿ' ತೊಡಗಿರುವ ಮುಖ್ಯಮಂತ್ರಿ ದೇವರಾಜ ಅರಸು ಅವರು ಮಂತ್ರಿಮಂಡಲಕ್ಕೆ ಸೇರಲು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್. ರಂಗನಾಥ್ ಅವರನ್ನು ಆಹ್ವಾನಿಸಿದ್ದು, ಅವರು ತಮ್ಮ ತೀರ್ಮಾನವನ್ನು ತಿಳಿಸಲು ಎರಡು ದಿನಗಳ ಕಾಲಾವಕಾಶ ಕೇಳಿದ್ದಾರೆಂದು ತಿಳಿದುಬಂದಿದೆ.

ಮಂತ್ರಿಮಂಡಲಕ್ಕೆ ಸೇರಲು ಕಾತುರತೆ ಇಲ್ಲದ ಪ್ರದೇಶ ಅಧ್ಯಕ್ಷ ರಂಗನಾಥ್ ಅವರು ಹೈಕಮಾಂಡ್ ಸಲಹೆಯಂತೆ, ಪಕ್ಷದ ಹಿತ ದೃಷ್ಟಿಯಿಂದ ಮಂತ್ರಿಮಂಡಲಕ್ಕೆ ಸೇರಲು ಒಪ್ಪುವರೆಂಬುದು ಪಕ್ಷದ ವಲಯಗಳಲ್ಲಿರುವ ವಿಶ್ವಾಸ.

ಬೆಂಗಳೂರು-ದೆಹಲಿ ನಡುವೆ ಫೋನ್ ಸಂಪರ್ಕ ಕಡಿದುಹೋಗಿದ್ದ ಕಾರಣ ನಿನ್ನೆ ಮಾತನಾಡಲು ಸಾಧ್ಯವಾಗದಿದ್ದ ಪ್ರದೇಶ ಅಧ್ಯಕ್ಷರು ಸಂಜೆ ಕಾಂಗ್ರೆಸ್ ಅಧ್ಯಕ್ಷ ಶಂಕರದಯಾಳ್ ಶರ್ಮ ಅವರೊಡನೆ ಮಾತನಾಡಿದರು.

ಬಿಸಿಪ್ರಳಯ ಕುರಿತ ಜನಜಾಗೃತಿಗೆಂದು ಈಗ ವಿಜ್ಞಾನಿಗಳೇ ಬಂಡಾಯಕ್ಕಿಳಿದಿದ್ದಾರೆ

ದುಬೈ ಶೃಂಗಸಭೆ, ಬರೀ ಶೃಂಗಾರಸಭೆ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ದುಬೈ ಎಂದರೆ ಭೋಗಲಾಲಸೆಗಳ ಸಾಮ್ರಾಜ್ಯ; ಕೊಳ್ಳುಬಾಕರ ಸ್ವರ್ಗ. ಅಲ್ಲಿನ ಮರಳುಗಾಡಿನಲ್ಲಿ ನಗರ ನಿರ್ಮಾಣಕ್ಕೆ 12 ಸಾವಿರ ಕಿ.ಮೀ. ದೂರದ ಆಸ್ಟ್ರೇಲಿಯಾದಿಂದ ಮರಳನ್ನು ಸಾಗಿಸಿ ತಂದಿದ್ದಿದೆ. ಅಲ್ಲಿ ಮೋಜಿನ ಹಿಮಕ್ರೀಡೆಗೆಂದು ಮಂಜುಗಡ್ಡೆಗಳ ಕೃತಕ ಬೆಟ್ಟವನ್ನೇ ಸೃಷ್ಟಿಸಿದ್ದಿದೆ. 62 ಪಂಚತಾರಾ ಹೋಟೆಲ್‌ಗಳು ಅಲ್ಲಿವೆ. ದುಬೈ ಸೃಷ್ಟಿಯಾಗಿದ್ದೇ ಅತಿ ಹೆಚ್ಚು ತೈಲ ಉತ್ಪಾದಿಸುವ ರಾಷ್ಟ್ರಗಳಲ್ಲೊಂದಾದ ಯುಎಇ (ಸಂಯುಕ್ತ ಅರಬ್ ಎಮಿರೇಟ್ಸ್) ಎಂಬ ದೇಶದಲ್ಲಿ. ಮನುಷ್ಯರ ವಾಸಕ್ಕೇ ಯೋಗ್ಯವಲ್ಲದ ನೆಲವನ್ನು ತೈಲಶಕ್ತಿಯಿಂದಾಗಿಯೇ ಕೆಲವೇ ವರ್ಷಗಳಲ್ಲಿ ಅತಿಭೋಗದ ನೆಲೆಯನ್ನಾಗಿ ಪರಿವರ್ತಿಸಲಾಗಿದೆ.

ಅಂಥ ದುಬೈಯಲ್ಲಿ ಜಾಗತಿಕ ತಾಪಮಾನ ಏರಿಕೆಯನ್ನು ತಡೆಯಲೆಂದು ಈ ಬಾರಿ 28ನೇ ಜಾಗತಿಕ ಶೃಂಗಸಭೆ (ಕಾಪ್28) ಏರ್ಪಾಡಾಗಿತ್ತು. ತೈಲಶಕ್ತಿಗೆ ವಿದಾಯ ಹೇಳಲೇಬೇಕೆಂದು ಒತ್ತಾಯಿಸಬೇಕಿದ್ದ ಈ ಶೃಂಗಸಭೆಗೆ ಅಧ್ಯಕ್ಷರಾಗಿ ಯುಎಇಯ ಅತಿದೊಡ್ಡ ತೈಲ ಕಂಪನಿಯ ಮುಖ್ಯಸ್ಥ ಡಾ. ಸುಲ್ತಾನ್ ಅಹ್ಮದ್ ಅಲ್ ಜೇಬರ್ ನಿಯುಕ್ತಿಗೊಂಡಿದ್ದರು. ತೈಲಶಕ್ತಿಯ ಪರಮೋಚ್ಚ ಉದಾಹರಣೆಯಾಗಿ ಇದು ಇದುವರೆಗಿನ ಅತ್ಯಂತ ವೈಭವದ ಶೃಂಗಸಭೆ ಎಂದು ದಾಖಲಾಯಿತು. ನವೆಂಬರ್ 30ರಿಂದ ಆರಂಭವಾದ ಸಭೆಗಾಗಿ 2,848 ವಿಮಾನಗಳು ಬಂದಿಳಿದವು. ಸುಮಾರು ಇನ್ನೂರು ದೇಶಗಳ 84 ಸಾವಿರ ಪ್ರತಿನಿಧಿಗಳ ಮಹಾಮೇಳ ಅದಾಗಿತ್ತು. ಇಥಿಯೋಪಿಯಾದಿಂದ ಜೀವಂತ ಮರಗಳನ್ನೇ ತಂದು ಕಾಡನ್ನಾಗಿ ಪರಿವರ್ತಿಸಿ ಪ್ರದರ್ಶನಕ್ಕಿಡಲಾಗಿತ್ತು.

ತಾಪಮಾನ ಏರಿಕೆಯಿಂದ ಜೀವಮಂಡಲವನ್ನು ಉಳಿಸಲೆಂದು ಈ ವಾರ್ಷಿಕ ಕಾಪ್ ಸಭೆಯಲ್ಲಿ ಸರ್ಕಾರಗಳ ಮುಖ್ಯಸ್ಥರು, ಖಾಸಗಿ ಕಂಪನಿಗಳು, ಪರಿಸರವಾದಿಗಳು, ವಿಜ್ಞಾನಿಗಳು, ಉದ್ಯಮಿಗಳು, ಚಿಂತಕರು ಮತ್ತು ಸರ್ಕಾರೇತರ ಸಂಘಟನೆಗಳ ವಕ್ತಾರರು ಪಾಲ್ಗೊಳ್ಳುತ್ತಾರೆ. ಇವರೆಲ್ಲರ ಮೇಲೆ ಒತ್ತಡ ಹೇರಬಯಸುವ ಪ್ರತಿಭಟನಕಾರರ ಸಮೂಹಕ್ಕೂ ಅಲ್ಲಿ ಜಾಗವನ್ನು ಕಲ್ಪಿಸಲಾಗುತ್ತದೆ. ಒಳಗೆ ವಿವಿಧ ವೇದಿಕೆಗಳಲ್ಲಿ ಗಂಭೀರ ಚರ್ಚೆ ನಡೆಯುತ್ತಿದ್ದಾಗಲೇ ಹೊರಗಡೆ ಬೀದಿಭಾಷಣ, ಘೋಷಣೆ, ಹಾಡು, ಕುಣಿತ, ಅಣಕುನಾಟಕ, ಛದ್ಮನೃತ್ಯ ಹಾಗೂ ಆದಿವಾಸಿಗಳ ಅಸಲಿ ವೇಷಗಳು ಮಾಧ್ಯಮಗಳಿಗೆ ರಂಜನೆಯನ್ನೂ ಒದಗಿಸುತ್ತವೆ. ಯುಎಇಯಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಅವಕಾಶ ಇಲ್ಲದ ಕಾರಣ, ಪ್ರತಿಭಟನಾ ಪ್ರತಿನಿಧಿಗಳಿಗೆಂದೇ ಒಂದು ಪ್ರತ್ಯೇಕ ಕ್ಷೇತ್ರವನ್ನು ವಿಶ್ವಸಂಸ್ಥೆಯೇ ಅಲ್ಲಿ ಮೀಸಲಿಟ್ಟಿತ್ತು. ಅಲ್ಲೂ ಅರಬ್ ದೊರೆಗಳ ಹೆಸರು, ಚಿತ್ರಗಳಿಗೆ ನಿಷೇಧವಿತ್ತು. 'ಖಾಸಗಿ ವಿಮಾನಗಳ ಸಂಚಾರವನ್ನು ನಿಷೇಧಿಸಿ' ಎಂದು ಹಿಂದಿನ ಹತ್ತಾರು ಶೃಂಗಸಭೆಗಳಲ್ಲಿ ಇವರು ಒತ್ತಾಯಿಸಿದ್ದರೂ ಈ ಬಾರಿ ಅವುಗಳ ಸಂತೆಯೇ ಅಲ್ಲಿ ನೆರೆದಿತ್ತು. ಬ್ರಿಟನ್ ಒಂದರಿಂದಲೇ ಪ್ರಧಾನಿ ರಿಷಿ ಸುನಕ್, ಕಿಂಗ್ ಚಾರ್ಲ್ಸ್, ಡೇವಿಡ್ ಕ್ಯಾಮರೂನ್ ಮೂವರೂ ಮೂರು ಖಾಸಗಿ ವಿಮಾನಗಳಲ್ಲಿ ಬಂದಿಳಿದಿದ್ದರು.

ಮುತ್ಸದ್ದಿಗಳ ಸಭೆಯಲ್ಲಿ ತೈಲದ್ದೇ ಜಟಾಪಟಿ. ಭೂತಾಪ ಏರಿಕೆಗೆ ಕಾರಣವಾದ ಇಂಗಾಲವನ್ನು ಮತ್ತೆ ನೆಲದೊಳಕ್ಕೆ ತೂರಿಸುವ ತಂತ್ರಜ್ಞಾನಕ್ಕೆ ಎಲ್ಲ ತೈಲ-ರಾಷ್ಟ್ರಗಳ (ಒಪೆಕ್) ಒತ್ತು ಇತ್ತೇ ಹೊರತು ಇಂಧನ ತೈಲದ ಬಳಕೆಯನ್ನು ತಗ್ಗಿಸಲು ಯಾರೂ ಒಪ್ಪುತ್ತಿಲ್ಲ. ಆ ತಂತ್ರಜ್ಞಾನ ಈಗಿನ್ನೂ ಸಿದ್ಧಿಸಿಲ್ಲ. ಅಷ್ಟೊಂದು ಇಂಗಾಲವನ್ನು ಭೂಗರ್ಭಕ್ಕೆ ತೂರಿಸಿದರೆ ಅಡ್ಡ ಪರಿಣಾಮ ಏನೆಂದು ಗೊತ್ತಿಲ್ಲ. ಮೇಲಾಗಿ ತೀರ ದುಬಾರಿ. ಅದರಿಂದ ಬಳಕೆದಾರರಿಗೆ ಹೊರೆ ಬೀಳುತ್ತದೆ ವಿನಾ ತೈಲ ಉತ್ಪಾದಕರಿಗೆ ಚಿಂತೆ ಇಲ್ಲ; ಅದಕ್ಕೇ ಅಧ್ಯಕ್ಷರು 'ವಿಜ್ಞಾನದಲ್ಲಿ ನಮಗೆ ನಂಬಿಕೆ ಇದೆ' ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ತೈಲ ಬಳಕೆಯನ್ನು ತಗ್ಗಿಸುವ ಪ್ರಸ್ತಾವಗಳಿಗೆಲ್ಲ ಅಡ್ಡಗಾಲು ಹಾಕಲೆಂದೇ 2,400ಕ್ಕೂ ಹೆಚ್ಚು ತೈಲಾಧಿಪತಿಗಳು ಅಲ್ಲಿ ನೆರೆದಿದ್ದರು. ಡಿಸೆಂಬರ್ 12ರಂದೇ ಸಭೆ ಮುಗಿಯಬೇಕಿದ್ದರೂ ನಿನ್ನೆ ಮಧ್ಯಾಹ್ನದವರೆಗೂ ಅವರು ತಮ್ಮ ಪಟ್ಟನ್ನು ಸಡಿಲಿಸಿಲ್ಲ. ಇತರ ಚಿಕ್ಕಪುಟ್ಟ ಹಳೇ ಪ್ರಸ್ತಾವಗಳಿಗೆ ಸಹಿ ಬಿತ್ತು. ಬಡರಾಷ್ಟ್ರಗಳ ಬರ-ನೆರೆ-ಬೆಂಕಿಯ ಪರಿಹಾರಕ್ಕೆಂದು ಶ್ರೀಮಂತ ದೇಶಗಳು 100 ಶತಕೋಟಿ ಡಾಲರ್ ಕೊಡಬೇಕೆಂಬ ಪ್ರಸ್ತಾಪ ಮತ್ತೆ ಮುನ್ನೆಲೆಗೆ ಬಂತು (ಇದುವರೆಗೆ ಸಂಗ್ರಹವಾಗಿದ್ದು ಬರಿ 70 ಕೋಟಿ ಡಾಲರ್). ಬಡದೇಶಗಳ ಪ್ರತಿನಿಧಿಗಳಂತೂ ಕಂಗೆಟ್ಟಿದ್ದರು. 'ನಮ್ಮದೇ ಮೃತ್ಯುದಂಡಕ್ಕೆ ಸಹಿ ಹಾಕಲು ನಾವಿಲ್ಲಿ ಬಂದಂತಾಯ್ತೆ?' ಎಂದಳು, ಸಮೋವಾ ದ್ವೀಪದೇಶದ ಪ್ರತಿನಿಧಿ ಬ್ರಿಯಾನಾ ಫೀಯಮ್.

ಈ ಬಾರಿಯ ವಿಶೇಷ ಏನೆಂದರೆ, ವಿಜ್ಞಾನಿಗಳೇ ಪ್ರತಿಭಟನೆಗೆ ಇಳಿದಿದ್ದು. ದುಬೈಯಲ್ಲಲ್ಲ, ವಿವಿಧ ರಾಷ್ಟ್ರಗಳ ರಾಜಧಾನಿಗಳಲ್ಲಿ ಅವರು ಬೀದಿಗೆ ಬಂದಿದ್ದರು. ಇದಕ್ಕೆಂದೇ ಅವರು 'ಬಂಡಾಯ ವಿಜ್ಞಾನಿಗಳು' ಎಂಬ ಸಂಘಟನೆಯನ್ನು 2021ರಲ್ಲೇ ಆರಂಭಿಸಿದ್ದಾರೆ (ನೋಡಿ: scientistrebellion.org). ಅವರ ಪ್ರಕಾರ ಪಟ್ಟಭದ್ರ ರಾಜಕಾರಣಿಗಳು, ಉದ್ಯಮಪತಿಗಳು ಮತ್ತು ಧವಳಕೀರ್ತಿಯ ವಿಜ್ಞಾನಿಗಳು ಬರೀ ಮಾತಾಡುತ್ತಿದ್ದಾರೆ. ಕಾಲ ಮಿಂಚುತ್ತಿದೆ. ಭೂತಾಪ ನಿಯಂತ್ರಣಕ್ಕೆ ತುರ್ತಾಗಿ ಉಗ್ರ ಕ್ರಮ ಕೈಗೊಳ್ಳದಿದ್ದರೆ ಜೀವಮಂಡಲಕ್ಕೆ ಉಳಿಗಾಲವಿಲ್ಲ. 'ತುರ್ತು ಕ್ರಮ ಬೇಕಿದೆ. ಆದರೆ ಕಳೆದ 30 ವರ್ಷಗಳಿಂದ ಶೃಂಗಸಭೆ, ಆಶ್ವಾಸನೆ, ಪೊಳ್ಳು ಘೋಷಣೆಗಳೇ ಆಗುತ್ತಿವೆ, ಕಾರ್ಬನ್ ಮಟ್ಟ ಏರುತ್ತಲೇ ಇದೆ. ವಿಜ್ಞಾನಿಗಳಾಗಿ ನಾವು ಈ ವೈಫಲ್ಯವನ್ನು ನೋಡುತ್ತ ಕೂತಿರಬೇಕೆ?' ಎಂದು ಕೇಳುತ್ತಾರೆ, ನಾರ್ವೆಯ ಜೀವವಿಜ್ಞಾನಿ ಫರ್ನಾಂಡೊ ರಾಸಿಮೊ.



ವಿಜ್ಞಾನಿಗಳೆಂದರೆ ಸತ್ಯಶೋಧನೆ ಮಾಡುತ್ತ ನಿರ್ಲಿಪ್ತರಾಗಿರಬೇಕು ಎಂಬ ಶಿಷ್ಟಾಚಾರವನ್ನು ಈ ಬಂಡಾಯಗಾರರು ಧಿಕ್ಕರಿಸುತ್ತಾರೆ. 'ಅದೆಷ್ಟೊಂದು ವರ್ಷಗಳಿಂದ ನಾವು ವೈಜ್ಞಾನಿಕ ದಾಖಲೆಗಳನ್ನು ಸಂಗ್ರಹಿಸುತ್ತಿದ್ದೇವೆ. ಸರ್ಕಾರಕ್ಕೆ ವರದಿ, ಶಿಫಾರಸು ನೀಡುತ್ತಿದ್ದೇವೆ. ಮಾಧ್ಯಮಗಳಿಗೆ ತಿಳಿಸುತ್ತಿದ್ದೇವೆ. ಎಲ್ಲವೂ ವಿಫಲವಾಗಿವೆ. ಜೀವಲೋಕದ ಉಳಿವಿಗಾಗಿ ಈಗ ಅಹಿಂಸಾತ್ಮಕ ಹೋರಾಟಕ್ಕೆ ಇಳಿಯಲೇಬೇಕಾಗಿದೆ' ಎಂದು ಇವರು ಹೇಳುತ್ತಿದ್ದಾರೆ. ಗ್ರೀನ್‌ಪೀಸ್ ಯೋಧರ ಮಾದರಿಯಲ್ಲಿ ಇವರು ಕಲ್ಲಿದ್ದಲನ್ನು ಸಾಗಿಸುವ ರೈಲಿನ ಹಳಿಗಳ ಮೇಲೆ ಹಠಾತ್ತಾಗಿ ಕೂರುತ್ತಾರೆ. ವಸ್ತುಸಂಗ್ರಹಾಲಯಕ್ಕೆ ನುಸುಳಿ ಪ್ರೇಕ್ಷಕರಿಗೆ ಬಿಸಿಪ್ರಳಯದ ಕುರಿತು ದಿಢೀರ್ ಲೆಕ್ಚರ್‌ಶೋ ಕೊಡುತ್ತಾರೆ. ಸಿನಿಮಾ ಫಲಕಗಳ ಮೇಲೆ ವೈಜ್ಞಾನಿಕ ಪ್ರಬಂಧಗಳ ದೊಡ್ಡ ಹೆಡ್‌ಲೈನ್‌ಗಳನ್ನು ಅಂಟಿಸುತ್ತಾರೆ. ಇಂಥ ಪ್ರತಿಭಟನೆಗಳಲ್ಲಿ ತೊಡಗಿ ದಂಡ ತೆತ್ತವರ ಹಾಗೂ ಶಿಕ್ಷೆ ಅನುಭವಿಸುತ್ತಿರುವ ವಿಜ್ಞಾನಿಗಳ ಉದ್ದ ಪಟ್ಟಿಯೇ ಅವರ ವೆಬ್‌ಸೈಟಿನಲ್ಲಿದೆ.

ಈ ಬಾರಿ ಬಂಡಾಯ ವಿಜ್ಞಾನಿಗಳು ದುಬೈ ಶೃಂಗಸಭೆಗೆ ಮುನ್ನ ಒಂದು ಸಾಮೂಹಿಕ ಹೇಳಿಕೆಯನ್ನು ನೀಡಿದ್ದರು: 'ನಾವು ನಿಜಕ್ಕೂ ಕಂಗಾಲಾಗಿದ್ದೇವೆ; ನಮಗೆ ನಿಮ್ಮ ಸಹಾಯ ಬೇಕಿದೆ. ನೀವು ಯಾರೇ ಆಗಿರಿ, ಎಲ್ಲೇ ಇರಿ, ಕ್ಲೈಮೇಟ್ ಚಳವಳಿಗೆ ಧುಮುಕಿ. ಸಂಘಟನೆಯನ್ನು ಆರಂಭಿಸಿ ಅಥವಾ ಸಂಘಟನೆಗೆ ಸೇರಿಕೊಳ್ಳಿ. ಕ್ಲೈಮೇಟ್ ಕುರಿತು ಎಲ್ಲೇ ಸಭೆ ನಡೆದರೂ ಸೇರಿಕೊಳ್ಳಿ' ಎಂದು ಈ ಪತ್ರಕ್ಕೆ 1,447 ವಿಜ್ಞಾನಿಗಳು ಸಹಿ ಹಾಕಿದ್ದಾರೆ. ವಿಶ್ವಸಂಸ್ಥೆಯ ಆದೇಶದ ಮೇರೆಗೆ ತಾಪಮಾನ ಏರಿಕೆಯ ಗತಿಯನ್ನು ದಾಖಲಿಸುತ್ತಿರುವ 33 ವಿಜ್ಞಾನಿಗಳೂ ಇದಕ್ಕೆ ಸಹಿ ಹಾಕಿದ್ದಾರೆ. ('ನಾವೆಲ್ಲ ಉತ್ತಮ ಪೂರ್ವಜರಾಗೋಣ' ಎಂದು ಹಿಂದಿನ ಈಜಿಪ್ಟ್ ಶೃಂಗಸಭೆಯಲ್ಲಿ ಇವರು ಹೇಳಿದ್ದು ಈ ಅಂಕಣದ ಹೆಡ್‌ಲೈನ್ ಆಗಿತ್ತು).

ಅಹ್ಮದಾಬಾದ್ ವಿಶ್ವವಿದ್ಯಾಲಯದ 'ಜಾಗತಿಕ ಪರಿಸರ ಅಧ್ಯಯನ ಕೇಂದ್ರ'ದ ಮಹಿಳಾ ವಿಜ್ಞಾನಿ ಡಾ. ಮಿನಾಲ್ ಪಾಠಕ್ ಕೂಡ ಈಗಿನ ಪತ್ರಕ್ಕೆ ಸಹಿ ಹಾಕಿದ್ದಾರೆ. 'ನನಗಂತೂ ಸಿಟ್ಟೇ ಬರುತ್ತಿದೆ. ಎಂಥದೇ ವೈಜ್ಞಾನಿಕ ಸಾಕ್ಷ್ಯವನ್ನು ಮುಂದಿಟ್ಟು ನಾವು ಸಂಶೋಧನ ಪ್ರಬಂಧವನ್ನು ಬರೆದರೂ ಎಷ್ಟೇ ಮಹತ್ವದ ವೇದಿಕೆಯಲ್ಲಿ ಘಂಟಾಘೋಷ ಹೇಳಿದರೂ ನಿರೀಕ್ಷಿತ ಪ್ರತಿಕ್ರಿಯೆ ಸಿಗುತ್ತಿಲ್ಲ. ವಿಶ್ವನಾಯಕರಿಗೆ ಯಾಕಿದು ಅರ್ಥವಾಗುತ್ತಿಲ್ಲವೊ?' ಎಂದು ಅವರು ಹೇಳುತ್ತಾರೆ.

ಅಂಥ ವಿಶ್ವನಾಯಕರ ವಿರುದ್ಧ ಶೃಂಗಸಭೆಯ ಆವರಣದಲ್ಲಿ ಮೊಳಗುತ್ತಿದ್ದ ಘೋಷಣೆಗಳನ್ನು ಹತ್ತಿಕ್ಕುವ ಯತ್ನ ಈ ಬಾರಿ ಜಾಸ್ತಿಯೇ ಇತ್ತು. ಆದರೆ, ಸಭೆಯ ಒಳಗೇ ವೇದಿಕೆ ಏರಿ 12 ವರ್ಷದ ಮಣಿಪುರದ ಬಾಲಕಿ ಲಿಸಿಪ್ರಿಯಾ ಕಂಗುಜಮ್ ಎಂಬಾಕೆ ಕೂಗಿದ ಘೋಷಣೆ ಮಾತ್ರ ನೂರಾರು ದೇಶಗಳಲ್ಲಿ ಮೊಳಗಿತು. 'ಫಾಸಿಲ್ ಇಂಧನಗಳಿಗೆ ಬಹಿಷ್ಕಾರ ಹಾಕಿ' ಎಂದು ಅವಳು ಕೂಗಿದಾಗ ಸಭಾಂಗಣದಲ್ಲಿ ಭರ್ಜರಿ ಚಪ್ಪಾಳೆ ಬಿತ್ತು. ಆದರೆ ಅವಳಿಗೇ ಶೃಂಗಸಭೆಯಿಂದ ಬಹಿಷ್ಕಾರ ಬಿತ್ತು.

ಚುರುಮುರಿ

ವರ್ಷದ ಪದ

• ಆನಂದ

'ವರ್ಷದ ಪದ ಯಾವುದು?' ಎಂಬ ಮಡದಿಯ ಪ್ರಶ್ನೆಗೆ ತಬ್ಬಿಬ್ಬಾದೆ. 'ಎಲ್ಲರೂ ವರ್ಷದ ವ್ಯಕ್ತಿ, ಸಿನಿಮಾ, ಹಾಡು ಹೀಗೆಲ್ಲ ಹುಡುಕುತ್ತಾರೆ. ನೀನು ವರ್ಷದ ಪದ ಹುಡುಕುತ್ತಿದ್ದೀಯಲ್ಲ?' ಎಂದು ಕೇಳಿದೆ.

'ಯಾಕಾಗಬಾರದು? ಆಕ್ಸ್‌ಫರ್ಡ್, ಕೇಂಬ್ರಿಜ್, ಕಾಲಿನ್ಸ್ ಹೀಗೆ ನಿಘಂಟು ಸಂಸ್ಥೆಗಳು 2023ರ ಫೇಮಸ್ ಪದಗಳನ್ನು ಆಯ್ಕೆ ಮಾಡಿವೆ'.

'ಫೇಮಸ್ ಪದಗಳು ಅಂದರೆ? ಫೇಮಸ್ ವ್ಯಕ್ತಿಗಳು ಗೊತ್ತು. ಫೇಮಸ್ ಪದಗಳು?'

'ಅಂದರೆ, ಆ ವರ್ಷ ಅವು ಹೆಚ್ಚಾಗಿ ಚಾಲ್ತಿಯಲ್ಲಿದ್ದ ಪದಗಳು. ಉದಾಹರಣೆಗೆ, ಕಾಲಿನ್ಸ್‌ನವರು ಈ ವರ್ಷದ ಪದ ಎಂದು 'ಎಐ' ಅನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಂದರೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್–ಕೃತಕ ಬುದ್ಧಿಶಕ್ತಿ'.

'ಸರಿಯಾಗಿದೆ. 'ಎಐ'ನಿಂದ ಏನೇನೋ ಆಗ್ತಿದೆ ಅಂತ ಸುದ್ದಿ ಓದ್ತಾನೆ ಇದೀವಿ'.

'ಹಾಗೇ ಆಕ್ಸ್‌ಫರ್ಡ್‌ನವರಿಗೆ ರಿಜ್, ಕೇಂಬ್ರಿಜ್‌ಗೆ ಹ್ಯಾಲುಸಿನೇಟ್ ಹಾಗೂ ವೆಬ್‌ಸ್ಟರ್‌ಗೆ ಅಥೆಂಟಿಕ್ ಎಂಬ ಪದಗಳನ್ನು ವರ್ಷದ ಪದ ಎಂದು ನಾಮಕರಣ ಮಾಡಲಾಗಿದೆ'.

'ಅದಕ್ಕೆ ನಾವೂ ಹಾಗೆ ಏನಾದರೂ ಪದ ಹುಡುಕೋಣ ಅಂತ ಹೊರಟಿದ್ದೀಯ ತಾನೆ?'

'ಹೌದೂರಿ, ಎಲ್ಲಾ ಫಾರಿನ್ ಮಾಲು ಯಾಕೆ ಆಗಿರಬೇಕು. ಥಿಂಕ್ ಗ್ಲೋಬಲಿ ಆ್ಯಕ್ಟ್ ಲೋಕಲಿ ಎಂದು ಮೋದೀಜಿ ಹಿಂದೊಮ್ಮೆ ಕರೆ ಕೊಟ್ಟಿದ್ದು ಈಗ ನೆನಪಿಗೆ ಬಂದಿದೆ. ಹಾಗಾಗಿ ನಮ್ಮದೇ ಒಂದು ವರ್ಷದ ಪದ ಹುಡುಕೋಣ' ಎಂದಳು.

ತಲೆ ಕೆರೆದುಕೊಂಡೆ. ಹ್ಞಾಂ! ಹೊಳೆಯಿತು. 'ಗ್ಯಾರಂಟಿ' ಪದ ಹೇಗೆ? ಎಂದೆ.

'ಹೌದೂರಿ, ಸಹಿ ಹೈ. ಈಗ ಎಲ್ಲೆಡೆ ಗ್ಯಾರಂಟಿಗಳದ್ದೇ ಮಾತು. ಕರ್ನಾಟಕದಲ್ಲಂತೂ ಗ್ಯಾರಂಟಿಗಳು ಫಲ ಕೊಟ್ಟಿವೆ. ತೆಲಂಗಾಣದಲ್ಲಿ ಗ್ಯಾರಂಟಿಗಳು ವಿಜೃಂಭಿಸಿವೆ. ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಗ್ಯಾರಂಟಿಗಳು ಸದ್ದು ಮಾಡಿವೆ. ಲೋಕಸಭಾ ಚುನಾವಣೆ ಹೊತ್ತಿಗೆ ಇನ್ನಷ್ಟು ಗ್ಯಾರಂಟಿಗಳು ಮತ್ತಷ್ಟು ವೇಷಭೂಷಣ ತೊಟ್ಟು ಬರಲಿವೆ. ಹಾಗಾಗಿ ಗ್ಯಾರಂಟಿಯೇ ನಮ್ಮ ವರ್ಷದ ಪದ' ಎಂದಳು.

'ಆಮೆನ್' ಎಂದೆ.

ಸಂಗತ

ಮುಕ್ತಗೊಳ್ಳಲಿ ವಿಶ್ವವಿದ್ಯಾಲಯ

ಸರ್ಕಾರಗಳು ವಿಶ್ವವಿದ್ಯಾಲಯಗಳನ್ನು ತಮ್ಮ ಗಟ್ಟಿ ಹಿಡಿತದಲ್ಲಿ ಇಟ್ಟುಕೊಳ್ಳುವ ಉದ್ದೇಶವಾದರೂ ಏನು?

• ಪ್ರೊ. ಬಿ.ಕೆ.ಚಂದ್ರಶೇಖರ್

ಸ್ವಾತಂತ್ರ್ಯಪೂರ್ವದಲ್ಲಿ, ಅಂದರೆ 1944ರಲ್ಲಿಯೇ ಕುವೆಂಪು ಅವರು ವಿದ್ಯಾರ್ಥಿಗಳೊಡನೆ ಹಂಚಿಕೊಂಡ ನಾಲ್ಕು ಉಪನ್ಯಾಸಗಳ ಮುಖ್ಯ ಉದ್ದೇಶ, ತರುಣರಲ್ಲಿ ವೈಜ್ಞಾನಿಕ ದೃಷ್ಟಿಕೋನ ಮತ್ತು ವೈಚಾರಿಕತೆಯನ್ನು ಪ್ರಚೋದಿಸುವುದೇ ಆಗಿತ್ತು. ಎಂಟು ದಶಕಗಳಾದರೂ ಕುವೆಂಪು ಅವರ ಆತಂಕ, ಕಳಕಳಿ ಪ್ರಸ್ತುತವಾಗಿವೆ.

ವೈಚಾರಿಕತೆಯನ್ನು ಪ್ರಚೋದಿಸುವುದಾದರೂ ಏಕೆ ಎಂಬುದನ್ನೂ ಕುವೆಂಪು ವಿವರಿಸಿದ್ದಾರೆ. 'ಏಕೆಂದರೆ, ಕಾರ್ಯಭೂಮಿಕೆಯಲ್ಲಿ ಬರಿಯ ಭಾವಭ್ರಾಂತಿಯ ಬೆಡಗಿನ ವೈಖರಿ ನಡೆಯುವುದಿಲ್ಲ... ಭಾವಭ್ರಾಂತಿಗೆ ವಶರಾಗಿ ವಿಜ್ಞಾನದೃಷ್ಟಿಗೆ ವಿರುದ್ಧವಾದುದನ್ನು ಏನಾದರೂ ಮಾಡಿದೆವೋ ಅದರಿಂದ ಸಮಾಜಕ್ಕೆ ಆಘಾತವಾಗುವುದು ನಿಶ್ಚಯ. ಆ ಗುರು, ಈ ಆಚಾರ್ಯ, ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದವು ಏನೇ ಹೇಳಲಿ; ಎಲ್ಲವನ್ನೂ ವಿಮರ್ಶಿಸುವ, ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ. ವೈಜ್ಞಾನಿಕ ದೃಷ್ಟಿಕೋನ ಮತ್ತು ವಿಚಾರವಾದವನ್ನು ಬೋಧಿಸಿ, ಪ್ರಚೋದಿಸಿ ಸಾಧಿಸುವ ಕಾರ್ಯ ಸಮಕಾಲೀನ ವಿಶ್ವವಿದ್ಯಾಲಯಗಳಲ್ಲಿ ಸಮಂಜಸವಾಗಿಲ್ಲ' ಎಂದಿದ್ದಾರೆ.

ವಿದ್ಯಾರ್ಥಿಗಳು 'ನಿರಂಕುಶಮತಿಗಳಾಗಬೇಕು' ಎಂಬ ಆಶಯವು ಬಹುಪಾಲು ಅಧ್ಯಾಪಕರು ಮತ್ತು ಪೋಷಕರಿಗೆ ಅಸಹನೀಯವಾದುದು. ಕರ್ನಾಟಕ ವಿಶ್ವವಿದ್ಯಾಲಯಗಳ ತಿದ್ದುಪಡಿ ಕಾಯ್ದೆಯು ಹೊಸ ಕಲಿಕೆಗೆ ವಿರುದ್ಧವಾಗಿದೆ. ಗುಜರಾತ್ 2016ರಲ್ಲಿ ವಿಶ್ವವಿದ್ಯಾಲಯಗಳ ಸಂಪೂರ್ಣ ನಿಯಂತ್ರಣಕ್ಕೆ ಮುಂದಾಯಿತು. 'ಗುಜರಾತ್ ಉನ್ನತ ಶಿಕ್ಷಣ ಮಂಡಳಿ'ಗೆ ತಜ್ಞರ ಬದಲು ಮುಖ್ಯಮಂತ್ರಿಯವರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದಲ್ಲದೆ, ಸರ್ಕಾರದ ಎಲ್ಲಾ ಆದೇಶಗಳನ್ನು ವಿಶ್ವವಿದ್ಯಾಲಯವು ಪಾಲಿಸುವುದನ್ನು ಕಡ್ಡಾಯಗೊಳಿಸಿತು. ಈ ಕ್ರಮವು ವೈಚಾರಿಕತೆಗೆ ತಿಲಾಂಜಲಿ ಕೊಟ್ಟಂತಿದೆ. ಕರ್ನಾಟಕದ ಕಾಯ್ದೆಯಲ್ಲೂ ಕುಲಪತಿಯ ಆಯ್ಕೆ, ಕುಲಸಚಿವರು, ಹಣಕಾಸು ಅಧಿಕಾರಿಗಳ ನೇಮಕ, ಸಿಂಡಿಕೇಟ್ ಸದಸ್ಯರ ನಾಮನಿರ್ದೇಶನ, ಭ್ರಷ್ಟಾಚಾರದ ಆಪಾದನೆಗೆ ಸಂಬಂಧಿಸಿದ ವಿಚಾರಣೆ- ತನಿಖಾ ಸಮಿತಿಯ ನೇಮಕ ಎಲ್ಲವೂ ಸರ್ಕಾರದ ನಿಯಂತ್ರಣದಲ್ಲಿವೆ.

ಕರ್ನಾಟಕದಲ್ಲಿ ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರವು ವಿಶ್ವವಿದ್ಯಾಲಯಗಳ ವಿವಿಧ ವಿಭಾಗಗಳನ್ನು ಒಳಗೊಂಡ ಆಂತರಿಕ ಸಮಿತಿಯೂ ತನ್ನ ತೆಕ್ಕೆಗೆ ಬರುವಂತೆ ಮಾಡಿತ್ತು! ಹೀಗೆ ವಿಶ್ವವಿದ್ಯಾಲಯಗಳನ್ನು ತಮ್ಮ ಬಿಗಿ ಹಿಡಿತದಲ್ಲಿ ಇಟ್ಟುಕೊಳ್ಳಬಯಸುವ ಸರ್ಕಾರಗಳು ಆ ಕಾರ್ಯದಲ್ಲಿ ಸಫಲವಾಗಿವೆಯೇ? ಪ್ರಶ್ನೆಪತ್ರಿಕೆ ಸೋರಿಕೆ, ಪೊಲೀಸ್ ಕೇಸುಗಳು, ಕಾಪಿ ಹೊಡೆಯುವ ವಿದ್ಯಾರ್ಥಿಗಳ ಅಮಾನತು ಇವೆಲ್ಲ ಒಂದೆಡೆಯಾದರೆ, ಪ್ರತಿಯೊಂದು ವಿಶ್ವವಿದ್ಯಾಲಯದಲ್ಲೂ ಮಂಜೂರಾಗಿರುವ ಬೋಧಕರ ಹುದ್ದೆಗಳಲ್ಲಿ ಶೇ 75ರಿಂದ 90ರಷ್ಟು ಖಾಲಿಯಾಗೇ ಉಳಿದಿರುವುದು ಮತ್ತೊಂದೆಡೆ. ಮೈಸೂರು ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ 460 ಹುದ್ದೆಗಳಲ್ಲಿ 407ರಷ್ಟು ಹುದ್ದೆಗಳಿಗೆ ನೇಮಕಾತಿಯೇ ಆಗಿಲ್ಲ! ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 600ರಲ್ಲಿ 386 ಬೋಧಕ ಹುದ್ದೆಗಳು ಭರ್ತಿಯಾಗಿಲ್ಲ. ಇಲ್ಲೆಲ್ಲ ಅತಿಥಿ ಉಪನ್ಯಾಸಕರನ್ನು ಅವಲಂಬಿಸಲಾಗಿದೆ. ಆದರೂ ಹೊಸ ವಿಶ್ವವಿದ್ಯಾಲಯ ಸ್ಥಾಪನೆಯು ಪ್ರತಿಷ್ಠೆಯ ಸಂಕೇತ ಎನಿಸಿಕೊಂಡಿದೆ.

ಹಾ.ಮಾ.ನಾಯಕ ಅವರು ಹಿಂದೊಮ್ಮೆ, 'ಯೋಚಿಸಿ, ನಿಮಗೆ ಶಿಕ್ಷಣ ಬೇಕೋ, ಶಿಕ್ಷಣ ಸಂಸ್ಥೆ ಸಾಕೋ?' ಎಂದು ಕೇಳಿದ್ದರು. ಈಗಲೂ ಹಾಗೇ ಕೇಳಬೇಕಾಗಿದೆ. ಇದೀಗ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿರುವುದು ಉತ್ತಮ ಆಲೋಚನೆ! ಒಂದು ಹೊಸ ವಿಶ್ವವಿದ್ಯಾಲಯ ಸ್ಥಾಪನೆಗೆ ಕನಿಷ್ಠ ₹ 342 ಕೋಟಿ ಅಗತ್ಯವೆಂದು ರಾಜ್ಯ ಉನ್ನತ ಶಿಕ್ಷಣ ಸಮಿತಿ ಹೇಳಿದೆ. ಹಾಲಿ ಇರುವ ವಿಶ್ವವಿದ್ಯಾಲಯಗಳಿಗೇ ಅಗತ್ಯ ಹಣಕಾಸಿಲ್ಲ. ಇನ್ನು ಹೊಸ ವಿಶ್ವವಿದ್ಯಾಲಯ ಸ್ಥಾಪನೆಗೆ ಎಲ್ಲಿಂದ ಹಣ ಬರುತ್ತದೆ?



'ಆತ್ಮನಿರ್ಭರ'ದ ಹೆಸರಿನಲ್ಲಿ 'ಮೆಕಾಲೆ-ಘರ್‌ವಾಪ್ಸಿ' ಆಗಿದೆ. ಕೇಂದ್ರದಲ್ಲಿ ಎನ್‌ಡಿಎ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು 10 ವರ್ಷಗಳಾದ ನಂತರವೂ ಉನ್ನತ ಶಿಕ್ಷಣದ ಅಭಿವೃದ್ಧಿ ಸಾಧ್ಯವಾಗಿಲ್ಲ. ಸ್ವಾಯತ್ತತೆಯನ್ನು ನಮ್ಮ ಸಂಸ್ಥೆಗಳಿಗೆ ತಿರಸ್ಕರಿಸಿ, ವಿದೇಶಿ ವಿಶ್ವವಿದ್ಯಾಲಯಗಳಿಗೆ ಯಾವುದೇ ನಿರ್ಬಂಧ ಇಲ್ಲದೆ ನೀಡುವ ಭರವಸೆಯನ್ನು ಯುಜಿಸಿ ಇತ್ತಿದೆ. ಇದು ತಪ್ಪಬೇಕು. ವಿಶ್ವವಿದ್ಯಾಲಯಗಳ ಸ್ವಯಂ ಆಡಳಿತಕ್ಕೆ ಅವಕಾಶ ಮಾಡಿಕೊಡಬೇಕು.

ಕರ್ನಾಟಕದವರಾದ ಡಾ. ವಿ.ಕೆ.ಆರ್.ವಿ. ರಾವ್ ಕೇಂದ್ರ ಸಚಿವರಾಗಿದ್ದಾಗ, ಜಾಗತಿಕ ಗೌರವಗಳಿಸಿಕೊಂಡ 'ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್', 'ಇನ್‌ಸ್ಟಿಟ್ಯೂಟ್ ಆಫ್ ಎಕನಾಮಿಕ್ ಗ್ರೋತ್' ಸಂಸ್ಥೆಗಳನ್ನು ಸ್ಥಾಪಿಸಿದರು. ಇವುಗಳನ್ನು ಅವರು ಸರ್ಕಾರದ ನಿಯಂತ್ರಣದಿಂದ ಸಂಪೂರ್ಣವಾಗಿ ಹೊರಗಿಟ್ಟಿದ್ದು ಗಮನಾರ್ಹ. ಟಾಟಾ ಸಮೂಹವು ಬೆಂಗಳೂರಿನಲ್ಲಿ ಸ್ಥಾಪಿಸಿದ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್' ಮಾದರಿ ಸಂಸ್ಥೆ ಎನಿಸಿಕೊಂಡಿದೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಶಿಕ್ಷಣದ ಸುಧಾರಣೆಗೆ ಶಿಫಾರಸುಗಳನ್ನು ಸಲ್ಲಿಸಲು ಶಿಕ್ಷಣತಜ್ಞ ಪ್ರೊ. ಸುಖದೇವ್ ಥೋರಟ್ ನೇತೃತ್ವದಲ್ಲಿ ರಚಿಸಿರುವ ಸಮಿತಿಯು ಚಿಂತಕ ಯೋಗೇಂದ್ರ ಯಾದವ್ ಅವರಂತಹ ಸದಸ್ಯರನ್ನು ಒಳಗೊಂಡಿದೆ. ಉನ್ನತ ಶಿಕ್ಷಣವೂ ಒಳಗೊಂಡಂತೆ ಶಿಕ್ಷಣ ಕ್ಷೇತ್ರಕ್ಕೆ ಕಾಯಕಲ್ಪ ನೀಡುವ ದಿಸೆಯಲ್ಲಿ ಸಮಿತಿ ತನ್ನ ಶಿಫಾರಸುಗಳನ್ನು ತ್ವರಿತವಾಗಿ ಸಲ್ಲಿಸಲಿ.

ವಾಚಕರ ವಾಣಿ

ಪಟ್ಟಭದ್ರರಿಗೆ ಚುರುಕು ಮುಟ್ಟಿಸುವ ನಡೆ

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಜಯ ಸಾಧಿಸಿದ ಮೂರೂ ರಾಜ್ಯಗಳಲ್ಲಿ ಹೊಸ ಮುಖಗಳಿಗೆ ಮುಖ್ಯಮಂತ್ರಿ ಸ್ಥಾನ ನೀಡುವ ಮೂಲಕ, ಅನುಭವದ ಹೆಸರಿನಲ್ಲಿ ಅದದೇ ಮುಖಗಳು ಕಾಯಂ ಆಗಿ ಗಾದಿ ಹಿಡಿಯುವ ಸಂಸ್ಕೃತಿಗೆ ಬಿಜೆಪಿ ಇತಿಶ್ರೀ ಹಾಡಿದೆ. ಈ ಮೂಲಕ, ರಾಜಕಾರಣದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ. 'ಹೊಸಬರು ಬರುತ್ತಿದ್ದಾರೆ ದಾರಿ ಬಿಡಿ' ಎನ್ನುವಂತೆ, ಪಟ್ಟಭದ್ರ ರಾಜಕಾರಣಿಗಳಿಗೆ ಚುರುಕು ಮುಟ್ಟಿಸಿರುವುದಲ್ಲದೆ ಆಘಾತವನ್ನೂ ಉಂಟುಮಾಡಿದೆ. ಎಂದೋ ಆಗಬೇಕಾಗಿದ್ದ ಈ ಕೆಲಸ ಸ್ವಲ್ಪ ಕಾಲ ವಿಳಂಬವಾದರೂ ಆಗಿದೆ ಎಂದು ಪ್ರಜ್ಞಾವಂತರು ಸಮಾಧಾನಗೊಂಡಿದ್ದಾರೆ.

ಇದೇ ರೀತಿ, ಅಪರಾಧದ ಹಿನ್ನೆಲೆಯುಳ್ಳವರನ್ನು ರಾಜಕೀಯದಿಂದ ಹೊರಗಿಡುವ ಮತ್ತು ಕುಟುಂಬ ರಾಜಕಾರಣಕ್ಕೆ ಪೂರ್ಣವಿರಾಮ ಹಾಕುವ ಕೆಲಸವೂ ನಡೆದರೆ, ನಮ್ಮ ರಾಜಕೀಯ ವ್ಯವಸ್ಥೆ ಸ್ವಚ್ಛವಾಗುವುದರಲ್ಲಿ ಸಂಶಯವಿಲ್ಲ. ಈ ಬದಲಾವಣೆಯು ಮುಖ್ಯಮಂತ್ರಿ ಹುದ್ದೆಯ ಮೇಲೆ ಕಣ್ಣಿಟ್ಟು ಬಿಜೆಪಿ ಸೇರಿದ ಜ್ಯೋತಿರಾದಿತ್ಯ ಸಿಂಧಿಯಾ ಮತ್ತು ರಾಜಸ್ಥಾನದ ಮುಖ್ಯಮಂತ್ರಿ ಹುದ್ದೆಗಾಗಿ ಭಾರಿ ಪ್ರಯತ್ನ ನಡೆಸಿದ ವಸುಂಧರಾ ರಾಜೇ ಅಂತಹವರಿಗೆ ಒಳ್ಳೆಯ ಪಾಠ ಕಲಿಸುವಂತಿದೆ.

ರಮಾನಂದ ಶರ್ಮಾ, ಬೆಂಗಳೂರು

ಪರೀಕ್ಷಾ ಕೇಂದ್ರದ ಬದಲಾವಣೆ ಸಲ್ಲ

ಕೆ-ಸೆಟ್ ಪರೀಕ್ಷೆಗಾಗಿ ಈಗಾಗಲೇ ಕಲಬುರಗಿ ಹಾಗೂ ವಿಜಯಪುರ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳಿಗೆ ಬೆಂಗಳೂರು, ತುಮಕೂರಿನ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯುವಂತೆ ನಿರ್ದೇಶನ ನೀಡಲಾಗಿದೆ. ಅಭ್ಯರ್ಥಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಜಿಲ್ಲಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡಿದ್ದರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಬೇರೆ ಜಿಲ್ಲೆಗಳಲ್ಲಿ ಪರೀಕ್ಷೆ ಬರೆಯಬೇಕೆಂದು ಹೇಳಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ.

ಪ್ರಯಾಣದ ಖರ್ಚು ವೆಚ್ಚವನ್ನು ಅಭ್ಯರ್ಥಿಗಳೇ ಭರಿಸಬೇಕಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕೆ-ಸೆಟ್ ಪರೀಕ್ಷೆಗಾಗಿ ಒಂದು ಸಾವಿರ ರೂಪಾಯಿ ಶುಲ್ಕವನ್ನು ಅಭ್ಯರ್ಥಿಗಳಿಂದ ಪಡೆದಿದೆ. ಮತ್ತೆ ಸಾವಿರಾರು ರೂಪಾಯಿ ಖರ್ಚು ಮಾಡಿಕೊಂಡು ಪರೀಕ್ಷೆ ಬರೆಯಲು ಬೇರೆ ಜಿಲ್ಲಾ ಕೇಂದ್ರಕ್ಕೆ ಹೋಗುವುದು ಎಷ್ಟೋ ಅಭ್ಯರ್ಥಿಗಳಿಗೆ ಕಷ್ಟಕರ. ಇದು ಅವರ ಹಣ ಹಾಗೂ ಸಮಯ ಎರಡನ್ನೂ ಹಾಳು ಮಾಡಿದಂತೆ. ಕಾರ್ಯನಿರ್ವಾಹಕ ನಿರ್ದೇಶಕರು ಕೂಡಲೇ ಈ ಆದೇಶವನ್ನು ಹಿಂಪಡೆದು, ಅಭ್ಯರ್ಥಿ ಯಾವ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿರುತ್ತಾರೋ ಆ ಜಿಲ್ಲೆಯಲ್ಲೇ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕು.

ರಾಜೇಂದ್ರ ಕುಮಾರ್ ಕೆ. ಮುದ್ನಾಳ್, ಯಾದಗಿರಿ, **ಕೈಲಾಸ್ ಡೋಣಿ, ಚಿದಾನಂದ ಕುಡ್ಡನ್,** ಕಲಬುರಗಿ

ನೈತಿಕ ಅಧಃಪತನ

'ಎಲ್ಲಿ ನಾರಿಯನ್ನು ಪೂಜಿಸಲಾಗುವುದೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ. ಸ್ತ್ರೀಯರನ್ನು ಎಲ್ಲಿ ಅವಮಾನಗೊಳಿಸಲಾಗುತ್ತದೋ ಅಲ್ಲಿ, ಮಾಡಿದ ಕಾರ್ಯಗಳೆಲ್ಲವೂ ವ್ಯರ್ಥ' ಎಂಬ ಅರ್ಥದ ಭವ್ಯ ತತ್ವ, ಪರಂಪರೆಯನ್ನು ಹೊಂದಿರುವ ದೇಶ ನಮ್ಮದು. ಉಳ್ಳಾಲದ ರಾಣಿ ಅಬ್ಬಕ್ಕ, ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ, ಒನಕೆ ಓಬವ್ವ ಅವರಂತಹ ವೀರವನಿತೆಯರಿಗೆ ಜನ್ಮವಿತ್ತು, ಇತಿಹಾಸದ ಪುಟದಲ್ಲಿ ಕಂಗೊಳಿಸಿದ ನಾಡು ಕರ್ನಾಟಕ. ಇಂತಹ ನಾಡು ಇಂದು ಕರಾಳ ಪ್ರಕರಣಗಳಿಗಾಗಿ ಸುದ್ದಿಯಾಗುತ್ತಿರುವುದು ಬಹಳ ಆತಂಕಕಾರಿ. ಹೆಣ್ಣು ಭ್ರೂಣಹತ್ಯೆಯ ಬಹಳಷ್ಟು ಪ್ರಕರಣಗಳು ಬೆಳಕಿಗೆ ಬರುತ್ತಿವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ (ಎನ್‌ಸಿಆರ್‌ಬಿ) 2022ರ ವರದಿ ಹೇಳಿರುವಂತೆ, ದೇಶದಲ್ಲಿ ನಡೆದಿರುವ ಆ್ಯಸಿಡ್ ದಾಳಿ ಪ್ರಕರಣಗಳಲ್ಲಿ ಬೆಂಗಳೂರು ನಗರ ಮೊದಲ ಸ್ಥಾನದಲ್ಲಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳೂ ಕರ್ನಾಟಕದಲ್ಲಿ ಹೆಚ್ಚಿಗೆ ದಾಖಲಾಗುತ್ತಿವೆ. ಇವೆಲ್ಲ ತೀವ್ರ ಆತಂಕಕಾರಿ.

ಮೇಲ್ನೋಟಕ್ಕೆ ಇದು ಕಾನೂನಿನ ವೈಫಲ್ಯ ಎನಿಸಿದರೂ ವಾಸ್ತವದಲ್ಲಿ ನೈತಿಕ ಅಧಃಪತನದ ಸೂಚಕ ಹಾಗೂ ಮಾನವ ಸಂಸ್ಕೃತಿಯು ವಿನಾಶದತ್ತ ಸಾಗುತ್ತಿರುವುದರ ಸಂಕೇತವಾಗಿದೆ. ಎಲ್ಲವನ್ನೂ ಕಾನೂನಿನ ಮೂಲಕವೇ ಸರಿಪಡಿಸಬಹುದು ಎಂಬ ಧೋರಣೆಯಿಂದ ಹೊರಬಂದು 'ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ, ಪೆಣ್ಣಲ್ಲವೆ ಪೊರೆದವಳು' ಎಂಬ ಸಂಚಿ ಹೊನ್ನಮ್ಮನ ಮಾತನ್ನು ಪ್ರತಿಯೊಬ್ಬರೂ ತಮ್ಮ ಆತ್ಮದೊಂದಿಗೆ ಅನುಸಂಧಾನ ಮಾಡಿಕೊಳ್ಳಬೇಕಾದ ಅಗತ್ಯವಿದೆ.

ಮಂಜುನಾಥ್, ಕೆ.ಆರ್.ಪೇಟೆ

ಸಮೀಕ್ಷಾ ವರದಿ: ಹಗ್ಗಜಗ್ಗಾಟವೇಕೆ?

ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯನ್ನು ಅರಿಯಲು ಮನೆಮನೆಗೆ ತೆರಳಿ ಅಂಕಿ ಅಂಶಗಳನ್ನು ಸಂಗ್ರಹಿಸಿ ಜಾತಿ ಜನಗಣತಿ ವರದಿ ಸಿದ್ಧಪಡಿಸಲಾಗಿದೆ. ಇದಕ್ಕಾಗಿ ಕೋಟ್ಯಂತರ ರೂಪಾಯಿ ವೆಚ್ಚ ಆಗಿದೆ. ಆದರೆ, ಆ ಕಾರ್ಯ ಪೂರ್ಣಗೊಳ್ಳುವವರೆಗೆ ಸುಮ್ಮನಿದ್ದು, ಹಲವಾರು ವರ್ಷಗಳ ನಂತರ ಈಗ 'ವರದಿ ಸಮರ್ಪಕವಾಗಿಲ್ಲ' ಎಂದು ಕೆಲವರು ಹೊಸ ರಾಗ ಹಾಡುತ್ತಿದ್ದಾರೆ. ವರದಿ ಸ್ವೀಕರಿಸಲು ಅಚಲ ನಿರ್ಧಾರ ಮಾಡಿರುವುದಾಗಿ ಮುಖ್ಯಮಂತ್ರಿ ಹೇಳಿದರೆ, 'ನಮ್ಮ ಸಮುದಾಯಕ್ಕೆ ಅನ್ಯಾಯವಾಗಿದೆ. ವರದಿ ಒಪ್ಪಲಾಗದು' ಎಂದು ಕೆಲ ಸಚಿವರು ಹೇಳುತ್ತಾರೆ. ಯಾವುದೇ ಆಯೋಗದ ವರದಿಯ ಶಿಫಾರಸುಗಳನ್ನು ಸರ್ಕಾರ ಸ್ವೀಕರಿಸಿ, ಅದನ್ನು ಸಚಿವ ಸಂಪುಟದ ಮುಂದಿಟ್ಟು ಚರ್ಚಿಸಿ, ನಂತರ ವಿಧಾನಮಂಡಲದಲ್ಲಿ ಮಂಡಿಸಿ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವುದು ವಾಡಿಕೆ. ತದನಂತರವೇ ವರದಿಯಲ್ಲಿನ ಶಿಫಾರಸುಗಳ ಫಲ ಹಿಂದುಳಿದ ವರ್ಗಗಳಿಗೆ ದೊರಕುವುದು. ಇಷ್ಟೆಲ್ಲಾ ಪ್ರಕ್ರಿಯೆಗಳು ಮುಂದಿರುವಾಗ, ಕಾಂತರಾಜ ಆಯೋಗದ ವರದಿಗೆ ಅನೇಕರು ಅಡ್ಡಗಾಲು ಹಾಕುತ್ತಿರುವುದನ್ನು ನೋಡಿದರೆ, ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯವು ಕನ್ನಡಿಯೊಳಗಿನ ಗಂಟೇನೊ ಎಂದು ಭಾಸವಾಗುತ್ತದೆ.

ಗಣಪತಿ ನಾಯ್ಕ್, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂಸತ್ ಭವನ: ಭದ್ರತೆ ಬಿಗಿಯಾಗಿದ್ದರೂ ಲೋಪ

ಸಂಸತ್ ಭವನದ ಮೇಲೆ 2001ರ ಡಿಸೆಂಬರ್ 13ರಂದು ಭಯೋತ್ಪಾದನಾ ದಾಳಿ ನಡೆದಿತ್ತು. ಆನಂತರ ಸಂಸತ್ ಭವನದ ಭದ್ರತೆಯನ್ನು ಬಿಗಿಗೊಳಿಸಲಾಗಿತ್ತು. 2023ರಲ್ಲಿ ನೂತನ ಸಂಸತ್ ಭವನವು ಕಾರ್ಯಾರಂಭ ಮಾಡಿದ ನಂತರ ಅಲ್ಲೂ ಅದೇ ಮಟ್ಟದ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ಸರ್ಕಾರ ಹೇಳಿತ್ತು. ಸಂಸತ್ ಭವನದ ಮೇಲೆ ನಡೆದಿದ್ದ ದಾಳಿಯ 22ನೇ ವರ್ಷಾಚರಣೆಯ ದಿನವೇ ಈ ಭದ್ರತೆಯನ್ನು ಭೇದಿಸಲಾಗಿದೆ

ಪ್ರಜಾವಾಣಿ ವಾರ್ತೆ

‘ಸಂಸತ್ ಭವನದಲ್ಲಿ ಹಲವು ಹಂತದ ಅತ್ಯಾಧುನಿಕ ಭದ್ರತಾ ವ್ಯವಸ್ಥೆ ಜಾರಿಯಲ್ಲಿದೆ’ ಎನ್ನುತ್ತದೆ ಸಂಸತ್ ಭವನದ ಭದ್ರತಾ ಕೈಪಿಡಿ. ಸಂಸತ್ ಭವನದ ಆವರಣ, ಸಂಸತ್ ಭವನದ ಸಂಕೀರ್ಣ, ಕೇಂದ್ರ ಸಭಾಂಗಣ, ಲೋಕಸಭೆ, ರಾಜ್ಯಸಭೆ ಮತ್ತು ಸಂಸತ್ ಭವನದ ಕಾರಿಡಾರ್‌ಗಳಲ್ಲಿನ ಭದ್ರತಾ ವ್ಯವಸ್ಥೆಗಳನ್ನು ಇದರಲ್ಲಿ ವಿವರಿಸಲಾಗಿದೆ. ಅಧಿವೇಶನದ ಕಲಾಪ ವೀಕ್ಷಣೆಗೆ ಬರುವ ಸಾರ್ವಜನಿಕರು ಅನುಸರಿಸಬೇಕಾದ ನಿಯಮಗಳು, ಸಂಸದರು ಪಾಲಿಸಬೇಕಾದ ಭದ್ರತಾ ನಿಯಮಗಳು ಮತ್ತು ಭದ್ರತಾ ಸಿಬ್ಬಂದಿಯ ಕರ್ತವ್ಯಗಳನ್ನು ಈ ಕೈಪಿಡಿಯಲ್ಲಿ ವಿವರಿಸಲಾಗಿರುತ್ತದೆ.

ಈ ಪ್ರಕಾರ ಸಂಸತ್ ಭವನ ಸಂಕೀರ್ಣ ಮತ್ತು ಸಂಸತ್ ಭವನದ ಭದ್ರತೆಯ ಸಂಪೂರ್ಣ ಹೊಣೆ ‘ಸಂಸತ್ ಭದ್ರತಾ ಪಡೆ’ಯದ್ದಾಗಿದೆ. ಇದು ಕೇಂದ್ರದ ಅರೆಸೇನಾಪಡೆಗಳ ವಿವಿಧ ಪಡೆಗಳು ಮತ್ತು ಸಂಸತ್ ಭವನದ ಭದ್ರತಾ ಸಿಬ್ಬಂದಿಯನ್ನು ಒಳಗೊಂಡ ಪ್ರತ್ಯೇಕ ಪಡೆಯಾಗಿದೆ. ಈ ಸಿಬ್ಬಂದಿಯ ನೆರವಿಗಾಗಿ ದೆಹಲಿ ಪೊಲೀಸ್ ಇಲಾಖೆಯ ಕೆಲ ಸಿಬ್ಬಂದಿಯನ್ನು ಸಹಾಯಕರನ್ನಾಗಿ ನಿಯೋಜಿಸಲಾಗಿರುತ್ತದೆ. ಸಂಸತ್ ಭದ್ರತಾ ಪಡೆಯೇ ಎಲ್ಲಾ ಸ್ವರೂಪದ ತಪಾಸಣಾ ಕಾರ್ಯಗಳನ್ನು ನಡೆಸುತ್ತದೆ.

ಸಂಸತ್ ಭವನದ ಆವರಣಕ್ಕೆ ಪ್ರವೇಶ ನೀಡುವ ಮುಖ್ಯ ದ್ವಾರಗಳು ಮತ್ತು ಸಂಸತ್ ಕಟ್ಟಡದ ದ್ವಾರಗಳು, ಗ್ಯಾಲರಿ ಪ್ರವೇಶದ್ವಾರಗಳು ಮತ್ತು ಗ್ಯಾಲರಿಯಲ್ಲೂ ತಪಾಸಣಾ ಹಾಗೂ ಭದ್ರತಾ ವ್ಯವಸ್ಥೆ ಇರುತ್ತದೆ. ಗ್ಯಾಲರಿಗೆ ಪ್ರವೇಶ ಪಡೆಯುವ ಪ್ರತಿ ಸಾರ್ವಜನಿಕನೂ/ಳೂ ಈ ಎಲ್ಲೆಡೆ ತಪಾಸಣೆಗೆ ಒಳಗಾಗಲೇಬೇಕು. ಆತ/ಆಕೆಯ ಬ್ಯಾಗ್, ವಾಲೆಟ್, ಮೊಬೈಲ್, ಬ್ರೀಫ್‌ಕೇಸ್‌ಗಳನ್ನೂ ತಪಾಸಣೆಗೆ ಒಳಪಡಿಸಲೇಬೇಕು. ಇಷ್ಟೆಲ್ಲಾ ತಪಾಸಣಾ ಕೇಂದ್ರಗಳನ್ನು ದಾಟಿ ಇಬ್ಬರು ‘ಸ್ಮೋಕ್ ಕ್ಯಾನ್’ಗಳನ್ನು ಲೋಕಸಭೆಯ ಗ್ಯಾಲರಿಯ ಒಳಗೆ ಒಯ್ದಿದ್ದಾರೆ. ‘ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಇದ್ದರೂ, ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿಲ್ಲ. ಹೀಗಾಗಿಯೇ ಭದ್ರತಾ ಲೋಪವಾಗಿದೆ’ ಎಂದು ಕಾಂಗ್ರೆಸ್ ಮತ್ತು ಶಿವಸೇನಾದ (ಉದ್ಧವ್ ಬಣ) ಸಂಸದರು ಆರೋಪಿಸಿದ್ದಾರೆ.

1. ಸಂಸತ್ ಭವನ ಆವರಣದ ಗೇಟ್‌ಗಳು

ಸಂಸದರು, ಸಂಸತ್ತಿನ ನೌಕರರು, ಪತ್ರಕರ್ತರು ಪ್ರವೇಶಿಸಲು ಪ್ರತ್ಯೇಕ ದ್ವಾರಗಳಿವೆ. ಅಲ್ಲಿ ಸಾರ್ವಜನಿಕರಿಗೆ ಪ್ರವೇಶ ನೀಡುವಂತಿಲ್ಲ. ಬದಲಿಗೆ ಸಾರ್ವಜನಿಕರು ಹೊಂದಿರುವ ಪಾಸ್‌ಗಳ ಆಧಾರದಲ್ಲಿ ಅವರನ್ನು ಬೇರೆ-ಬೇರೆ ಗೇಟ್‌ಗಳ ಮೂಲಕ ಒಳಬಿಡಲಾಗುತ್ತದೆ.

- ಸಂಸತ್ ಭವನ/ ವೀಕ್ಷಕರ ಗ್ಯಾಲರಿಯ/ ಸಂಸದರ ಭೇಟಿಯ ಕಾರ್ಡ್ ಅಥವಾ ಪಾಸ್‌ಗಳು ಇದ್ದರಷ್ಟೇ ಈ ಗೇಟ್‌ಗಳಲ್ಲಿ ಒಳಗೆ ಬಿಡಬೇಕು. ಸಾರ್ವಜನಿಕರು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹೊಂದಿರಬೇಕು
- ವಾಹನಗಳಲ್ಲಿ ನಿಷೇಧಿತ ವಸ್ತುಗಳನ್ನು ಇರಿಸಲಾಗಿದೆಯೇ ಎಂದು ಪರಿಶೀಲಿಸಬೇಕು
- ಪಾಸ್ ಇರುವ ವಾಹನಗಳನ್ನಷ್ಟೇ ಒಳಗೆ ಬಿಡಲಾಗುತ್ತದೆ. ಪಾಸ್‌ಗಳು ಆರ್‌ಎಫ್‌ಐಡಿ ಟ್ಯಾಗ್ ರೂಪದಲ್ಲಿ ಇರುವ ಕಾರಣ, ಇಷ್ಟೂ ಪ್ರಕ್ರಿಯೆ ಸ್ವಯಂಚಾಲಿತವಾಗಿ ನಡೆಯುತ್ತದೆ

2. ಸಂಸತ್ ಭವನ ಕಟ್ಟಡದ ಪ್ರವೇಶದ್ವಾರಗಳು

- ಇಲ್ಲಿ ಪೊಲೀಸ್ ಸಿಬ್ಬಂದಿ ಬ್ಯಾಗೇಜ್ ಸ್ಕ್ಯಾನರ್‌ಗಳ ಮೂಲಕ ಎಲ್ಲಾ ಸಾರ್ವಜನಿಕರ, ಮಾಜಿ ಸಂಸದರ, ಸಂಸದರ, ಸಿಬ್ಬಂದಿಯ ಬ್ಯಾಗ್‌ಗಳು ಮತ್ತು ಬ್ರೀಫ್‌ಕೇಸ್‌ಗಳನ್ನು ತಪಾಸಣೆ ನಡೆಸಬೇಕು
- ಈ ಹಂತದಲ್ಲಿ ಎಲ್ಲಾ ಸಾರ್ವಜನಿಕರನ್ನು ಸಂಪೂರ್ಣವಾಗಿ ತಪಾಸಣೆಗೆ ಒಳಪಡಿಸಬೇಕು
- ಬಾಗಿಲಿಗೆ ಅಳವಡಿಸಿದ ಲೋಹ ಪತ್ತೆ ಯಂತ್ರಗಳು ಮತ್ತು ಕೈಯಲ್ಲಿ ಬಳಸುವ ಲೋಹ ಪತ್ತೆ ಯಂತ್ರಗಳ ಮೂಲಕ ತಪಾಸಣೆ ನಡೆಸಬೇಕು
- ಭದ್ರತಾ ಸಿಬ್ಬಂದಿಯು ಸಾರ್ವಜನಿಕರ ದೇಹವನ್ನು ತಡವಿ ತಪಾಸಣೆ ನಡೆಸಬೇಕು





3. ಸಾರ್ವಜನಿಕ ಗ್ಯಾಲರಿ ತಪಾಸಣಾ ಕೇಂದ್ರಗಳು

- ಬಾಗಿಲಿಗೆ ಅಳವಡಿಸಿದ ಲೋಹ ಪತ್ತೆ ಯಂತ್ರಗಳು
- ಕೈಯಲ್ಲಿ ಬಳಸುವ ಲೋಹ ಪತ್ತೆ ಯಂತ್ರಗಳ ಮೂಲಕ ತಪಾಸಣೆ ನಡೆಸಬೇಕು
- ಭದ್ರತಾ ಸಿಬ್ಬಂದಿಯು ಸಾರ್ವಜನಿಕರ ದೇಹವನ್ನು ತಡವಿ ತಪಾಸಣೆ ನಡೆಸಬೇಕು
- ಸಾರ್ವಜನಿಕರು ನೀಡುವ ಪಾಸ್‌ಗಳನ್ನು ಭದ್ರತಾ ಸಿಬ್ಬಂದಿಯು ತಮಗೆ ಒದಗಿಸಲಾಗಿರುವ ಪಾಸ್‌ಗಳ ಪಟ್ಟಿಯೊಂದಿಗೆ ಹೋಲಿಸಿ ನೋಡಬೇಕು. ಗುರುತಿನ ಚೀಟಿ, ಪಾಸ್‌ಗಳಲ್ಲಿನ ವಿವರವನ್ನು ನೋಡಿ ಪಾಸ್ ಹೊಂದಿರುವ ವ್ಯಕ್ತಿಯೇ ಬಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು

5. ಗ್ಯಾಲರಿಯಲ್ಲಿ

- ಗ್ಯಾಲರಿಯ ಒಳಗೂ ಭದ್ರತಾ ಸಿಬ್ಬಂದಿ ಇರಬೇಕು. ವೀಕ್ಷಕರು ಅಲ್ಲಿ ಪಾಲಿಸಬೇಕಾದ ನಡಾವಳಿಗಳ ಬಗ್ಗೆ ಅವರು ವಿವರಿಸಬೇಕು
- ಗ್ಯಾಲರಿಯ ಒಳಗೆ ವೀಕ್ಷಕರು ಸುಮ್ಮನೆ ಕೂರಬೇಕು. ಅವರ ಚಲನವಲನಗಳ ಮೇಲೆ ಭದ್ರತಾ ಸಿಬ್ಬಂದಿ ನಿಗಾ ಇಡಬೇಕು. ವೀಕ್ಷಕರು ಘೋಷಣೆ ಕೂಗವುದು, ಕರಪತ್ರ ಎಸೆಯುವುದು, ಅನವಶ್ಯಕ ದೈಹಿಕ ಚಲನೆಗಳನ್ನು ಭದ್ರತಾ ಸಿಬ್ಬಂದಿ ನಿಗ್ರಹಿಸಬೇಕು

4. ಗ್ಯಾಲರಿ

- ಗ್ಯಾಲರಿಯ ಪ್ರವೇಶದ್ವಾರದಲ್ಲಿ ಭದ್ರತಾ ಸಿಬ್ಬಂದಿ ಇರಬೇಕು. ಅವರು ಪಾಸ್ ಹೊಂದಿರುವವರನ್ನು ತಡವಿ ತಪಾಸಣೆ ನಡೆಸಬೇಕು. ಆನಂತರವೇ ಗ್ಯಾಲರಿಯ ಒಳಗೆ ಬಿಡಬೇಕು

ಸಂಸದರ ಶಿಫಾರಸು ಇದ್ದರಷ್ಟೇ ಸಾರ್ವಜನಿಕರಿಗೆ ಪಾಸ್

ಸಂಸತ್ತಿನ ಒಳಗೂ ಹಾಗೂ ಹೊರಗೂ ಬಿಗಿ ಭದ್ರತೆ ನಿಯೋಜಿಸಲಾಗಿರುತ್ತದೆ. ಸಂಸತ್ತಿನ ಒಳಗಡೆಗೆ ಸ್ಪೀಕರ್ ಒಪ್ಪಿಗೆ ಇಲ್ಲದೆ ಒಂದು ಸಣ್ಣ ಚೀಟಿ, ಕರಪತ್ರವನ್ನೂ ತರುವಂತಿಲ್ಲ. ಸಂಸದರ, ಸಂಸತ್ತಿನ ಅಧಿಕಾರಿಗಳ, ಅಧಿವೇಶನದ ಕಲಾಪ ವೀಕ್ಷಿಸಲು ಬರುವ ಸಾರ್ವಜನಿಕರ ಪ್ರತಿ ನಡೆಯನ್ನೂ ಇಲ್ಲಿ ತನಿಖಾ ಕಣ್ಣುಗಳಿಂದ ವೀಕ್ಷಿಸಲಾಗುತ್ತಿರುತ್ತದೆ. ಸಾರ್ವಜನಿಕರಿಗೆ ಸಂಸತ್ತಿನ ಒಳಗಡೆ ಪ್ರವೇಶಿಸಲು ಪಾಸ್ ನೀಡುವ ವೇಳೆಯಲ್ಲಿಯೂ ಭಾರಿ ಎಚ್ಚರಿಕೆ ವಹಿಸಲಾಗುತ್ತದೆ. ಜೊತೆಗೆ, ವ್ಯಕ್ತಿಯ ಕುರಿತ ಮಾಹಿತಿಯನ್ನು ಪರಿಶೀಲಿಸಲಾಗುತ್ತದೆ. ಇಷ್ಟೆಲ್ಲ ಭದ್ರತೆಯ ನಡುವೆ ಪಾಸ್ ಪಡೆದುಕೊಂಡಿದ್ದ ಇಬ್ಬರು, ಲೋಕಸಭೆಯ ವೀಕ್ಷಕರ ಗ್ಯಾಲರಿಯವರೆಗೆ ‘ಸ್ಮೋಕ್ ಕ್ಯಾನ್’ಗಳನ್ನು ಗುಪ್ತವಾಗಿ ಒಯ್ಯುವಲ್ಲಿ ಯಶಸ್ವಿಯಾಗಿದ್ದಾರೆ. ಇದು ದೊಡ್ಡ ಮಟ್ಟದ ಭದ್ರತ ಲೋಪವಾಗಿದೆ.

ಸಾರ್ವಜನಿಕರಿಗಷ್ಟೇ ಯಾಕೆ ಸಂಸದರಿಗೂ ಸಂಸತ್ತು ಪ್ರವೇಶಿಸಲು ಪಾಸು ನೀಡುವುದು ಸಾಮಾನ್ಯ ಪಾಸ್ ಪ್ರಾಧಿಕಾರ (ಸಿಪಿಐಸಿ). ವೀಕ್ಷಕರ ಗ್ಯಾಲರಿಗೆ ಪ್ರವೇಶ ಪಡೆದುಕೊಳ್ಳಲು ಸಹ ಇದೇ ಪ್ರಾಧಿಕಾರ ಪಾಸ್ ನೀಡುತ್ತದೆ. ಆದರೆ, ಸಾರ್ವಜನಿಕರಿಗೆ ಪಾಸ್ ನೀಡಬೇಕಾದರೆ, ಸಾರ್ವಜನಿಕರ ಪರವಾಗಿ ಸಂಸದರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಎಂಥ ವ್ಯಕ್ತಿಗೆ ಪಾಸ್ ನೀಡಬೇಕು ಮತ್ತು ಪ್ರಾಧಿಕಾರಕ್ಕೆ ಹೇಗೆ ಅರ್ಜಿ ಸಲ್ಲಿಸಬೇಕು ಎಂಬುದರ ಕುರಿತೂ ಕಟ್ಟುನಿಟ್ಟಿನ ನಿಯಮಗಳಿವೆ.

ಸಾರ್ವಜನಿಕರಿಗೆ ಪಾಸ್ ನೀಡಬೇಕು ಎಂದಾದರೆ, ಸಂಸದರು ಪತ್ರದ ಮೂಲಕವಾಗಿ ಅಥವಾ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಸಂಸದರ ಪಕ್ಷದ ಕಚೇರಿಯ ಅಧಿಕಾರಿಗಳು ಶಿಫಾರಸು ಮಾಡದ ಹೊರತು ಯಾರಿಗೂ ಪಾಸ್ ನೀಡಲಾಗುವುದಿಲ್ಲ. ಸಂಸದರ ಸಹಾಯಕರು, ಹಿರಿಯ ಅಧಿಕಾರಿಗಳು, ಪಕ್ಷದ ಪದಾಧಿಕಾರಿಗಳೊಂದಿಗೆ ಪ್ರಾಧಿಕಾರವು ನಿರಂತರ ಸಂಪರ್ಕ ಇಟ್ಟುಕೊಳ್ಳುತ್ತದೆ. ಶಿಫಾರಸು ಪತ್ರದ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳುತ್ತದೆ. ಬರವಣಿಗೆ ಮೂಲಕವೇ ಅರ್ಜಿ ನೀಡುವ, ಕಲಾಪವನ್ನು ವೀಕ್ಷಿಸುವ ಸದುದ್ದೇಶ ಹೊಂದಿರುವ ವ್ಯಕ್ತಿಗೆ ಮಾತ್ರವೇ ಪ್ರಾಧಿಕಾರ ಪಾಸ್ ನೀಡಬೇಕು. ಇನ್ನು ವೀಕ್ಷಕರ ಗ್ಯಾಲರಿಯ ಪಾಸ್ ಪಡೆದ ಬಳಿಕ ವ್ಯಕ್ತಿಯ ತಪಾಸಣೆಗೂ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಜೊತೆಗೆ, ಆತ ಗ್ಯಾಲರಿಯಲ್ಲಿ ಕುಳಿತ ಬಳಿಕವೂ ಆತನ ಚಲನವಲನಗಳನ್ನು ತೀವ್ರ ನಿಗಾದಲ್ಲಿ ಇರಿಸಲಾಗುತ್ತದೆ.

ಮೋದಿಗೆ ಜೈಕಾರ ಕೂಗಿದ್ದ ವೀಕ್ಷಕರು

ಸೆಪ್ಟೆಂಬರ್‌ನಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಲಾಗಿತ್ತು. ಅದು ಅಂಗೀಕಾರಗೊಂಡ ಬಳಿಕ ವೀಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ಕೆಲವರು ಮೋದಿಗೆ ಜೈಕಾರ ಕೂಗಿದ್ದರು. ಹೀಗೆ ವೀಕ್ಷಕರ ಗ್ಯಾಲರಿಯಲ್ಲಿ ಜೈಕಾರ ಕೂಗುವುದೂ ಸಂಸತ್ತಿನ ನಿಯಮಾವಳಿಯ ಉಲ್ಲಂಘನೆಯಾಗಿದೆ. ಈ ಘಟನೆಯ ಬಗ್ಗೆ ಅಂದೇ ಕೆಲವು ಸಂಸದರು ಆತಂಕ ವ್ಯಕ್ತಪಡಿಸಿದ್ದರು. ಈ ಘಟನೆಯ ಬಗ್ಗೆ ಕೆಲವು ಸಂಸದರು ಸ್ಪೀಕರ್ ಅವರಿಗೆ ಪತ್ರವನ್ನೂ ಬರೆದಿದ್ದರು.

‘ಭದ್ರತಾ ವ್ಯವಸ್ಥೆಯ ಬಗ್ಗೆ ಅನುಮಾನ ಹುಟ್ಟುವಂತಾಗಿದೆ. ಮಹಿಳಾ ಮೀಸಲಾತಿ ಮಸೂದೆಯು ಅಂಗೀಕಾರಗೊಂಡಾಗ ವೀಕ್ಷಕರ ಗ್ಯಾಲರಿಯಲ್ಲಿದ್ದ ಕೆಲವರು ಪ್ರಧಾನಿ ಮೋದಿ ಅವರಿಗೆ ಜೈಕಾರ ಕೂಗಿದ್ದರು. ಅಂದೇ ನಾವು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದೆವು. ನಾಳೆ ಯಾರೋ ಬಂದು ‘ಧಿಕ್ಕಾರ’ವನ್ನೂ ಕೂಗುತ್ತಾರೆ. ಕೆಲವರು ಏನನ್ನಾದರೂ ಬಿಸಾಡಬಹುದು... ಅಂದು ಆರಂಭವಾಗಿದ್ದು ಇಂದು ಈ ಸ್ವರೂಪ ಪಡೆದಿದೆ’ ಎಂದು ಆರ್‌ಜೆಡಿ ಸಂಸದ ಮನೋಜ್ ಝಾ ಆತಂಕ ವ್ಯಕ್ತಪಡಿಸಿದ್ದಾರೆ.

‘ಅಧಿವೇಶನ ನಡೆಯುವಾಗ ಘೋಷಣೆಗಳನ್ನು ಹಾಕಲಾಗುತ್ತದೆ. ಇಂಥ ವ್ಯಕ್ತಿಗಳಿಗೆ ಸಂಸತ್ತು ಪ್ರವೇಶಿಸಲು ಯಾವ ಸಂಸದರು ಅನುವು ಮಾಡಿಕೊಡುತ್ತಿದ್ದಾರೆ ಎನ್ನುವ ಕುರಿತು ತನಿಖೆ ನಡೆಸಬೇಕು ಎಂದು ನಾನು ಸ್ಪೀಕರ್ ಅವರಿಗೆ ಪತ್ರ ಬರೆದಿದ್ದೆ’ ಎಂದಿದ್ದಾರೆ ಶಿವಸೇನಾ (ಉದ್ಧವ್ ಬಣ) ಸಂಸದೆ ಪ್ರಿಯಾಂಕಾ ಚತುರ್ವೇದಿ. ಹೊಸ ಸಂಸತ್ ಭವನದ ಭದ್ರತೆಯ ಕುರಿತು ಅನುಮಾನಗಳು ಎದ್ದಿವೆ ಎನ್ನುವುದು ವಿರೋಧ ಪಕ್ಷಗಳ ಕೆಲವು ಸಂಸದರ ಅಭಿಪ್ರಾಯ. ‘ಹೊಸ ಸಂಸತ್ ಭವನದ ಭದ್ರತೆಯ ವ್ಯವಸ್ಥೆಯು ಕಟ್ಟುನಿಟ್ಟಾಗಿಲ್ಲ. ಹಳೆಯ ಸಂಸತ್ತು ಭವನದ ಕಟ್ಟಡ ಭದ್ರತೆಯೇ ಹೆಚ್ಚು ಬಿಗಿಯಾಗಿತ್ತು ಎಂದು ಹಲವರು ಅಭಿಪ್ರಾಯಪಡುತ್ತಿದ್ದಾರೆ. ಈ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕಿದೆ’ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಅಭಿಪ್ರಾಯಪಡುತ್ತಾರೆ.

ಆಧಾರ: ಸಂಸತ್ ಭವನದ ಭದ್ರತಾ ಕೈಪಿಡಿ, ಲೋಕಸಭೆಯ ವ್ಯವಹಾರಗಳ ಬುಲೆಟಿನ್, ಪಿಟಿಐ

‘ಕಿರಿಕ್ ಪಾರ್ಟಿ’ ತಂಡದ ‘ಬ್ಯಾಚುಲರ್ ಪಾರ್ಟಿ’

ರಕ್ಷಿತ್ ಶೆಟ್ಟಿ ನಟಿಸಿ, ನಿರ್ಮಿಸಿದ್ದ ‘ಕಿರಿಕ್ ಪಾರ್ಟಿ’ ಸಿನಿಮಾ ತೆರೆಕಂಡು ಏಳು ವರ್ಷವಾಗಿದೆ. ಈ ಹೊತ್ತಿನಲ್ಲಿ ಇದೇ ತಂಡದ ಮತ್ತೊಂದು ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಅದೇ ‘ಬ್ಯಾಚುಲರ್ ಪಾರ್ಟಿ’.

‘ಕಿರಿಕ್ ಪಾರ್ಟಿ’ಯ ಬರಹಗಾರ ಅಭಿಜಿತ್ ಮಹೇಶ್, ನಟರಾದ ರಕ್ಷಿತ್ ಶೆಟ್ಟಿ, ರಿಷಬ್ ಶೆಟ್ಟಿ ಸೇರಿದಂತೆ ಅನೇಕರ ಸಿನಿಮಾಗಳಲ್ಲಿ ಬರಹಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಇದೀಗ ‘ಬ್ಯಾಚುಲರ್ ಪಾರ್ಟಿ’ ಸಿನಿಮಾ ಮೂಲಕ ನಿರ್ದೇಶಕನಾಗಿ ಚಂದನವನದಲ್ಲಿ ಪಯಣ ಆರಂಭಿಸಿದ್ದು, ತಮ್ಮ ನೆಚ್ಚಿನ ಕಾಮಿಡಿ ಜಾನರ್‌ನ ಸಿನಿಮಾವೊಂದನ್ನು ತೆರೆಗೆ ತರುತ್ತಿದ್ದಾರೆ. ‘ಬ್ಯಾಚುಲರ್ ಪಾರ್ಟಿ’ ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಅಚ್ಯುತ್ ಕುಮಾರ್, ದಿಗಂತ್ ಹಾಗೂ ಲೂಸ್ ಮಾದ ಯೋಗಿ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಈ ಸಿನಿಮಾದಲ್ಲಿ ರಿಷಬ್ ಶೆಟ್ಟಿ ನಟಿಸಬೇಕಿತ್ತು. ಆದರೆ ‘ಕಾಂತಾರ’ದ ಯಶಸ್ಸಿನ ಬೆನ್ನಲ್ಲೇ ಅದರ ಎರಡನೇ ಭಾಗದ ಸಿದ್ಧತೆಗೆ ರಿಷಬ್ ಇಳಿದ ಕಾರಣ, ಅವರು ‘ಬ್ಯಾಚುಲರ್ ಪಾರ್ಟಿ’ ಸಿನಿಮಾದಿಂದ ಹೊರಗುಳಿದಿದ್ದರು. ಅವರ ಸ್ಥಾನಕ್ಕೆ ಲೂಸ್ ಮಾದ ಯೋಗಿ ಬಂದಿದ್ದಾರೆ. ಸಿನಿಮಾ ಬ್ಯಾಂಕಾಕ್‌ನಲ್ಲಿ ಚಿತ್ರೀಕರಣಗೊಂಡಿರುವ ಕಾರಣ, ಪೋಸ್ಟರ್‌ನಲ್ಲೂ ಅದರ ಝಲಕ್ ಇದೆ. ನಟಿ ಸಿರಿ ರವಿಕುಮಾರ್ ತಾರಾಬಳಗದಲ್ಲಿದ್ದಾರೆ.

ಬರ್ತಿದ್ದಾನೆ ಮಂಡ್ಯ ಹೈದ

‘ಮನಸಾಗಿದೆ’ ಚಿತ್ರದ ಮುಖಾಂತರ ಚಂದನವನಕ್ಕೆ ಕಾಲಿಟ್ಟಿದ್ದ ನಟ ಅಭಯ್ ಚಂದ್ರಶೇಖರ್ ನಟನೆಯ ಎರಡನೇ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಮಂಡ್ಯ ಹೈದ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು.

ಎಸ್. ಚಂದ್ರಶೇಖರ್ ನಿರ್ಮಾಣದ ಐದನೇ ಚಿತ್ರ ಇದಾಗಿದೆ. ನಾಯಕ ಅಭಯ್, ಈ ಚಿತ್ರದಲ್ಲಿ ‘ಶಿವ’ ಹೆಸರಿನ ಮಂಡ್ಯ ಹುಡುಗನಾಗಿ ನಟಿಸಿದ್ದು, ಹಳ್ಳಿ ಹುಡುಗಿಯಾಗಿ ಭೂಮಿಕಾ ನಟಿಸಿದ್ದಾರೆ. ‘ಇದೊಂದು ಹಳ್ಳಿ ಬ್ಯಾಕ್‌ಡ್ರಾಪ್‌ನ ಸಿನಿಮಾ. ನಾಯಕ ಪ್ರೀತಿ ಬಲೆಗೆ ಬೀಳುತ್ತಾನೆ. ಆ ಪ್ರೀತಿ ಪಡೆಯಲು ಸಾಯುತ್ತಾನೋ, ಸಾಯಿಸುತ್ತಾನೋ ಎನ್ನುವುದು ಕಥಾ ಚಿತ್ರದ ಎಳೆ. ಸಾಹಸ ದೃಶ್ಯಗಳು ಚಿತ್ರದ ಹೈಲೈಟ್. ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನದಲ್ಲಿ ಇವುಗಳು ಮೂಡಿಬಂದಿವೆ. ‘ಮಂಡ್ಯ’ ಎಂಬ ಶೀರ್ಷಿಕೆ ಇದ್ದ ಸಿನಿಮಾಗಳೆಲ್ಲ ಯಶಸ್ಸಾಗಿವೆ’ ಎನ್ನುತ್ತಾರೆ ಚಂದ್ರಶೇಖರ್.

ಇದು ವಿ. ಶ್ರೀಕಾಂತ್ ಅವರ ನಿರ್ದೇಶನದ ಚೊಚ್ಚಲ ಸಿನಿಮಾ.

ಅಭಯ್ ಹಾಗೂ ಭೂಮಿಕಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ನುಡಿ ಬೆಳಗು

ಪ್ರಬುದ್ಧತೆಯಿಂದ ವರ್ತಿಸೋಣ

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಬಹಳ ಹಿಂದೆ ಚೀನಾದಲ್ಲಿ ರೈತನೊಬ್ಬನಿದ್ದ. ಒಂದು ದಿನ ಅವನ ಕುದುರೆ ಓಡಿಹೋಯಿತು. ನೆರೆಹೊರೆಯವರೆಲ್ಲ ‘ಅನ್ಯಾಯವಾಯ್ತು’ ಎಂದರು. ಆಗ ರೈತ ತಣ್ಣಗೆ ‘ಓಹ್ ಹೌದಾ’ ಅಂದ. ಮಾರನೇ ದಿನ ಆ ಕುದುರೆ ಆರು ಕಾಡುಕುದುರೆಗಳ ಜತೆ ಬಂತು. ಎಲ್ಲರೂ ಬಂದು ‘ಆಹಾ ಎಂಥ ಅದ್ಭುತ!’ ಅಂದರು. ರೈತ ಮತ್ತೆ ‘ಓಹ್ ಹೌದಾ’ ಎಂದ. ಮರುದಿನ ರೈತನ ಮಗ ಕಾಡು ಕುದುರೆಯನ್ನು ಪಳಗಿಸಲು ಹೋಗಿ ಬಿದ್ದು ಕಾಲು ಮುರಿದುಕೊಂಡ. ನೆರೆಹೊರೆಯವರು ‘ಛೇ, ಬಹಳ ಕೆಟ್ಟದ್ದಾಯಿತು’ ಅಂದರು. ರೈತ ಎಂದಿನಂತೆ ‘ಓಹ್ ಹೌದಾ’ ಅಂದ. ಎರಡುದಿನ ಬಿಟ್ಟು ಸರ್ಕಾರದ ಅಧಿಕಾರಿಗಳು ಅಪಾಯಕಾರಿ ಕೆಲಸವೊಂದಕ್ಕೆ ಯೋಗ್ಯ ಯುವಕರನ್ನು ರಾಜಧಾನಿಗೆ ಕರೆದುಕೊಂಡು ಹೋಗಲು ಬಂದರು. ರೈತನ ಮಗನ ಕಾಲು ಮುರಿದುದಕ್ಕೆ ಅವನನ್ನು ಬಿಟ್ಟು ಹೋದರು. ಆಗ ನೆರೆಹೊರೆಯವರು ‘ಎಂತಹ ಅದೃಷ್ಟ’ ಎಂದರು. ಅದಕ್ಕೂ ರೈತ ಎಂದಿನಂತೆಯೇ ಪ್ರತಿಕ್ರಿಯಿಸಿದ.

ಯಾವುದೇ ಘಟನೆಯನ್ನು ಒಳ್ಳೆಯದು ಅಥವಾ ಕೆಟ್ಟದು ಎಂದು ನಿರ್ಧರಿಸುವುದು ಮೇಲ್ನೋಟಕ್ಕೆ ಕಾಣುವಷ್ಟು ಸರಳವಲ್ಲ. ಪರಿಚಿತ ಮೇಡಂ ಒಬ್ಬರು ಸುಮಾರು ಮೂವತ್ತು ವರ್ಷಗಳ ಹಿಂದೆ ಚಿನ್ನದ ಪದಕ ಪಡೆದು ಎಂಎಸ್ಸಿ ಮುಗಿಸಿದ ವರ್ಷವೇ ಪಿಯು ಕಾಲೇಜಿನ ಉಪನ್ಯಾಸಕ ಹುದ್ದೆ ಭರ್ತಿ ಮಾಡಲಾಯಿತು. ಇವರಿಗೆ ಮೊದಲ ಪಟ್ಟಿಯಲ್ಲೇ ಅವಕಾಶ ಸಿಕ್ಕಿತು. ಅಂಕ ಕಡಿಮೆಯಿದ್ದ ಇವರ ಸ್ನೇಹಿತೆಯರಿಗೆ ಹುದ್ದೆ ಸಿಗಲಿಲ್ಲ. ಈ ಘಟನೆಗೆ ಹಣೆಪಟ್ಟಿ ಕೊಡುವುದಿದ್ದರೆ ಮೊದಲನೆಯವರದ್ದು ಅದ್ಭುತ, ಉಳಿದವರದ್ದು ದುರದೃಷ್ಟ! ಆದರೆ ಕಥೆ ಮುಂದುವರೆಯಿತು! ಕೆಲಸಮಯದಲ್ಲೇ ಪದವಿ ಕಾಲೇಜಿನ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲಾಯಿತು. ಪಿಯು ಕಾಲೇಜಿನಲ್ಲಿ ಕೆಲಸ ಸಿಗದ ಗೆಳತಿಯರಿಗೆ ಪದವಿ ಕಾಲೇಜಿನ ಕೆಲಸ ಸಿಕ್ಕಿತು. ಆಗ ಪಿಯು ಮತ್ತು ಪದವಿ ಕಾಲೇಜಿನ ಉಪನ್ಯಾಸಕರ ಹುದ್ದೆಗಳೆರಡೂ ಒಂದೇ ಎನ್ನುವ ಮನೋಭಾವವಿತ್ತು ಈಗ ಪಿಯು ಕಾಲೇಜಿನವರಿಗೆ ಹೆಚ್ಚೆಂದರೆ ಪ್ರಾಂಶುಪಾಲರ ಹುದ್ದೆಗೆ ಬಡ್ತಿ, ಆದರೆ ಪದವಿ ಕಾಲೇಜಿನಲ್ಲಿ ಹಲವು ಬಗೆಯ ಅವಕಾಶ. ಸಂಬಳದ ವಿಚಾರದಲ್ಲೂ ಆಗ ಇರದ ಅಂತರ ಈಗ ಅಪಾರ!

ನಮ್ಮ ಬದುಕಿನ ಆಗುಹೋಗುಗಳಿಗೆ ನಾವು ತಿಳಿದುಕೊಂಡ ಸೀಮಿತ ಅರ್ಥ ಮಾತ್ರ ಇರುವುದಿಲ್ಲ. ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು. ವಿಫಲರಾದರೆ ಛಲ ಬಿಡದೇ ಪ್ರಯತ್ನ ಮುಂದುವರಿಸಬೇಕು. ನಾವು ಬಯಸಿದ್ದು ನಮಗೆ ಸಿಗದಿರಬಹುದು, ಆದರೆ ಯಾರಿಗೆ ಗೊತ್ತು ಅದಕ್ಕಿಂತ ಉತ್ತಮವಾದ ಬದುಕು ನಮಗಾಗಿ ಕಾಯುತ್ತಿರಬಹುದು! ದಾರಿಯ ಕೊನೆ ಎಂದು ನಾವಂದುಕೊಂಡಿದ್ದು ಹೊಸ ದಾರಿಯೊಂದರ ತಿರುವಾಗಿರಬಹುದು. ಅಲ್ಲಿಂದ ಹೊಸ ಗಮ್ಯಕ್ಕೆ ನಮ್ಮ ಬದುಕು ಹೊರಳಲೂಬಹುದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಡಿಸೆಂಬರ್ 14, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ದ್ವಿತೀಯ ಗಂ. 24-57 ನಕ್ಷತ್ರ: ಮೂಲ ಗಂ. 09-47 ಯೋಗ: ಗಂಡ ಗಂ 13-24 ಕರಣ: ಬಾಲವ ಗಂ. 14-05, ವೃಶ್ಚಿಕ ಮಾಸದ 28 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 4.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-48 ಸೂರ್ಯಾಸ್ತ : 06-02
ಮುಸ್ಲಿಂ ದಿನಾಂಕ : 29 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 5, 10

ಮೇಷ: ಮಾನಸಿಕ ಶಕ್ತಿಗಳು ಬಲಯುತವಾಗಿ ಇಂದು ನಿಮ್ಮ ಯೋಚನೆಗಳನ್ನು ಶೀಘ್ರವೇ ಕಾರ್ಯರೂಪಕ್ಕೆ ಇಳಿಸುತ್ತೀರಿ. ಪ್ರಾಪಂಚಿಕ ವಿಚಾರ ಬಿಟ್ಟು ಆಧ್ಯಾತ್ಮಿಕ ವಿಚಾರ ಕಡೆಗೆ ನಿಮ್ಮ ಗಮನ ಹರಿಯಲಿದೆ.

ವೃಷಭ: ಜೀವನದಲ್ಲಿ ಹೆಚ್ಚಿನ ಹೊಣೆಗಾರಿಕೆ ಹೊರಲು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ. ಕ್ರಾಂತಿಕಾರಿ ಸ್ವಭಾವ ಈ ದಿನ ಹೆಚ್ಚಿನ ಲಾಭ ತರಲಿದೆ. ಮಗಳ ಮದುವೆಗಾಗಿ ಓಡಾಟ ಹೆಚ್ಚಲಿದೆ.

ಮಿಥುನ: ಕುಟುಂಬದಲ್ಲಿ ನಿಮ್ಮ ಮಾತಿಗೆ, ಶ್ರಮಕ್ಕೆ ಸಹಕಾರ ವಾತಾವರಣವಿದ್ದು ಸಂತಸ, ಸಮಾಧಾನ ತರಲಿದೆ. ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭಡ್ತಿ ದೊರೆಯುವ ಸಂಭವ. ಸಮಸ್ಯೆ ಪರಿಹಾರ.

ಕರ್ಕಾಟಕ: ಓದು, ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ. ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸಂತಸದ ಸುದ್ದಿ ಕೇಳಿಬರಲಿದೆ. ಭವಿಷ್ಯದ ನಿಶ್ಚಿತತೆಯಿಂದ ಮಾನಸಿಕ ನೆಮ್ಮದಿ ಹೊಂದುವಿರಿ.

ಸಿಂಹ: ಅನ್ಯರ ಗುಣ ನಡತೆಯನ್ನು ಅವರ ಮೊದಲ ಭೇಟಿಯಲ್ಲಿ ತೀರ್ಮಾನ ಮಾಡಬೇಡಿ. ತಾಂತ್ರಿಕ ವಿದ್ಯಾರ್ಥಿಗಳಿಗೆ ಸುಲಭವಾಗಿ ನೌಕರಿ ಸಿಗುವ ಲಕ್ಷಣವಿದೆ. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ.

ಕನ್ಯಾ: ಅನಾವಶ್ಯಕ ಚಿಂತೆ, ದೂರ ಪ್ರವಾಸದಿಂದ ಅನಾವಶ್ಯಕ ಖರ್ಚು ಹಾಗೂ ಹಾಳು ವ್ಯಸನಗಳು ಈ ದಿನ ನಿಮ್ಮನ್ನು ಆವರಿಸಿಕೊಳ್ಳಬಹುದು, ಎಚ್ಚರದಿಂದಿರಿ. ಇಂದಿನ ಕೆಲಸಕ್ಕೆ ಹಿರಿಯರ ಆಶೀರ್ವಾದ ಲಭಿಸುವುದು.

ತುಲಾ: ದೇವರ ದಯೆಯಿಂದಾಗಿ ಈ ದಿನದ ಆರಂಭದಿಂದಲೇ ಹಂತ ಹಂತವಾಗಿ ಪ್ರಗತಿದಾಯಕವಾಗಲಿದೆ. ಪರೋಪಕಾರದ ಫಲ ಮತ್ತು ಆತ್ಮವಿಶ್ವಾಸ ನಿಮ್ಮನ್ನು ರಕ್ಷಿಸಲಿದೆ. ಕೃಷಿ ಕಾರ್ಯ ಬಿಡುವಿಲ್ಲದೆ ನಡೆಯಲಿದೆ.

ವೃಶ್ಚಿಕ: ಬೆಲೆ ಬಾಳುವ ವಸ್ತು ಕಳೆದುಕೊಳ್ಳುವಂತಾಗಲಿದೆ ಆದ್ದರಿಂದ ಎಚ್ಚರದಿಂದಿರಿ. ಕ್ರೀಡಾಪಟು ಅಭ್ಯಾಸದ ಕೊರತೆಯು ವೈಫಲ್ಯಕ್ಕೆ ಕಾರಣ. ಕಮಿಷನ್ ಏಜೆಂಟ್‌ಗಳಿಗೆ ಅಧಿಕ ಆದಾಯ.

ಧನು: ಎತ್ತರದಲ್ಲಿ ಹತ್ತಿ ಕೆಲಸ ಮಾಡುವವರು, ಸಾಹಸಿ ಪ್ರವೃತ್ತಿಯವರು ಜಾಗ್ರತರಾಗಿರಿ. ನಂಬಿಕಸ್ತರ ಮೋಸ ತಡೆದುಕೊಳ್ಳಲು ಕಷ್ಟ. ಆದರು ಜಯದ ಹಾದಿಯಲ್ಲಿ ಒಂದು ಹೆಜ್ಜೆ ಮುಂದೆ ಸಾಗುವಿರಿ.

ಮಕರ: ಎಲ್ಲರೊಂದಿಗೆ ಬೆರೆಯುವ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭ ಬರಲಿದೆ. ವಿದೇಶ ವ್ಯವಹಾರಗಳಿಂದ ಲಾಭ ಕಾಣುವಿರಿ. ಧಾರ್ಮಿಕ ಕಾರ್ಯಕ್ರಮಗಳಿಗೆ ಭೇಟಿ ನೀಡುವಿರಿ.

ಕುಂಭ: ವ್ಯಾಪಾರ-ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸ ಇಲ್ಲ. ನಟ–ನಟಿ, ಸಂಗೀತಗಾರರಿಗೆ ಉತ್ತಮ ದಿನ. ಹರಿತವಾದ ವಸ್ತು ಬಳಸುವ ಕೆಲಸ ಕಾರ್ಯಗಳಲ್ಲಿ ಅಧಿಕ ಗಮನವಿರಲಿ.

ಮೀನ: ತಾಂತ್ರಿಕ ಕ್ಷೇತ್ರದಲ್ಲಿರುವವರು ಸೋಲು ಒಪ್ಪಿಕೊಳ್ಳುವ ಮನಸ್ಥಿತಿ ರೂಢಿಸಿಕೊಳ್ಳಬೇಕಾಗುತ್ತದೆ. ಸ್ವ ಉದ್ಯೋಗಿಗಳಿಗೆ ವರಮಾನದಲ್ಲಿ ಸುಧಾರಣೆ ಕಂಡು ಬರುವುದು. ವಿದ್ಯಾರ್ಥಿಗಳಿಗೆ ಓದಿನತ್ತ ಗಮನ ಹೆಚ್ಚುವುದು.

ಪದಬಂಧ 5529

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೆಟ್ಟದ ಮೇಲಿನ ಕೋಟೆ (4)
2.ಜಲದಲ್ಲಿ ಹುಟ್ಟಿರುವ ತಾವರೆ (3)
4.ಆರೋಹದ ನಂತರ ಇಳಿಯುವಿಕೆ (4)
7.ಮಾಡಿದ ಕೆಲಸಕ್ಕೆ ಪ್ರತಿಯಾಗಿ ದೊರೆತ ಲಾಭ (4)
9.ವನದಲ್ಲಿದ್ದವನದು ಹೊಸಪ್ರಾಯ (5)
12.ತನ್ನ ಬಗೆಗೆ ಇರುವ ಗೌರವ (4)
13.ಶುರುವಿನಲ್ಲೇ ಕೇಳಿದ ಲಂಚ! (4)
15.ತಂಪಾದ ನೀರು (3)
16.ಅದೇ ತಾನೆ ಮೂಡುತ್ತಿರುವ ಸೂರ್ (4)

ಮೇಲಿಂದ ಕೆಳಕ್ಕೆ
1.ಅಂಗಿ ಹಿಡಿದಿರುವ ಪತ್ನಿ ತಿರುಗಿದ್ದಾಳಲ್ಲಾ? (3)
3.ಕುಟಿಲತೆ ತೋರುವಲ್ಲಿನ ಸಂಕೀರ್ಣ (3)
5.ವಠಾರದಲ್ಲಿರುವ ಮದುವೆ ಗಂಡು (2)
6.ಇದು ಕುದುರೆಯ ಮುಖ (5)
7.ಪ್ರತಿಭಾವಂತನಿಗೆ ಹೀಗೆ ವರ್ಚಸ್ಸು ಬೀರು! (5)
8.ಫಲಕದ ಹತ್ತಿರವಿರುವ ಹಣ್ಣು (2)
10.ಅಭಿನಯಿಸುವಾಗ ತೋರಿಸಿದ ಹೊಕ್ಕುಳು (2)
11.ಮನವನ್ನು ಸೆಳೆದ ಹೊಸತು! (2)
12.ಆದರದಿಂದ ಬರಮಾಡಿಕೊಳ್ಳುವುದು (3)
14.ಆ ಹೊತ್ತು ಒದಗಿದ ತೊಂದರೆಯಿಲ್ಲಿ ಉಲ್ಟಾ! (3)



5528ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ರಣರಂಗ 5.ಜಾಯಮಾನ 6.ದಾರಿಹೋಕ 8.ಕಳಕಳಿ 11.ಮಕರಂದ 13.ಸವಿಸ್ತಾರ 15.ಪ್ರಕರಣ 16.ಕರಗತ

ಮೇಲಿಂದ ಕೆಳಕ್ಕೆ: 1.ಹಜಾರ 2.ಪ್ರಾಮಾಣಿಕ 3.ರಸದಾಳಿ 4.ಗಣಕ 7.ಹೋಲಿಕೆ 9.ಕಳಂಕ 10.ಹರವಿ 11.ಮರಕತ 12.ದಸಕತ್ತು 13.ಸರೀಕ 14.ಪ್ರಣಯ

ಸುಡೊಕು 5915

		1			7		3	
	7		2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9	6		5		1	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5914 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಷೇರುಪೇಟೆ ವಹಿವಾಟು 33



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,906
ಇಂದಿನ ಅಂತ್ಯ	20,926
▲	20
ದಿನದ ಗರಿಷ್ಠ	20,950

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹600

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1620)
ಸೋಯಾ (ರಿಫೈನ್ಡ್)	₹910 (915)
ಸೂರ್ಯಕಾಂತಿ (ರಿಫೈನ್ಡ್)	₹925 (927)
ಪಾಮೋಲಿನ್	₹820 (828)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹221-469
ದ್ವಿತಳಿ (ಬಿ.ವಿ)	₹220-559

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹144.50
ಗುಡ್ ಲಾಟ್	₹127.50

ವಿನಿಮಯ ದರ

$ ಡಾಲರ್	83.41
£ ಪೌಂಡ್	104.42
€ ಯುರೊ	89.95
¥ ಯೆನ್ (100ಕ್ಕೆ)	57

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8250-8250
ತಿಪಟೂರು	₹7700-8500
ತುಮಕೂರು	₹3900-5100

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

2ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಪಾರ್ವತಮ್ಮ ವಿ.
W/o ಲೇಟ್ ಶ್ರೀ ವರದಯ್ಯ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ (ಸ್ಟಾಂಪ್ ಮತ್ತು ಮುದ್ರಣ ಇಲಾಖೆ)
ನಿಮ್ಮ ಆದರ್ಶದ ಜೀವನವೇ ನಮಗೆ ದಾರಿ ದೀಪ.
ಸದಾ ನಿಮ್ಮ ನೆನಪಿನಲ್ಲಿರುವ
ಮಕ್ಕಳು, ಅಳಿಯಂದಿರು, ಸೊಸೆ ಹಾಗೂ ಮೊಮ್ಮಕ್ಕಳು

21ನೇ ವರ್ಷದ ಪುಣ್ಯಸ್ಮರಣೆ



ಶ್ರೀ ವೈರಮುಡಿ ಗೌಡ
ನಿವೃತ್ತ ಕೆಇಬಿ ಇಂಜಿನೀಯರ್
ಸದಾ ನಿಮ್ಮ ಸವಿ ನೆನಪಿನಲ್ಲಿ ದಿನವನ್ನು ಕಳೆಯುತ್ತಾ ನಿಮ್ಮ ಆದರ್ಶಗಳನ್ನು ಸ್ಮರಿಸುತ್ತಾ ನಿಮ್ಮ ಶ್ರೀರಕ್ಷೆಬಲದಿಂದ ಬೆಳೆಯುತ್ತಿದ್ದೇವೆ.
ಶ್ರೀಮತಿ ಜಯಮ್ಮ, ಮಕ್ಕಳು ಮತ್ತು ಮೊಮ್ಮಕ್ಕಳು
080-23301516 9591990080

ಮಲಬಾರ್ ವಜ್ರಾಭರಣ ಮೇಲೆ ವಿಶೇಷ ರಿಯಾಯಿತಿ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯ ವಜ್ರಾಭರಣಗಳ 'ಮೈನ್ ಡೈಮಂಡ್ ಉತ್ಸವ'ಕ್ಕೆ ಚಾಲನೆ ನೀಡಿದೆ.

ಉತ್ಸವದಲ್ಲಿ ತನ್ನ ಜನಪ್ರಿಯ ಉಪ ಬ್ರ್ಯಾಂಡ್ ಆಗಿರುವ ಮೈನ್ ಡೈಮಂಡ್ ಆಭರಣಗಳ ಶ್ರೇಣಿಯನ್ನು ಪ್ರದರ್ಶಿಸಿದೆ. ರಾಜ್ಯದಲ್ಲಿ ಇರುವ ತನ್ನ ಎಲ್ಲಾ ಸ್ಟೋರ್‌ಗಳಲ್ಲಿ ಆರಂಭವಾಗಿರುವ ಈ ಉತ್ಸವ ಜನವರಿ 14ರ ವರೆಗೆ ನಡೆಯಲಿದೆ ಎಂದು ಕಂಪನಿ ತಿಳಿಸಿದೆ.

ಉತ್ಸವದ ಅಂಗವಾಗಿ ಡೈಮಂಡ್ ಗ್ರಾಹಕರಿಗೆ ವಜ್ರದ ಮೌಲ್ಯದ ಮೇಲೆ ಶೇ 25ರ ವರೆಗೆ ರಿಯಾಯಿತಿ ಸೌಲಭ್ಯ ಕಲ್ಪಿಸಲಾಗಿದೆ. ಹಳೆಯ ಮೈನ್ ಡೈಮಂಡ್ ಆಭರಣಗಳ ವಿನಿಮಯದ ಮೇಲೆ ಶೇ 100ರಷ್ಟು ಮೌಲ್ಯವನ್ನು ನೀಡಲಾಗುತ್ತಿದೆ ಎಂದು ತಿಳಿಸಿದೆ.

ಕೊಲ್ಹಾಪುರಿ ಪಾದರಕ್ಷೆ ಕ್ಲಸ್ಟರ್ ಸ್ಥಾಪನೆಗೆ ಗ್ರಹಣ: ಸ್ಥಳೀಯ ಮಾರುಕಟ್ಟೆ ಸೌಲಭ್ಯದ ಕೊರತೆ

ಚಪ್ಪಲಿ ತಯಾರಕರ ಸಂಕಷ್ಟದ ನಡಿಗೆ

■ ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಗ್ರಾಹಕರ ಅಚ್ಚುಮೆಚ್ಚಿನ 'ಕೊಲ್ಹಾಪುರಿ' ಚಪ್ಪಲಿಗಳು ಜಿಲ್ಲೆಯಲ್ಲೇ ತಯಾರಾಗುತ್ತವೆ. ಆದರೆ, ಸ್ಥಳೀಯವಾಗಿ ಮಾರುಕಟ್ಟೆ ಸೌಲಭ್ಯವಿಲ್ಲದ ಕಾರಣ ಚರ್ಮ ಕುಶಲಕರ್ಮಿಗಳು ಇಂದಿಗೂ ಮಹಾರಾಷ್ಟ್ರದ ಮಾರುಕಟ್ಟೆಯನ್ನೇ ಅವಲಂಬಿಸಿದ್ದಾರೆ.

ಜಿಲ್ಲೆಯ ಅಥಣಿ, ಕಾಗವಾಡ, ನಿಪ್ಪಾಣಿ, ರಾಯಬಾಗ ತಾಲ್ಲೂಕುಗಳಲ್ಲಿ ವಿವಿಧ ವಿನ್ಯಾಸ ಮತ್ತು ಗಾತ್ರಗಳ ಪಾದರಕ್ಷೆ ತಯಾರಾಗುತ್ತವೆ. ಸಾವಿರಾರು ಚರ್ಮ ಕುಶಲಕರ್ಮಿಗಳು ಈ ವೃತ್ತಿಯಲ್ಲಿದ್ದಾರೆ. ಸ್ಥಳೀಯವಾಗಿ ಮಾರಾಟಕ್ಕೆ ಉತ್ತಮ ಅವಕಾಶಗಳಿರದ ಕಾರಣ, ಕೊಲ್ಹಾಪುರದ ವ್ಯಾಪಾರಿಗಳನ್ನೇ ಆಶ್ರಯಿಸಿದ್ದಾರೆ.

'ನಾವು ತಯಾರಿಸುವ ಕೆಲ ವಿನ್ಯಾಸಗಳ ಪಾದರಕ್ಷೆಗಳು, ಖಾಸಗಿ ಕಂಪನಿಗಳ ಬ್ರ್ಯಾಂಡೆಡ್ ಉತ್ಪನ್ನಗಳಿಗೂ ಪೈಪೋಟಿ ನೀಡುತ್ತಿವೆ. ನಾವು ಕೊಲ್ಹಾಪುರ, ಮುಂಬೈನ ವ್ಯಾಪಾರಿಗಳಿಗೆ ₹250 ರಿಂದ ₹300ಕ್ಕೆ ಪಾದರಕ್ಷೆ ಮಾರಿದರೆ, ಅವರು ₹500 ರಿಂದ ₹1 ಸಾವಿರಕ್ಕೆ ಗ್ರಾಹಕರಿಗೆ ಮಾರಾಟ ಮಾಡಿ, ಹೆಚ್ಚಿನ ಲಾಭ ಗಳಿಸುತ್ತಾರೆ. ಇಡೀ ದಿನ ಬೆವರು ಹರಿಸಿ ದುಡಿವ ನಾವು ಹೆಚ್ಚಿನ ಆದಾಯದಿಂದ ವಂಚಿತರಾಗುತ್ತಿದ್ದೇವೆ' ಎಂದು ಅಥಣಿ ಲಿಡ್ಕರ್ ಕ್ಲಸ್ಟರ್‌ನ ಕಾರ್ಯದರ್ಶಿ ಶಿವರಾಜ ಸೌದಾಗರ 'ಪ್ರಜಾವಾಣಿ'ಗೆ ತಿಳಿಸಿದರು.

ಸ್ಥಾಪನೆಯಾಗದ ಕ್ಲಸ್ಟರ್: ಗಡಿಭಾಗದ ಪಾದರಕ್ಷೆ ತಯಾರಕರನ್ನು ಒಂದೇ ಸೂರಿನಡಿ ಕರೆತಂದು ಸೂಕ್ತ ತರಬೇತಿ ನೀಡಿ, ಮಾರಾಟಕ್ಕೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ 2021-22ನೇ ಸಾಲಿನ ಬಜೆಟ್‌ನಲ್ಲಿ ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿ 'ಕೊಲ್ಹಾಪುರಿ ಪಾದರಕ್ಷೆಗಳ ಕ್ಲಸ್ಟರ್' ಸ್ಥಾಪಿಸುವುದಾಗಿ ಘೋಷಿಸಿತ್ತು. ಇದರಿಂದ ಪಾದರಕ್ಷೆಗಳ ತಯಾರಿಕರಿಗೆ ಅನುಕೂಲ ಆಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ನಿಪ್ಪಾಣಿಯಲ್ಲಿ ಗುರುತಿಸಲಾದ ಜಾಗದ ವ್ಯಾಜ್ಯವಿದ್ದು, ಯೋಜನೆ ಇನ್ನೂ ಆರಂಭವಾಗಿಲ್ಲ.

'ಹಲವು ವರ್ಷಗಳಿಂದ ನಾವು ಪಾದರಕ್ಷೆ ತಯಾರಿಸುತ್ತಿದ್ದೇವೆ. ಸ್ಥಳೀಯವಾಗಿ ಒಂದಿಷ್ಟು ಮಾರಾಟ ಮಾಡಿ, ಹೆಚ್ಚಿನ ಪಾದರಕ್ಷೆಗಳನ್ನು ಕೊಲ್ಹಾಪುರ, ಮುಂಬೈ, ಹೈದರಾಬಾದ್‌ಗೆ ಕಳುಹಿಸುತ್ತೇವೆ. ಕೋವಿಡ್ ನಂತರದ ಕಾಲಘಟ್ಟದಲ್ಲಿ ನಮ್ಮ ಪರಿಸ್ಥಿತಿ ಬಿಗಡಾಯಿಸಿದೆ' ಎಂದು ಅಥಣಿ ತಾಲ್ಲೂಕಿನ ಮಧಬಾವಿಯ ಚರ್ಮ ಕುಶಲಕರ್ಮಿ ಮಯೂರ ಭಂಡಾರೆ ತಿಳಿಸಿದರು.

'ಸಾಂಪ್ರದಾಯಿಕವಾಗಿ ಕೊಲ್ಹಾಪುರಿ ಪಾದರಕ್ಷೆ ಧರಿಸುವವರು, ಬಾಳಿಕೆ ಕಾರಣಕ್ಕೆ ಬೇರೆ ಬ್ರ್ಯಾಂಡ್‌ನ ಚಪ್ಪಲಿ ಇಷ್ಟಪಡುವುದಿಲ್ಲ. ದೇಶ, ವಿದೇಶದಲ್ಲಿ ನಮ್ಮ ಉತ್ಪನ್ನಗಳಿಗೆ ಬೇಡಿಕೆ ಇದೆ. ನಾವು ತಯಾರಿಸುವ ಉತ್ಪನ್ನಗಳನ್ನು 'ಬೆಳಗಾವಿ' ಅಥವಾ 'ಅಥಣಿ' ಹೆಸರಿನಲ್ಲಿ ಬ್ರ್ಯಾಂಡಿಂಗ್ ಮಾಡಿ, ರೈಲ್ವೆ ನಿಲ್ದಾಣ, ವಿಮಾನ ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಲಿಡ್ಕರ್‌ನ ಮಳಿಗೆ ತೆರೆದು ಮಾರಾಟಕ್ಕೆ ರಾಜ್ಯ ಸರ್ಕಾರ ಅವಕಾಶ ಕಲ್ಪಿಸಬೇಕು' ಎಂದು ಶಿವರಾಜ ಸೌದಾಗರ ಆಗ್ರಹಿಸಿದರು.

'ನಿಪ್ಪಾಣಿಯಲ್ಲಿ ಪಾದರಕ್ಷೆಗಳ ಕ್ಲಸ್ಟರ್ ಅನ್ನು ತ್ವರಿತವಾಗಿ ಆರಂಭಿಸಬೇಕು. ಹೊಸ ವಿನ್ಯಾಸಗಳ ಪಾದರಕ್ಷೆ ತಯಾರಿಕೆಗೆ ತರಬೇತಿ ಕೊಟ್ಟು, ಸ್ಥಳೀಯವಾಗಿ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಕುರಿತು ಚರ್ಚಿಸಲು ಡಿಸೆಂಬರ್ 15ರಂದು ಸಮಾಜ ಕಲ್ಯಾಣ ಇಲಾಖೆ ಸಚಿವರನ್ನು ಭೇಟಿಯಾಗಲು ತೀರ್ಮಾನಿಸಿದ್ದೇವೆ' ಎಂದು ಬೆಳಗಾವಿ ಸಮಗಾರ ಸಮಾಜದ ಅಧ್ಯಕ್ಷ ರವಿ ಶಿಂಧೆ ತಿಳಿಸಿದರು.

ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಕುಶಲಕರ್ಮಿಯೊಬ್ಬರು 'ಕೊಲ್ಹಾಪುರಿ' ಚಪ್ಪಲಿ ತಯಾರಿಸುತ್ತಿದ್ದಾರೆ

> ನಿಪ್ಪಾಣಿಯಲ್ಲಿ ಗುರುತಿಸಿದ್ದ ಜಾಗದ ಸಮಸ್ಯೆಯಿಂದ ಕ್ಲಸ್ಟರ್ ಸ್ಥಾಪನೆ ಆರಂಭಗೊಂಡಿಲ್ಲ. ಅಧಿಕಾರಿಗಳಿಂದ ಮತ್ತೊಂದು ಸ್ಥಳದ ಪರಿಶೀಲನೆ ನಡೆದಿದೆ
>
> **ಎ.ಎಸ್. ರುದ್ರೇಶ,** ಜಿಲ್ಲಾ ಸಂಯೋಜಕ, ಲಿಡ್ಕರ್, ಬೆಳಗಾವಿ

ಮುಂಬೈ ಧಾರಣೆ

ಶೇಂಗಾ

13-12-2023

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1630)
ಒಂದು ವಾರದ ಡೆಲಿವರಿ	1645 (1625)
ಸೋಯಾ ಕಚ್ಚಾ	875 (880)
ಪಾಮ್ ವಾರದ ಡೆಲಿವರಿ	818 (826)
ಸೂರ್ಯಕಾಂತಿ ಎಣ್ಣೆ ಕಚ್ಚಾ	855 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,900 (61,000)
ಬೆಳ್ಳಿ ಕೆ.ಜಿ 70,900 (71,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2000-3000
ಮಧ್ಯಮ	₹1500-2000
ಸಣ್ಣ	₹500-1000

ಜನರಲ್ಲಿ ಹೂಡಿಕೆ ಅರಿವು ಹೆಚ್ಚಿಸಿದ ಮ್ಯೂಚುವಲ್ ಫಂಡ್‌ಗಳ ಒಕ್ಕೂಟ

ಎಸ್‌ಐಪಿ: ₹1.66 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಸಾಲಿನ ಜನವರಿಯಿಂದ ನವೆಂಬರ್ ಅಂತ್ಯದವರೆಗೆ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಿರುವ ಹೂಡಿಕೆಯು ₹1.66 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್‌ಗಳ ಒಕ್ಕೂಟ (ಎಎಂಎಫ್‌ಐ) ಹೇಳಿದೆ.

ಮತ್ತೊಂದೆಡೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸಾಮಾನ್ಯ ಜನರನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಯತ್ತ ಸೆಳೆಯಲು ಮುಂದಾಗಿದೆ. ಇದರ ಭಾಗವಾಗಿ ಹೂಡಿಕೆ ಮಿತಿಯನ್ನು ₹250ಕ್ಕೆ ಇಳಿಸುವುದಾಗಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಕೂಡ ಹೇಳಿದ್ದಾರೆ. ಇದು ಅನುಷ್ಠಾನಗೊಂಡರೆ ಹೂಡಿಕೆಯು ಮತ್ತಷ್ಟು ಬಲಗೊಳ್ಳಲಿದ್ದು, ಬಂಡವಾಳವೂ ಹೆಚ್ಚಳವಾಗುವ ನಿರೀಕ್ಷೆಯಿದೆ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮೇಲಿನ ಹೂಡಿಕೆಯ ಲಾಭ ಮತ್ತು ಹೂಡಿಕೆಯ ಸುಲಭ ವಿಧಾನ ಕುರಿತು ಒಕ್ಕೂಟವು ಜಾಗೃತಿ ಮೂಡಿಸಿದೆ. ಬಂಡವಾಳ ಕ್ರೋಡೀಕರಿಸುವ ಸೆಬಿಯ ಕಾರ್ಯಸೂಚಿಯು ಭಾರತದ ಷೇರುಪೇಟೆಗೆ ವರದಾನವಾಗಿದೆ.

'ಹೂಡಿಕೆದಾರರು ಶಿಸ್ತುಬದ್ಧ ಹೂಡಿಕೆಯ ಮಾರ್ಗವಾಗಿ ಎಸ್‌ಐಪಿಗೆ ಬೆಂಬಲ ಮುಂದುವರಿಸುವ ಸಾಧ್ಯತೆಯಿದೆ. ಅಲ್ಲದೇ, ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಆರೋಗ್ಯಕರ ಬೆಳವಣಿಗೆಯು ಹೂಡಿಕೆ ಹೆಚ್ಚಳಕ್ಕೆ ನೆರವಾಗಿದೆ. ಈ ಪ್ರವೃತ್ತಿಯು ಮುಂದಿನ ವರ್ಷವೂ ಮುಂದುವರಿಯುವ ನಿರೀಕ್ಷೆಯಿದೆ' ಎಂದು ಮೋತಿಲಾಲ್ ಓಸ್ವಾಲ್ ಎಎಂಸಿಯ ಮುಖ್ಯ ಅಧಿಕಾರಿ (ವ್ಯಾಪಾರ) ಅಖಿಲ್ ಚತುರ್ವೇದಿ ಹೇಳಿದ್ದಾರೆ.

'ಹೂಡಿಕೆಯ ಮಿತಿ ಇಳಿಸುವ ನೀತಿಯು ಸಣ್ಣ ಪ್ರಮಾಣದ ಆದಾಯ ಹೊಂದಿರುವವರಿಗೆ ಹೂಡಿಕೆಯ ಬಾಗಿಲನ್ನು ತೆರೆಯಲಿದೆ' ಎಂದು ಆದಿತ್ಯ ಬಿರ್ಲಾ ಸನ್ ಲೈಫ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಹಾಗೂ ಸಿಇಒ ಬಾಲಸುಬ್ರಮಣಿಯನ್ ಹೇಳಿದ್ದಾರೆ.

'ಸೆಬಿಯ ಈ ನಿರ್ಧಾರದಿಂದ ಜನಸಾಮಾನ್ಯರು ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಿಕೊಳ್ಳಲು ನೆರವಾಗುತ್ತದೆ. ಜತೆಗೆ, ಇದು ಸಣ್ಣ ವ್ಯಾಪಾರ ವಲಯದಲ್ಲೂ ಹೂಡಿಕೆಯನ್ನು ವಿಸ್ತರಿಸಲು ಅನುಕೂಲ ಆಗಲಿದೆ' ಎಂದು ಝೆರೋಧಾ ಫಂಡ್ ಹೌಸ್ ಸಿಇಒ ವಿಶಾಲ್ ಜೈನ್ ಪ್ರತಿಪಾದಿಸಿದ್ದಾರೆ.

ಆದಿತ್ಯ ಬಿರ್ಲಾ ಸನ್ ಲೈಫ್ ಮ್ಯೂಚುಯಲ್ ಫಂಡ್ ಈಗಾಗಲೇ ₹100ಗಳಿಂದ ಪ್ರಾರಂಭವಾಗುವ ಎಸ್‌ಐಪಿಯನ್ನು ಅನುಷ್ಠಾನಗೊಳಿಸಿದೆ.

ಎಸ್‌ಐಪಿಗಳ ನಿರ್ವಹಣಾ ಸಂಪತ್ತಿನ ಮೌಲ್ಯವು (ಎಯುಎಂ) ಈ ವರ್ಷದ ನವೆಂಬರ್ ಅಂತ್ಯಕ್ಕೆ ಶೇ 38ರಷ್ಟು ಹೆಚ್ಚಾಗಿ, ₹9.31 ಲಕ್ಷ ಕೋಟಿಗೆ ತಲುಪಿದೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ₹6.75 ಲಕ್ಷ ಕೋಟಿ ಇತ್ತು. ಮ್ಯೂಚುವಲ್ ಫಂಡ್‌ಗಳು ಸುಮಾರು 7.44 ಕೋಟಿ ಎಸ್‌ಐಪಿ ಖಾತೆಗಳನ್ನು ಹೊಂದಿವೆ.

ಬಂಡವಾಳ ಹೂಡಿಕೆ



ಶಬರಿಮಲೆ: ಪರಿಸ್ಥಿತಿ ಕೈಮೀರಿಲ್ಲ– ಸಿ.ಎಂ ವಿಜಯನ್

ನಿರ್ವಹಣೆ ಕೊರತೆ: ಆರೋಪ

ಪ್ರಜಾವಾಣಿ ವಾರ್ತೆ/ ಪಿಟಿಐ

ಕೋಟಯಂ/ತಿರುವನಂತಪುರ (ಕೇರಳ): ಶಬರಿಮಲೆಯ ಅಯ್ಯಪ್ಪಸ್ವಾಮಿ ದೇಗುಲದಲ್ಲಿ ಸಮರ್ಪಕ ನಿರ್ವಹಣೆ ಇಲ್ಲ ಎಂದು ಆರೋಪಿಸಿ ಭಕ್ತರು ಭಾರಿ ಪ್ರತಿಭಟನೆ ನಡೆಸಿದ್ದಾರೆ.

ದೇಗುಲಕ್ಕೆ ಭೇಟಿ ನೀಡಲು ಪಾದಯಾತ್ರೆ ಕೈಗೊಂಡಿದ್ದ ತಮಿಳುನಾಡಿನ 12 ವರ್ಷದ ಬಾಲಕಿ ಕಳೆದ ಶನಿವಾರ ಪ್ರಜ್ಞಾಹೀನಳಾಗಿ ಬಿದ್ದು, ಮೃತಪಟ್ಟಿದ್ದಳು. ಈ ಘಟನೆ ಬೆನ್ನಲ್ಲೇ ಭಾರಿ ಪ್ರತಿಭಟನೆ ನಡೆಯುತ್ತಿದ್ದು, ನಿರ್ವಹಣೆಯಲ್ಲಿನ ವೈಫಲ್ಯಕ್ಕಾಗಿ ಭಕ್ತರು ರಾಜ್ಯ ಸರ್ಕಾರ ಹಾಗೂ ದೇವಸ್ಥಾನದ ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ದೇವರ ದರ್ಶನಕ್ಕಾಗಿ 18 ಗಂಟೆಗಳಷ್ಟು ಕಾಯಬೇಕಾಗಿದೆ' ಎಂದು ಅನೇಕ ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೇಗುಲದ ಆವರಣದಲ್ಲಿ ಹಾಕಿದ್ದ ಬ್ಯಾರಿಕೇಡ್‌ಗಳನ್ನು ಜಿಗಿದು, ದರ್ಶನ ಪಡೆಯಲು ಕೆಲವರು ಮುಂದಾಗಿದ್ದರಿಂದ ಕಾಲ್ತುಳಿತದಂತಹ ಪರಿಸ್ಥಿತಿಯೂ ನಿರ್ಮಾಣವಾಗಿತ್ತು.

ರಾಜ್ಯ ಸರ್ಕಾರ ಹಾಗೂ ದೇವಸ್ಥಾನದ ಆಡಳಿತ ಮಂಡಳಿ ವಿರುದ್ಧ ಕಾಂಗ್ರೆಸ್, ಬಿಜೆಪಿ ಸೇರಿದಂತೆ ವಿರೋಧ ಪಕ್ಷಗಳು ಟೀಕಾಪ್ರಹಾರ ನಡೆಸಿವೆ.

ತಿರುವನಂತಪುರದಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಬಳಸಿದರು. ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

'ಪರಿಸ್ಥಿತಿ ನಿಯಂತ್ರಣದಲ್ಲಿ': ಶಬರಿಮಲೆಯಲ್ಲಿ ಭಕ್ತರು ಪ್ರತಿಭಟನೆ ನಡೆಸುತ್ತಿರುವುದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಶಬರಿಮಲೆಯ ಅಯ್ಯಪ್ಪಸ್ವಾಮಿ ದೇಗುಲಕ್ಕೆ ಭೇಟಿ ನೀಡುತ್ತಿರುವ ಭಕ್ತರ ಸಂಖ್ಯೆಯಲ್ಲಿ ಭಾರಿ ಹೆಚ್ಚಳ ಕಂಡುಬರುತ್ತಿದ್ದರೂ, ಒಟ್ಟಾರೆ ಪರಿಸ್ಥಿತಿ ನಿಯಂತ್ರಣದಲ್ಲಿದೆ' ಎಂದು ಬುಧವಾರ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಗುಲ ಆವರಣದಲ್ಲಿನ ಜನದಟ್ಟಣೆ ಆಧಾರದ ಮೇಲೆ ಪಾದಯಾತ್ರೆಗೆ ಅವಕಾಶ ನೀಡಲಾಗುತ್ತಿದೆ. ನಮ್ಮ ಕೈಮೀರಿ ವಿಪರೀತ ಜನದಟ್ಟಣೆ ಉಂಟಾಗಿ ಕೆಲ ಅವಘಡಗಳು ಸಂಭವಿಸಿವೆ. ಹೀಗಾಗಿ ಆಸ್ಥೆ ವಹಿಸಿ ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದೇವೆ' ಎಂದು ತಿಳಿಸಿದರು.

ಶಬರಿಮಲೆಯ ಅಯ್ಯಪ್ಪ ದೇಗುಲದಲ್ಲಿ ದರ್ಶನಕ್ಕಾಗಿ ಬುಧವಾರ ಭಾರಿ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು –ಪಿಟಿಐ ಚಿತ್ರ

ಸಿ.ಎಂ, ಸಚಿವರಿಗೆ ನಾಚಿಕೆ ಇಲ್ಲ: ಕೇರಳ ರಾಜ್ಯಪಾಲ

ನವದೆಹಲಿ/ ತಿರುವನಂತಪುರ (ಪಿಟಿಐ): 'ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಅವರ ಸಂಪುಟಕ್ಕೆ ನಾಚಿಕೆಯೇ ಇಲ್ಲ' ಎಂದು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಬುಧವಾರ ವಾಗ್ದಾಳಿ ನಡೆಸಿದರು.

ರಾಜ್ಯದ ಕೆಲವು ವಿವಿಗಳ ಸೆನೆಟ್‌ಗಳಿಗೆ ರಾಜ್ಯಪಾಲರು ನಾಮ ನಿರ್ದೇಶನ ಮಾಡಿದ ವಿಚಾರಕ್ಕೆ ಸಂಬಂಧಿಸಿದಂತೆ ಸಚಿವರು ಟೀಕೆ ಮಾಡಿದ್ದರು.

ಇದನ್ನು ಉಲ್ಲೇಖಿಸಿರುವ ರಾಜ್ಯಪಾಲರು, 'ಸೆನೆಟ್‌ಗಳಿಗೆ ಯಾರನ್ನು ನೇಮಕ ಮಾಡುತ್ತೇನೆ ಎಂಬ ಬಗ್ಗೆ ಅವರಿಗೇಕೆ ಚಿಂತೆ? ರಾಜ್ಯದ ಹಣಕಾಸು ಸಚಿವರು ನನ್ನ ಬಳಿ ಬಂದು 'ಇವರನ್ನು' ನಾಮ ನಿರ್ದೇಶನ ಮಾಡಿ ಎಂದು ಮನವಿ ಮಾಡುತ್ತಾರೆ. ಮುಖ್ಯಮಂತ್ರಿ ಮತ್ತು ಸಚಿವರಿಗೆ ನಾಚಿಕೆಯೇ ಇಲ್ಲ' ಎಂದು ಕಿಡಿಕಾರಿದರು.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಲಪತಿಗಳು ಶಿಫಾರಸು ಮಾಡಿ ಕಳುಹಿಸಿದ ಪಟ್ಟಿಗೂ, ನಾನು ನಾಮನಿರ್ದೇಶನ ಮಾಡಿರುವುದಕ್ಕೂ ವ್ಯತ್ಯಾಸವಿದೆ ಎಂದು ಇವರಿಗೆ (ಸಿ.ಎಂ, ಸಚಿವರು) ಹೇಗೆ ಗೊತ್ತು? ನನಗೆ ಶಿಫಾರಸು ಮಾಡುವಂತೆ ಕೆಲವು ಹೆಸರುಗಳನ್ನು ಒಳಗೊಂಡ ಪಟ್ಟಿಯನ್ನು ಅವರು ಕುಲಪತಿಗೆ ಕಳುಹಿಸಿದ್ದರು' ಎಂದು ಆರೋಪಿಸಿದರು.

ಸಿ.ಎಂ ಮತ್ತು ಸಚಿವರು ಶಿಫಾರಸು ಮಾಡಿದ್ದ ಹೆಸರುಗಳನ್ನೇ ಕುಲಪತಿಗಳು ನನಗೆ ಕಳುಹಿಸಿದ್ದಾರೆಯೇ ಎಂಬ ಬಗ್ಗೆ ತನಿಖೆಗೆ ಆದೇಶಿಸಿದ್ದೇನೆ. ಅಕ್ರಮ ನಡೆದಿದ್ದರೆ ಕುಲಪತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇನೆ ಎಂದರು.

ಬುಡಕಟ್ಟು ವಿ.ವಿ ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ತೆಲಂಗಾಣದಲ್ಲಿ ಸಮ್ಮಕ್ಕ ಸಾರಕ್ಕ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಆರಂಭಿಸಲು ಅವಕಾಶ ಕಲ್ಪಿಸುವ ಮಸೂದೆಯನ್ನು ಸಂಸತ್ತು ಬುಧವಾರ ಅಂಗೀಕರಿಸಿದೆ.

ಸಂಸತ್ತಿನಲ್ಲಿ ಭದ್ರತಾ ಲೋಪ ಆಗಿರುವ ಬಗ್ಗೆ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ನೀಡಬೇಕು ಎಂದು ಒತ್ತಾಯಿಸಿ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ನಡೆಸಿದ್ದ ಸಂದರ್ಭದಲ್ಲಿ, ರಾಜ್ಯಸಭೆಯು ಈ ಮಸೂದೆಗೆ ಬುಧವಾರ ಧ್ವನಿಮತದ ಮೂಲಕ ಅಂಗೀಕಾರ ನೀಡಿತು.

'ಆಂಧ್ರಪ್ರದೇಶ ಮರುವಿಂಗಡಣೆ ಕಾಯ್ದೆ 2014ರ ಅನ್ವಯ, ತೆಲಂಗಾಣದಲ್ಲಿ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯವನ್ನು ಸ್ಥಾಪಿಸಲೇಬೇಕಿದೆ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದರು.

ಆಧಾರ್ ತಿದ್ದುಪಡಿ: ಹೆಚ್ಚು ಶುಲ್ಕ ವಿಧಿಸಿದರೆ ₹50 ಸಾವಿರ ದಂಡ

ನವದೆಹಲಿ (ಪಿಟಿಐ): ಆಧಾರ್ ಕಾರ್ಡ್ ತಿದ್ದುಪಡಿಗೆ ನಿಗದಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚು ಹಣ ವಸೂಲಿ ಮಾಡುವ ಆಪರೇಟರ್‌ಗಳ ಸೇವೆಯನ್ನು ಅಮಾನತಿನಲ್ಲಿಡುವ ಜತೆಗೆ, ₹50 ಸಾವಿರ ದಂಡವನ್ನೂ ವಿಧಿಸಲಾಗುವುದು ಎಂದು ಲೋಕಸಭೆಗೆ ಬುಧವಾರ ಕೇಂದ್ರ ಸರ್ಕಾರ ತಿಳಿಸಿದೆ.

'ಆಧಾರ್ ಕಾರ್ಡ್‌ನಲ್ಲಿ ವಯಸ್ಸು, ಲಿಂಗ, ವೈವಾಹಿಕ ಸ್ಥಿತಿಗತಿ ಸೇರಿದಂತೆ ಅಗತ್ಯ ಮಾಹಿತಿಯನ್ನು ಬಯೊಮೆಟ್ರಿಕ್ ವಿಧಾನದ ಮೂಲಕ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಈ ಪ್ರಕ್ರಿಯೆಗೆ ಹೆಚ್ಚಿನ ಶುಲ್ಕ ವಿಧಿಸುವಂತಿಲ್ಲ ಎಂದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು (ಯುಐಡಿಎಐ) ಆಧಾರ್ ದಾಖಲಾತಿ ಏಜೆನ್ಸಿಗಳಿಗೆ ತಿಳಿಸಿದೆ' ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. 'ನಿಯಮ ಉಲ್ಲಂಘನೆ ಮಾಡುವ ತಿದ್ದುಪಡಿ ಕೇಂದ್ರದ ಆಪರೇಟರ್‌ಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು. ಹೆಚ್ಚಿನ ಶುಲ್ಕ ವಸೂಲಿ ಮಾಡುವುದು ಕಂಡುಬಂದರೆ ಪ್ರಾಧಿಕಾರಕ್ಕೆ ಇ–ಮೇಲ್ ಅಥವಾ ಟೋಲ್ ಫ್ರೀ ಸಂಖ್ಯೆ 1947ಕ್ಕೆ ಕರೆ ಮಾಡಿ ದೂರು ಸಲ್ಲಿಸಬಹುದು' ಎಂದು ಹೇಳಿದ್ದಾರೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಯ (ಕೆಎಸ್‌ಡಿಎಲ್) ಲಾಭಾಂಶದ ₹54.74 ಕೋಟಿಯ ಚೆಕ್ ಅನ್ನು ಸಂಸ್ಥೆಯ ಅಧ್ಯಕ್ಷರೂ ಆಗಿರುವ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಳಗಾವಿಯ ಸುವರ್ಣ ಸೌಧದಲ್ಲಿ ಹಸ್ತಾಂತರಿಸಿದರು. ಇದೇ ವೇಳೆ 'ಮುಖ್ಯಮಂತ್ರಿ ಪರಿಹಾರ ನಿಧಿ'ಗೂ ₹5 ಕೋಟಿ ಮೊತ್ತದ ಚೆಕ್ ನೀಡಿದರು. ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ಇದ್ದರು

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	585-590
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	42500-45500
ಹೊನ್ನಾವರ	
ಹಳೆಚಾಲಿ	36000-38000
ಕಾರ್ಕಳ	
ಹೊಸತು	25000-36500
ಹಳತು	30000-46000
ಕುಮಟ	
ಬೆಟ್ಟೆ	40109-42109
ಚಿಪ್ಪು	27509-34529
ಕೋಕ	19209-32019
ಫ್ಯಾಕ್ಟರಿ	11509-24129
ಹಳೆಚಾಲಿ	37169-39259
ಹೊಸಚಾಲಿ	33509-35111
ಕುಂದಾಪುರ	
ಹಳೆಚಾಲಿ	41000-42500
ಹೊಸಚಾಲಿ	30000-36500
ಪುತ್ತೂರು	
ಹೊಸತು	27000-36500
ಶಿವಮೊಗ್ಗ	
ಬೆಟ್ಟೆ	48509-53299
ಗೊರಬಲು	21909-37029
ಹೊಸತು	44509-47599
ರಾಶಿ	37169-48000
ಸರಕು	56399-76986
ಶಿರಸಿ	
ಬೆಟ್ಟೆ	38899-43299
ಬಿಳಿಗೋಟು	28009-35799
ಚಾಲಿ	37109-39799
ಕೆಂಪುಗೋಟು	34899-34899
ರಾಶಿ	45899-47161
ತೀರ್ಥಹಳ್ಳಿ	
ಬೆಟ್ಟೆ	38500-38500
ಗೊರಬಲು	34500-34500
ರಾಶಿ	47000-47500
ಸರಕು	71000-71000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13000	13200	-	185.25
ಎಸಿ	7280	7100	-	
ಆರ್‌ಪಿ	10200	10500	-	ಲಂಡನ್-
ಆರ್‌ಸಿ	6360	6200	-	2724 ಡಾಲರ್ಸ್

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಕೃಷಿ ಮಾರಾಟ ಇಲಾಖೆ
ಉಪ ನಿರ್ದೇಶಕರ ಕಚೇರಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಎಂ.ಜಿ. ಕಾಂಪ್ಲೆಕ್ಸ್, ಎ.ಪಿ.ಎಂ.ಸಿ. ಆವರಣ, ಯಶವಂತಪುರ, ಬೆಂಗಳೂರು–22
ಇ–ಮೇಲ್: ddbanglr@gmail.com, ದೂ.080–23471717
ಸಂಖ್ಯೆ: ಕೃಮಾಇ/ಉನಿ/ಬೆಂ.ನ&ಗ್ರಾಂ/ 252/ 2022–22 ದಿನಾಂಕ: 31–10–2023

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ/ ರೈತಬಾಂಧವರಿಗೆ/ಸಮಸ್ತ ಪೇಟೆ ಕಾರ್ಯಕರ್ತರಿಗೆ/ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ತಿಳಿಸುವುದೇನೆಂದರೇ, Mr/Mrs.Rohan Patnaik, Kamatan Farm Tech Private Limited, Old Surevy No.4, & New No.4/1, Adakamaranahalli Village, Dasanapura Hobli, Bengaluru-562123. ಇವರು ಉಪನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಈ ಕಚೇರಿಯಿಂದ ದಿನಾಂಕ: 14.02.2019 ರಂದು ವರ್ತಕರ ಪರವಾನಗಿ ಸಂಖ್ಯೆ: No. DAM/DD-BNG/TRL/FEB-961/2018-19 (YPR), KT157476ರಲ್ಲಿ ವರ್ತಕರ ಲೈಸೆನ್ಸ್ ಪಡೆದು ವ್ಯವಹರಿಸುತ್ತಿರುತ್ತಾರೆ. ಸದರಿಯವರು ಇವರು ತಮ್ಮ ಸಂಸ್ಥೆಯ ಶಿರೋನಾಮೆಯನ್ನು SAMUNNATI AGRI INNOVATIONS LAB PRIVATE LIMITED ಎಂದು ಬದಲಾಯಿಸಿಕೊಡುವಂತೆ ಹಾಗೂ ವಿಳಾಸವನ್ನು 1st Floor, 80 Feet Road, No.4, 8th Block, Opp. Koramangala Indoor Stadium, K.R. Garden, Koramangala, Bengaluru, Bengaluru Urban, Karnataka-560095 ಈ ವಿಳಾಸಕ್ಕೆ ವಿಳಾಸ ಬದಲಾವಣೆ ಮಾಡಿಕೊಡುವಂತೆ ಮನವಿ ಸಲ್ಲಿಸಿರುತ್ತಾರೆ.

ಮುಂದುವರೆದು, Mr/Mrs. Rohan Patnaik, Kamatan Farm Tech Private Limited, Old Surevy No. 4, & New No. 4/1, Adakamaranahalli Village, Dasanapura Hobli, Bengaluru-562123 ಇವರಿಂದ ಸಮಿತಿಗಾಗಲಿ/ ರೈತರಿಗಾಗಲಿ /ವರ್ತಕರಿಗಾಗಲಿ/ಸರ್ಕಾರಕ್ಕಾಗಲಿ ಹಾಗೂ ಇತರೆ ಸಂಘ ಸಂಸ್ಥೆಗಳಿ ಗಾಗಲಿ ಯಾವುದೇ ಬಾಕಿ ಇರುವ/ಇಲ್ಲದಿರುವ ಕುರಿತು ಶಿರೋನಾಮೆ ಹಾಗೂ ವಿಳಾಸ ಬದಲಾವಣೆಯ ಕುರಿತು ಯಾರಿಂದಲಾದರೂ ಸಲಹೆ/ಸೂಚನೆ/ಆಕ್ಷೇಪಣೆಗಳೇನಾದರೂ ಇದ್ದರೆ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳೊಳಗಾಗಿ ಲಿಖಿತ ರೂಪದಲ್ಲಿ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸತಕ್ಕದ್ದು. ತಡವಾಗಿ ಬಂದು ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ನಿಯಮಾನುಸಾರ ಯಾವುದೇ ಆಕ್ಷೇಪಣೆಗಳು ಬಂದಿಲ್ಲವೆಂದು ಪರಿಗಣಿಸಿ ಮುಂದಿನಂತೆ ಕ್ರಮವಹಿಸಲಾಗುವುದಾಗಿ ಈ ಪ್ರಕಟಣೆಯ ಮೂಲಕ ತಿಳಿಸಲಾಗಿದೆ.

(ವಿಜಯಲಕ್ಷ್ಮೀ),
ಉಪನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು- 56. ಸಂಪರ್ಕಿಸಿ: 7899235388, 9148525233

ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ಸ್ ಬೇಕಾಗಿದ್ದಾರೆ. ಸ್ಥಳ: ಕೋಳಿಫಾರಂ, ಬನ್ನೇರುಘಟ್ಟ ರಸ್ತೆ, ಬೆಂಗಳೂರು. ವೇತನ. 15000. ಊಟ + ವಸತಿ ನೀಡಲಾಗುತ್ತದೆ. ಸಮಯ: ಬೆಳಿಗ್ಗೆ 8 ರಿಂದ ಸಂಜೆ 7 ಭಾನುವಾರ ರಜಾದಿನ ಸಂಪರ್ಕಿಸಿ: 9880266007, 8050666007.

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000/–. ಮೊದಲು ಬಂದವರಿಗೆ ಆದ್ಯತೆ. 8861041526, 9945719 1526

ಮಂಗಳೂರು–ಭಾರತದ ಅತೀ ದೊಡ್ಡ ಕಂಪೆನಿಯ ಹೊಸ ಆಫೀಸ್‌ನಲ್ಲಿ ಉದ್ಯೋಗಗಳು. ಪಿಯುಸಿ ಆಗಿರಬೇಕು. 30–65 ವರ್ಷಗಳು, ಸಂದರ್ಶನ 16ನೇ ಶನಿವಾರ. ಫೋನ್: 6364563490/ 9972710151

✔ ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC, Degree,ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

✔ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Manager

MANGALORE FINANCIAL sector company requires Dev. Managers & Business Associates. Only IRDA Licence holders Ph: 9972710151/ 8050969719

Part-Time Jobs

✔ ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266, 8050198999

✔ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

Wanted

WANTED FOR Bank Loan Collection Field Executive 2 Wheeler Must, Good Salary + Attractive Incentive. 10th, 12th Pass/ Any Degree. 8762900934/ 8867443657

ವ್ಯಾಪಾರ

Business to Business

Business

ಮಹಿಳೆಯರಿಗೆ ಹಾಗೂ ಮಹಿಳಾ ಸಂಘ ಸಂಸ್ಥೆಗಳಿಗೆ ವ್ಯಾಪಾರ ಮಾಡುವುದಕ್ಕೆ ರೇಷ್ಮೆ ಸೀರೆಗಳನ್ನು, ಎಲ್ಲಾ ತರಹದ ಸೀರೆಗಳನ್ನು ಕೊಡಲಾಗುತ್ತದೆ. 8892501007/ 9606701007

ಭವಿಷ್ಯ

Astrology

ಒಂದೇ ಕರೆಯಲ್ಲಿಶಾಶ್ವತ ಪರಿಹಾರ ಸ್ತ್ರೀಪುರುಷ.ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿಪರಿಹಾರ ಪಂಡಿತ್:ಮೋಡಿ.ಬೆಟ್ಟಪ್ಪ ಉಚಿತ:ಭವಿಷ್ಯ:ಖಚಿತ ಪರಿಹಾರ,ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

★ಆರ್.ಗಾಂಧಿ ಟೂರ್ಸ್★ ವಿಮಾನದಲ್ಲಿ 03.01.2024 10ದಿನಗಳು ರಾಜಸ್ಥಾನಪ್ರವಾಸ. 16.01.2024 10ದಿನಗಳು ಗುಜರಾತ್ ಪ್ಯಾಕೇಜ್. 10.01.2024 4ದಿನಗಳು ಉಜ್ಜೈನ್,ಓಂಕಾರೇಶ್ವರ ಪ್ಯಾಕೇಜ್.9945445809/ 9902433500

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಪುರುಷರ ಜೂನಿಯರ್ ವಿಶ್ವಕಪ್ ಹಾಕಿ: ಇಂದು ಸೆಮಿಫೈನಲ್

ಭಾರತಕ್ಕೆ ಜರ್ಮನಿ ಸವಾಲು

ಭಾರತ ಪುರುಷರ ಜೂನಿಯರ್ ಹಾಕಿ ತಂಡದ ಆಟಗಾರರು

ಇಂದಿನ ಸೆಮಿಫೈನಲ್ ಪಂದ್ಯಗಳು (ಭಾರತೀಯ ಕಾಲಮಾನ)

ಭಾರತ– ಜರ್ಮನಿ
ಮಧ್ಯಾಹ್ನ 3.30

ಸ್ಪೇನ್– ಫ್ರಾನ್ಸ್
ಸಂಜೆ 6

ಕ್ವಾಲಾಲಂಪುರ (ಪಿಟಿಐ): ಎರಡು ಬಾರಿಯ ಚಾಂಪಿಯನ್ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಬಲಿಷ್ಠ ಜರ್ಮನಿ ತಂಡವನ್ನು ಗುರುವಾರ ಎದುರಿಸಲಿದೆ.

2001, 2016ರಲ್ಲಿ ಪ್ರಶಸ್ತಿ ಗೆದ್ದಿರುವ ಭಾರತ ತಂಡವು, 1997ರಲ್ಲಿ ರನ್ನರ್ ಅಪ್ ಸ್ಥಾನ ಆಗಿತ್ತು. ಇದೀಗ ನಾಲ್ಕನೇ ಬಾರಿ ಫೈನಲ್ ಪ್ರವೇಶಿಸುವ ಹುಮ್ಮಸ್ಸಿನಲ್ಲಿದ್ದಾರೆ.

ಮಂಗಳವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡವು ಸಾಂಘಿಕ ಆಟವಾಡಿ 4-3 ಗೋಲುಗಳಿಂದ ವಿಶ್ವದ ನಾಲ್ಕನೇ ರ‍್ಯಾಂಕ್‌ನ ನೆದರ್ಲೆಂಡ್ಸ್ ತಂಡವನ್ನು ರೋಚಕವಾಗಿ ಮಣಿಸಿತ್ತು.

ಮಧ್ಯಂತರದ ವೇಳೆ 0-2ರಿಂದ ಹಿನ್ನಡೆಯಲ್ಲಿದ್ದ ಉತ್ತಮ್ ಸಿಂಗ್ ಬಳಗವು ಮೂರನೇ ಕ್ವಾರ್ಟರ್‌ನಲ್ಲಿ ಎರಡು ಗೋಲು ಗಳಿಸಿದರೂ 2-3ರಿಂದ ಹಿಂದೆ ಬಿದ್ದಿತ್ತು. ಕೊನೆಯ ಕ್ವಾರ್ಟರ್‌ನಲ್ಲಿ ಛಲಬಿಡದೆ ಹೋರಾಟ ನಡೆಸಿ, ಮತ್ತೆರಡು ಬಾರಿ ಚೆಂಡನ್ನು ಗುರಿ ಸೇರಿಸುವ ಮೂಲಕ ನಾಲ್ಕರ ಘಟ್ಟ ಪ್ರವೇಶಿಸಿತ್ತು. ಉಪನಾಯಕ ಅರಿಜಿತ್ ಸಿಂಗ್ ಹುಂಡಲ್ ಈ ಪಂದ್ಯದಲ್ಲೂ ಎರಡು ಗೋಲು ಗಳಿಸಿ, ಭಾರತದ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದ್ದರು.

ಭಾರತವು ಈ ವರ್ಷ ನಾಲ್ಕು ಬಾರಿ ಜರ್ಮನಿ ತಂಡವನ್ನು ಎದುರಿಸಿದ್ದು, ಎಲ್ಲಾ ಪಂದ್ಯಗಳಲ್ಲೂ ಭಾರತ ಸೋತಿದೆ. ಸುಲ್ತಾನ್ ಆಫ್ ಜೋಹರ್ ಕಪ್‌ನ ಸೆಮಿಫೈನಲ್‌ನಲ್ಲಿ ಕೊನೆಯ ಬಾರಿ ಮುಖಾಮುಖಿಯಾಗಿದ್ದು, ಈ ಪಂದ್ಯದಲ್ಲಿ ಭಾರತ 3-6ರಿಂದ ಮುಗ್ಗರಿಸಿತ್ತು. ಭುವನೇಶ್ವರದಲ್ಲಿ 2021ರಲ್ಲಿ ನಡೆದ ಪುರುಷರ ಜೂನಿಯರ್ ವಿಶ್ವಕಪ್‌ನ ಸೆಮಿಫೈನಲ್‌ನಲ್ಲೂ ಭಾರತವು ಜರ್ಮನಿ ವಿರುದ್ಧ 2-4ರಿಂದ ಸೋತಿತ್ತು.

'ಈಗ ನಾವು ಒತ್ತಡದಲ್ಲಿಯೂ ಆಡುವುದನ್ನು ಅಭ್ಯಾಸ ಮಾಡಿದ್ದೇವೆ. ಏಷ್ಯಾ ಕಪ್ ಫೈನಲ್‌ನಲ್ಲಿ ಪಾಕಿಸ್ತಾನ ವಿರುದ್ಧ ಅಥವಾ ಸುಲ್ತಾನ್ ಆಫ್ ಜೋಹರ್ ಕಪ್‌ನಲ್ಲಿ ಕಂಚಿನ ಪದಕದ ಪಂದ್ಯದಲ್ಲಿ ಒತ್ತಡದಲ್ಲಿ ಆಡಿ ಜಯ ಸಾಧಿಸಿದ್ದೇವೆ' ಎಂದು ನಾಯಕ ಉತ್ತಮ್ ಸಿಂಗ್ ಹೇಳಿದ್ದಾರೆ.

'ತಂಡದಲ್ಲಿರುವ ಪ್ರತಿಯೊಬ್ಬ ಆಟಗಾರನ ಕನಸು ಫೈನಲ್‌ನಲ್ಲಿ ಗೆಲ್ಲುವುದಾಗಿದೆ. ಆ ಗುರಿಯತ್ತ ಅವಿರತವಾಗಿ ಶ್ರಮಿಸುತ್ತಿದ್ದೇವೆ. ಈಗ ತಂಡವು ಉತ್ತಮ ಫಾರ್ಮ್‌ನಲ್ಲಿದೆ. ಜರ್ಮನಿಯನ್ನು ಹಲವು ಬಾರಿ ಎದುರಿಸಿರುವುದರಿಂದ ಅದರ ಸಾಮರ್ಥ್ಯ ಮತ್ತು ದೌರ್ಬಲ್ಯ ತಿಳಿದಿದೆ. ಸೆಮಿಫೈನಲ್ ಪಂದ್ಯದಲ್ಲಿ ಅತ್ಯುತ್ತಮ ಆಟ ಪ್ರದರ್ಶಿಸುತ್ತೇವೆ' ಎಂದು ಉತ್ತಮ್ ತಿಳಿಸಿದ್ದಾರೆ.

ಭಾರತ ತಂಡದ ಕೋಚ್ ಸಿ.ಆರ್. ಕುಮಾರ್ ಕೂಡ ತಮ್ಮ ಆಟಗಾರರ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದು, ಟೂರ್ನಿಯಲ್ಲಿ ಜರ್ಮನಿ ತಂಡ ಅಜೇಯವಾಗಿ ಉಳಿದಿಲ್ಲ ಎಂದು ಹೇಳಿದ್ದಾರೆ. 'ಬಿ' ಗುಂಪಿನಲ್ಲಿದ್ದ ಜರ್ಮನಿ ತಂಡವು, ಗುಂಪು ಹಂತದ ಪಂದ್ಯದಲ್ಲಿ ಫ್ರಾನ್ಸ್ ವಿರುದ್ಧ ಸೋತಿತ್ತು.

ಮತ್ತೊಂದು ಸೆಮಿಫೈನಲ್‌ನಲ್ಲಿ ಗುರುವಾರ ಸ್ಪೇನ್ ತಂಡವು ಫ್ರಾನ್ಸ್ ವಿರುದ್ಧ ಸೆಣಸಲಿದೆ.

ಭಾರತದಲ್ಲಿ ನೊಜೊಮಿ ಪರದಾಟ

ಜಪಾನಿನ ಒಲಿಂಪಿಯನ್ ಆಟಗಾರ್ತಿಗೆ ಸಿಗದ ಸೂಕ್ತ ಸಾರಿಗೆ, ವಸತಿ ಸೌಲಭ್ಯ

ನೊಜೊಮಿ ಒಕುಹರಾ

ನವದೆಹಲಿ (ಪಿಟಿಐ): ಒಡಿಶಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆಡಲು ಭಾರತಕ್ಕೆ ಬಂದಿಳಿದ ತಮಗೆ ದೆಹಲಿಯ ಕ್ಯಾಬ್ ಚಾಲಕರಿಂದ ಕಿರುಕುಳವಾಗಿದೆ. ಕಟಕ್‌ನಲ್ಲಿ ಕಾದಿರಿಸಿದ್ದ ಹೋಟೆಲ್ ಕೊಠಡಿ ಪ್ರವೇಶಿಸಲು ನಾಲ್ಕು ತಾಸು ಕಾಯಬೇಕಾಯಿತು ಎಂದು ಜಪಾನ್ ಆಟಗಾರ್ತಿ ನೊಜೊಮಿ ಒಕುಹರಾ ದೂರಿದ್ದಾರೆ.

ಒಲಿಂಪಿಕ್ ಪದಕ ಗೆದ್ದಿರುವ ಮತ್ತು ಮಾಜಿ ವಿಶ್ವ ಚಾಂಪಿಯನ್ ಒಕುಹರಾ ಅವರು ಸೋಮವಾರ ಭಾರತಕ್ಕೆ ಬಂದಿಳಿದಾಗ ಆದ ಕೆಟ್ಟ ಅನುಭವವನ್ನು ಫ್ಯಾನ್ಸ್‌ನೆಟ್ ಡಾಟ್ ಜೆಪಿ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

'ದೆಹಲಿಗೆ ಬಂದಿಳಿದಾಗ ವಿಮಾನ ನಿಲ್ದಾಣದಲ್ಲಿರುವ ಕ್ಯಾಬ್ ಚಾಲಕರು ದುರ್ನಡತೆ ತೋರಿದರು. ಅಲ್ಲಿಂದ ಕಟಕ್‌ಗೆ ಬಂದಾಗ ಆಯೋಜಕರ ಕಡೆಯಿಂದ ಯಾವುದೇ ಅಧಿಕೃತ ಸಾರಿಗೆ ವ್ಯವಸ್ಥೆ ಇರಲಿಲ್ಲ. ವಿಮಾನ ನಿಲ್ದಾಣದಿಂದ ಹೋಟೆಲ್‌ಗೆ ಬಂದಿಳಿದಾಗಲೂ ಕೆಟ್ಟ ಅನುಭವ ಕಾದಿತ್ತು. ನನ್ನ ಹೆಸರಿನಲ್ಲಿದ್ದ ಕೋಣೆಯ ಬೀಗ ಪಡೆಯಲು ನಾಲ್ಕು ಗಂಟೆ ಕಾಯಬೇಕಾಯಿತು. ಅಲ್ಲಿಂದ 8 ಗಂಟೆಗೆ ನಿಗದಿಯಾಗಿದ್ದ ಅಭ್ಯಾಸಕ್ಕಾಗಿ ತೆರಳಲು ಶಟಲ್ ಬಸ್ ಅಥವಾ ಕಾರಿನ ಸೌಲಭ್ಯವನ್ನೂ ನೀಡಲಿಲ್ಲ' ಎಂದು 28 ವರ್ಷದ ಒಕುಹರಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಪ್ರಧಾನ ಕಾರ್ಯದರ್ಶಿ ಸಂಜಯ್ ಮಿಶ್ರಾ, 'ಇದು ವಿಷಾದಕರ ಸಂಗತಿ. ಮುಂದೆ ಹೀಗಾಗದಂತೆ ನೋಡಿಕೊಳ್ಳುತ್ತೇವೆ' ಎಂದಿದ್ದಾರೆ.

'ಜಪಾನ್ ಆಟಗಾರ್ತಿಯು ಅನುಭವಿಸಿರುವ ತೊಂದರೆ ನನಗ ರ್ಥವಾಗುತ್ತದೆ. ಆದರೆ ಅವರಿಂದ ತಮಗೆ ಬೇಕಾಗುವ ವಸತಿ, ಸಾರಿಗೆ ಸೌಲಭ್ಯಗಳ ಕುರಿತು ಯಾವುದೇ ಇಮೇಲ್ ಬಂದಿರಲಿಲ್ಲ' ಎಂದೂ ಮಿಶ್ರಾ ಹೇಳಿದ್ದಾರೆ.

'ಅದೇನೆ ಇರಲಿ. ಒಕುಹರಾ ಅವರು ಬಹಳ ಖ್ಯಾತನಾಮ ಆಟಗಾರ್ತಿಯಾಗಿದ್ದಾರೆ. ನಮ್ಮ ಅತಿಥಿಯಾಗಿದ್ದಾರೆ. ಅವರಿಗೆ ತೊಂದರೆಯಾಗಿರುವ ಕುರಿತು ತಿಳಿದಾಕ್ಷಣ ಆಯೋಜಕರಿಗೆ ಕರೆ ಮಾಡಿ ಎಲ್ಲ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಂಡಿರುವೆ' ಎಂದು ಮಿಶ್ರಾ ಭರವಸೆ ನೀಡಿದ್ದಾರೆ.

ಒಕುಹರಾ ಅವರು ಈಚೆಗೆ ಲಖನೌನಲ್ಲಿ ನಡೆದ ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದರು.

ಸಿಂಧು, ಪ್ರಣಯ್ ಸಹಾಯ

ಪ್ರಯಾಣ ಮತ್ತು ವಸತಿ ಸೌಲಭ್ಯ ಪಡೆಯುವಲ್ಲಿ ತೊಂದರೆ ಅನುಭವಿಸಿದ ನಜೋಮಿ ಒಕುಹರಾ ಅವರಿಗೆ ಭಾರತದ ಆಟಗಾರರಾದ ಎಚ್.ಎಸ್. ಪ್ರಣಯ್ ಮತ್ತು ಪಿ.ವಿ. ಸಿಂಧು ಸಹಾಯ ನೀಡಿದರು.

ಅವರಿಬ್ಬರೂ ಆಯೋಜಕರೊಂದಿಗೆ ಚರ್ಚಿಸಿ ತಮ್ಮ ಸ್ನೇಹಿತೆ ಒಕುಹರಾ ಅವರಿಗೆ ಹೋಟೆಲ್ ಕೊಠಡಿ ಲಭಿಸುವಂತೆ ನೋಡಿಕೊಂಡರು. ಒಕುಹರಾ ಅವರು ಅಭ್ಯಾಸಕ್ಕೆ ತೆರಳಲು ಪ್ರಣಯ್ ಅವರೇ ಕಾರು ಬುಕ್ ಮಾಡಿಕೊಟ್ಟರು.

ನಂತರ ನಡೆದಿದ್ದ ಗುವಾಹಟಿ ಓಪನ್ ಟೂರ್ನಿಯಲ್ಲಿ ಅವರು ಆಡಿರಲಿಲ್ಲ. ಕಳೆದ ಭಾನುವಾರ ರಾತ್ರಿ ಹಾಂಗ್‌ಕಾಂಗ್ ಮೂಲಕ ದೆಹಲಿಗೆ ಬಂದಿದ್ದರು. ವಿಮಾನ ನಿಲ್ದಾಣದಲ್ಲಿ ಅಪರಿಚಿತನೊಬ್ಬ ಅವರ ಸರಂಜಾಮುಗಳನ್ನು ಟ್ರಾಲಿಯಲ್ಲಿ ಇಟ್ಟು ಟ್ಯಾಕ್ಸಿಯತ್ತ ಕರೆದೊಯ್ದ. ಆ ಟ್ಯಾಕ್ಸಿಯಲ್ಲಿ ತಾವು ರಾತ್ರಿ ಉಳಿದುಕೊಳ್ಳಬೇಕಿದ್ದ ಹೋಟೆಲ್ ತಲುಪಿದ ಒಕುಹರಾ, ಚಾಲಕನಿಗೆ ನಿಗದಿತ ದರಕ್ಕಿಂತ ಹತ್ತು ಪಟ್ಟು ಹೆಚ್ಚು ಹಣ ನೀಡಬೇಕಾಯಿತು.

'ಯಾವುದೇ ದೇಶದ ಆಟಗಾರರು ತಂಡಗಳಲ್ಲಿ ಬಂದಾಗ ಮ್ಯಾನೇಜರ್ ಇರುತ್ತಾರೆ. ಅವರು ಪ್ರಯಾಣ ಮತ್ತಿತರ ಸೌಲಭ್ಯಗಳ ಕುರಿತು ಉಸ್ತುವಾರಿ ನೋಡಿಕೊಳ್ಳುತ್ತಾರೆ. ಆದರೆ ಒಕುಹರಾ ಒಬ್ಬರೇ ಬಂದಿದ್ದಾರೆ. ಅವರು ದೆಹಲಿ ತಲುಪಿದಾಗ ನಮಗೆ ಕರೆ ಮಾಡಿದ್ದರೆ ವ್ಯವಸ್ಥೆಗಳನ್ನು ಒದಗಿಸಬಹುದಿತ್ತು' ಎಂದೂ ಮಿಶ್ರಾ ಹೇಳಿದ್ದಾರೆ.

'ಸ್ಪರ್ಧಾಳುಗಳು ಬಿಎಐ ನಿಗದಿಪಡಿಸಿರುವ ನಮೂನೆಯಲ್ಲಿ ಹೋಟೆಲ್ ಕೋಣೆಗಾಗಿ ಮನವಿಯನ್ನು ಮುಂಗಡವಾಗಿ ಸಲ್ಲಿಸಬೇಕು. ಆದರೆ ಒಕುಹರಾ ಅವರಿಂದ ಯಾವುದೇ ಮನವಿಪತ್ರ ಬಂದಿರಲಿಲ್ಲ. ಆದ್ದರಿಂದ ಅವರ ಹೆಸರಿನಲ್ಲಿ ಕೋಣೆ ಕಾದಿರಿಸಲಾಗಿರಲಿಲ್ಲ. ನಾನು ಅವರನ್ನು ಹೋಟೆಲ್ ಲಾಬಿಯಲ್ಲಿ ಕುಳಿತಿರುವುದನ್ನು ಗಮನಿಸಿದೆ. ನಾನು ಮತ್ತು ಜಂಟಿ ಕಾರ್ಯದರ್ಶಿ ಪ್ರಭಾಕರ್ ರಾವ್ ಅವರು ಸೇರಿ ಒಕುಹರಾ ಅವರನ್ನು ಭೇಟಿಯಾಗಿ ಸಹಾಯ ಮಾಡಲು ಮುಂದಾದೆವು' ಎಂದು ಸಂಘಟನಾ ಕಾರ್ಯದರ್ಶಿ ನಲೀನ್ ಕುಮಾರ್ ತಿಳಿಸಿದ್ದಾರೆ.

ಈ ಟೂರ್ನಿಯಲ್ಲಿ ಭಾಗವಹಿಸಲು ಬಂದಿರುವ 30 ದೇಶಗಳ ಯಾವುದೇ ಸ್ಪರ್ಧಿಗೂ ಇಂತಹ ಸಮಸ್ಯೆಗಳಾಗಿಲ್ಲ ಎಂದೂ ಕುಮಾರ್ ಸ್ಪಷ್ಟಪಡಿಸಿದರು.

ಪ್ರೊ ಕಬಡ್ಡಿ ಲೀಗ್: ಪಿಂಕ್ ಪ್ಯಾಂಥರ್ಸ್‌ಗೆ ಸೋಲು

ಬೆಂಗಳೂರು ಬುಲ್ಸ್‌ಗೆ ರೋಚಕ ಜಯ

ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಬೆಂಗಳೂರು ಬುಲ್ಸ್ ತಂಡಗಳ ನಡುವೆ ಹಣಾಹಣಿ

ಬೆಂಗಳೂರು: ತೀವ್ರ ಹೋರಾಟದ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡ 32-30 ಪಾಯಿಂಟ್‌ಗಳಿಂದ ಹಾಲಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಸೋಲಿಸಿ ಪ್ರೊ ಕಬಡ್ಡಿ ಲೀಗ್‌ನಲ್ಲಿ ಎರಡನೇ ಜಯ ದಾಖಲಿಸಿತು.

ಭರತ್ ಮತ್ತು ವಿಕಾಸ್ ಖಂಡೋಲಾ ಕ್ರಮವಾಗಿ 9 ಮತ್ತು 8 ರೈಡಿಂಗ್ ಪಾಯಿಂಟ್ಸ್ ಕಲೆಹಾಕಿದರು. ಸೌರಭ್ ನಂದಾಲ್ ಐದು ಕ್ಯಾಚಿಂಗ್ ಪಾಯಿಂಟ್ಸ್ ಗಳಿಸಿದರು. ಜೈಪುರ ಪರ ವಿ.ಅಜಿತ್ ಕುಮಾರ್ 9 ಟಚ್ ಪಾಯಿಂಟ್ಸ್ ಪಡೆದರು. ಆದರೆ ಅವರಿಗೆ ರೈಡಿಂಗ್‌ನಲ್ಲಿ ಉಪಯುಕ್ತ ಬೆಂಬಲ ಸಿಗಲಿಲ್ಲ.

ನಾಲ್ಕು ನಿಮಿಷಗಳಿರುವಾಗ ಸ್ಕೋರ್ 29-29ರಲ್ಲಿ ಸಮನಾಗಿತ್ತು. ಆದರೆ ವಿಕಾಸ್ ಖಂಡೋಲಾ ಅವರ ಬೋನಸ್ ಪಾಯಿಂಟ್, ನಂತರ ಸೌರಭ್ ಅವರ ಕ್ಯಾಚಿಂಗ್‌ನಿಂದ ಬೆಂಗಳೂರು 31-29ರಲ್ಲಿ ಮುನ್ನಡೆಯಿತು. ಮರು ರೈಡ್‌ನಲ್ಲಿ ವಿಕಾಸ್ ಅವರು ವಿಫಲರಾದರು. ಆದರೆ ಜೈಪುರದ ಕೊನೆಯ ರೈಡಿಂಗ್‌ನಲ್ಲಿ ಅಜಿತ್ ಕುಮಾರ್ ಅವರನ್ನು ಬುಲ್ಸ್‌ನ ಅಮನ್ ಮತ್ತು ಸುರ್ಜೀತ್ ಕ್ಯಾಚ್ ಮಾಡಿ ಬೆಂಗಳೂರು ತಂಡಕ್ಕೆ ರೋಚಕ ಜಯ ತಂದಿತ್ತರು.

ತಮಿಳ್ ತಲೈವಾಸ್‌ಗೆ ಜಯ: ದಿನದ ಮೊದಲ ಪಂದ್ಯದಲ್ಲಿ, ನರೇಂದರ್ ಹೋಶಿಯಾರ್ ಅವರ ರೈಡಿಂಗ್ ಮತ್ತು ಸಾಹಿಲ್ ಸಿಂಗ್ ಅವರ ಉತ್ತಮ ಕ್ಯಾಚಿಂಗ್ ಬಲದಿಂದ ತಮಿಳ್ ತಲೈವಾಸ್ ತಂಡ ತೀವ್ರ ಹೋರಾಟದ ನಂತರ 38-36 ಪಾಯಿಂಟ್‌ಗಳಿಂದ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು.

ನರೇಂದರ್ ಸೂಪರ್ ಟೆನ್ (10 ಪಾಯಿಂಟ್) ಗಳಿಸಿದರೆ, ಸಾಹಿಲ್ ಆರು ಟ್ಯಾಕಲ್ ಪಾಯಿಂಟ್ ಗಳಿಸಿ ರಕ್ಷಣಾ ವಿಭಾಗದಲ್ಲಿ ಮಿಂಚಿದರು. ಟೈಟನ್ಸ್ ಪರ ಯಾರೊಬ್ಬ ಆಟಗಾರರಿಂದ ಅತ್ಯುತ್ತಮ ಎನ್ನಿಸುವ ಆಟ ಬರಲಿಲ್ಲ. ನಾಯಕ ಪವನ್ ಶೆರಾವತ್ ಐದು ಬೋನಸ್ ಸಹಿತ ಏಳು, ರಾಬಿನ್ ಚೌಧರಿ ಮೂರು ಬೋನಸ್ ಸಹಿತ ಏಳು ಪಾಯಿಂಟ್ಸ್ ಕಲೆಹಾಕಿದರು. ತಮಿಳು ತಲೈವಾಸ್ ಏಳನೇ ಸ್ಥಾನದಲ್ಲಿದ್ದರೆ, ಟೈಟನ್ಸ್ ಆಡಿದ ನಾಲ್ಕೂ ಪಂದ್ಯಗಳಲ್ಲಿ ಸೋತು ಕೊನೆಯ ಸ್ಥಾನದಲ್ಲಿದೆ

ಟೆಸ್ಟ್: ಆಸ್ಟ್ರೇಲಿಯಾ–ಪಾಕ್ ಮುಖಾಮುಖಿ

ಪರ್ತ್ (ಎಎಫ್‌ಪಿ): ಭಾರತದಲ್ಲಿ ಈಚೆಗೆ ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಮಿಂಚಿದ್ದ ಟ್ರಾವಿಸ್ ಹೆಡ್ ಅವರನ್ನು ಆಸ್ಟ್ರೇಲಿಯಾ ತಂಡದ ಉಪನಾಯಕ ಸ್ಥಾನಕ್ಕೆ ನೇಮಕ ಮಾಡಲಾಗಿದೆ.

ಗುರುವಾರ ಆರಂಭವಾಗಲಿರುವ ಪಾಕಿಸ್ತಾನ ಎದುರಿನ ಟೆಸ್ಟ್ ಸರಣಿಯಲ್ಲಿ ಹೆಡ್ ಕಣಕ್ಕಿಳಿಯಲಿದ್ದಾರೆ. ಪ್ಯಾಟ್ ಕಮಿನ್ಸ್ ತಂಡವನ್ನು ಮುನ್ನಡೆಸುವರು.

ಆಸ್ಟ್ರೇಲಿಯಾದ ಅನುಭವಿ ನೇಥನ್ ಲಯನ್ ಸ್ಪಿನ್ನರ್ ಅವರು ಇನ್ನು ನಾಲ್ಕು ವಿಕೆಟ್ ಗಳಿಸಿದರೆ ಟೆಸ್ಟ್‌ನಲ್ಲಿ 500 ವಿಕೆಟ್‌ಗಳನ್ನು ಗಳಿಸಿದವರ ಕ್ಲಬ್ ಸೇರಲಿದ್ದಾರೆ. ಡೇವಿಡ್ ವಾರ್ನರ್ ಅವರಿಗೆ ವೃತ್ತಿಜೀವನದ ಕೊನೆಯ ಟೆಸ್ಟ್ ಸರಣಿಯಾಗಲಿದೆ. ಇದರ ನಂತರ ಅವರು ನಿವೃತ್ತರಾಗಲಿದ್ದಾರೆ.

ಇಸ್ರೇಲ್ ದಾಳಿಗೆ ನಲುಗಿರುವ ಗಾಜಾದ ಸಂತ್ರಸ್ತರ ಬೆಂಬಲ ನೀಡುವ ಸಂದೇಶಗಳಿರುವ ಬೂಟುಗಳನ್ನು ಧರಿಸಿ ಕಣಕ್ಕಿಳಿಯಲು ಉಸ್ಮಾನ್ ಖ್ವಾಜಾ ಸಿದ್ಧರಾಗಿದ್ದಾರೆ. ಆದರೆ, ಐಸಿಸಿಯ ನಿಯಮದ ಪ್ರಕಾರ ಪಂದ್ಯಗಳ ಸಂದರ್ಭದಲ್ಲಿ ರಾಜಕೀಯ, ಧಾರ್ಮಿಕ ಮತ್ತು ಜನಾಂಗೀಯ ಸಂದೇಶಗಳನ್ನು ಪ್ರದರ್ಶಿಸುವಂತಿಲ್ಲ.

'ಈ ಕುರಿತು ಖ್ವಾಜಾ ಜೊತೆಗೆ ಮಾತನಾಡಿದೆ. ಅವರು ತಾವು ಸಂದೇಶ ಪ್ರದರ್ಶಿಸುತ್ತಿಲ್ಲವೆಂದಿದ್ದಾರೆ' ಎಂದು ಕಮಿನ್ಸ್ ತಿಳಿಸಿದ್ದಾರೆ.

ಐಎಸ್‌ಎಲ್: ಬಿಎಫ್‌ಸಿಗೆ ಸೋಲು

ಬೆಂಗಳೂರು: ಸಾಂಘಿಕ ಪ್ರದರ್ಶನ ನೀಡಿದ ಚೆನ್ನೈಯಿನ್ ಎಫ್‌ಸಿ ತಂಡವು ಬುಧವಾರ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ 2-0 ಯಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ವಿರುದ್ಧ ಗೆಲುವು ಸಾಧಿಸಿತು.

ಚೆನ್ನೈನಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿ ತಂಡ ಮತ್ತೆ ಮುಖಭಂಗ ಅನುಭವಿಸಿತು. ರಫೆಲ್ ಕ್ರಿವೆಲ್ಲಾರೊ ಆರನೇ ನಿಮಿಷದಲ್ಲೇ ಚೆಂಡನ್ನು ಗುರಿ ಸೇರಿಸಿ ಚೆನ್ನೈಯಿನ್ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಉತ್ತರಾರ್ಧದಲ್ಲಿ ಅದೇ ತಂಡದ ಜೋರ್ಡನ್ ಮುರ್ರೆ (50ನೇ ನಿ) ಚೆಂಡನ್ನು ಗುರಿ ಸೇರಿಸಿ ಅಂತರವನ್ನು ಹೆಚ್ಚಿಸಿದರು.

ಲೀಗ್‌ನಲ್ಲಿ ಆಡಿರುವ 10 ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಗೆದ್ದಿರುವ ಸುನಿಲ್ ಚೆಟ್ರಿ ಬಳಗ, ನಾಲ್ಕರಲ್ಲಿ ಡ್ರಾ ಸಾಧಿಸಿ, ಉಳಿದ ಐದು ಪಂದ್ಯಗಳಲ್ಲಿ ಪರಾಭವಗೊಂಡಿದೆ.

ವಿಜಯ್ ಹಜಾರೆ ಸೆಮಿಫೈನಲ್ ಇಂದು

ಕರ್ನಾಟಕ ಬೌಲರ್‌ಗಳ ಮೇಲೆ ನಿರೀಕ್ಷೆ

ವಾಸುಕಿ ಕೌಶಿಕ್

ರಾಜ್‌ಕೋಟ್: ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಐದನೇ ಬಾರಿ ಪ್ರಶಸ್ತಿ ಜಯದ ಮೇಲೆ ಕಣ್ಣಿಟ್ಟಿರುವ ಕರ್ನಾಟಕ ಗುರುವಾರ ನಾಲ್ಕರ ಘಟ್ಟದ ಪಂದ್ಯದಲ್ಲಿ ರಾಜಸ್ಥಾನವನ್ನು ಎದುರಿಸಲಿದೆ.

ತನ್ನ ಬಲಿಷ್ಠ ಬೌಲಿಂಗ್ ಪಡೆಯ ಮೇಲೆಯೇ ಹೆಚ್ಚು ಅವಲಂಬಿತವಾಗಿರುವ ಕರ್ನಾಟಕ ತಂಡಕ್ಕೆ ಉತ್ತಮ ಬ್ಯಾಟರ್‌ಗಳು ಇರುವ ರಾಜಸ್ಥಾನ ಕಠಿಣ ಸವಾಲೊಡ್ಡಲು ಸಿದ್ಧವಾಗಿದೆ. ಕಳೆದ ಕೆಲವು ವರ್ಷಗಳಿಂದ ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ನಾಕೌಟ್ ಹಂತದಲ್ಲಿ ಎಡವುತ್ತಿರುವ ಕರ್ನಾಟಕ ತಂಡವು ರಾಜಸ್ಥಾನವನ್ನು ಮಣಿಸುವ ಛಲದಲ್ಲಿದೆ. ಸಿ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ಕ್ವಾರ್ಟರ್‌ಫೈನಲ್ ಪ್ರವೇಶಿಸಿತ್ತು. ಎಂಟರ ಘಟ್ಟದಲ್ಲಿ ವಿದರ್ಭ ತಂಡವನ್ನು ಮಣಿಸಿತ್ತು.

ಆ ಪಂದ್ಯದಲ್ಲಿ ವೇಗಿ ವೈಶಾಖ ವಿಜಯಕುಮಾರ್ ನಾಲ್ಕು ವಿಕೆಟ್ ಕಬಳಿಸಿ ತಂಡದ ಗೆಲುವಿಗೆ ಕಾರಣರಾಗಿದ್ದರು. ತಮ್ಮ ಚೆಂದದ ಸ್ವಿಂಗ್ ಮತ್ತು ಮಧ್ಯಮವೇಗದ ಎಸೆತಗಳ ಮೂಲಕ ಬ್ಯಾಟರ್‌ಗಳ ನಿದ್ದೆಗೆಡಿಸಿರುವ ವಾಸುಕಿ ಕೌಶಿಕ್ ರನ್‌ಗಳನ್ನು ನಿಯಂತ್ರಿಸುವ ಕಲೆ ಕರಗತ ಮಾಡಿಕೊಂಡಿದ್ದಾರೆ. ಅಲ್ಲದೇ ಪ್ರಮುಖ ಜೊತೆಯಾಟಗಳನ್ನು ಮುರಿಯುವಲ್ಲಿಯೂ ಸಮರ್ಥರಾಗಿದ್ದಾರೆ. ಅವರ ಮುಂದೆ ಈಗ ಅಬ್ಬರದ ಬ್ಯಾಟರ್ ಮಹಿಪಾಲ್ ಲೊಮ್ರೊರ್, ಕುನಾಲ್ ಸಿಂಗ್ ರಾಥೋಡ್ ಮತ್ತು ದೀಪಕ್ ಹೂಡಾ ಅವರನ್ನು ನಿಯಂತ್ರಿಸುವ ಸವಾಲು ಇದೆ.

ಮನೋಜ್ ಬಾಂಢಗೆ ಮತ್ತು ಸ್ಪಿನ್ನರ್ ಜೆ ಸುಚಿತ್ ಕೂಡ ಉತ್ತಮ ಲಯಲ್ಲಿದ್ದಾರೆ. ಕ್ವಾರ್ಟರ್‌ಫೈನಲ್‌ನಲ್ಲಿ ಅರ್ಧಶತಕ ಗಳಿಸಿದ್ದ ಆರ್. ಸಮರ್ಥ್ ಮತ್ತು ಮಯಂಕ್ ಮತ್ತೊಮ್ಮೆ ಮಿಂಚಿದರೆ ಕರ್ನಾಟಕ ತಂಡಕ್ಕೆ ಉತ್ತಮ ಆರಂಭ ದೊರೆಯುವುದು ಖಚಿತ. ಅನುಭವಿ ಮನೀಷ್ ಪಾಂಡೆ, ನಿಕಿನ್ ಜೋಸ್ ಮತ್ತು ಕೃಷ್ಣನ್ ಶ್ರೀಜಿತ್ ಅವರ ಮೇಲೆ ಮಧ್ಯಮ ಕ್ರಮಾಂಕಕ್ಕೆ ಬಲ ತುಂಬುವ ಹೊಣೆ ಇದೆ. ಅವರು ಉತ್ತಮ ಲಯದಲ್ಲಿರುವ ರಾಜಸ್ಥಾನ ತಂಡದ ಬೌಲರ್‌ಗಳಾದ ಖಲೀಲ್ ಅಹಮದ್ ಅನಿಕೇತ್ ಚೌಧರಿ ಮತ್ತು ಅರಾಫತ್ ಖಾನ್ ಎದುರು ತಮ್ಮ ಸಾಮರ್ಥ್ಯ ಮೆರೆದರೆ ಕರ್ನಾಟಕದ ಫೈನಲ್ ಕನಸು ನನಸಾಗಬಹುದು.

ಪಂದ್ಯ ಆರಂಭ: ಮಧ್ಯಾಹ್ನ 1.30

ರಾಣಾ ಶತಕ: ಫೈನಲ್‌ಗೆ ಹರಿಯಾಣ

ರಾಜ್‌ಕೋಟ್(ಪಿಟಿಐ): ಹಿಮಾಂಶು ರಾಣಾ ಶತಕ ಮತ್ತು ಅನ್ಷುಲ್ ಕಾಂಬೋಜ್ ಅವರ ಅಮೋಘ ಬೌಲಿಂಗ್ ಬಲದಿಂದ ಹರಿಯಾಣ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಹರಿಯಾಣ ತಂಡವು 63 ರನ್‌ಗಳಿಂದ ದಿನೇಶ್ ಕಾರ್ತಿಕ್ ನಾಯಕತ್ವದ ತಮಿಳುನಾಡು ವಿರುದ್ಧ ಗೆದ್ದಿತು.

ಟಾಸ್ ಗೆದ್ದ ಹರಿಯಾಣ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ರಾಣಾ (116; 118ಎ, 4X11, 6X2) ಅವರ ಅಮೋಘ ಶತಕದ ಬಲದಿಂದ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 293 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಯುವರಾಜ್ ಸಿಂಗ್ (65; 79ಎ) ಮತ್ತು ಸುಮಿತ್ ಕುಮಾರ್ (48; 30ಎ) ಮಹತ್ವದ ಕಾಣಿಕೆ ನೀಡಿದರು.

ಗುರಿ ಬೆನ್ನಟ್ಟಿದ ತಮಿಳುನಾಡು ತಂಡಕ್ಕೆ 47.1 ಓವರ್‌ಗಳಲ್ಲಿ 230 ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಬಲಗೈ ವೇಗಿ ಅನ್ಷುಲ್ ಕಾಂಬೋಜ್ ನಾಲ್ಕು ವಿಕೆಟ್ ಗಳಿಸಿ ತಮಿಳುನಾಡಿಗೆ ಕಡಿವಾಣ ಹಾಕಿದರು.

ಸಂಕ್ಷಿಪ್ತ ಸ್ಕೋರು: ಹರಿಯಾಣ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 293 (ಯುವರಾಜ್ ಸಿಂಗ್ 65, ಹಿಮಾಂಶು ರಾಣಾ 116, ಸುಮಿತ್ ಕುಮಾರ್ 48, ಟಿ. ನಟರಾಜನ್ 79ಕ್ಕೆ3, ವರುಣ್ ಚಕ್ರವರ್ತಿ 67ಕ್ಕೆ2, ಸಾಯಿಕಿಶೋರ್ 41ಕ್ಕೆ2) **ತಮಿಳುನಾಡು:** 47.1 ಓವರ್‌ಗಳಲ್ಲಿ 230 (ಎನ್. ಜಗದೀಶನ್ 30, ವಿಜಯಶಂಕರ್ 23, ಬಾಬಾ ಇಂದ್ರಜೀತ್ 64, ದಿನೇಶ್ ಕಾರ್ತಿಕ್ 31, ರವಿಶ್ರೀನಿವಾಸನ್ ಸಾಯಿಕಿಶೋರ್ 29, ಅನ್ಷುಲ್ ಕಾಂಬೋಜ್ 30ಕ್ಕೆ4, ರಾಹುಲ್ ತೆವಾಟಿಯಾ 50ಕ್ಕೆ2) **ಫಲಿತಾಂಶ:** ಹರಿಯಾಣ ತಂಡಕ್ಕೆ 63 ರನ್ ಜಯ. **ಪಂದ್ಯಶ್ರೇಷ್ಠ:** ಹಿಮಾಂಶು ರಾಣಾ.

ಕದನ ವಿರಾಮದ ಪರ ಭಾರತ ಮತ

153 ದೇಶಗಳ ಬೆಂಬಲದಲ್ಲಿ ಕರಡು ಅಂಗೀಕಾರ; ಹತ್ತು ದೇಶಗಳ ವಿರೋಧ

ವಿಶ್ವಸಂಸ್ಥೆ (ಪಿಟಿಐ): ಹಮಾಸ್ ಮತ್ತು ಇಸ್ರೇಲ್ ನಡುವಿನ ಯುದ್ಧದಲ್ಲಿ ತಕ್ಷಣವೇ ಕದನ ವಿರಾಮ ಘೋಷಿಸಬೇಕು ಹಾಗೂ ಎಲ್ಲ ಒತ್ತೆಯಾಳುಗಳನ್ನು ಷರತ್ತುಬದ್ಧವಾಗಿ ಬಿಡುಗಡೆ ಮಾಡಬೇಕೆಂಬ ಬೇಡಿಕೆಯ ಕರಡು ನಿರ್ಣಯದ ಪರವಾಗಿ ಭಾರತ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮತ ಚಲಾಯಿಸಿದೆ.

193 ಸದಸ್ಯ ದೇಶಗಳನ್ನು ಒಳಗೊಂಡ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಂಗಳವಾರ ತುರ್ತು ವಿಶೇಷ ಅಧಿವೇಶನದಲ್ಲಿ ಈ ಕರಡು ನಿರ್ಣಯವನ್ನು ಭಾರಿ ಬಹುಮತದಿಂದ ಅಂಗೀಕರಿಸಲಾಯಿತು. ನಿರ್ಣಯದ ಪರವಾಗಿ 153 ರಾಷ್ಟ್ರಗಳು ಮತ್ತು ವಿರುದ್ಧವಾಗಿ ಅಮೆರಿಕ, ಇಸ್ರೇಲ್, ಆಸ್ಟ್ರಿಯಾ, ಜರ್ಮನಿ, ಹಂಗೇರಿ, ಇಟಲಿ, ಉಕ್ರೇನ್ ಸೇರಿ ಹತ್ತು ದೇಶಗಳು ಮತ ಚಲಾಯಿಸಿದವು. ಬ್ರಿಟನ್ ಸೇರಿ 23 ರಾಷ್ಟ್ರಗಳು ಗೈರು ಹಾಜರಾಗಿದ್ದವು. ಸಾಮಾನ್ಯ ಸಭೆಯ ಸಭಾಂಗಣದಲ್ಲಿ ನಿರ್ಣಯ ಅಂಗೀಕರಿಸುವಾಗ ಭಾರಿ ಕರತಾಡನವಿತ್ತು.

ಗಾಜಾದಲ್ಲಿ 7 ಇಸ್ರೇಲಿ ಸೈನಿಕರ ಹತ್ಯೆ

ರಫಾ (ಗಾಜಾ ಪಟ್ಟಿ) (ಎಪಿ): ಗಾಜಾ ನಗರದಲ್ಲಿ ಹಮಾಸ್ ಬಂಡುಕೋರರು ನಡೆಸಿದ ಗೆರಿಲ್ಲಾ ಮಾದರಿ (ಹೊಂಚುದಾಳಿ) ದಾಳಿಯಲ್ಲಿ ಕನಿಷ್ಠ ಏಳು ಮಂದಿ ಇಸ್ರೇಲ್ ಸೈನಿಕರು ಹತರಾಗಿದ್ದಾರೆ. ಹಮಾಸ್ ವಿರುದ್ಧದ ದಾಳಿಯಲ್ಲಿ ಸೇನೆಯು ಭಾರಿ ಪ್ರತಿರೋಧ ಎದುರಿಸುತ್ತಿದೆ ಎಂದು ಇಸ್ರೇಲ್ ಮಾಧ್ಯಮಗಳು ಬುಧವಾರ ವರದಿ ಮಾಡಿವೆ.

ಹಲವು ವಾರಗಳ ಯುದ್ಧದಲ್ಲಿ ಗಾಜಾದಲ್ಲಿ ಇಸ್ರೇಲ್ ಸೇನೆ ನಡೆಸುತ್ತಿರುವ ವಿನಾಶ ಮತ್ತು ಸಾವಿರಾರು ನಾಗರಿಕರ ಸಾವಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಆಕ್ರೋಶ ವ್ಯಕ್ತ ವಾಗುತ್ತಿದ್ದು, ನಾಗರಿಕರ ಸಾವಿನ ಬಗ್ಗೆ ಅಪರೂಪವೆಂಬಂತೆ ಅಮೆರಿಕ ಕೂಡ ಇಸ್ರೇಲ್ ಅನ್ನು ಟೀಕಿಸಿದೆ.

ಕದನ ವಿರಾಮ ಘೋಷಿಸುವಂತೆ ಅಂತರರಾಷ್ಟ್ರೀಯಮಟ್ಟದ ಒತ್ತಾಯವಿದ್ದರೂ ಅದನ್ನು ತಡೆಯುತ್ತಿರುವ ಮತ್ತು ತನ್ನ ಮಿತ್ರರಾಷ್ಟ್ರ ಇಸ್ರೇಲ್‌ಗೆ ಸೇನಾ ನೆರವು ನೀಡುತ್ತಿರುವ ಬೈಡನ್ ಆಡಳಿತವು, ಪ್ಯಾಲೆಸ್ಟೀನಿಯಾದ ನಾಗರಿಕರ ರಕ್ಷಣೆಗೆ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳುವಂತೆ ಇಸ್ರೇಲ್‌ಗೆ ಪದೇ ಪದೇ ಒತ್ತಾಯಿಸಿದೆ.

> 'ಸಾಮಾನ್ಯ ಸಭೆ ಅಂಗೀಕರಿಸಿದ ನಿರ್ಣಯದ ಪರ ಭಾರತವು ಮತ ಚಲಾಯಿಸಿದೆ. ಈ ಸಂದಿಗ್ಧ ಸಮಯದಲ್ಲಿ ಸಮತೋಲನ ಕಾಯ್ದುಕೊಳ್ಳುವ ಸವಾಲು ನಮ್ಮ ಮುಂದಿದೆ'
>
> **ರುಚಿರಾ ಕಾಂಬೋಜ್,** ಭಾರತದ ರಾಯಭಾರಿ, ವಿಶ್ವಸಂಸ್ಥೆ

ನಿರ್ಣಯ ಮಂಡಿಸಿದ ಈಜಿಪ್ಟ್ 'ತಕ್ಷಣವೇ ಕದನ ವಿರಾಮ ಘೋಷಿಸಬೇಕು ಮತ್ತು ವಿಶೇಷವಾಗಿ ನಾಗರಿಕರ ರಕ್ಷಣೆಗೆ ಒತ್ತು ನೀಡಬೇಕು' ಎಂದು ತನ್ನ ಬೇಡಿಕೆ ಪುನರುಚ್ಚರಿಸಿತು.

ಎಲ್ಲ ಒತ್ತೆಯಾಳುಗಳನ್ನು ತಕ್ಷಣ ಮತ್ತು ಬೇಷರತ್ತಾಗಿ ಬಿಡುಗಡೆ ಮಾಡಬೇಕು. ಜತೆಗೆ ಮಾನವೀಯತೆಗೆ ಜಾಗ ಮಾಡಿಕೊಡಬೇಕು ಎನ್ನುವುದು ನಿರ್ಣಯದಲ್ಲಿನ ಪ್ರಮುಖ ಒತ್ತಾಯಗಳಾಗಿವೆ.

'ಹಮಾಸ್ ಬಂಡುಕೋರರ ಸುರಂಗಗಳಿಗೆ ಸಮುದ್ರದ ನೀರು' ವಾಷಿಂಗ್ಟನ್ (ರಾಯಿಟರ್ಸ್): ಇಸ್ರೇಲ್ ಸೇನೆಯು ಗಾಜಾದಲ್ಲಿರುವ ಹಮಾಸ್ ಸುರಂಗ ಸಂಕೀರ್ಣಕ್ಕೆ ಸಮುದ್ರದ ನೀರನ್ನು ಪಂಪ್ ಮಾಡಲು ಪ್ರಾರಂಭಿಸಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಮೆರಿಕದ ಅಧಿಕಾರಿಗಳು ನೀಡಿರುವ ಮಾಹಿತಿ ಉಲ್ಲೇಖಿಸಿ 'ವಾಲ್ ಸ್ಟ್ರೀಟ್ ಜರ್ನಲ್' ವರದಿ ಮಾಡಿದೆ.

ಈ ಪ್ರಕ್ರಿಯೆಯು ವಾರಗಳನ್ನು ತೆಗೆದುಕೊಳ್ಳುತ್ತದೆ. ಬಂಡುಕೋರರ ಅಡಗುದಾಣಗಳಾದ ಸುರಂಗಗಳನ್ನು ನಾಶಮಾಡಲು ಸಹಾಯ ಮಾಡಲಿದೆ ಎಂದು ಬೈಡನ್ ಆಡಳಿತದ ಅಧಿಕಾರಿಗಳು ಹೇಳಿರುವುದಾಗಿ ಅದು ವರದಿ ಮಾಡಿದೆ. ಇಸ್ರೇಲ್ ಸೇನೆಯು ಈ ವರದಿಯ ಬಗ್ಗೆ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯಿಸಿಲ್ಲ.

ಲಿಯಾಂಡರ್ ಪೇಸ್, ಅಮೃತರಾಜ್

'ಹಾಲ್ ಆಫ್ ಫೇಮ್'ಗೆ ಪೇಸ್, ಅಮೃತರಾಜ್

ನವದೆಹಲಿ (ಪಿಟಿಐ): ಟೆನಿಸ್ ಡಬಲ್ಸ್‌ನ ಮಾಜಿ ನಂಬರ್ ಒನ್ ತಾರೆ ಲಿಯಾಂಡರ್ ಪೇಸ್ ಮತ್ತು ಮಾಜಿ ಆಟಗಾರ, ಪ್ರವರ್ತಕ ವಿಜಯ್ ಅಮೃತರಾಜ್ ಅವರನ್ನು ಬುಧವಾರ ಅಂತರರಾಷ್ಟ್ರೀಯ 'ಟೆನಿಸ್ ಹಾಲ್ ಆಫ್ ಫೇಮ್'ಗೆ ಆಯ್ಕೆ ಮಾಡಲಾಗಿದೆ.

ಇವರು ಈ ಪ್ರತಿಷ್ಠಿತ ಅಂತರರಾಷ್ಟ್ರೀಯ ಗೌರವಕ್ಕೆ ಪಾತ್ರರಾದ ಮೊದಲ ಏಷ್ಯಾದ ಪುರುಷರಾಗಿದ್ದಾರೆ.

ಭಾರತದ ಇವರಿಬ್ಬರಲ್ಲದೆ, ಇಂಗ್ಲೆಂಡ್‌ನ ಪತ್ರಕರ್ತ ಹಾಗೂ ಲೇಖಕ ರಿಚರ್ಡ್ ಇವಾನ್ಸ್ ಈ ಅತ್ಯುನ್ನತ ಗೌರವಕ್ಕೆ ಪಾತ್ರರಾಗಿದ್ದಾರೆ.

50 ವರ್ಷದ ಪೇಸ್ ಪುರುಷರ ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ 18 ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿ ಗೆದ್ದಿದ್ದಾರೆ. ಪೇಸ್ ಆಟಗಾರರ ವಿಭಾಗದಲ್ಲಿ ಹಾಗೂ ಅಮೃತರಾಜ್, ಇವಾನ್ಸ್ ಕೊಡುಗೆದಾರರ ವಿಭಾಗದಲ್ಲಿ ಈ ಗೌರವ ಪಡೆದಿದ್ದಾರೆ. ಈ ಸಾಧನೆಯೊಂದಿಗೆ ಭಾರತ 'ಹಾಲ್ ಆಫ್ ಫೇಮ್' ಪ್ರವೇಶಿಸಿದ 28ನೇ ದೇಶವಾಗಿದೆ.

ಖೇಲ್ ರತ್ನ ಪ್ರಶಸ್ತಿಗೆ ಸಾತ್ವಿಕ್– ಚಿರಾಗ್ ನಾಮನಿರ್ದೇಶನ

ಅರ್ಜುನ ಪ್ರಶಸ್ತಿ ರೇಸ್‌ನಲ್ಲಿ ಶಮಿ



ಮೊಹಮ್ಮದ್ ಶಮಿ, ಚಿರಾಗ್ ಶೆಟ್ಟಿ, ಸಾತ್ವಿಕ್ ಸಾಯಿರಾಜ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ವೇಗಿ ಮೊಹಮ್ಮದ್ ಶಮಿ ಅವರಿಗೆ ಅರ್ಜುನ ಹಾಗೂ ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ-ಚಿರಾಗ್ ಶೆಟ್ಟಿ ಅವರಿಗೆ ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿ ನೀಡಲು ನಾಮನಿರ್ದೇಶನ ಮಾಡಲಾಗಿದೆ.

ಈಚೆಗೆ ಭಾರತದ ಆತಿಥ್ಯದಲ್ಲಿ ನಡೆದ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶಮಿ ಅಮೋಘ ಬೌಲಿಂಗ್ ಮಾಡಿದ್ದರು. ಒಟ್ಟು 24 ವಿಕೆಟ್ ಗಳಿಸಿದ್ದರು.

ಅವರ ಆಟದಿಂದಾಗಿ ಭಾರತವು ಫೈನಲ್ ಪ್ರವೇಶಿಸಿತ್ತು. ಅವರಿಗೆ ಅರ್ಜುನ ಪ್ರಶಸ್ತಿ ನೀಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕೇಂದ್ರ ಕ್ರೀಡಾ ಸಚಿವಾಲಯಕ್ಕೆ ಶಿಫಾರಸು ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಹಾಕಿ ಆಟಗಾರರಾದ ಕೃಷ್ಣನ್ ಬಹದ್ದೂರ್ ಪಾಠಕ್, ಸುಶೀಲಾ ಚಾನು, ಆರ್ಚರಿಪಟು ಓಜಸ್ ಪ್ರವೀಣ್ ದೇವತಾಳೆ, ಅದಿತಿ ಗೋಪಿಚಂದ್ ಸ್ವಾಮಿ, ಬಾಕ್ಸರ್ ಮೊಹಮ್ಮದ್ ಹುಸಾಮುದ್ದೀನ್, ಚೆಸ್ ಆಟಗಾರ್ತಿ ಆರ್. ವೈಶಾಲಿ, ಗಾಲ್ಫ್ ಆಟಗಾರ್ತಿ ದೀಕ್ಷಾ ದಾಗರ್, ಶೂಟರ್ ಐಶ್ವರ್ಯಾ ಪ್ರತಾಪ್ ಸಿಂಗ್ ಥೋಮರ್, ಕುಸ್ತಿಪಟು ಅಂತಿಮ ಪಂಘಾಲ್, ವುಷು ಪಟು ಎನ್. ರೋಶಿಬಿನಾ ದೇವಿ ಮತ್ತು ಟಿಟಿ ಆಟಗಾರ್ತಿ ಐಹಿಕಾ ಮುಖರ್ಜಿ ಅವರ ಹೆಸರುಗಳೂ ಅರ್ಜುನ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿವೆ.

ದ್ರೋಣಾಚಾರ್ಯ ಪುರಸ್ಕಾರಕ್ಕಾಗಿ ಗಣೇಶ್ ಪ್ರಭಾಕರನ್ (ಮಲ್ಲಕಂಬ), ಮಹಾವೀರ್ ಸೈನಿ (ಪ್ಯಾರಾ ಅಥ್ಲೆಟಿಕ್ಸ್), ಲಲಿತ್ ಕುಮಾರ್ (ಕುಸ್ತಿ), ಆರ್. ರಮೇಶ್ (ಚೆಸ್) ಮತ್ತು ಶಿವೇಂದ್ರ ಸಿಂಗ್ (ಹಾಕಿ) ಅವರನ್ನು ಶಿಫಾರಸು ಮಾಡಲಾಗಿದೆ.

ಧ್ಯಾನಚಂದ್ ಜೀವಮಾನ ಸಾಧನೆ ಪುರಸ್ಕಾರಕ್ಕಾಗಿ ಕವಿತಾ (ಕಬಡ್ಡಿ), ಮಂಜೂಷಾ ಕನ್ವರ್ (ಬ್ಯಾಡ್ಮಿಂಟನ್) ಹಾಗೂ ವಿನೀತ್ ಕುಮಾರ್ ಶರ್ಮಾ (ಹಾಕಿ) ಅವರ ಹೆಸರುಗಳು ನಾಮನಿರ್ದೇಶನಗೊಂಡಿವೆ

ದುಬೈ: ಹವಾಮಾನ ಬದಲಾವಣೆ ಸಮಾವೇಶ ಮುಕ್ತಾಯ

ಪಳೆಯುಳಿಕೆ ಇಂಧನ: ತಗ್ಗಿಸಲು ನಿರ್ಣಯ

ದುಬೈ(ಪಿಟಿಐ): ಹವಾಮಾನ ಬಿಕ್ಕಟ್ಟಿಗೆ ಕಾರಣವಾದ ಪಳೆಯುಳಿಕೆ ಇಂಧನಗಳ ಬಳಕೆಯನ್ನು ನಿಲ್ಲಿಸಬೇಕು. ಈ ಕಾರ್ಯವು 'ನ್ಯಾಯಯುತ ಹಾಗೂ ನಿಷ್ಪಕ್ಷಪಾತ' ತತ್ವದಡಿ ನಡೆಯಬೇಕು ಎಂಬ ಮಹತ್ವದ ನಿರ್ಣಯವನ್ನು ಇಲ್ಲಿ ಮುಕ್ತಾಯಗೊಂಡ ಹವಾಮಾನ ಬದಲಾವಣೆ ಸಮಾವೇಶದಲ್ಲಿ (ಸಿಒಪಿ28) ಕೈಗೊಳ್ಳಲಾಗಿದೆ.

ಎರಡು ವಾರಗಳ ಕಾಲ ನಡೆದ ಈ ಸಮಾವೇಶದಲ್ಲಿ 200 ರಾಷ್ಟ್ರಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸಮಾವೇಶದ ಸಮಾರೋಪದ ಅಂಗವಾಗಿ ನಡೆದ ಕೊನೆಯ ಗೋಷ್ಠಿಯಲ್ಲಿ ಸುದೀರ್ಘ ಚರ್ಚೆ ಬಳಿಕ ಈ ನಿರ್ಣಯವನ್ನು ಅಂಗೀಕರಿಸಲಾಗಿದೆ.

ಇದನ್ನು 'ಯುಎಇ ಒಪ್ಪಂದ' ಎಂದೂ ಕರೆಯಲಾಗಿದೆ. 'ಸಿಒಪಿ28' ಅಧ್ಯಕ್ಷ ಸುಲ್ತಾನ್ ಅಲ್-ಜಬೇರ್ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳ ಕರತಾಡನದ ನಡುವೆ 'ಯುಎಇ ಒಪ್ಪಂದ'ವನ್ನು ಘೋಷಿಸಿದರು.

ವಿದ್ಯುತ್ ಉತ್ಪಾದನೆಗೆ ಅವ್ಯಾಹತವಾಗಿ ಕಲ್ಲಿದ್ದಲು ಬಳಸುವುದನ್ನು ಕ್ರಮೇಣ ಕಡಿಮೆ ಮಾಡಲು ಎಲ್ಲ ದೇಶಗಳು ಪ್ರಯತ್ನಿಸಬೇಕು ಎಂದು ನಿರ್ಣಯದಲ್ಲಿ ಒತ್ತಾಯಿಸಲಾಗಿದೆ.

ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆ (ಎನ್‌ಡಿಸಿ)ಯಲ್ಲಿ ವಿವರಿಸಿರುವಂತೆ, ಉಷ್ಣವರ್ಧಕ ಅನಿಲಗಳ ಹೊರಸೂಸುವಿಕೆಯನ್ನು ತಗ್ಗಿಸಲು ತ್ವರಿತ ಹಾಗೂ ಸುಸ್ಥಿರ ಕ್ರಮಗಳನ್ನು ಕೈಗೊಳ್ಳಬೇಕು. ಈ ಗುರಿ ಸಾಧನೆಗಾಗಿ ರೂಪಿಸಿರುವ 8 ಅಂಶಗಳ ಯೋಜನೆಯನ್ನು ಎಲ್ಲ ದೇಶಗಳು ಅನುಸರಿಸಬೇಕು ಎಂಬುದು ಸೇರಿದಂತೆ ಹಲವಾರು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

ಭಾರತ, ಚೀನಾ ಆಕ್ಷೇಪ: ಚರ್ಚೆ ವೇಳೆ, ಕಲ್ಲಿದ್ದಲು ಬಳಸಿ ವಿದ್ಯುತ್ ಉತ್ಪಾದಿಸುವುದನ್ನು ತ್ವರಿತವಾಗಿ ತಗ್ಗಿಸಬೇಕು ಎಂದು ಪ್ರಸ್ತಾಪಿಸಲಾಯಿತು. ಆದರೆ, ವಿದ್ಯುತ್ ಉತ್ಪಾದನೆಗೆ ತೈಲ ಮತ್ತು ನೈಸರ್ಗಿಕ ಅನಿಲ ಬಳಕೆ ಕಡಿಮೆ ಮಾಡಬೇಕು ಎಂಬ ಬಗ್ಗೆ ಪ್ರಸ್ತಾಪಿಸಿರಲಿಲ್ಲ. ಈ ತಾರತಮ್ಯ ಧೋರಣೆಗೆ ಭಾರತ ಮತ್ತು ಚೀನಾ ಆಕ್ಷೇಪ ವ್ಯಕ್ತಪಡಿಸಿದವು.

ಪ್ಯಾರಿಸ್ ಒಪ್ಪಂದ ಯಥಾವತ್ತು ಅನುಷ್ಠಾನಕ್ಕೆ ಭಾರತ ಕರೆ

ದುಬೈ(ಪಿಟಿಐ): ಹವಾಮಾನ ಬದಲಾವಣೆಯ ಪರಿಣಾಮಗಳನ್ನು ತಡೆಯುವುದಕ್ಕಾಗಿ ಪ್ಯಾರಿಸ್ ಒಪ್ಪಂದವನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಬೇಕು ಎಂದು ಜಾಗತಿಕ ನಾಯಕರನ್ನು ಭಾರತ ಬುಧವಾರ ಒತ್ತಾಯಿಸಿದೆ.

ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕುರಿತ ಸಮಾವೇಶದ (ಸಿಒಪಿ28) ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಪರಿಸರ ಸಚಿವ ಭೂಪೇಂದ್ರ ಯಾದವ್, 'ಪ್ಯಾರಿಸ್ ಒಪ್ಪಂದದ ಅನುಷ್ಠಾನವು ನ್ಯಾಯಸಮ್ಮತ ಹಾಗೂ ಎಲ್ಲರ ಹಕ್ಕುಗಳನ್ನು ಗೌರವಿಸುವ ತತ್ವದಡಿ ನಡೆಯಬೇಕು' ಎಂದು ಪ್ರತಿಪಾದಿಸಿದರು.

> ಜಗತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಸೇರಿದೆ ಎಂಬುದು 'ಸಿಒಪಿ28' ಕೈಗೊಂಡಿರುವ ನಿರ್ಣಯದಿಂದ ಸ್ಪಷ್ಟವಾಗುತ್ತದೆ
>
> **ಸಂಜಯ್ ವಶಿಷ್ಠ,** ಕ್ಲೈಮೇಟ್ ಚೇಂಜ್ ನೆಟ್‌ವರ್ಕ್ ಸೌಥ್ ಏಷ್ಯಾ ನಿರ್ದೇಶಕ

ಚೀನಾ, ಟರ್ಕಿ, ಯುಎಇ ಕಂಪನಿಗೆ ಅಮೆರಿಕ ನಿರ್ಬಂಧ

ವಾಷಿಂಗ್ಟನ್(ಎಪಿ): ಉಕ್ರೇನ್ ಆಕ್ರಮಣಕ್ಕಾಗಿ ರಷ್ಯಾಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸಿದ ರಷ್ಯಾ, ಚೀನಾ, ಟರ್ಕಿ ಮತ್ತು ಸಂಯುಕ್ತ ಅರಬ್ ಸಂಸ್ಥಾನಕ್ಕೆ (ಯುಎಇ) ಸೇರಿದ ನೂರಾರು ವ್ಯಕ್ತಿಗಳು ಮತ್ತು ಕಂಪನಿಗಳ ಮೇಲೆ ಅಮೆರಿಕ ಹೊಸ ಆರ್ಥಿಕ ಮತ್ತು ರಾಜತಾಂತ್ರಿಕ ನಿರ್ಬಂಧ ಹೇರಿದೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಅಮೆರಿಕ ಭೇಟಿಯ ಹಿನ್ನೆಲೆಯಲ್ಲಿ ಅಧ್ಯಕ್ಷ ಜೋ ಬೈಡನ್ ಆಡಳಿತವು ಈ ನಿರ್ಬಂಧಗಳನ್ನು ಮಂಗಳವಾರ ಹೇರಿದೆ.

ರಷ್ಯಾ ನಡೆಸುತ್ತಿರುವ ಆಕ್ರಮಣವು ಬರುವ ಫೆಬ್ರುವರಿಗೆ ಮೂರನೇ ವರ್ಷಕ್ಕೆ ಕಾಲಿಡಲಿದ್ದು, ರಷ್ಯಾ ದಾಳಿ ಹಿಮ್ಮೆಟ್ಟಿಸಲು ಮತ್ತಷ್ಟು ಆರ್ಥಿಕ ನೆರವು ಮತ್ತು ಶಸ್ತ್ರಾಸ್ತ್ರಕ್ಕಾಗಿ ಅಮೆರಿಕದ ನೆರವು ಕೋರಲು ಝೆಲೆನ್‌ಸ್ಕಿ ವಾಷಿಂಗ್ಟನ್‌ಗೆ ಈ ವಾರದ ಆರಂಭದಲ್ಲಿ ಭೇಟಿ ಕೊಟ್ಟಿದ್ದರು.

ಚೀನಾದ ರಾಷ್ಟ್ರೀಯ ಹುಷಿಯಾಕ್ಸನ್ ನೇತೃತ್ವದ ಬಹುರಾಷ್ಟ್ರೀಯ ಶಸ್ತ್ರಾಸ್ತ್ರಗಳ ಖರೀದಿ ಜಾಲ, ಚೀನಾ ಮೂಲದ ಖಾಸಗಿ ರಕ್ಷಣಾ ಕಂಪನಿ ಜಾರ್ವಿಸ್ ಎಚ್‌ಕೆ ಕಂಪನಿಯನ್ನು ಪ್ರಮುಖವಾಗಿ ಗುರಿಯಾಗಿಸಿಕೊಂಡು ಈ ನಿರ್ಬಂಧ ವಿಧಿಸಲಾಗಿದೆ.

ಕ್ರಿಕೆಟ್: ಭಾರತ ತಂಡಕ್ಕೆ ಗೆಲುವಿನ ಛಲ; ಇಂಗ್ಲಿಷ್ ಬಳಗಕ್ಕೆ 100ನೇ ಪಂದ್ಯ

ಹರ್ಮನ್ ಬಳಗಕ್ಕೆ ಇಂಗ್ಲೆಂಡ್ 'ಟೆಸ್ಟ್'

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ ಮತ್ತು ಜೆಮಿಮಾ ರಾಡ್ರಿಗಸ್ –ಪಿಟಿಐ ಚಿತ್ರ

ಬಲಾಬಲ

ಪಂದ್ಯಗಳು 14

ಭಾರತ ಜಯ	2
ಇಂಗ್ಲೆಂಡ್ ಜಯ	1
ಡ್ರಾ	11

ನವಿ ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಗುರುವಾರ ಆರಂಭವಾಗಲಿರುವ ಮಹಿಳಾ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಇಂಗ್ಲೆಂಡ್ ತಂಡಕ್ಕಾಗಿ ಭಾರತದ ಪ್ರವಾಸದಲ್ಲಿ ಆಯೋಜಿಸಲಾಗಿರುವ ಏಕೈಕ ಟೆಸ್ಟ್ ಇದಾಗಿದೆ. ಇಂಗ್ಲೆಂಡ್ ತಂಡಕ್ಕೆ ಇದು ನೂರನೇ ಟೆಸ್ಟ್ ಆಗಿದೆ.

1986ರಿಂದ ಇಲ್ಲಿಯವರೆಗೆ ಉಭಯ ತಂಡಗಳು 14 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಅದರಲ್ಲಿ ಭಾರತವು ಒಂದು ಬಾರಿ ಮಾತ್ರ ಸೋತಿದೆ. ಎರಡು ಗೆದ್ದಿದೆ. 2021ರಲ್ಲಿ ಬ್ರಿಸ್ಟಲ್‌ನಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದ ಪಂದ್ಯವು ಡ್ರಾ ಆಗಿತ್ತು. ಆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸ್ಮೃತಿ ಮಂದಾನ 78 ರನ್ ಗಳಿಸಿದ್ದರು. ಶಫಾಲಿ ವರ್ಮಾ 63 ಎಸೆತಗಳಲ್ಲಿ 96 ರನ್ ಹೊಡೆದಿದ್ದರು.

ಭಾರತ ತಂಡದ ಈ ಮುನ್ನಡೆಯ ದಾಖಲೆಯನ್ನು ಮುಂದುವರಿಸಿಕೊಂಡು ಹೋಗುವ ಸವಾಲು ಹರ್ಮನ್‌ಪ್ರೀತ್ ಮುಂದಿದೆ. ಮಹಿಳೆಯರ ಕ್ರಿಕೆಟ್‌ನಲ್ಲಿ ಹೆಚ್ಚು ಟೆಸ್ಟ್ ಪಂದ್ಯಗಳು ನಡೆಯುತ್ತಿಲ್ಲ. ಆದರೆ ಈ ತಿಂಗಳು ಭಾರತಕ್ಕೆ ಇಂಗ್ಲೆಂಡ್ ಎದುರು ಸೇರಿ 2 ಟೆಸ್ಟ್‌ಗಳು ಲಭಿಸಲಿವೆ.

ಇದೇ ತಿಂಗಳು 21 ರಿಂದ 24ರವರೆಗೆ ಆಸ್ಟ್ರೇಲಿಯಾ ವಿರುದ್ಧ ಒಂದು ಟೆಸ್ಟ್ ಪಂದ್ಯ ನಡೆಯಲಿದೆ. ಟೆಸ್ಟ್ ಮಾದರಿಯಲ್ಲಿ ಸ್ಮೃತಿ, ನಾಯಕಿ ಹರ್ಮನ್, ಶಫಾಲಿ ಅವರು ಉತ್ತಮ ದಾಖಲೆ ಹೊಂದಿದ್ದಾರೆ. ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ ಕೂಡ ಅನುಭವಿಯಾಗಿದ್ದಾರೆ. ಆದ್ದರಿಂದ ಇಂಗ್ಲೆಂಡ್ ವಿರುದ್ಧ ಮೇಲುಗೈ ಸಾಧಿಸುವ ವಿಶ್ವಾಸದಲ್ಲಿ ತಂಡವಿದೆ.

ಹೀಥರ್ ನೈಟ್ ನಾಯಕತ್ವದ ಪ್ರವಾಸಿ ತಂಡವು ಸಮತೋಲನವಾಗಿದೆ. ಟ್ಯಾಮಿ ಬೆಮೌಂಟ್ ಕಳೆದ ಜೂನ್‌ನಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ದ್ವಿಶತಕ ಗಳಿಸಿದ್ದರು. ಸೋಫಿಯಾ ಡಂಕ್ಲಿ, ಕೇಟ್ ಕ್ರಾಸ್, ಎಮಿ ಜೋನ್ಸ್ ಮತ್ತು ವೈಟ್ ಅವರು ಉತ್ತಮ ಲಯದಲ್ಲಿದ್ದು ಆತಿಥೇಯರಿಗೆ ಕಠಿಣ ಸವಾಲೊಡ್ಡಬಲ್ಲರು.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಟಿ20 ಕ್ರಿಕೆಟ್: ಆತಿಥೇಯ ದಕ್ಷಿಣ ಆಫ್ರಿಕಾಕ್ಕೆ ಸೂರ್ಯ ಪಡೆ ಸವಾಲು ಇಂದು

ಭಾರತಕ್ಕೆ ಸರಣಿ ಸಮಬಲದ ಛಲ

ಜೋಹಾನ್ಸ್‌ಬರ್ಗ್ (ಪಿಟಿಐ): ಸರಣಿ ಜಯದ ಕನಸು ಕಾಣುತ್ತಿರುವ ಆತಿಥೇಯ ದಕ್ಷಿಣ ಆಫ್ರಿಕಾ ಮತ್ತು ಸಮಬಲ ಸಾಧನೆಯ ಛಲದಲ್ಲಿರುವ ಭಾರತ ತಂಡ ಗುರುವಾರ ಇಲ್ಲಿ ಮುಖಾಮುಖಿಯಾಗಲಿವೆ.

ಮೂರು ಟಿ20 ಪಂದ್ಯಗಳ ಸರಣಿಯ ಮೊದಲ ಪಂದ್ಯವು ಮಳೆಗಾಹುತಿಯಾಗಿತ್ತು. ಮಂಗಳವಾರ ನಡೆದಿದ್ದ ಎರಡನೇ ಪಂದ್ಯಕ್ಕೂ ಮಳೆ ಅಡ್ಡಿಯಾಗಿತ್ತು. ಆದರೆ ಡಕ್ವರ್ಥ್ ಲೂಯಿಸ್ ನಿಯಮದನ್ವಯ ನಿಗದಿಯಾದ ಗುರಿಯನ್ನು ಮುಟ್ಟುವಲ್ಲಿ ಯಶಸ್ವಿಯಾದ ಆತಿಥೇಯ ತಂಡವು 5 ವಿಕೆಟ್‌ಗಳಿಂದ ಗೆದ್ದಿತ್ತು. ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತ್ತು. ಹೀಗಾಗಿ ಮೂರನೇ ಪಂದ್ಯದಲ್ಲಿ ಜಯಿಸಿದರೆ ಸರಣಿ ಒಲಿಯಲಿದೆ ಎಂಬ ಲೆಕ್ಕಾಚಾರ ಏಡನ್ ಮರ್ಕರಂ ಬಳಗದ್ದು. ಆದರೆ, ಸರಣಿ ಸೋಲಿನಿಂದ ತಪ್ಪಿಸಿಕೊಂಡು ಸಮಬಲ ಸಾಧಿಸಬೇಕಾದರೆ ಭಾರತ ತಂಡದ ಬೌಲರ್‌ಗಳು ಉತ್ತಮವಾಗಿ ಆಡಬೇಕಿದೆ. ಎರಡನೇ ಪಂದ್ಯದಲ್ಲಿ

ಸೂರ್ಯಕುಮಾರ್ ಯಾದವ್

ಮುಕೇಶ್ ಕುಮಾರ್ ಎರಡು ವಿಕೆಟ್ ಪಡೆದಿದ್ದರು. ಆದರೆ ಹೆಚ್ಚು ರನ್ ಬಿಟ್ಟುಕೊಟ್ಟಿದ್ದರು. ಅರ್ಷದೀಪ್ ಸಿಂಗ್ ಕೂಡ ಎರಡು ಓವರ್‌ಗಳಲ್ಲಿ 31 ರನ್ ಕೊಟ್ಟು ದುಬಾರಿಯಾಗಿದ್ದರು.

ಮೊಹಮ್ಮದ್ ಸಿರಾಜ್, ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್ ಕೂಡ ರನ್‌ಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿರಲಿಲ್ಲ. ದಕ್ಷಿಣ ಆಫ್ರಿಕಾದ ಬಲಾಢ್ಯ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಲು ಬೌಲರ್‌ಗಳು ತಮ್ಮ ಸಾಮರ್ಥ್ಯ ಮೀರಿ ಆಡುವ ಅನಿವಾರ್ಯತೆ ಇದೆ.

ಸೂರ್ಯಕುಮಾರ್ 2000 ರನ್

ದಕ್ಷಿಣ ಆಫ್ರಿಕಾ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ 56 ರನ್ ಗಳಿಸಿದ ಸೂರ್ಯಕುಮಾರ್, 56ನೇ ಇನಿಂಗ್ಸ್‌ನಲ್ಲಿ 2000 ರನ್ ಪೂರೈಸಿದರು. ಈ ಮೂಲಕ ವೇಗದ 2000 ರನ್ ಗಳಿಕೆಯಲ್ಲಿ ವಿರಾಟ್ ಕೊಹ್ಲಿಯೊಂದಿಗೆ ಜಂಟಿಯಾಗಿ 2ನೇ ಸ್ಥಾನ ಹಂಚಿಕೊಂಡರು. ಪಾಕ್‌ನ ಬಾಬರ್ ಆಜಂ ಹಾಗೂ ಮೊಹಮ್ಮದ್ ರಿಜ್ವಾನ್ 52ನೇ ಇನಿಂಗ್ಸ್‌ನಲ್ಲಿ ಈ ಸಾಧನೆ ಮಾಡಿ ಅಗ್ರಸ್ಥಾನದಲ್ಲಿದ್ದಾರೆ. ಜತೆಗೆ ಐಸಿಸಿ ಪುರುಷರ ಟಿ20 ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ ಸೂರ್ಯಕುಮಾರ್ (865) ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ರೀಜಾ ಹೆನ್ರಿಕ್ಸ್, ಮರ್ಕರಂ, ಟ್ರಿಸ್ಟನ್ ಸ್ಟಬ್ಸ್, ಹೆನ್ರಿಚ್ ಕ್ಲಾಸನ್, ಡೇವಿಡ್ ಮಿಲ್ಲರ್ ಮತ್ತು ಮ್ಯಾಥ್ಯೂ ಬ್ರೀಜ್ ಅವರು ರನ್‌ಗಳ ಹೊಳೆ ಹರಿಸುವ ಸಮರ್ಥರು. ಆತಿಥೇಯರ ಬೌಲಿಂಗ್ ಕೂಡ ಉತ್ತಮವಾಗಿದೆ. ಎರಡನೇ ಪಂದ್ಯದಲ್ಲಿ 4 ಓವರ್‌ಗಳಲ್ಲಿ 18 ರನ್ ಕೊಟ್ಟು ಒಂದು ವಿಕೆಟ್ ಗಳಿಸಿದ ತಬ್ರೇಜ್ ಶಂಸಿ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾಗಿದ್ದರು. ಗೆರಾಲ್ಡ್ ಕೋಜಿ, ಮಾರ್ಕೊ ಯಾನ್ಸನ್ ಅವರು ಆರಂಭಿಕ ಹಂತದಲ್ಲಿಯೇ ವಿಕೆಟ್ ಕಿತ್ತು ವಿಜೃಂಭಿಸಬಲ್ಲರು.

ಇವರಿಂದಾಗಿ ಭಾರತದ ಆರಂಭಿಕ ಆಟಗಾರರಾದ ಯಶಸ್ವಿ ಜೈಸ್ವಾಲ್ ಮತ್ತು ಶುಭಮನ್ ಗಿಲ್ ಕಳೆದ ಪಂದ್ಯದಲ್ಲಿ ಸೊನ್ನೆ ಸುತ್ತಿದ್ದರು. ಸೂರ್ಯಕುಮಾರ್ ಮತ್ತು ರಿಂಕು ಸಿಂಗ್ ಅವರು ಗಳಿಸಿದ್ದ ಅಬ್ಬರದ ಅರ್ಧಶತಕಗಳ ಬಲದಿಂದ ತಂಡವು ಹೋರಾಟದ ಮೊತ್ತ ಗಳಿಸಲು ಸಾಧ್ಯವಾಗಿತ್ತು. ತಿಲಕ್ ವರ್ಮಾ ಕೂಡ ಉಪಯುಕ್ತ ಕಾಣಿಕೆ ನೀಡಿದ್ದರು.

ಪಂದ್ಯ ಆರಂಭ: ರಾತ್ರಿ 8.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಪ್ಯಾರಾ ಗೇಮ್ಸ್: ಪ್ರಣವ್ ದಾಖಲೆ

ನವದೆಹಲಿ (ಪಿಟಿಐ): ಹರಿಯಾಣದ ಪ್ರಣವ್ ಸೂರ್ಮಾ ಇಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್‌ನ ಪುರುಷರ ಎಫ್ 51 ವಿಭಾಗದ ಕ್ಲಬ್ ಥ್ರೋ ಸ್ಪರ್ಧೆಯಲ್ಲಿ ಏಷ್ಯನ್ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಕಳೆದ ತಿಂಗಳು ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಪ್ಯಾರಾ ಕ್ರೀಡಾಕೂಟದಲ್ಲಿ ಪ್ರಣವ್ 30.01 ಮೀಟರ್ ಸಾಧನೆಯೊಂದಿಗೆ ಚಿನ್ನಕ್ಕೆ ಕೊರಳೊಡಿದ್ದರು. ಕೂಟದ ನಾಲ್ಕನೇ ದಿನವಾದ ಬುಧವಾರ ಪ್ರಣವ್ ಅವರು 33.54 ಮೀಟರ್‌ಗಳಷ್ಟು ದೂರ ಕ್ಲಬ್ ಥ್ರೋ ಮಾಡಿ ದಾಖಲೆ ನಿರ್ಮಿಸಿದರು. ಈ ಹಾದಿಯಲ್ಲಿ ಧರಂಬೀರ್ (31.09 ಮೀಟರ್) ಅವರ ಏಷ್ಯನ್ ದಾಖಲೆಯನ್ನು ಮುರಿದರು. ಈ ವಿಭಾಗದಲ್ಲಿ ಉತ್ತರ ಪ್ರದೇಶದ ರಾಮ್ ರತನ್ ಸಿಂಗ್ (25.43 ಮೀ) ಮತ್ತು ತಮಿಳುನಾಡಿನ ಎಂ. ಅಲೆಕ್ಸಾಂಡರ್ (25.28 ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು.

ಪುರುಷರ ಶೂಟಿಂಗ್‌ನ ಎಸ್‌ಎಚ್–2 ವಿಭಾಗದ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ರಾಜಸ್ಥಾನದ ವಿಜಯ್ ಸಿಂಗ್ ಕುಂತಲ್ ಒಟ್ಟು 618.3 ಅಂಕಗಳೊಂದಿಗೆ ಚಿನ್ನ ಗೆದ್ದರು. ತೆಲಂಗಾಣದ ಸತ್ಯ ಜನಾರ್ದನ ಶ್ರೀಧರ್ ರಾಯಲ ಬೆಳ್ಳಿ ಗೆದ್ದರೆ ಮತ್ತು ಪಂಜಾಬ್‌ನ ದಲ್ಬೀರ್ ಸಿಂಗ್ ಕಂಚು ಜಯಿಸಿದರು.

ಮಹಿಳೆಯರ ಶೂಟಿಂಗ್‌ನ ಎಸ್‌ಎಚ್-1 ವಿಭಾಗದ 10 ಮೀಟರ್ ಏರ್ ರೈಫಲ್ ಸ್ಟ್ಯಾಂಡಿಂಗ್

ಚಿನ್ನದ ಪದಕ ಗೆದ್ದ ಪ್ರಣವ್

ಸ್ಪರ್ಧೆಯಲ್ಲಿ ರಾಜಸ್ಥಾನದ ಮೋನಾ ಅಗರ್ವಾಲ್ (619.7) ಚಿನ್ನಕ್ಕೆ ಕೊರಳೊಡ್ಡಿದರೆ, ಹರಿಯಾಣದ ಸಿಮ್ರಾನ್ ಶರ್ಮಾ ಬೆಳ್ಳಿ ಮತ್ತು ಉತ್ತರ ಪ್ರದೇಶದ ಆಕಾಂಕ್ಷಾ ಕಂಚಿನ ಪದಕ ಗೆದ್ದರು. ಪುರುಷರ ವಿಭಾಗದಲ್ಲಿ ಮಹಾರಾಷ್ಟ್ರದ ಸ್ವರೂಪ್ ಉನ್ಹಾಲ್ಕರ್ ಚಿನ್ನ, ಹರಿಯಾಣದ ದೀಪಕ್ ಸೈನಿ ಬೆಳ್ಳಿ ಮತ್ತು ಹರಿಯಾಣದ ಇಶಾಂಕ್ ಅಹುಜಾ ನಂತರದ ಸ್ಥಾನ ಪಡೆದರು.

ಮಹಿಳೆಯರ ಎಸ್‌ಎಚ್-1 ವಿಭಾಗದ 10 ಮೀಟರ್ ಏರ್ ಪಿಸ್ತೂಲ್ ಸ್ಟ್ಯಾಂಡಿಂಗ್ ಸ್ಪರ್ಧೆಯಲ್ಲಿ ಮಧ್ಯಪ್ರದೇಶದ ರುಬಿನಾ ಫ್ರಾನ್ಸಿಸ್ ಒಟ್ಟು 233.1 ಅಂಕಗಳೊಂದಿಗೆ ಚಿನ್ನದ ಸಾಧನೆ ಮಾಡಿದರು. ಉತ್ತರ ಪ್ರದೇಶದ ಸುಮೇಧಾ ಪಾಠಕ್ ಮತ್ತು ದೆಹಲಿಯ ಭಕ್ತಿ ಶರ್ಮಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು.

ಮಹಿಳೆಯರ ಪ್ಯಾರಾ ಪವರ್‌ಲಿಫ್ಟಿಂಗ್ 61 ಕೆಜಿ ಎಲೈಟ್ ವಿಭಾಗದಲ್ಲಿ ಪಂಜಾಬ್‌ನ ಸೀಮಾ ರಾಣಿ 88 ಕೆಜಿ ಎತ್ತುವ ಮೂಲಕ ಚಿನ್ನ ಗೆದ್ದರೆ, ಉತ್ತರ ಪ್ರದೇಶದ ಜೈನಾಬ್ ಖಾತೂನ್ ದ್ವಿತೀಯ ಮತ್ತು ತಮಿಳುನಾಡಿನ ಎಂ. ನಾಥಿಯಾ ತೃತೀಯ ಸ್ಥಾನ ಪಡೆದರು.

ಕ್ರಿಕೆಟ್: ಪ್ರಸಿದ್ಧ ಕೃಷ್ಣ ಹ್ಯಾಟ್ರಿಕ್

ಪೊಚೆಫ್‌ಸ್ಟ್ರೂಮ್ (ಪಿಟಿಐ): ಭಾರತ ಎ ತಂಡದಲ್ಲಿರುವ ಕನ್ನಡಿಗ ಪ್ರಸಿದ್ಧ ಕೃಷ್ಣ ಇಲ್ಲಿ ನಡೆಯುತ್ತಿರುವ ದಕ್ಷಿಣ ಆಫ್ರಿಕಾ ಎ ತಂಡದ ಎದುರಿನ 'ಟೆಸ್ಟ್'ನಲ್ಲಿ ಬುಧವಾರ ಹ್ಯಾಟ್ರಿಕ್ ಸಾಧನೆ ಮಾಡಿದರು.

ಪಂದ್ಯದ ಮೂರನೇ ದಿನವಾದ ಬುಧವಾರ ಪ್ರಸಿದ್ಧಕೃಷ್ಣ (43ಕ್ಕೆ5) ಅವರ ಬೌಲಿಂಗ್ ಮುಂದೆ ದಕ್ಷಿಣ ಆಫ್ರಿಕಾ ಎ ತಂಡವು 98.1 ಓವರ್‌ಗಳಲ್ಲಿ 319 ರನ್ ಗಳಿಸಿ ಆಲೌಟ್ ಆಯಿತು. ಅದಕ್ಕುತ್ತರವಾಗಿ ಭಾರತ ಎ ತಂಡವು ದಿನದಾಟದ ಕೊನೆಗೆ 77 .2 ಓವರ್‌ಗಳಲ್ಲಿ 377 ರನ್ ಗಳಿಸಿತು. ಪ್ರದೋಷ್ ಪಾಲ್ (163 ರನ್) ಅವರ ಶತಕ ಮತ್ತು ಶಾರ್ದೂಲ್ ಅರ್ಧಶತಕದ ಬಲದಿಂದ ತಂಡವು 58 ರನ್‌ಗಳ ಮುನ್ನಡೆ ಪಡೆಯಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ ಎ : 98.1 ಓವರ್‌ಗಳಲ್ಲಿ 319 (ಜೀಣ್ ಡು ಪ್ಲೆಸಿ 106, ರುಬಿನ್ ಹರ್ಮನ್ 95, ಪ್ರಸಿದ್ಧಕೃಷ್ಣ 43ಕ್ಕೆ5, ಸೌರಭ್ ಕುಮಾರ್ 83ಕ್ಕೆ3) ಭಾರತ ಎ: 77.2 ಓವರ್‌ಗಳಲ್ಲಿ 6ಕ್ಕೆ 377 (ಪ್ರದೋಷ್ 163, ಶಾರ್ದೂಲ್ ಠಾಕೂರ್ ಔಟಾಗದೆ 70, ಈಥನ್ ಬಾಷ್ 46ಕ್ಕೆ2, ಇವಾನ್ ಜೋನ್ಸ್ 83ಕ್ಕೆ2)

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಮೂಡುಬಿದಿರೆ | ದ.ಕ. 574227 ಕರ್ನಾಟಕ

ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಶುಭಾಶೀರ್ವಾದದೊಂದಿಗೆ

ದೇಶಕ್ಕಾಗಿ ದೇಹತ್ಯಾಗ ಮಾಡಿದ ವೀರಯೋಧ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಅವರಿಗೆ ಅರ್ಪಣೆ

ಡಿಸೆಂಬರ್ 14ರಿಂದ 17ರ ವರೆಗೆ
ಶ್ರೀಮತಿ ವನಜಾಕ್ಷಿ ಕೆ. ಶ್ರೀಪತಿ ಭಟ್ ಬಯಲುರಂಗ ಮಂದಿರ, ವಿವೇಕಾನಂದ ನಗರ, ಪುತ್ತಿಗೆ, ಮೂಡುಬಿದಿರೆ, ದಕ್ಷಿಣ ಕನ್ನಡ

29ನೇ ವರ್ಷದ ಆಳ್ವಾಸ್ ವಿರಾಸತ್ 2023 | ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ

14.12.2023 ಗುರುವಾರ » ಉದ್ಘಾಟನಾ ಸಮಾರಂಭ

ಶ್ರೀಮತಿ ವನಜಾಕ್ಷಿ ಕೆ. ಶ್ರೀಪತಿ ಭಟ್ ಬಯಲು ರಂಗಮಂದಿರ, ವಿವೇಕಾನಂದ ನಗರ, ಪುತ್ತಿಗೆ

ಗೌರವಾನ್ವಿತ ರಾಜ್ಯಪಾಲರಿಗೆ ಗೌರವ ರಕ್ಷೆ — ಸಂಜೆ 5:30
ಸಭಾಕಾರ್ಯಕ್ರಮ — ಸಂಜೆ 5:45-6:30
ಉದ್ಘಾಟನೆ : ಗೌರವಾನ್ವಿತ ಡಾ. ಥಾವರ್ ಚಂದ್ ಗೆಹ್ಲೋಟ್, ರಾಜ್ಯಪಾಲರು, ಕರ್ನಾಟಕ ಸರಕಾರ
ಅಧ್ಯಕ್ಷರು : ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ

ಸಂಜೆ 6:35 – ರಾತ್ರಿ 8:00
ಆಳ್ವಾಸ್ ವಿರಾಸತ್-2023 | ಭವ್ಯ ಸಾಂಸ್ಕೃತಿಕ ಮೆರವಣಿಗೆ
100ಕ್ಕಿಂತಲೂ ಅಧಿಕ ದೇಶೀಯ ಜಾನಪದ ಕಲಾತಂಡಗಳ 3000ಕ್ಕೂ ಮಿಕ್ಕಿದ ಕಲಾವಿದರಿಂದ ವೈವಿಧ್ಯಮಯ ಭವ್ಯ ಸಾಂಸ್ಕೃತಿಕ ಮೆರವಣಿಗೆ.

ರಾತ್ರಿ 8:05 – 9:00
ವೇದಘೋಷಗಳು, ಭಜನ್‌ಗಳು, ಪುಷ್ಪಪಲ್ಲಕ್ಕಿಗಳು, ಮಂಗಳವಾದ್ಯಗಳೊಂದಿಗೆ ವಿಘ್ನನಿವಾರಕ ವಿನಾಯಕ, ಸರಸ್ವತಿ, ಶ್ರೀಲಕ್ಷ್ಮೀ, ಹನುಮಂತ, ಶ್ರೀರಾಮ, ಶ್ರೀಕೃಷ್ಣಾದಿ ಆರೂಢ ದೇವರ
ಸಾಂಸ್ಕೃತಿಕ ರಥ ಸಂಚಲನ ಮತ್ತು ರಥಾರತಿ

•••• ಸಾಂಸ್ಕೃತಿಕ ಕಾರ್ಯಕ್ರಮಗಳು ••••

15.12.2023 ಶುಕ್ರವಾರ
ಸಂಜೆ 5:45 : ದೀಪ ಪ್ರಜ್ವಲನ (ಸಭಾ ಕಾರ್ಯಕ್ರಮ ಇರುವುದಿಲ್ಲ)
5:55 : ಕಲಾವಿದರಿಗೆ ಸಾಂಪ್ರದಾಯಿಕ ಸ್ವಾಗತ
6:00–8:00 : ಗಾನ ವೈಭವ
ಬೆನ್ನಿ ದಯಾಲ್, ಖ್ಯಾತ ಚಲನಚಿತ್ರ ಹಿನ್ನಲೆ ಗಾಯಕರು
ರಾತ್ರಿ 8:00–9:00 : ಆಳ್ವಾಸ್ ಸಾಂಸ್ಕೃತಿಕ ವೈಭವ

16.12.2023 ಶನಿವಾರ
ಸಂಜೆ 5:45 : ದೀಪ ಪ್ರಜ್ವಲನ (ಸಭಾ ಕಾರ್ಯಕ್ರಮ ಇರುವುದಿಲ್ಲ)
5:55 : ಕಲಾವಿದರಿಗೆ ಸಾಂಪ್ರದಾಯಿಕ ಸ್ವಾಗತ
6:00–8:00 : ಭಾವ ಲಹರಿ
ಶ್ರೇಯಾ ಘೋಷಾಲ್, ಖ್ಯಾತ ಚಲನಚಿತ್ರ ಹಿನ್ನಲೆ ಗಾಯಕರು
ರಾತ್ರಿ 8:00–9:00 : ಆಳ್ವಾಸ್ ಸಾಂಸ್ಕೃತಿಕ ವೈಭವ

17.12.2023 ರವಿವಾರ
ಸಂಜೆ 5:15–06:15 : ಆಳ್ವಾಸ್ ವಿರಾಸತ್ –2023 ಪ್ರಶಸ್ತಿ ಪ್ರದಾನ
ಪ್ರಶಸ್ತಿ ಪುರಸ್ಕೃತರು : ಡಾ. ಮೈಸೂರು ಮಂಜುನಾಥ್
: ಡಾ. ಪ್ರವೀಣ್ ಗೋಡ್ಖಿಂಡಿ
: ಶ್ರೀ ವಿಜಯ ಪ್ರಕಾಶ್
6:30–07:15 : ತಾಳ–ವಾದ್ಯ–ಸಂಗೀತ
ಡಾ. ಮೈಸೂರು ಮಂಜುನಾಥ್
ಡಾ. ಪ್ರವೀಣ್ ಗೋಡ್ಖಿಂಡಿ
ಶ್ರೀ ವಿಜಯ ಪ್ರಕಾಶ್ ಮತ್ತು ಬಳಗ
ರಾತ್ರಿ 7:30–9:30 : ಸಂಗೀತ ರಸಸಂಜೆ
ಶ್ರೀ ವಿಜಯ ಪ್ರಕಾಶ್, ಖ್ಯಾತ ಚಲನಚಿತ್ರ ಹಿನ್ನಲೆ ಗಾಯಕರು
9:30–10:15 : ಆಳ್ವಾಸ್ ಸಾಂಸ್ಕೃತಿಕ ವೈಭವ

ಆಳ್ವಾಸ್ ವಿರಾಸತ್ 2023ರ ವಿಶೇಷ ಆಕರ್ಷಣೆ
ಪೂರ್ವಾಹ್ನ 09:00 ರಿಂದ ರಾತ್ರಿ 10:00ರ ವರೆಗೆ 07 ಮೇಳಗಳ, 750ಕ್ಕೂ ಮಿಕ್ಕಿದ ಮಳಿಗೆಗಳೊಂದಿಗೆ ಅನ್ವೇಷಣಾತ್ಮಕ ಕೃಷಿಕ,
ಶತಾಯುಷಿ ಮಿಜಾರುಗುತ್ತು ಆನಂದ ಆಳ್ವ ಸ್ಮರಣಾರ್ಥ
ಪ್ರದರ್ಶನ ಮತ್ತು ಮಾರಾಟ ಮಹಾಮೇಳ
ಸ್ಥಳ: ಮುಂಡ್ರುದೆಗುತ್ತು ಕೆ. ಅಮರನಾಥ ಶೆಟ್ಟಿ (ಕೃಷಿಸಿರಿ ವೇದಿಕೆ) ಆವರಣ, ವಿದ್ಯಾಗಿರಿ, ಮೂಡುಬಿದಿರೆ
ಉಚಿತ ಪ್ರವೇಶ

ನಿಮ್ಮ ಆಗಮನದ ನಿರೀಕ್ಷೆಯಲ್ಲಿ
ವಿಶ್ವಸ್ತ ಮಂಡಳಿ ಸದಸ್ಯರು, ಆಡಳಿತ ಮಂಡಳಿ ಸದಸ್ಯರು, ಅಧಿಕಾರಿ ವರ್ಗ, ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿ ವೃಂದ

» ಡಾ. ಎಂ. ಮೋಹನ್ ಆಳ್ವ ಅಧ್ಯಕ್ಷರು

ಆಳ್ವಾಸ್ ವಿರಾಸತ್–ಸಪ್ತ ಮೇಳಗಳ ಮೆರುಗು

ಮೂಡುಬಿದಿರೆಯ ಪ್ರಕೃತಿ ರಮಣೀಯ ಪುತ್ತಿಗೆಯ ವಿವೇಕಾನಂದ ನಗರದಲ್ಲಿ ಡಿಸೆಂಬರ್ 14ರಿಂದ ಡಿಸೆಂಬರ್ 17ರವರೆಗೆ ನಡೆಯುವ 29ನೇ ವರ್ಷದ ಆಳ್ವಾಸ್ ವಿರಾಸತ್‌ನಲ್ಲಿ ಸಂಸ್ಕೃತಿ, ಸೌಂದರ್ಯ, ಸೃಜನಶೀಲತೆ ಅನಾವರಣಗೊಳ್ಳಲಿದೆ.

ಅನ್ವೇಷಣಾತ್ಮಕ ಕೃಷಿಕ ಶತಾಯುಷಿ ಮಿಜಾರುಗುತ್ತು ಅನಂದ ಆಳ್ವ ಸ್ಮರಣಾರ್ಥ ಮುಂಡ್ರುದೆಗುತ್ತು ಕೆ.ಅಮರನಾಥ ಶೆಟ್ಟಿ (ಕೃಷಿ ಸಿರಿ)ಆವರಣದಲ್ಲಿ ನಡೆಯುವ 7 ಮೇಳಗಳಲ್ಲಿ 750ಕ್ಕೂ ಹೆಚ್ಚು ಮಳಿಗೆಗಳು ವಿಶೇಷ ಆಕರ್ಷಣೆಯಾಗಲಿವೆ.

ಕೃಷಿ ಮೇಳ
ಕೃಷಿ ಸಂಸ್ಕೃತಿಯನ್ನು ಬಿಂಬಿಸುವ ಬಗೆ ಬಗೆಯ ಹಣ್ಣು –ತರಕಾರಿ–ಹೂವಿನ ಬೀಜಗಳು ಇತ್ಯಾದಿ

ಆಹಾರ ಮೇಳ
ಸಸ್ಯಹಾರ–ಮಾಂಸಾಹಾರಗಳ ವೈವಿಧ್ಯಮಯ ತಿನಿಸುಗಳು, ವಿವಿಧ ಪಾನೀಯಗಳ ಮಳಿಗೆ

ಫಲಪುಷ್ಪ ಮೇಳ
ದೇಶ, ವಿದೇಶಗಳ ವಿವಿಧ ತಳಿಗಳ 2 ಲಕ್ಷಕ್ಕು ಅಧಿಕ ಫಲ–ಪುಷ್ಪ ಗಿಡಗಳಿಂದ ಕಂಗೊಳಿಸಲಿರುವ ಕೃಷಿಸಿರಿ ಆವರಣ

ಕರಕುಶಲ ಮತ್ತು ಪ್ರಾಚ್ಯ ವಸ್ತು ಪ್ರದರ್ಶನ ಮೇಳ
ವಸ್ತ್ರಗಳು, ಸಾಂಪ್ರದಾಯಿಕ ಆಭರಣಗಳು, ವಿವಿಧ ಕೆತ್ತನೆಯ ಮೂರ್ತಿಗಳು ಇತ್ಯಾದಿಗಳ ಪ್ರದರ್ಶನ

ಚಿತ್ರಕಲಾ ಮೇಳ
ಪ್ರಸಿದ್ಧ ಕಲಾವಿದರ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ

ಕಲಾಕೃತಿಗಳ ಪ್ರದರ್ಶನ
ಎಲ್ಲಾ ವರ್ಗದವರನ್ನು ಸೆಳೆಯುವ ಕಲಾಕೃತಿಗಳ ಬೃಹತ್ ಪ್ರದರ್ಶನ

ಛಾಯಾಚಿತ್ರಗಳ ಪ್ರದರ್ಶನ
ಪರಿಸರ, ವನ್ಯಜೀವಿಗಳಿಗೆ ಸಂಬಂಧಿಸಿದ 2000ಕ್ಕೂ ಅಧಿಕ ಪ್ರಸಿದ್ಧ ಛಾಯಾಚಿತ್ರಗಳ ಪ್ರದರ್ಶನ

- ಸುಮಾರು ಎರಡು ಎಕ್ರೆ ಜಾಗದಲ್ಲಿ ಸ್ಕೌಟ್ಸ್ ಗೈಡ್ಸ್ ಮಕ್ಕಳಿಂದ ಸಾಹಸಮಯ ಪ್ರದರ್ಶನ
- 40 ಸಾವಿರಕ್ಕು ಹೆಚ್ಚು ಆಸನದ ವ್ಯವಸ್ಥೆ, ವಿಶಾಲವಾದ ಪಾರ್ಕಿಂಗ್
- ಸಸ್ಯ ಕಾಶಿ ವಿದ್ಯಾಗಿರಿ–ಪುತ್ತಿಗೆ ಆವರಣದ ಉದ್ದಕ್ಕು ಹಸಿರುಮಯ ವಾತಾವರಣ
- ಕಣ್ಮನ ಸೆಳೆಯುವ ದೀಪಾಲಂಕಾರ
- ಎಲ್ಲರಿಗು ಉಚಿತ ಪ್ರವೇಶ, ಮಕ್ಕಳಿಂದ ವಯೋವೃದ್ಧರವರೆಗೆ ಕುಟುಂಬ ಸಮೇತ ಕಣ್ತುಂಬಿ ಆಸ್ವಾದಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು
- ವೈಭವದ ಸಾಂಸ್ಕೃತಿಕ ಮೆರವಣಿಗೆ, ಸಾಂಸ್ಕೃತಿಕ ರಥ ಸಂಚಲನ ಮತ್ತು ರಥಾರತಿ

'ಆಳ್ವಾಸ್ ವಿರಾಸತ್ ಸಾಂಸ್ಕೃತಿಕ ವೈಭವದಲ್ಲಿ ವಿದ್ಯಾರ್ಥಿಗಳು ಮಾತ್ರವಲ್ಲದೆ ಎಲ್ಲಾ ವಯೋಮಾನದ ಜನರು ಪಾಲ್ಗೊಂಡು ಆಸ್ವಾದಿಸುವ ಕಾರ್ಯಕ್ರಮವಾಗಿದೆ. ಇದು ಕೇವಲ ಮನರಂಜನೆ ಅಲ್ಲ, ಒಳ್ಳೆಯ ವ್ಯಕ್ತಿತ್ವವನ್ನು ರೂಪಿಸಲು ಬೇಕಾದ ಅನೇಕ ಸಂಗತಿಗಳನ್ನು ಒಳಗೊಂಡಿದೆ'
– ಡಾ. ಎಂ. ಮೋಹನ ಆಳ್ವ ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ